ಮಾನವಿಕ ಕರ್ಣಾಟಕ

ಸಂಪುಟ ೧ ಸಂಚಿಕೆ ೩

೩

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೧

ಲೇಖಕರಿಗೆ ಸೂಚನೆಗಳು

೧. ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨. ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩. ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪. ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫. ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭. ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸ ಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮. ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧ ಸಂಚಿಕೆ ೩

೩

ನೇ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೧

MANAVIKA KARNATAKA, Kannada quarterly of the University of Mysore. Volume 1, Number 3, May 1971. Edited by H. S. Krishnaswamy Iyengar and Dr. A. V. Narasimha Murthy.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೆಪ್ಯೂಟಿ ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ವಸ್ತುಕೋಶ: ಕನ್ನಡ ಗ್ರಂಥಸೂಚಿ—ಎಚ್. ಎ. ಖಾನ್; ಅರವತ್ತು ತುಂಬಿದ ಡಾ. ಪಿ. ಬಿ. ದೇಸಾಯಿಯವರು—ಎ. ವಿ. ಎನ್.; ಭಾರತೀಯ ವಿಜ್ಞಾನ ಕಾಂಗ್ರೆಸಿನ ಮಾನವಶಾಸ್ತ್ರ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ—ಎನ್. ಪಿ. ಎಸ್.; ಪ್ರಾಚೀನ ಬನವಾಸಿ—ಬಿ. ಕೆ. ಜಿ.; ಹಣಕಾಸು ನಿರ್ವಹಣೆ : ಒಂದು ವಿಚಾರ ಸಂಕಿರಣ—ಬಿ. ಎಸ್. ಎಸ್.; ಡಾ. ಕೆ. ಎಂ. ಮುನ್ಷಿ—ಎಚ್. ಎಸ್. ಕೆ.; ಡಾ. ಗಾಡ್ಗಿಲ್—ಸಿ. ಕೆ. ಆರ್.

ಪುಸ್ತಕಲೋಕ: ಮಾನವ ಸಮಾಜ ಹಾಗೂ ಸಮಾಜಶಾಸ್ತ್ರ—ಎಚ್. ಎಂ. ಸದಾಶಿವಯ್ಯ; ಮಾನವ ಶಾಸ್ತ್ರ ಪರಿಚಯ—ಬಿ. ಕೆ. ಗುರುರಾಜರಾವ್; ಜಗತ್ತಿನ ಇತಿಹಾಸ—ಎ. ವಿ. ನರಸಿಂಹಮೂರ್ತಿ; ಗ್ರಂಥಸೂಚಿ ಮತ್ತು ಪುಸ್ತಕಶಾಸ್ತ್ರ—ಟಿ. ವಿ. ಸುಬ್ರಹ್ಮಣ್ಯಂ

ಬಿ. ಕೆ. ಶಿವರಾಮಯ್ಯ

ಪ್ರೊ. ಎಂ. ಹಿರಿಯಣ್ಣ

೧. ಜೀವನ

ಮೈಸೂರಿನ ವಿದ್ವಾಂಸ-ತತ್ತ್ವಜ್ಞಾನಿಗಳೆನಿಸಿಕೊಂಡ ಪ್ರೊ. ಎಂ. ಹಿರಿಯಣ್ಣನವರು ಜಗತ್ತಿನ ಋಷಿಪರಂಪರೆಯಲ್ಲಿ ಒಂದು ಸ್ಥಾನವನ್ನು ಪಡೆದಿದ್ದಾರೆ. ಅವರು ಸ್ವಾರ್ಥವನ್ನು ಸಾರ್ಥಕವಾಗಿ ಮೀರಿ ಪರಿಪೂರ್ಣತೆಯ ಆಕಾರದಲ್ಲಿ ವ್ಯಕ್ತಿತ್ವದ ಸಾಫಲ್ಯವನ್ನು ಕಂಡ ಮಹಾಪುರುಷರು. ಸಂಸ್ಕಾರಬಲದಿಂದ ಮತ್ತು ಸಾಧನೆಯಿಂದ ಜೀವನದ ಅರ್ಥವನ್ನು ಅರಿಯಲು ಯತ್ನಿಸಿ, ಅದರ ಗಾಢರಹಸ್ಯಕ್ಕೆ ಬೆಳಕನ್ನು ಹಿಡಿದು ಅದರೊಡನೆ ತಮ್ಮ ಐಕ್ಯವನ್ನು ಸಾಧಿಸಿಕೊಂಡ ಜೀವನ್ಮುಕ್ತರಾಗಿದ್ದವರು.

ಪ್ರೊ. ಹಿರಿಯಣ್ಣನವರ ಜೀವನದ ಬಗ್ಗೆ ಕೆಲವು ವಿಷಯಗಳು ಈಗಾಗಲೇ ಪ್ರಕಟವಾಗಿವೆ. ಅವೆಲ್ಲವನ್ನೂ ಗಮನಿಸಿದರೆ, ವಿಷಯ ಸಂಕೋಚ ತೋರಿಬಂದು ಇನ್ನೂ ಹೆಚ್ಚಾಗಿ ತಿಳಿದಿದ್ದರೆ ವ್ಯಕ್ತಿಪರಿಚಯ ಹೆಚ್ಚು ಸಮರ್ಪಕವಾಗುತ್ತಿತ್ತು ಎನಿಸುತ್ತದೆ. ಆದರೆ ಮಿತಿಯುಳ್ಳ ಅಷ್ಟೇ ವಿಷಯಗಳು ಸೂಕ್ಷ್ಮದರ್ಶಕಗಳಂತಿದ್ದು, ಬಾಗಿ ನೋಡಿದವರಿಗೆ ಗಂಭೀರವಾದ ಒಂದು ಜೀವನಸಂಪತ್ತನ್ನೆ ಗೋಚರಪಡಿಸುತ್ತವೆ. ಆ ಕೆಲವು ವಿಷಯಗಳು ಅವರು ಜೀವನವನ್ನು ಅರ್ಥಮಾಡಿಕೊಂಡ ಬಗೆಗಳು. ಅವುಗಳ ಮೂಲಕ ವ್ಯಕ್ತಿವೈಶಾಲ್ಯವೂ ಅದರಿಂದ ಜೀವನದ ಅರಿವೂ ಉಂಟಾಗಿ ಅಂತಹ ಪರಸ್ಪರ ಅವಲಂಬನೆ ಅವರ ಪರಿಪೂರ್ಣ ವ್ಯಕ್ತಿತ್ವದಲ್ಲಿ ಪರಿಣಮಿಸಿತ್ತೆಂದು ಹೇಳಬಹುದು. ಪ್ರಾಸಂಗಿಕವಾಗಿ ಇಲ್ಲಿ ಅವರ ಕೆಲವು ಜೀವಿತ ವಿಷಯಗಳನ್ನು ಸ್ಮರಿಸಿಕೊಳ್ಳುವುದು ಸೂಕ್ತವಾಗಿದೆ.

೧೮೭೧ರ ಮೇ ೭ರಂದು ಜನ್ಮತಾಳಿದ ಪ್ರೊ. ಹಿರಿಯಣ್ಣನವರ ಮುಂಚಿನ ವಿದ್ಯಾಭ್ಯಾಸ ಮೈಸೂರಿನಲ್ಲೂ ಅನಂತರ ಬಿ.ಎ., ಎಂ.ಎ. ಪದವಿಗಳಿಗಾಗಿ ಶಿಕ್ಷಣ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನಲ್ಲೂ ನಡೆಯಿತು. ೧೮೯೧ರಲ್ಲಿ ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿ ಗ್ರಂಥಾಲಯಪಾಲರಾಗಿ, ಮರುವರ್ಷ ಬೆಂಗಳೂರಿನ ಸರ್ಕಾರಿ ಕಚೇರಿಯೊಂದರಲ್ಲಿ ಗುಮಾಸ್ತರಾಗಿ; ಅನಂತರ ೧೮೯೬ರಿಂದ ೧೯೧೭ರ

ವರೆಗೆ ಮೈಸೂರಿನ ಸರ್ಕಾರಿ ನಾರ್ಮಲ್ ಶಾಲೆಯಲ್ಲಿ ಸಹೋಪಾಧ್ಯಾಯರೂ ೧೯೦೭ರಿಂದ ೧೯೧೪ರ ವರೆಗೆ ಅಲ್ಲೇ ಮುಖ್ಯೋಪಾಧ್ಯಾಯರೂ ಆಗಿ ಅನೋಘ ಸೇವೆ ಸಲ್ಲಿಸಿದರು. ಉಪಾಧ್ಯಾಯರಾಗಿದ್ದ ಈ ಅವಧಿಯಲ್ಲಿ ಕನ್ನಡ ಬೋಧೆಯ ಬಗೆಗೆ ಪುಸ್ತಕವೊಂದನ್ನು ಬರೆದು, ಅಂದು ಕನ್ನಡದ ಹಿರಿಮೆಯನ್ನು ಬೆಳಕಿಗೆ ತರುವುದರಲ್ಲಿ ಪ್ರಯತ್ನಶೀಲರಾಗಿದ್ದ ಮಹನೀಯರಲ್ಲಿ ಒಬ್ಬರಾಗಿದ್ದರು. ೧೯೧೪ರಲ್ಲಿ ಮೈಸೂರು ಮಹಾರಾಜ ಕಾಲೇಜಿನ ಸಂಸ್ಕೃತ ಅಧ್ಯಾಪಕರಾಗಿ ನೇಮಕಗೊಂಡು ೧೯೧೮ರಲ್ಲಿ ಉಪಪ್ರಾಧ್ಯಾಪಕರಾಗಿ, ಅನಂತರ ೧೯೨೭ರಿಂದ ೧೯೩೭ರ ವರೆಗೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಹುದ್ದೆಯಿಂದ ನಿವೃತ್ತರಾದರು. ಆಗ ಸಂಸ್ಕೃತ ಭಾಷೆ ಸಾಹಿತ್ಯಗಳ ಜೊತೆಗೆ ಭಾರತೀಯ ದರ್ಶನಗಳ ಪ್ರವಚನವನ್ನೂ ಮಾಡುತ್ತ, ಅವೆರಡರ ಸಮನ್ವಯದಿಂದ ಅಪಾರ ವಿದ್ವತ್ತನ್ನು ಗಳಿಸಿದರು. ಅಲ್ಲದೆ ಅದನ್ನು ಜೀವನದ ಪರಮಧ್ಯೇಯಸಾಧನೆಗೆ ಅಳವಡಿಸಿಕೊಂಡು, ಭಾರತೀಯ ತತ್ತ್ವಜ್ಞಾನ ಕೇವಲ ಬೌದ್ಧಿಕ ವ್ಯವಸಾಯವಲ್ಲವೆಂಬುದನ್ನೂ ಅದು ಆಚರಣೆ ಅನುಭವಗಳಿಗೆ ವಿಷಯವೆಂಬುದನ್ನೂ ತೋರಿಸಿಕೊಟ್ಟರು. ಈ ಕೆಲವು ವರ್ಷಗಳಲ್ಲಿ ಅವರಿಗೆ ಡಾ. ರಾಧಾಕೃಷ್ಣನ್ ಮುಂತಾದ ಮಹಾಪುರುಷರ ಸ್ನೇಹ ದೊರೆತುದಲ್ಲದೆ, ಅವರ ಪ್ರಭಾವಕ್ಕೊಳಗಾದ ಒಂದು ಪ್ರಸಿದ್ಧ ಶಿಷ್ಯಪರಂಪರೆಯೂ ಬೆಳೆದು ಬಂದಿತು. ಇಷ್ಟೇ ಅಲ್ಲದೆ, ಅನೇಕ ವಿದ್ವತ್ಸಭೆಗಳ ಮತ್ತು ಪರಿಷತ್ತುಗಳ ಅಧ್ಯಕ್ಷಪೀಠವನ್ನಲಂಕರಿಸುವ ಗೌರವವೂ ಮದ್ರಾಸ್ ಸಂಸ್ಕೃತ ಅಕಾಡೆಮಿಯಿಂದ ಸಂಸ್ಕೃತ ಸೇವಾ ಧುರೀಣ ಎಂಬ ಮನ್ನಣೆಯೂ ಅವರಿಗೆ ದೊರಕಿದುವು. ಇವೆಲ್ಲವೂ ಅವರ ಜೀವನದ ಒಂದು ಮುಖ. ಅವುಗಳಲ್ಲಿ ಯಾವುದೂ ಫಲಾಪೇಕ್ಷೆಯಿಂದ ಬಂದುದಲ್ಲವೆಂಬುದಕ್ಕೆ ಕರ್ಮಯೋಗದಿಂದ ಪ್ರಭಾವಿತವಾಗಿದ್ದ ಅವರ ಮನೋಧರ್ಮವೇ ಸಾಕ್ಷಿಯಾಗಿತ್ತು.

ಪ್ರೊ. ಹಿರಿಯಣ್ಣನವರು ನುಡಿದಂತೆ ನಡೆದ ಪುಣ್ಯಾತ್ಮರು. ಇದು ಎಲ್ಲ ಸತ್ಯವಂತರ ಲಕ್ಷಣ. ಹೆಚ್ಚು ನುಡಿದರೆ ಅದರಂತೆ ನಡೆಯುವುದು ಕಷ್ಟವೆಂದೂ ಅದರಿಂದ ವ್ಯಕ್ತಿತ್ವದ ಪರಿಪೂರ್ಣತೆಗೆ ಭಂಗಬರುವುದೆಂದೂ ಸತ್ಯವಂತರಿಗೆ ಅಂಜಿಕೆ ; ಆದ್ದರಿಂದ ಅವರು ಮೌನದಲ್ಲಿ ಹೆಚ್ಚು ಗುಣವನ್ನು ಕಂಡು, ಕಾಳಿದಾಸ ಹೇಳಿರುವಂತೆ 'ಸತ್ಯಾಯ ಮಿತಭಾಷಿಣಾಂ' ಎಂಬ ನಂಬಿಕೆಯುಳ್ಳವರು. ಈ ಬಗೆಯ ಮೌನ ಪ್ರೊ. ಹಿರಿಯಣ್ಣನವರ ಒಂದು ಮುಖ್ಯ ಲಕ್ಷಣವಾಗಿದ್ದಿತು.

ಭಾರತೀಯ ಸಂಸ್ಕೃತಿ ಸೃಷ್ಟಿಸಿರುವ ಗುಣರಾಶಿಯಲ್ಲಿ ವಿನಯ ಕಿರೀಟಪ್ರಾಯವಾದುದು ; ಅಲ್ಲಿ ಅದು ಜ್ಞಾನದಂತೆ ಅಸದೃಶವಾಗಿ ಶೋಭಿಸುತ್ತ ಮನುಷ್ಯನ ಅಂತಃಸತ್ತ್ವವನ್ನೂ ತೇಜಸ್ಸನ್ನೂ ವೃದ್ಧಿಗೊಳಿಸುವ ಸಂಜೀವನಿಯಂತಿದೆ. ಇಂತಹ ಒಂದು ಗುಣ ಪ್ರೊ. ಹಿರಿಯಣ್ಣನವರಲ್ಲಿ ಮೂರ್ತಿಮತ್ತಾಗಿತ್ತೆಂದರೆ ಆಶ್ಚರ್ಯವೇನಲ್ಲ. ಅವರಲ್ಲಿ ವಿನಯ ತಾನೇ ತಾನಾಗಿ ಅಭಿವ್ಯಕ್ತಿ

ಗೊಳ್ಳುವಂತಿದ್ದು, ಅವರ ನಡೆನುಡಿಗಳೆಲ್ಲಕ್ಕೂ ಸರಳತೆ ಸೌಜನ್ಯಗಳ ಪ್ರಕಾರವನ್ನು ತಂದುಕೊಟ್ಟಿತ್ತು. ಅವರ ಶ್ರದ್ಧೆ ವಿನಯಗಳ ನೈಜತೆ ಸಂಪರ್ಕದಲ್ಲಿದ್ದವರು ಕಂಡುಕೊಳ್ಳದೆ ಇರಲಾಗದ ಗುಣವಾಗಿ ಅದರ ಪ್ರಭಾವದಲ್ಲಿ ಅಹಂಕಾರ ಆತ್ಮ ಪ್ರಶಂಸೆಗಳು ನಾಚಿ ಹಿಮ್ಮೆಟ್ಟುತ್ತಿದ್ದುವು. ಪಾಠಪ್ರವಚನ ಮೊದಲುಗೊಂಡು ಎಲ್ಲ ಕೆಲಸಗಳಲ್ಲೂ ಅವರು ಪಾಲಿಸಿಕೊಂಡು ಬಂದ ಶಿಸ್ತು, ನಿಷ್ಕೃಷ್ಟತೆ, ಪೂರ್ಣತೆ ಇವು ಅನುಕರಣೀಯವಾಗಿವೆ. ಎಂದೂ ಚ್ಯುತಿಕಾಣದ ಅವರ ಕರ್ತವ್ಯನಿಷ್ಠೆ ಕರ್ಮಯೋಗಕ್ಕನುಗುಣವಾಗಿದ್ದು ಪ್ರವೃತ್ತಿಯಲ್ಲಿ ನಿವೃತ್ತಿಯೆಂಬ ಮಹೋಪದೇಶದ ಅನುಷ್ಠಾನಕ್ಕೆ ಸಹಾಯ ಮಾಡಿತು. ಅದರಿಂದ ಅವರು ವ್ಯಕ್ತಿತ್ವದ ಉದಾತ್ತತೆಯನ್ನು ಸಾಧಿಸಿ ತನ್ಮೂಲಕ ಪರಿಪೂರ್ಣತೆಯ ದೃಷ್ಟಿಯುಳ್ಳವರಾಗಿದ್ದರು.

ಮೇಲ್ಕಂಡ ಗುಣಗಳನ್ನು ಅವರ ಬರವಣಿಗೆಗಳಲ್ಲಿ ವಿಶೇಷವಾಗಿ ಕಾಣಬಹುದು ; ಅವರು ತಮ್ಮ ತಪಸ್ಸಿನ ಫಲವನ್ನು ಅವುಗಳ ಮೂಲಕ ಅಸಾಧಾರಣವಾದ ರೀತಿಯಲ್ಲಿ ವಿನಿಯೋಗಿಸಿ ಮಹೋಪಕಾರ ಮಾಡಿದ್ದಾರೆ. ಈ ದೃಷ್ಟಿಯಲ್ಲಿ ಅವರ ಕೃತಿಗಳು ಮಹಾಕವಿಯೊಬ್ಬನ ಕೃತಿಗಳಂತೆ ಮನುಷ್ಯನನ್ನು ದಿವ್ಯತೆಗೇರಿಸುವುದರಲ್ಲಿ ಅತ್ಯಂತ ಪರಿಣಾಮಕಾರಿಗಳಾಗಿವೆ. ಅವರ ಎಲ್ಲ ಪ್ರಕಟಿತ ಗ್ರಂಥಗಳೂ[1] ಲೇಖನಗಳೂ ಸಂಸ್ಕೃತ ಸಾಹಿತ್ಯದ ಮತ್ತು ಭಾರತೀಯ ದರ್ಶನದ ಸಾರಸ್ವಾರಸ್ಯ ಮಹತ್ತ್ವಗಳನ್ನು ಹೃದಯಂಗಮವಾಗಿ ಸ್ಪಷ್ಟಗೊಳಿಸುವ ಸಾಮರ್ಥ್ಯದಿಂದ ಕೂಡಿ ಅಮೂಲ್ಯವಾಗಿವೆ. ಅವರ ಶಿಸ್ತಿನ ಜೀವನಕ್ಕೆ ತಕ್ಕಂತೆ ಗುರುತರವಾದ ಹೊಣೆಯ ಪ್ರಜ್ಞೆ ಪ್ರಾಮಾಣಿಕತೆಗಳು ಈ ಗ್ರಂಥರಚನೆಯಲ್ಲಿ ನಿರ್ಣಾಯಕ ಶಕ್ತಿಗಳಾಗಿವೆ. ವಿಷಯಗಳನ್ನು ಆಮೂಲಾಗ್ರವಾಗಿ ಅಭ್ಯಸಿಸಿ, ಮನದಟ್ಟು ಮಾಡಿಕೊಂಡು ಅವುಗಳ ಸಾರ್ಥಕತೆಯನ್ನರಿತು ಅವರು ಬರೆದಿರುವ ಈ ಗ್ರಂಥಗಳು

---

[1] ಈಶಾವಾಸ್ಯೋಪನಿಷದ್, ಕೇನೋಪನಿಷದ್, ಕಾಠಕೋಪನಿಷದ್, ಬೃಹದಾರಣ್ಯಕೋಪನಿಷದ್ (ಭಾಗ 1), ಸುರೇಶ್ವರಾಚಾರ್ಯರ ನೈಷ್ಕರ್ಮ್ಯಸಿದ್ಧಿ, ಸದಾನಂದರ ವೇದಾಂತಸಾರ, ವಿಮುಕ್ತಾತ್ಮನ ಇಷ್ಟಸಿದ್ಧಿ–ಇವು ಅವರಿಂದ ವಿಮರ್ಶಾತ್ಮಕವಾಗಿ ಸಂಪಾದಿತವಾಗಿರುವ ಕೆಲವು ಉದ್ಗ್ರಂಥಗಳು, ಅಲ್ಲದೆ *Outlines of Indian Philosophy, The Quest after Perfection, The Essentials of Indian Philosophy, Popular Essays in Indian Philosophy, Sanskrit Studies, Art Experience, The, Mission of Philosophy, Indian Philosophical Studies* ಮುಂತಾದವು.

ಇವುಗಳಲ್ಲಿ ಲಂಡನ್ನಿನ ಜಾರ್ಜ್ ಅಲನ್ ಅಂಡ್ ಅನ್‌ವಿನ್ ಲಿ. ಅವರಿಂದ ಪ್ರಕಾಶಿತವಾದ '*Outlines of Indian Philosophy*' ಎಂಬುದು ೧೯೬೭ರಲ್ಲಿ ಆರನೆಯ ಆವೃತ್ತಿಯಲ್ಲಿ ಹೊರಬಂದಿದೆ.

ಅವರ ಪಾಂಡಿತ್ಯ ಪ್ರೌಢಿಮೆ ಪ್ರತಿಭೆಗಳಿಗೆ ನೇರ ಸಾಕ್ಷಿಗಳಾಗಿವೆ. ಅಲ್ಲೂ, ಜೀವನದ ಇತರ ಕ್ಷೇತ್ರಗಳಲ್ಲಿದ್ದಂತೆ, ಹೆಚ್ಚು ಹೇಳಿದರೆ ಸತ್ಯದ ಧ್ಯೇಯಕ್ಕೆ ಎಲ್ಲಿ ಕುಂದು ಬರುತ್ತದೋ ಎಂಬ ಆತಂಕದ ಸೂಚನೆ. ಆದ್ದರಿಂದ ಬರವಣಿಗೆಯಲ್ಲಿ ಸಂಕ್ಷಿಪ್ತತೆ; ಆದರೆ ಅದು ತಿಳಿದಿರುವ ಸತ್ಯದ ಪೂರ್ಣಾಭಿವ್ಯಕ್ತಿ. ಅದರಲ್ಲಿ ಅಸ್ಪಷ್ಟತೆಯಾಗಲಿ ಸಂಶಯಗ್ರಸ್ತತೆಯಾಗಲ್ಲಿ ಇಲ್ಲವೇ ಇಲ್ಲ. ಅಲ್ಲೂ ನುಡಿದಂತೆ ನಡೆಯಬೇಕೆಂಬ ಉತ್ಕಟ ಆಕಾಂಕ್ಷೆಯ ನಿರ್ದಿಷ್ಟ ಅಂತರಾರ್ಥ. ಅವರ ಭಾಷೆ ಶೈಲಿಗಳು ಆಡಂಬರ ರಹಿತವೂ ಸ್ಪಷ್ಟವೂ ಸ್ವಚ್ಛವೂ ಗಂಭೀರವೂ ಆಗಿದ್ದು ಅವರು ಅನುಸರಿಸಿದ ಅಂಥ ಜೀವನಮಾರ್ಗದ ಪ್ರತೀಕವಾಗಿದೆ.

ಪ್ರೊ. ಹಿರಿಯಣ್ಣನವರ ಬರವಣಿಗೆಗಳಲ್ಲಿ ಕಂಡುಬರುವ ಬೌದ್ಧಿಕ ಪ್ರಾಮಾಣಿಕತೆಯಷ್ಟೇ ಮುಖ್ಯವಾದ ಮತ್ತೊಂದಂಶವೆಂದರೆ, ಓದುಗರ ವಿಚಾರದಲ್ಲಿ ಅವರಿಗಿದ್ದ ಗೌರವ, ಆಸಕ್ತಿ ಮತ್ತು ಸಹಾನುಭೂತಿ. ತಾವು ಬರೆದದ್ದನ್ನು ಓದು ವವರು ಅರ್ಥಮಾಡಿಕೊಂಡು ಗ್ರಹಿಸುವಂತಿರಬೇಕೆಂಬ ಧ್ಯೇಯ ಮಾತ್ರವಲ್ಲದೆ, ಅದನ್ನು ಓದುವಾಗ ಯಾವ ಸಂಶಯಗಳು ಉದ್ಭವಿಸಬಹುದೆಂಬ ನಿರೀಕ್ಷಣೆಯ ಪ್ರಜ್ಞೆಯೂ ಅವುಗಳ ಪರಿಹಾರಕ್ರಮವೂ ಎಂತಹ ಓದುಗನಲ್ಲಿಯಾದರೂ ಲೇಖಕರ ಬಗ್ಗೆ ಕೃತಜ್ಞತೆ ಭಕ್ತಿ ಗೌರವಗಳನ್ನುಂಟುಮಾಡುವ ಶಕ್ತಿಗಳಾಗಿವೆ. ಪ್ರೊ. ಹಿರಿಯಣ್ಣನವರ ಈ ಬಗೆಯ ವ್ಯಕ್ತಿತ್ವದ ಪರಿಚಯಸೌಲಭ್ಯಕ್ಕೋಸ್ಕರ ಅವರ ಒಂದೆರಡು ಗ್ರಂಥಗಳಿಂದ ಉದ್ಧೃತವಾಗಿರುವ ಕೆಲವು ಪಂಕ್ತಿಗಳು (ಭಾಷಾಂತರ ದಲ್ಲಿ) ಹೀಗಿವೆ:

"ಈ ಸಂದರ್ಭದಲ್ಲಿ ವಿಶೇಷವಾಗಿ ಒಂದು ವಿಷಯದ ಕಡೆಗೆ ಗಮನವನ್ನು ಹರಿಸಬೇಕಾಗಿದೆ; ಅದೇನೆಂದರೆ ಗೀತೆಯ ಪ್ರಕಾರ ಮನುಷ್ಯ ಸ್ಥಿತಪ್ರಜ್ಞನ ಸ್ಥಿತಿಯಲ್ಲೂ ಕೆಲಸಕಾರ್ಯಗಳನ್ನು ಮುಂದುವರಿಸುತ್ತಾನೆಂಬುದು; ಬಾಹ್ಯ ಚಟುವಟಿಕೆಗಳಲ್ಲಿ ಅಂತಃಶಾಂತಿಗೆ ಹೊಂದಿಕೊಳ್ಳದ್ದು ಯಾವುದೂ ಇಲ್ಲ. ಇಲ್ಲಿ ಕ್ರಿಯೆಗೆ ಗೀತೆ ಕೊಟ್ಟಿರುವ ಉಚ್ಚಸ್ಥಾನವನ್ನು ಕಾಣಬಹುದು. ಕ್ರಿಯೆಯನ್ನು ಸಂಪೂರ್ಣವಾಗಿ ತ್ಯಜಿಸಬಹುದಾದ ಯಾವ ಕಾಲದ ಅವಧಿಯೂ ಅಲ್ಲಿ ಪರಿಶೀಲನೆಗೆ ಬಂದಿಲ್ಲ. ಗೀತೆಯ ದೃಷ್ಟಿಯಲ್ಲಿ ನಿಷ್ಕ್ರಿಯಾಸ್ಥಿತಿಯು ಕುಕರ್ಮ ದಂತೆ ಬಹುಮಟ್ಟಿಗೆ ನಿಂದ್ಯ. ಉಪನಿಷತ್ತುಗಳಲ್ಲಿ ಪ್ರಸಿದ್ಧನಾಗಿರುವ ಜನಕನೂ ಶ್ರೀಕೃಷ್ಣನೂ ಇಲ್ಲಿ ನಮ್ಮ ಮೇಲ್ಪಂಕ್ತಿಗಳಾಗಿದ್ದಾರೆ; ಒಬ್ಬ ಪರಿಪೂರ್ಣ ಮತ್ತು ಇನ್ನೊಬ್ಬ ಸದಾ ಹಾಗಿರತಕ್ಕವನು; ಇಬ್ಬರೂ ಒಂದೇ ಬಗೆಯಲ್ಲಿ ಕರ್ಮಪರರು. ಈ ದೃಷ್ಟಿ ನಿಷ್ಕ್ರಿಯಾಸ್ಥಿತಿಯಿಂದ ಸಂನ್ಯಾಸವನ್ನು ಬೇರ್ಪಡಿಸಿ ಅದರ ಬಗ್ಗೆ ಅಭಿಪ್ರಾಯವನ್ನು ರೂಪಾಂತರಿಸುತ್ತದೆ. ನಿವೃತ್ತಿಯ ಈ ರೂಪಾಂತರ ಹಿಂದೂ ದರ್ಶನಕ್ಕೆ ಗೀತೆಯ ಮತ್ತೊಂದು ಕೊಡುಗೆ. ಅದರಂತೆ ಕರ್ಮಯೋಗವನ್ನು ಎರಡರ್ಥದಲ್ಲಿ ತಿಳಿದುಕೊಳ್ಳಬೇಕು—ಒಂದು, ಸಾಧಕ ಸ್ಥಿರಸಂಕಲ್ಪವುಳ್ಳವನಾಗಿ

ಉದ್ದಕ್ಕೂ ತನ್ನನ್ನು ಸ್ವಾರ್ಥಕ್ರಿಯೆಗಳಿಂದ ಬಿಡಿಸಿಕೊಳ್ಳುವ ಮುಂಚಿನ ಹೊಯ್ದಾಟದ ಸ್ಥಿತಿಗೆ ಅನ್ವಯಿಸತಕ್ಕದ್ದು; ಇನ್ನೊಂದು, ತತ್ತ್ವಗೋಚರವಾಗಿ ಹೊಯ್ದಾಟ ಮುಗಿದು ಸಚ್ಚಾರಿತ್ರ್ಯ ಸ್ವತಃ ಪ್ರವರ್ತಿತವಾಗುವ ಸ್ಥಿತಿಗೆ ಸಂಬಂಧಪಟ್ಟದ್ದು—ಇದು ಸಾಧಿತವಾದ ಅಭ್ಯಂತರನಿಶ್ಚಯದ ಬಾಹ್ಯಾಭಿವ್ಯಕ್ತಿ. ಮೊದಲರ್ಥವುಳ್ಳ ಅಂಗಭೂತ–ಕರ್ಮಯೋಗ ಗೀತೆಯ ಸಾರಾತ್ಮಕ ವಸ್ತು; ಎರಡನೆಯದು ಆಧ್ಯಾತ್ಮಿಕ ಆಕಾಂಕ್ಷೆಯುಳ್ಳವರ ಗುರಿಯ ಲಕ್ಷಣ ಮಾತ್ರವಾಗಿ ಅಲ್ಲಲ್ಲಿ ಕಂಡು ಬರುತ್ತದೆ.”[2]

“ವೈವಿಧ್ಯವೇ ಪರಮಸತ್ಯವೆಂದು ಸಾಮಾನ್ಯ ಅನುಭವ ಅಂಗೀಕರಿಸುತ್ತದೆ. ವೇದಾಂತದ ಪ್ರಕಾರ, ಸೂಕ್ತಸಮನ್ವಯದ ಮೂಲಕ ಈ ವೈವಿಧ್ಯದ ಐಕ್ಯದಲ್ಲಿ ಆ

---

[2] The point to which it is necessary to draw special attention in this connection is that the Gita requires man to continue to work even in this perfected state, there being nothing in outer activity which is incompatible with inner peace. Here we see the exalted position assigned to work by the Gita. It contemplates no period, when activity may be wholly renounced. Passivity, in its view, is almost as reprehensible as wrong activity. Janaka, King of Videha, renowned in the Upanishads, and Sri Kṛṣṇa are our examples here. The one has become perfect and the other has always been so; and both alike are active. Such a view totally tranforms the notion of *Saṃnyāsa* by dissociating it from all inaction; and in this transformation of the ideal of *nivṛtti* consists another important contribution of the Gita to Hindu thought. *Karma-yoga* is accordingly to be understood in a double sense—One having reference to an earlier stage of strife when the disciple, with a steady resolve, is continually weaning himself from selfish activity; and the other, to a later stage when, at the dawn of truth, the strife is over and right conduct becomes quite spontaneous—the outward expression of an inner conviction that has been attained. It is *Karma-yoga* in the first sense, which is ancillary, that forms the essential theme of the Gita; the second appears now and then as but a chararacteristic of the goal to be kept in view by the spiritual aspirant.”

—*Outlines of Indian Philosophy, 1967.* pp. 127–128

ಸತ್ಯ ಇರತಕ್ಕದ್ದು. ಆದರೆ ತತ್ತ್ವಜ್ಞಾನದಲ್ಲಿ ಮಾತ್ರ ಈ ಐಕ್ಯ ಸಾಧ್ಯ. ಸಾಮಾನ್ಯವಾಗಿ ತತ್ತ್ವದ ಭಾಗಶಃ ದೃಷ್ಟಿಯನ್ನುಂಟುಮಾಡುವ ತೋರಿಕೆಯುಳ್ಳ ವಸ್ತುಗಳಲ್ಲಿ ನಾವು ಮಗ್ನರಾಗಿರುತ್ತೇವೆ. ನಿತ್ಯಜೀವನದಲ್ಲಿ ಅವೇ ನಮಗೆ ಸಂಬಂಧಪಟ್ಟಿರತಕ್ಕವು. ಆದರೆ ಜೀವನ್ಮುಕ್ತ ಇಂತಹ ಭಾಗಶಃ ದೃಷ್ಟಿಯನ್ನು ಮೀರಿರುತ್ತಾನೆ. ಅವನ ವೈವಿಧ್ಯಾನುಭವ ಮುಂದುವರೆಯಬಹುದು; ಆದರೆ ಅವನಿಗೆ ಅದು ಪರಮಾರ್ಥರಹಿತವಾಗಿರುತ್ತದೆ. ತನ್ನನ್ನೂ ಒಳಗೊಂಡಿರುವ ಎಲ್ಲ ಪ್ರತ್ಯೇಕ ಅಸ್ತಿತ್ವದಲ್ಲಿನ ಐಕ್ಯಸಾಕ್ಷಾತ್ಕಾರದಿಂದ ಅವನಿಗೆ ಆನಂದ ಲಭಿಸುತ್ತದೆ—ಅದು ವೇದ್ಯಸ್ಥಿತಿಯನ್ನು ಮೀರಿದ ಶಾಂತಿ."[3]

ಈ ಪಂಕ್ತಿಗಳಲ್ಲಿ ಗೋಚರವಾಗುವ ತತ್ತ್ವಗಳ ಅನುಷ್ಠಾನ ಸಾಕ್ಷಾತ್ಕಾರಗಳ ದಿಶೆಯಲ್ಲಿ ಪ್ರೊ. ಹಿರಿಯಣ್ಣನವರ ಜೀವನ ರೂಪಗೊಂಡಿತ್ತೆಂಬುದು ಹಲವಾರು ನಿದರ್ಶನಗಳಿಂದ ವಿಶದಪಡುತ್ತದೆ. ಅವರು ಆಡಂಬರದಿಂದ ದೂರವಾದ ಸಾಧನೆಯ ಮಾರ್ಗವನ್ನವಲಂಬಿಸಿ, ಸೃಷ್ಟಿಯ ಸಮಸ್ತ ವಸ್ತುಗಳಲ್ಲೂ ಆಸಕ್ತಿ ವಿಶ್ವಾಸಗಳನ್ನು ವಹಿಸಿ, ಪರಿಪೂರ್ಣತೆಗೆ ಅತ್ಯಾವಶ್ಯಕವಾದ ನಿರಾಸಕ್ತಿಯನ್ನು ಅವುಗಳ ಮೂಲಕವೇ ಬೆಳೆಸಿಕೊಂಡು ಅದರ ರಹಸ್ಯವನ್ನರಿಯುವ ಪ್ರಯತ್ನದಲ್ಲಿ ತೊಡಗಿ ಯಶಸ್ಸು ಗಳಿಸಿದ ಪುಣ್ಯಾತ್ಮರ ಗುಂಪಿಗೆ ಸೇರಿದ್ದಾರೆ. ಆ ದೃಷ್ಟಿಯಿಂದ ಮನಸ್ಸು ಹೃದಯ ಗಳನ್ನು ಶುದ್ಧೀಕರಿಸುವ ಜೀವನಪ್ರಕಾರಗಳಾದ ವಿನಯ, ಶಿಸ್ತು, ಸಂಯಮ, ಸೌಜನ್ಯ, ಪ್ರಾಮಾಣಿಕತೆ, ಅನುಕಂಪೆ, ಕರ್ತವ್ಯನಿಷ್ಠೆ ಮುಂತಾದವನ್ನು ತಮ್ಮ ವ್ಯಕ್ತಿತ್ವದಲ್ಲಿ ಸೂಕ್ತವಾಗಿ ಅಳವಡಿಸಿಕೊಂಡಿದ್ದರು. ಅಲ್ಲದೆ ಅವುಗಳ ಸಾರ್ಥಕತೆ ಗೋಸ್ಕರ ಮಿತ ಹಿತ ಮೃದುವಾಗಿ ನುಡಿದು, ನುಡಿದಂತೆ ನಡೆದು, ಸ್ವಸ್ಥಚಿತ್ತರಾಗಿ ಎಲ್ಲವನ್ನೂ ಎಲ್ಲರನ್ನೂ ಸಮದೃಷ್ಟಿಯಿಂದ ಕಂಡು ವಿಶ್ವವನ್ನೆಲ್ಲ ಅಡಗಿಸಿಕೊಳ್ಳು

---

[3] Common experience takes for granted that Variety is the ultimate truth. According to the Vedānta, the final truth lies in the unification of this variety through a proper synthesis. But this unification is what takes place in perfect knowledge. Commonly we are occupied with appearances which give only a fragmentary view of reality. They alone concern us in our everyday life. But, he who attains perfect knowledge—the jivanmukta—transcends this fragmentary view. He may continue to perceive variety; but it ceases to have any ultimate significance for him. He merges in the unity which he realises in all separate existence including his own and enjoys *ānanda*—the peace that passeth understanding."

—*Art Experience, 1954*, p. 8

ವಷ್ಟು ಆಳ ವೈಶಾಲ್ಯಗಳನ್ನು ತಮ್ಮ ವ್ಯಕ್ತಿತ್ವಕ್ಕೆ ತಂದುಕೊಟ್ಟ ಜೀವನ್ಮುಕ್ತರ ಶ್ರೇಣಿಯಲ್ಲಿದ್ದವರು. ಮಾನ್ಯ ಡಿ.ವಿ.ಜಿ.ಯವರು ಹೇಳುವಂತೆ, ಅಂಥವರದು—

ಹೊರಗೆ ಲೋಕಾಸಕ್ತಿಯೊಳಗೆ ಸಕಲ ವಿರಕ್ತಿ |
ಹೊರಗೆ ಕಾರ್ಯಧ್ಯಾನವೊಳಗುದಾಸೀನ ||
ಹೊರಗೆ ಸಂಸ್ಕೃತಿಭಾರವೊಳಗದರ ತಾತ್ಸಾರ |
ವರಯೋಗಮಾರ್ಗವಿದು–ಮಂಕುತಿಮ್ಮ ||

೨. ಕೃತಿಗಳು

ಇಲ್ಲಿ ಪ್ರಾ. ಹಿರಿಯಣ್ಣನವರ ಕೃತಿಗಳ ಪರಿಚಯವನ್ನು ಮಾಡಿಕೊಡುವ ಸಾಹಸಕ್ಕೆ ಅವುಗಳ ವಿಚಾರದಲ್ಲಿರುವ ಆದರ ಶ್ರದ್ಧೆಗಳು ಪ್ರೇರಕಗಳಾಗಿವೆ. ತತ್ತ್ವಜ್ಞಾನಕ್ಕೆ ಸಂಬಂಧಪಟ್ಟ ಜಟಿಲ ವಿಷಯಗಳನ್ನು ಅವಕ್ಕನುಗುಣವಾದ ಗಂಭೀರಭಾಷೆಯಲ್ಲಿ ಸಂಶಯಾತೀತ ಶೈಲಿಯಲ್ಲಿ ಒಳಗೊಂಡು ಆದರಕ್ಕೂ ವಿಷಯಗಳ ಮೇಲಣ ಪ್ರಭುತ್ವ, ಪ್ರತಿಪಾದನೆಯಲ್ಲಿ ಪ್ರಾಮಾಣಿಕತೆ ಇವುಗಳಿಂದ ಕೂಡಿ ಶ್ರದ್ಧೆಗೂ ಅವು ಪಾತ್ರವಾಗತಕ್ಕವು. ಅವೆಲ್ಲವುಗಳಲ್ಲೂ ಕಂಡುಬರುವ ಸಮಗ್ರದೃಷ್ಟಿಯೆಂದರೆ, ಜೀವನ್ಮುಕ್ತಿಯ ಆದರ್ಶದ ಹಾಗೂ ಆಚರಣೆಯ ಸಾಧನೆ ಸಿದ್ಧಿಗಳ ಮೂರ್ತರೂಪವಾಗಿರುವ ಭಾರತೀಯ ದರ್ಶನಗಳ ಮಹತ್ತ್ವದ ಪರಿಶೀಲನೆ. ಭಾರತೀಯ ತತ್ತ್ವಜ್ಞಾನದ ರೂಪರೇಖೆಗಳನ್ನು ಕೊಡುವ ಸರ್ವೋತ್ಕೃಷ್ಟ ಗ್ರಂಥದಿಂದ ಪ್ರಾರಂಭಿಸಿ—ಅವರಿಂದ ಸಂಪಾದಿತವಾದ ಮತ್ತು ಅನುವಾದದಲ್ಲಿನ ಕೃತಿಗಳನ್ನೂ ಸೇರಿಸಿಕೊಂಡು—ಅವರ ವಿಮರ್ಶನ ಲೇಖನಗಳ ಸಂಕಲನವಾದ ಕಡೆಯ ಗ್ರಂಥದ ವರೆಗೆ (ಈತನಕ ಪ್ರಕಟಿತ ಗ್ರಂಥಗಳಲ್ಲಿ) ಎಲ್ಲವೂ ಆ ದೃಷ್ಟಿಯ ಅಂತಹ ಐಕ್ಯಸಾಧನೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಕೃತಿಗಳ ಹೆಸರುಗಳೂ ಅವುಗಳಲ್ಲಿಯ ಕೆಲವು ಮುಖ್ಯ ವಿಚಾರಗಳೂ ಕೆಳಕಂಡಂತಿವೆ :

(1) Outlines of Indian Philosophy

Pp. 419; Sixth Impression (1967) : London, George Allen & unwin Ltd.

ಪ್ರಾ. ಹಿರಿಯಣ್ಣನವರೇ ಪೀಠಿಕೆಯಲ್ಲಿ ಹೇಳಿರುವಂತೆ “ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಪರ್ಯಂತ ಮಾಡಿದ ಪಾಠಪ್ರವಚನಗಳ ಆಧಾರದಿಂದ ರಚಿತವಾಗಿ ಈ ಗ್ರಂಥ ಭಾರತೀಯ ದರ್ಶನವನ್ನು ಬೋಧಿಸುವ ಕಾಲೇಜುಗಳಲ್ಲಿ ಒಂದು ಪಠ್ಯಗ್ರಂಥದ ಉಪಯೋಗ ಹೊಂದಲೆಂದು ಪ್ರಕಟಿತವಾಗಿದೆ. ಹಾಗೆ ಪ್ರಥಮತಃ ವಿದ್ಯಾರ್ಥಿಗಳಿಗೋಸ್ಕರವಾಗಿದ್ದರೂ ತತ್ತ್ವಶಾಸ್ತ್ರ

ಸಮಸ್ಯೆಗಳಿಗೆ ಭಾರತೀಯರು ಒದಗಿಸಿರುವ ಪರಿಹಾರವನ್ನು ತಿಳಿಯಲಪೇಕ್ಷಿಸುವ ಇತರರಿಗೂ ಅದು ಉಪಯುಕ್ತವಾಗಬಹುದೆಂದು ಆಶಿಸಲಾಗಿದೆ.” ಹೀಗೆ ಪರಿಚಯ ಮಾಡಿಕೊಡಲಾದ ಆ ಗ್ರಂಥವನ್ನು ಕುರಿತು ಪ್ರೊ. ಎನ್. ಶಿವರಾಮಶಾಸ್ತ್ರಿಗಳು “ಪುಸ್ತಕದ ಇಂತಹ ಒಂದು ವರ್ಣನೆಯಿಂದ ಅನೇಕ ವಿದ್ವಾಂಸರೂ ವಿಮರ್ಶಕರೂ ಮಾರುಹೋಗಿದ್ದರು. ವಸ್ತುತಃ ಮನೋಜ್ಞ ಶೈಲಿಯಲ್ಲಿ ರಚಿತವಾಗಿ ಸರಳವೂ ಸುಸ್ಪಷ್ಟವೂ ಅಧಿಕೃತವೂ ಆಗಿರುವ ಈ ಭಾರತೀಯ ದರ್ಶನರೂಪರೇಖೆಯನ್ನು ಕೊಟ್ಟಿರುವ ಅವರಿಗೆ ವಿದ್ವತ್‌ಪ್ರಪಂಚವೇ ಶಾಶ್ವತವಾಗಿ ಕೃತಜ್ಞತೆಯುಳ್ಳದ್ದಾಗಿದೆ”[4] ಎಂದು ಹೇಳಿದ್ದಾರೆ.

ಈ ಗ್ರಂಥದಲ್ಲಿ ವೇದಗಳ ಕಾಲ, ತರುವಾಯ ಮತ್ತು ಮುಂದಿನ ದಾರ್ಶನಿಕಪದ್ಧತಿಗಳ ಕಾಲ—ಎಂಬ ಮೂರು ಕಾಲಾವಧಿಗಳಿಗೆ ಸಂಬಂಧಪಟ್ಟಂತೆ ಭಾರತೀಯ ದರ್ಶನದ ಹುಟ್ಟು-ಬೆಳವಣಿಗೆಗಳು ನಿರೂಪಿತವಾಗಿವೆ; ಉಪನಿಷತ್ತುಗಳು, ಭಗವದ್ಗೀತೆ, ಜೈನಬೌದ್ಧದರ್ಶನಗಳು, ಚಾರ್ವಾಕ ಹಾಗೂ ನ್ಯಾಯ ವೈಶೇಷಿಕ, ಸಾಂಖ್ಯ-ಯೋಗ, ಪೂರ್ವಮೀಮಾಂಸಾ, ವೇದಾಂತ-ಅದ್ವೈತ, ವಿಶಿಷ್ಟಾದ್ವೈತ—ಇವುಗಳಲ್ಲಿ ಕಂಡುಬರುವ ವಿಶ್ವ ಮತ್ತು ಜೀವನತತ್ತ್ವಾನ್ವೇಷಣೆ, ದೇವರು, ಆತ್ಮ, ಬ್ರಹ್ಮ, ಜೀವ—ಮುಂತಾದ ವಿಚಾರಗಳು, ಪ್ರಮಾಣ ಪ್ರಮೇಯಕ್ರಮಗಳು ಮತ್ತು ಬಗೆಗಳು—ಇವೆಲ್ಲವೂ ಅಧಿಕೃತವಾಗಿ ಶಾಸ್ತ್ರೀಯವಾಗಿ ಪ್ರತಿಪಾದಿತವಾಗಿವೆ. ಆವಶ್ಯಕತೆ ಇರುವಲ್ಲೆಲ್ಲ ತತ್ತ್ವಜ್ಞಾನಕ್ಕೆ ಸಂಬಂಧಪಟ್ಟಂತೆ ಪ್ರಾಚೀನ ಸಂಸ್ಕೃತ ಮತ್ತು ಹಲವಾರು ಆಧುನಿಕ ಗ್ರಂಥಗಳ ಉಲ್ಲೇಖವಿದೆ; ದರ್ಶನಗಳನ್ನು ವ್ಯಾಸಂಗಮಾಡತಕ್ಕವರಿಗೆ ಈ ಉಲ್ಲೇಖಗಳು ಅತ್ಯಂತ ಪ್ರಯೋಜನಕಾರಿಗಳಾಗಿವೆ.

ಆಯಾ ದಾರ್ಶನಿಕಗ್ರಂಥವಿಷಯದ ವೈಶಿಷ್ಟ್ಯವನ್ನೂ, ತತ್ತ್ವಜ್ಞಾನಕ್ಕೆ ಭಾರತೀಯ ದರ್ಶನಗಳ ಕೊಡುಗೆಯ ವಿಚಾರವನ್ನೂ ಪ್ರತಿಪಾದಿಸಿ, ಪಾಶ್ಚಾತ್ಯ ದರ್ಶನಗಳ ದೃಷ್ಟಿಯಿಂದಲೂ ವಿಮರ್ಶಾತ್ಮಕವಾಗಿ ತೌಲನಿಕವಾಗಿ ಗ್ರಹಿಸಿ ಭಾರತೀಯ ದರ್ಶನಗಳ ಹಿರಿಮೆಯನ್ನು ಕುರಿತು ಅವರು ವ್ಯಕ್ತಪಡಿಸಿರುವ ಅಮೂಲ್ಯ ಅಭಿಪ್ರಾಯಗಳನ್ನು ಇಲ್ಲಿ ಕಾಣಬಹುದು. ಈ ಗ್ರಂಥದ ಗುಣಾತಿಶಯವನ್ನು ಕೆಳಕಂಡ ಒಂದು ವಿಮರ್ಶನೋಲ್ಲೇಖದಿಂದ ಸೂಚಿಸಬಹುದು:

‘This admirable text-book . . . well proportioned and clearly arranged; written in a style entirely worthy of the dignity of its subject . . . . A very satisfactory piece of work.’[5]

—Theology

---

[4] Prof. M. Hiriyanna Commemoration Volume, Pp. xv–xvi

[5] ಈ ಪ್ರಶಂಸನೀಯ ಗ್ರಂಥ ಸುಪರಿಮಿತವೂ ಸುವಿನ್ಯಸ್ತವೂ ಆಗಿದೆ. ವಿಷಯ ಗಾಂಭೀರ್ಯಕ್ಕನುಗುಣವಾದ, ಶೈಲಿಯಲ್ಲಿ ಬರೆಯಲ್ಪಟ್ಟಿರುವ ಅದು ಅತಿ ತೃಪ್ತಿಕರವಾದ ಒಂದು ಕೃತಿ.

(2) The Essentials of Indian Philosophy

Pp. 214; Sixth Impression (1967): London, George Allen & Unwin Ltd.

ವಿಷಯಗಳನ್ನು ಸಂಬಂಧಪೂರ್ವಕವಾಗಿ, ಸಂಕ್ಷಿಪ್ತವಾಗಿ, ವಿಮರ್ಶಾತ್ಮಕವಾಗಿ ಪ್ರತಿಪಾದಿಸುವುದರ ಮೂಲಕ ರಚಿತವಾದ ಈ ಗ್ರಂಥ ಭಾರತೀಯ ದರ್ಶನ ವಾಙ್ಮಯಸಾರವನ್ನು ತಿಳಿಸುತ್ತದೆ. ಆ ದರ್ಶನ ರೂಪರೇಖೆಗಳನ್ನೊಳಗೊಂಡಿರುವ ಮೇಲ್ಕಂಡ ಗ್ರಂಥಕ್ಕಿಂತಲೂ "ಸುಲಭವಾದ ಸರಳವಾದ ನಿರೂಪಣೆ ಸಾಮಾನ್ಯ ಓದುಗರಿಗೆ ಆವಶ್ಯಕವೆಂಬುದನ್ನು ಮನಗಂಡು ಇದು ರಚಿತವಾಗಿದೆ" ಎಂದು ಗ್ರಂಥಕರ್ತರೇ ಹೇಳಿದ್ದಾರೆ. ದೊಡ್ಡ ಗ್ರಂಥದ ಹಲವಾರು ಭಾಗಗಳನ್ನು ಬಿಟ್ಟು ರೂಪಿಸಿರತಕ್ಕ ಗ್ರಂಥವೇನಲ್ಲ. ಇದರಲ್ಲಿ ಪುನರುಕ್ತಿ ಇಲ್ಲ. ವ್ಯತ್ಯಾಸಗಳಿರುವುದಲ್ಲದೆ ಕೆಲವು ಕಡೆ ಹೊಸ ವಿಷಯಗಳನ್ನೂ ಸೇರಿಸಲಾಗಿದೆ. ದ್ವೈತದರ್ಶನದ ಸಂಕ್ಷಿಪ್ತ ಪ್ರತಿಪಾದನೆ ಅಂತಹ ವಿಷಯಗಳಲ್ಲೊಂದು. ಈ ಬಗೆಯ ಒಂದು ಚಿಕ್ಕಗ್ರಂಥದ ವ್ಯಾಪ್ತಿಯಲ್ಲಿ "ಭಾರತೀಯ ದರ್ಶನಗಳ ಮುಖ್ಯವಿಚಾರಗಳೆಲ್ಲವನ್ನೂ ಹೇಳಬೇಕಾದರೆ ಔಚಿತ್ಯಜ್ಞಾನ ಸಂಗ್ರಹಣ ಕೌಶಲಗಳು ಅತ್ಯಾವಶ್ಯಕ"ವೆಂದೂ "ಇವೆರಡೂ ಈ ಗ್ರಂಥದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ" ಎಂದೂ ವಿಮರ್ಶಕರ ಮತ.

ವೈದಿಕ ಮತಧರ್ಮ ಮತ್ತು ತತ್ತ್ವಜ್ಞಾನ, ದಾರ್ಶನಿಕಪದ್ಧತಿಗಳಾಗುವುದಕ್ಕೆ ಮುಂಚೆ ಮಾರ್ಪಾಡಿನ ಸ್ಥಿತಿಗಳು, ಅವೈದಿಕ ದರ್ಶನಮಾರ್ಗಗಳು, ನ್ಯಾಯ–ವೈಶೇಷಿಕ, ಸಾಂಖ್ಯ–ಯೋಗ, ಪೂರ್ವಮೀಮಾಂಸಾ, ವೇದಾಂತ–ಅದ್ವೈತ, ವಿಶಿಷ್ಟಾದ್ವೈತ, ದ್ವೈತ—ಇವು ಪ್ರತಿಪಾದಿತ ವಿಷಯಗಳು. ಗ್ರಂಥದ ಕಡೆಯಲ್ಲಿ ಅತ್ಯುಪಯುಕ್ತ ಟಿಪ್ಪಣಿಗಳೂ ಸಂಸ್ಕೃತ ಪಾರಿಭಾಷಿಕ ಶಬ್ದಗಳಿಗೆ ಸಮನಾದ ಇಂಗ್ಲಿಷ್ ಪದಗಳನ್ನೂ ವಿವರಣೆಗಳನ್ನೂ ಕೊಡುವ ಒಂದು ಪಟ್ಟಿಯೂ ವಿಷಯಸೂಚಿಯೂ ಇವೆ.

(3) Popular Essays in Indian Philosophy

Pp. vi + 114; Mysore, Kavyalaya Publishers, 1952

ಭಾರತೀಯ ತತ್ತ್ವಜ್ಞಾನಕ್ಕೆ ಸಂಬಂಧಪಟ್ಟಂತೆ ಅವರ ವಿವಿಧ ಪ್ರಬಂಧಗಳ ಸಂಕಲನ. ವೇದಾಂತಿಗೆ ಆವಶ್ಯಕವಾದ ಶಿಕ್ಷಣವಿಷಯದಿಂದ ಪ್ರಾರಂಭವಾಗಿ, ಭಾರತೀಯದರ್ಶನದ ಒಂದು ಸಂಕ್ಷಿಪ್ತ ನೋಟವನ್ನು ಕುರಿತ ಪ್ರಬಂಧವೊಂದರಿಂದ ಮುಕ್ತಾಯವಾಗುತ್ತದೆ.

ಭಾರತೀಯ ದರ್ಶನದ ಗುರಿಯನ್ನು ಪ್ರತಿಪಾದಿಸುವ ಎರಡನೆಯ

ಪ್ರಬಂಧದಲ್ಲಿ ಕೆಲವು ಗಮನಾರ್ಹ ವಿಚಾರಗಳಿವೆ. ಭಾರತೀಯದರ್ಶನ ಹೇಗೆ ಪ್ರಮಾಣ ಪ್ರಮೇಯ ವಿಮರ್ಶೆಯೋ ಹಾಗೆಯೇ ಅದು ಜೀವನವಿಮರ್ಶೆ ಯೆಂಬುದೂ ಅದರ ಉದ್ದೇಶ ಕೇವಲ ಬೌದ್ಧಿಕ ಶಿಕ್ಷಣವಾಗಿರದೆ ನಮ್ಮನ್ನು ಸನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡತಕ್ಕದೆಂಬುದೂ ಆ ವಿಚಾರಗಳಲ್ಲಿ ಕೆಲವು.

ಮುಂದೆ, ಭಾರತೀಯ ದರ್ಶನಗಳಲ್ಲಿ ಅಭಿಪ್ರಾಯವೈವಿಧ್ಯ, ಕರ್ಮ ಹಾಗೂ ಇಚ್ಛಾಶಕ್ತಿ, ಪ್ರವೃತ್ತಿಮಾರ್ಗಗಳು, ಪುನರ್ಜನ್ಮ, ಪುರುಷಾರ್ಥಗಳು, ಸಾಂಖ್ಯದರ್ಶನ, ಉಪನಿಷತ್ತುಗಳು, ಮಾಯಾ, ಜ್ಞಾನ ಮತ್ತು ಭಕ್ತಿ, ವೈಶೇಷಿಕ ಮುಂತಾದ ಆರು ದರ್ಶನಮಾರ್ಗಗಳು—ಇವನ್ನು ಕುರಿತ ಪ್ರಬಂಧಗಳಿವೆ.

ಸಂಸ್ಕೃತ ವಿದ್ಯಾಭ್ಯಾಸದ ಮತ್ತು ಸಂಸ್ಕೃತಿಯ ಮಹತ್ತ್ವ ಈ ಗ್ರಂಥದ ಪ್ರಬಂಧಗಳಲ್ಲೊಂದರ ವಿಷಯ. ಒಟ್ಟು ಸಂಸ್ಕೃತವಾಙ್ಮಯಜೀವನದ ಸನಾತನ ಆದರ್ಶವನ್ನೊಳಗೊಂಡಿರುವುದರಿಂದ ಮಹತ್ತ್ವಪೂರ್ಣವಾಗಿದೆಯೆಂದೂ ಆ ಆದರ್ಶ ಋಷಿಗಳಿಂದ ಪ್ರತಿಪಾದಿತವಾಗಿರುವಂತೆ "ಸುಖಂ ದುಃಖಸುಖಾತ್ಯಯಃ" —ಸುಖದುಃಖಗಳನ್ನು ಮೀರಿದ ಸುಖ—ವೆಂದೂ ಇಲ್ಲಿ ತಿಳಿಸಲಾಗಿದೆ. ಸ್ವಾರ್ಥ ತ್ಯಾಗ ತತ್ತ್ವಜ್ಞಾನಗಳನ್ನೆ ಸಾಧಕಗಳನ್ನಾಗಿ ಹೊಂದಿರುವ ಅಂತಹ ಸುಖವೇ ಶಾಂತಿ. ಅದು ಕಠೋಪನಿಷತ್ತಿನಲ್ಲಿ ಹೇಳಿರುವಂತೆ:

ಏಕೋ ವಶೀ ಸರ್ವಭೂತಾಂತರಾತ್ಮಾ
ಏಕಂ ರೂಪಂ ಬಹುಧಾ ಯಃ ಕರೋತಿ,
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾ
ಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ ॥ v 12
ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾ-
ಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್,
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾ
ಸ್ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಂ ॥ v 13

(4) The Quest after Perfection

Pp. vi + 112 Mysore; Kavyalaya Publishers, 1952

ಇದು ಪರಿಪೂರ್ಣತೆಯ ಅನ್ವೇಷಣೆ ಮುಂತಾದ ವಿಚಾರಗಳನ್ನು ಕುರಿತ ಅಮೂಲ್ಯ ಬರಹಗಳ ಸಂಕಲನ. ಭಾರತೀಯ ದರ್ಶನದ ಗುರಿಯಾದ ಆತ್ಮಶಾಂತಿ ಯೆಂಬ ಪರಿಪೂರ್ಣತೆ ಅರಿವಿಗೆ ಮಾತ್ರ ವಿಷಯವಾದರೆ ಸಾಲದೆಂದೂ ಅನುಭವಕ್ಕೆ ಬರಬೇಕೆಂದೂ ಇಲ್ಲಿ ನಿರೂಪಿತವಾಗಿದೆ.

ಸತ್ಯ, ಶಿವ, ಸುಂದರ ಎಂಬ ಮೌಲ್ಯಗಳು ಮೂಲಭೂತವೇನೋ ನಿಜ; ಆದರೆ ಅವನ್ನೆ ಜೀವನದ ಆತ್ಯಂತಿಕ ಮೌಲ್ಯಗಳೆನ್ನುವಂತಿಲ್ಲ. ಭಾರತೀಯ

ದೃಷ್ಟಿಯಲ್ಲಿ ಹಾಗೆ ಆತ್ಯಂತಿಕವಾದ ಪರಮ ಮೌಲ್ಯವೆಂದರೆ ಸಂಪೂರ್ಣ ಸ್ವಾರ್ಥ ತ್ಯಾಗದ ಮತ್ತು ತಾನೇ ತಾನಾಗಿ ವ್ಯಕ್ತಪಡುವ ಆನಂದದ ಸ್ಥಿತಿ; ಜೀವನ್ಮುಕ್ತಿ. ಅದು ಮೇಲ್ಕಂಡ ಮೌಲ್ಯಗಳಿಂದಲೇ ಬರುವಂತಹುದು; ಆದರೆ ಅದು ಅವುಗಳ ಸಂಯೋಗವಲ್ಲ; ಅವುಗಳ ಸಮನ್ವಯಸ್ಥಿತಿ, ಉತ್ಪಾದಕವಾಗಿರತಕ್ಕದ್ದು; ಇಂತಹ ಪರಿಪೂರ್ಣತೆಯ ಅನ್ವೇಷಣೆ ಎಲ್ಲ ಮಾನುಷ ಪ್ರಯತ್ನದ ಅಂತರಾರ್ಥ; ಈ ಆದರ್ಶ ಭಾರತೀಯ ದಾರ್ಶನಿಕರು ಪ್ರತಿಪಾದಿಸಿರುವ 'ಮೋಕ್ಷ'ಕ್ಕೆ ಸಮ ಎಂಬ ಹಲವು ವಿಚಾರಗಳನ್ನು ಇಲ್ಲಿ ಕಾಣಬಹುದು.

ಉಪನಿಷತ್ತುಗಳಲ್ಲಿ ಧರ್ಮದ ವಿಚಾರ, ಅದ್ವೈತದ ಪ್ರಕಾರ ಆಚರಣೆಯಲ್ಲಿ ಆಸಕ್ತಿಭಾವದ ಸ್ಥಾನ, ಭಾರತೀಯ ದರ್ಶನದ ಸಂದೇಶ, ಶಂಕರಾಚಾರ್ಯರ ಮತದಲ್ಲಿ ಪರಮ ಮೌಲ್ಯ, ಭಾರತೀಯ ದೃಷ್ಟಿಯಲ್ಲಿ ಮೌಲ್ಯಗಳು—ಇವು ಈ ಗ್ರಂಥದ ಇತರ ಲೇಖನಗಳಿಗೆ ಸಂಬಂಧಪಟ್ಟ ವಿಷಯಗಳು.

ಮೌಲ್ಯಗಳನ್ನು ಕುರಿತ ವಿವೇಚನೆಯಲ್ಲಿ ತಮ್ಮ ನಿಲುವೇನೆಂಬುದನ್ನು ಪ್ರೊ. ಹಿರಿಯಣ್ಣನವರು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ವಸ್ತುಪರಿಚಯ, ತರುವಾಯ ಕ್ರಿಯೆಯ ಮೂಲಕ ತತ್ಸಂಬಂಧವಾದ ಇಚ್ಛಾಪೂರ್ತಿಕೆ—ಇವು ಜ್ಞಾನದ ಎರಡು ಕೆಲಸಗಳು. ಅಂತಹ ಇಚ್ಛಾಪೂರ್ತಿಕೆಯೇ (ಇಷ್ಟ) ಮೌಲ್ಯವೆನಿಸಿಕೊಳ್ಳುತ್ತದೆ. ಇದಕ್ಕೆ ಸಾಧನಸಾಮಗ್ರಿಗಳು ಆವಶ್ಯಕ; ಅವೂ ಮೌಲ್ಯಗಳೆಂದು ವರ್ಣಿತವಾಗಿವೆ. ಆದರೆ ಅವು ಕರಣಮೌಲ್ಯಗಳೇ ಹೊರತು, ಇಚ್ಛಾಪೂರ್ತಿಕೆಯಂತೆ ಸ್ವಭಾವಸಿದ್ಧ (ಇನ್‌ಟ್ರಿನ್ಸಿಕ್) ಮೌಲ್ಯಗಳಾಗಲಾರವು. ಕರಣ ಮೌಲ್ಯಗಳು ಅಸಂಖ್ಯಾತ, ಅನಿರ್ದಿಷ್ಟ; ಸ್ವಭಾವ ಸಿದ್ಧವಾದವು ಆತ್ಯಂತಿಕ. ಇಚ್ಛಾಪೂರ್ತಿಕೆಯ ಎಲ್ಲ ಮೌಲ್ಯಗಳೂ ಎಷ್ಟೇ ಸ್ವಭಾವಸಿದ್ಧವಾಗಿದ್ದರೂ ಆತ್ಯಂತಿಕವಲ್ಲ; ಏಕೆಂದರೆ ಅವುಗಳಲ್ಲಿ ಕೆಲವು ತಾತ್ಕಾಲಿಕವಾಗಿರಬಹುದು. ಆದ್ದರಿಂದ ಪರಮಮೌಲ್ಯವೆನಿಸಿಕೊಳ್ಳಬೇಕಾದರೆ ಅದು ಸ್ವಭಾವಸಿದ್ಧವೂ ನಿತ್ಯವೂ ಆತ್ಯಂತಿಕವೂ ಆಗಿರಬೇಕು. ಅಂತಹ ಮೌಲ್ಯವುಂಟೇ ಎಂಬ ಪ್ರಶ್ನೆಗೆ ಭಾರತೀಯ ದೃಷ್ಟಿಯಲ್ಲಿ ಉತ್ತರವಿದೆಯೆಂದೂ ಆದರಂತೆ ಧರ್ಮಶ್ಲೋಕಗಳು ಅಂತಹ ಮೌಲ್ಯಗಳೆಂದೂ ಇಲ್ಲಿ ಪ್ರೊ. ಹಿರಿಯಣ್ಣನವರು ತಿಳಿಸಿದ್ದಾರೆ. ಮಿಕ್ಕ ವಿಷಯಗಳು ಅರ್ಥಕಾಮಗಳೆಂಬ ಮೌಲ್ಯಗಳಲ್ಲಿ ಸೇರುತ್ತವೆ. ಒಟ್ಟಿನಲ್ಲಿ ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ನಾಲ್ಕು ಮೌಲ್ಯಗಳು—ಇವೇ ಪುರುಷಾರ್ಥಗಳು. ಭಾರತೀಯ ದರ್ಶನ ಪ್ರಥಮತಃ ಇವಕ್ಕೆ ಸಂಬಂಧಪಟ್ಟಿರುವುದರಿಂದ ಅದನ್ನು ಅವರು "ಪುರುಷಾರ್ಥಗಳ ದರ್ಶನ" ಎಂದು ಕರೆದಿದ್ದಾರೆ. ಮೇಲ್ಕಂಡ ಪುರುಷಾರ್ಥಗಳಲ್ಲಿ ತಾರತಮ್ಯದ ವಿಚಾರವೂ ಸೇರಿರುವುದರಿಂದ 'ಪುರುಷಾರ್ಥ ವಿಮರ್ಶೆ'ಯೆನ್ನಬಹುದೆಂದು ಅವರ ಮತ.

ಪುರುಷಾರ್ಥಗಳ ತಾರತಮ್ಯದಲ್ಲಿ ಮೋಕ್ಷಕ್ಕೆ ಉಚ್ಚತಮ ಸ್ಥಾನ ಲಭಿಸುತ್ತದೆ; ಏಕೆಂದರೆ ಮೇಲೆ ಸೂಚಿಸಿದಂತೆ ಯಾವ ಮೌಲ್ಯದ ಸಿದ್ಧಿಯ ಸ್ಥಿತಿಗೆ ಚ್ಯುತಿ

ಇಲ್ಲವೋ ಯಾವುದು ಅನ್ಯಫಲಕ್ಕೆ ಸಾಧನವಲ್ಲವೋ ಅದು ಉಚ್ಚತಮ. ಆದ್ದರಿಂದ ಭಾರತೀಯ ದೃಷ್ಟಿಯಲ್ಲಿ ಧರ್ಮವೂ ಒಂದು ರೀತಿಯಿಂದ ಹಾಗಿಲ್ಲದ ಪುರುಷಾರ್ಥಗಳಲ್ಲಿ ಸೇರಿಕೊಂಡು ಧರ್ಮ, ಅರ್ಥ, ಕಾಮ ಇವು ಮೋಕ್ಷವೆಂಬ ಪರಮಪುರುಷಾರ್ಥಕ್ಕೆ ಅಧೀನವಾಗಿವೆಯೆಂದೂ ಪುರುಷಾರ್ಥಗಳನ್ನು ಕುರಿತು ಪ್ರಾಚೀನ ಭಾರತದ ಆದೇಶ ಅದೇ ಎಂದೂ ಅಲ್ಲಿ ಸ್ಪಷ್ಟವಾಗಿದೆ.

ಹೀಗೆ ನಿತ್ಯವೂ ಸರ್ವತೃಪ್ತಿಕರವೂ ಆದ ಮೋಕ್ಷ ಕೇವಲ ಕಾಲ್ಪನಿಕ ಮತ್ತು ಅಸಾಧ್ಯವೆಂದು ಕೆಲವರು ವಾದಿಸಬಹುದು. ಅದರ ಸಿದ್ಧಿಯ ಬಗ್ಗೆ ಭಾರತೀಯ ದಾರ್ಶನಿಕರಲ್ಲಿ ಸಾಮಾನ್ಯವಾಗಿ ಒಮ್ಮತವಿದೆ. ಅವರಲ್ಲಿ ಕೆಲವರು ಮೋಕ್ಷ ರೂಪದ ಪರಿಪೂರ್ಣತೆ ಜೀವಂತ ಸ್ಥಿತಿಯಲ್ಲಿ ಲಭಿಸುವುದೆಂಬ (ಜೀವನ್ಮುಕ್ತಿ) ಅಭಿಪ್ರಾಯವುಳ್ಳವರಾಗಿದ್ದಾರೆ; ಕೆಲವರ ಮತದಲ್ಲಿ ಅದು ದೇಹತ್ಯಾಗವಾದ ಮೇಲೆ ಮಾತ್ರ ಬರತಕ್ಕದ್ದು (ವಿದೇಹಮುಕ್ತಿ). ಇಂತಹ ಭಿನ್ನಭಿಪ್ರಾಯವನ್ನು ಕುರಿತು ವ್ಯಾಖ್ಯಾನ ಮಾಡುತ್ತ ಪ್ರೊ. ಹಿರಿಯಣ್ಣನವರು ತಮ್ಮ ವ್ಯಕ್ತಿಗತ ಅಭಿಪ್ರಾಯವೆಂದು ಸೂಚಿಸಿ ಕೆಳಕಂಡ ಮಾತುಗಳನ್ನು ಹೇಳಿದ್ದಾರೆ:

"ಈ ಪರಮಪುರುಷಾರ್ಥ ಸಾಧ್ಯವೇ ಹೇಗೆ ಎಂಬುದು ಪರಿಣಾಮಕಾರಿಯಾದ ಪ್ರಶ್ನೆಯಲ್ಲ. ಸಾಧ್ಯವಿಲ್ಲವೆಂದೂ ಅದು ಮನುಷ್ಯನ ಹಿಡಿತಕ್ಕೆ ಮೀರಿದ್ದೆಂದೂ ಒಂದು ವೇಳೆ ಒಪ್ಪಿಕೊಂಡರೂ ಆಲೋಚನಾಪೂರ್ವಕವಾಗಿ ಆ ಆದರ್ಶವನ್ನು ಅನುಸರಣ ವಿಷಯವಾಗಿ ಅಂಗೀಕರಿಸಿ ಮುಂದೆ ಅದರ ಕಡೆಗೆ ಶಾಶ್ವತ ಹಾಗೂ ಸತತ ಮುನ್ನಡೆ ಇರಬೇಕೆಂಬುದು ಗಮನಾರ್ಹವಾಗಿದೆ."

ಮೇಲೆ ಕಾಣಿಸಿರುವ ೩ ಮತ್ತು ೪ನೆಯ ಗ್ರಂಥಗಳ ವಿಚಾರವಾಗಿ ನಡೆದಿರುವ ವಿಮರ್ಶೆಯ ಕೆಲವು ಪಂಕ್ತಿಗಳು ಹೀಗಿವೆ :

"These two Volumes Contain some of the shorter essays of most respected authorities of Indian Philosophy.

Prof. Hiriyanna wrote with deep knowledge and great enthusiasm. The author's personality emerges from these essays—that of a man of great moral earnestness, with a deep love of his country's religious and philosophical heritage, which he interprets in twentieth century terms, in accordance with the needs of his compatriots as he conceived them.[6]

—*Luzac's Oriental List and Book Review*

[6] "ಈ ಎರಡು ಚಿಕ್ಕಸಂಪುಟಗಳು ಭಾರತೀಯ ದರ್ಶನದಲ್ಲಿ ಅತಿಗೌರವಕ್ಕೆ ಪಾತ್ರರಾದ ಪ್ರಮಾಣೀಭೂತವ್ಯಕ್ತಿಗಳೊಬ್ಬರ ಪ್ರಬಂಧಗಳನ್ನೊಳಗೊಂಡಿವೆ.

ಪ್ರೊ. ಹಿರಿಯಣ್ಣನವರು ಅಗಾಧ ಜ್ಞಾನ ಅತ್ಯುತ್ಸಾಹಗಳಿಂದ ಬರೆಯುತಕ್ಕವರು. ಈ

(5) Art Experince

Pp. vi + 86 ; Mysore, Kavyalaya Publishers, 1954

ಪ್ರೊ. ಹಿರಿಯಣ್ಣನವರ ವಿಮರ್ಶಲೇಖನಗಳ ಸಂಗ್ರಹವಾದ Reviews ಎಂಬ ಪುಸ್ತಕದ ಮುನ್ನುಡಿಯಲ್ಲಿ ಡಾ. ವಿ. ರಾಘವನ್ ಅವರು ಈ ಮಾತುಗಳನ್ನು ಹೇಳಿದ್ದಾರೆ:

"Advaita on the one hand and Alankāra—aesthetics on the other formed his *forte*."[7]

ಪ್ರೊ. ಹಿರಿಯಣ್ಣನವರ ವಿಚಾರದಲ್ಲಿ ಇದು ಕೇವಲ ಒಪ್ಪತಕ್ಕ ವಿಚಾರ. ಅವರು ಅದ್ವೈತದಲ್ಲಿ ಅದ್ವಿತೀಯ ಪಾಂಡಿತ್ಯ ಪಡೆದು ಅದರ ಉಪದೇಶಗಳ ಆಚರಣೆಯಲ್ಲಿ ತೊಡಗಿ ತಮ್ಮ ಗ್ರಂಥಗಳ ತತ್ಸಂಬಂಧ ವಿಷಯಗಳನ್ನು ಅಸದೃಶ ರೀತಿಯಲ್ಲಿ ಪ್ರತಿಪಾದಿಸಿದ್ದಾರೆಂಬುದು ಈ ಹಿಂದೆ ಮಾಡಿಕೊಟ್ಟಿರುವ ಗ್ರಂಥ ಪರಿಚಯದಿಂದ ಸ್ಪಷ್ಟವಾಗುತ್ತದೆ. ಭಾರತೀಯ ದರ್ಶನದಲ್ಲಿ ಮತ್ತು ಅದರಿಂದ ಪ್ರಭಾವಿತವಾಗಿ ಬೆಳೆದುಬಂದಿರುವ ಸೌಂದರ್ಯ ಪರಿಶೀಲನೆಯನ್ನು ಅದರ ಸೃಷ್ಟಿಸ್ಥಾನವಾದ ಲಲಿತಕಲೆಗಳಿಗೆ, ವಿಶೇಷವಾಗಿ ಸಾಹಿತ್ಯಕ್ಕೆ ಅನ್ವಯಿಸಿ ಸಾಹಿತ್ಯ ಸಮಸ್ಯೆಗಳ ಪರಿಹಾರ ಕ್ರಮವನ್ನಲ್ಲದೆ, ಸೌಂದರ್ಯ ಪರಿಶೀಲನೆಯೂ ಭಾರತೀಯ ದರ್ಶನವ್ಯಾಪ್ತಿಯಲ್ಲಿ ಸೇರಿದೆಯೆಂಬುದನ್ನೂ ಬೆಳಕಿಗೆ ತಂದಿದ್ದಾರೆ. ಅದಕ್ಕೆ ಮೇಲ್ಕಂಡ ಗ್ರಂಥ ಒಂದು ನಿದರ್ಶನ.

ಈ ಗ್ರಂಥದಲ್ಲಿ ಭಾರತೀಯ ಸೌಂದರ್ಯ ಸಮೀಕ್ಷೆಯನ್ನೊಳಗೊಂಡ ಎಂಟು ಹತ್ತು ಪ್ರಬಂಧಗಳಿವೆ. ಅವುಗಳ ಜೊತೆಗೆ ಒಂದೆರಡು ಪುಸ್ತಕಗಳ ವಿಮರ್ಶೆಯೂ ಮುನ್ನುಡಿಯೂ ಸೇರಿಬಂದಿವೆ.

ಭಾರತೀಯರ ದಾರ್ಶನಿಕದೃಷ್ಟಿಯನ್ನು 'ದಾರ್ಶನಿಕರ ದೇಶ'ವೆಂಬ ಮಾತುಗಳಿಂದ ಪ್ರಶಂಸಿಸಿದ ಪ್ರೊ. ಮ್ಯಾಕ್ಸ್‌ಮ್ಯುಲರ್ ಇನ್ನೊಂದು ಸಂದರ್ಭದಲ್ಲಿ ಪ್ರಕೃತಿಸೌಂದರ್ಯದೃಷ್ಟಿ ಭಾರತೀಯರ ಮನಸ್ಸಿನಲ್ಲಿರಲಿಲ್ಲವೆಂದು ಹೇಳಿದುದನ್ನು

ಪ್ರಬಂಧಗಳಲ್ಲಿ ಗ್ರಂಥಕರ್ತರ ವ್ಯಕ್ತಿತ್ವ ಗೋಚರವಾಗುತ್ತದೆ ; ಅದು ವಿಶೇಷ ಧಾರ್ಮಿಕ ಶ್ರದ್ಧೆಯಿಂದ ಮತ್ತು ಸ್ವದೇಶದಲ್ಲಿನ ಮತಧರ್ಮ ಹಾಗೂ ದಾರ್ಶನಿಕ ಪರಂಪರೆಯಲ್ಲಿ ಪ್ರೇಮದಿಂದ ಕೂಡಿರುವಂತಹುದು—ಆ ಪರಂಪರೆಯನ್ನು ತಾವು ಭಾವಿಸಿಕೊಂಡಂತೆ, ಸ್ವದೇಶದ ಜನತೆಯ ಆವಶ್ಯಕತೆಗಳಿಗನುಗುಣವಾಗಿ ಇಪ್ಪತ್ತನೆಯ ಶತಮಾನದ ಬಳಕೆಯನ್ನನುಸರಿಸಿ ಅವರು ನಿರೂಪಿಸುತ್ತಾರೆ."

[7] ಒಂದು ಕಡೆ ಅದ್ವೈತ ; ಮತ್ತೊಂದು ಕಡೆ ಅಲಂಕಾರ–ಸೌಂದರ್ಯ ಸಮೀಕ್ಷೆ ; ಇದು ಪ್ರೊ. ಹಿರಿಯಣ್ಣನವರ ವೈಶಿಷ್ಟ್ಯ.

ಉಲ್ಲೇಖಿಸಿ ಪ್ರೊ. ಹಿರಿಯಣ್ಣನವರು ಅದನ್ನೊಪ್ಪದೆ, ಆ ವಿಚಾರದಲ್ಲಿ ಭಾರತೀಯರು ಮಾಡಿರುವ ಸೌಂದರ್ಯಪರಿಶೀಲನೆಯನ್ನು ಈ ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾರೆ.

ಭಾರತೀಯದರ್ಶನದ ಪ್ರಮುಖ ಮಾರ್ಗಗಳಾದ ಸರ್ವೈಕ್ಯ ಮತ್ತು ಜೀವನ್ಮುಕ್ತಿ—ಇವು, ಕಾವ್ಯಸಮೀಕ್ಷಾಗ್ರಂಥಗಳಲ್ಲಿ ಕಂಡುಬರುವಂತೆ, ಕಲೆಗಳಿಗೆ ಸಂಬಂಧಪಟ್ಟ ಸಿದ್ಧಾಂತಗಳಲ್ಲಿ ಪ್ರಭಾವವನ್ನು ಹೊಂದಿವೆ. ತತ್ಪರಿಣಾಮವಾಗಿ ಸರ್ವೈಕ್ಯಪ್ರತಿಪಾದಕವಾದ ಆತ್ಮವಿಚಾರ ಕಾವ್ಯಕ್ಕೂ ಅನ್ವಯಿಸಲ್ಪಟ್ಟು, ಜೀವನ್ಮುಕ್ತಿತತ್ತ್ವದ ಆಶ್ರಯದಲ್ಲಿ ಕಾವ್ಯರಸದ ವಿಚಾರ ಬೆಳೆದುಬಂದಿರುವುದರ ಕಡೆಗೆ ಇಲ್ಲಿ ಗಮನ ಹೋಗಿದೆ. ಜ್ಞಾನಿಯದು ಸ್ವಾರ್ಥವನ್ನು ಮೀರಿದ ಸರ್ವೈಕ್ಯ ಸೌಂದರ್ಯಾನುಭವ ಆನಂದ, ಅದು ಉಚ್ಚತಮ. ಆದರೆ ಅದನ್ನು ಹೋಲುವ ಮತ್ತೊಂದು ಅನುಭವವೇನಾದರೂ ಉಂಟೇ ಎಂಬುದು ಪ್ರಶ್ನೆ. ಬಾಹ್ಯಪ್ರಪಂಚದ ವಿವಿಧ ವಸ್ತುಗಳಿಂದ ಅದು ಲಭಿಸಬಹುದು; ಆ ಕಾರಣದಿಂದ ಅಂಥ ವಸ್ತುಗಳಲ್ಲಿ ಸೌಂದರ್ಯವಿದೆಯೆಂದು ಹೇಳಲಾಗುವುದಿಲ್ಲ. ಆ ವಿವಿಧ ವಸ್ತುಗಳ ಅಂತರ ಸಾಮರಸ್ಯವೇ ಸೌಂದರ್ಯ. ಆತ್ಯಂತಿಕ ತತ್ತ್ವವಾಗಿರುವ ಅದು ಜ್ಞಾನಿಗೆ ಮಾತ್ರ ಗೋಚರವಾಗುತ್ತದೆ. ಒಂದು ವೇಳೆ ಅಂತಹ ಬಾಹ್ಯವಸ್ತುಗಳಲ್ಲಿ ಸೌಂದರ್ಯವಿದೆಯೆಂದು ಹೇಳಿದರೆ, ಹಿಂದೆ ಹೇಳಿದ ತತ್ತ್ವದ ದೃಷ್ಟಿಯಿಂದ ಅವೂ ಗೌಣವಾಗಿ ಸೌಂದರ್ಯವುಳ್ಳವಾಗಿದ್ದು ಆನಂದದಾಯಕವಾಗಿರುತ್ತವೆ. ಹೀಗೆ ಗೌಣವಾದದ್ದು ಇಂದ್ರಿಯಗೋಚರ, ಮೂಲತಃ ಇರತಕ್ಕದ್ದು ಸಾಕ್ಷಾತ್ಕೃತ-ಸೌಂದರ್ಯ.

ಇಂದ್ರಿಯಗೋಚರ ಸೌಂದರ್ಯ ನಿತ್ಯಜೀವನದ ಕ್ಲೇಶಕ್ಕೆ ತಡೆಯೊಡ್ಡಿ ಆನಂದದ ಕಡೆಗೆ ನಮ್ಮನ್ನು ಒಯ್ಯಬಲ್ಲದು. ಆದರೆ ಅವಿದ್ಯಾ-ಕಾಮಕರ್ಮಗಳಿಂದ ಕೂಡಿದ ಜೀವನದಲ್ಲಿ ಇಂತಹ ತಡೆ ಕಷ್ಟಸಾಧ್ಯ; ಅವಿದ್ಯೆಯ ಪ್ರಭಾವದಿಂದುಂಟಾದ ಕಾಮವೇ ಅದಕ್ಕೆ ಕಾರಣ. ಕಾಮ ತೊಲಗಿದರೆ ಆತ್ಮನ ನಿಜಸ್ವಭಾವ ಮೇಲೆದ್ದು ಆನಂದಾನುಭವವಾಗಿ ಪರಿಣಮಿಸುತ್ತದೆ. ಜ್ಞಾನಿಗೆ ಈ ಆನಂದದ ಆಸರೆ ತಿಳಿದಿದೆ. ಮೇಲೆ ಹೇಳಿದ ಸ್ಥಿತಿಯಲ್ಲಿನಂತೆ ತಿಳಿಯದಿದ್ದರೂ ಆನಂದ ಲಭಿಸಬಹುದು; ಇದು ಅವಿದ್ಯೆ ಮುಂದುವರಿದಿರುವ, ಆದರೆ ಕಾಮಕರ್ಮಗಳು ಹೋಗಿರುವುದರಿಂದುಂಟಾಗುವ ಸೌಂದರ್ಯದೃಷ್ಟಿ. ಜ್ಞಾನಿಗಾದರೋ, ಕಾಮಕರ್ಮಗಳು ಮಾತ್ರವಲ್ಲದೆ ಅವಿದ್ಯೆಯೂ ನಾಶವಾಗಿರುತ್ತದೆ. ಹೀಗೆ, ಸೌಂದರ್ಯಾನುಭವದ ಲಕ್ಷಣ ಕಾಮಕರ್ಮವಿಲ್ಲದ, ಅಂದರೆ ಅನಾಸಕ್ತಿಯುಳ್ಳ ಚಿಂತನ; ತತ್ತ್ವಜ್ಞಾನವಲ್ಲ. ಅನಾಸಕ್ತಿ ತತ್ತ್ವಜ್ಞಾನಗಳು ಜ್ಞಾನಿಯ ಲಕ್ಷಣ. ಎರಡರಲ್ಲೂ ಸ್ವಾರ್ಥರಹಿತತ್ತ್ವಸಾಮಾನ್ಯ. ಇಷ್ಟು ವಿಚಾರಗಳನ್ನು ತಿಳಿಸಿ ಮುಂದೆ ಪ್ರೊ. ಹಿರಿಯಣ್ಣನವರು ಈ ಗ್ರಂಥದಲ್ಲಿ ವೇದಾಂತಕ್ಕನುಗುಣವಾಗಿರುವಂತೆ 'ರಸ' ವಿವರಣೆಯನ್ನು ಕೊಟ್ಟಿದ್ದಾರೆ.

ವೇದಾಂತದ ಪ್ರಕಾರ ಕಾಮುಕರ್ಮಗಳಿಲ್ಲದ ಸ್ಥಿತಿ ಆನಂದಾನುಭವಕ್ಕೆ ಅತಿಮುಖ್ಯ. ಕವಿಗಳು ಮುಂತಾದವರು ತಮ್ಮ ಭಾವನಾಸೃಷ್ಟಿಗಳಿಂದ ಕಾಮುಕರ್ಮಗಳಿಂದುಂಟಾಗುವ ಆಸಕ್ತಿಯನ್ನು ನಿವಾರಿಸಬಲ್ಲರು. ಭಾವಿತವಾದ್ದರಿಂದ ಆ ಸೃಷ್ಟಿಗಳು ಕಾಮಾದಿಪ್ರೇರಕಗಳಲ್ಲ. ಅಲ್ಲದೆ ಅವುಗಳ ಸಮತ್ವ ಸಾಮರಸ್ಯಗಳು ಶೀಘ್ರವಾಗಿ ಚಿತ್ತೈಕಾಗ್ರತೆಯನ್ನುಂಟುಮಾಡಿ, ಸ್ವಾರ್ಥವನ್ನು ನೀಗಿಸಿ ತನ್ಮೂಲಕ ಆನಂದ ಸುಲಭವಾಗುವಂತೆ ಮಾಡುತ್ತಾರೆ. ಆ ಸಮತ್ವಾದಿಗಳು ವಿಷಯಕ್ಕೆ ಐಕ್ಯವನ್ನು ತಂದುಕೊಡುವುದರಿಂದ ಅದರ ಗ್ರಹಣ ಸುಲಭವಾಗುತ್ತದೆ—ವಿಶ್ವದ ಐಕ್ಯಗ್ರಹಣ ಜ್ಞಾನಿಗೆ ಸುಲಭವಾಗುವಂತೆ. ಒಂದರಲ್ಲಿ ಕಲೆಯ ತತ್ತ್ವದ ಸಾಕ್ಷಾತ್ಕಾರ; ಮತ್ತೊಂದರಲ್ಲಿ ವಿಶ್ವತತ್ತ್ವದ ಸಾಕ್ಷಾತ್ಕಾರ. ಒಂದನೆಯದು ಎರಡನೆಯದಕ್ಕಿಂತಲೂ ಕಿಂಚಿದೂನವಾಗಿದ್ದರೂ ಎರಡಕ್ಕೂ ನಿಕಟ ಸಾಮ್ಯವಿದೆ. ಹೀಗೆ ಸೌಂದರ್ಯದ ವಿಚಾರವನ್ನು ವೇದಾಂತಕ್ಕೆ ಸಂಬಂಧಪಟ್ಟಂತೆ ಪ್ರತಿಪಾದಿಸಿ, ಮುಂದೆ ಕಾವ್ಯತತ್ತ್ವಸಮೀಕ್ಷೆಯಲ್ಲಿ ಸಾಂಖ್ಯದರ್ಶನದ ಪ್ರಭಾವವನ್ನು ವಿಶದಪಡಿಸಿದ್ದಾರೆ.

ಸೌಂದರ್ಯದೃಷ್ಟಿಯ ವಿಚಾರದಲ್ಲಿ ವೇದಾಂತಕ್ಕೂ ಸಾಂಖ್ಯಕ್ಕೂ ವ್ಯತ್ಯಾಸಗಳಿವೆ. ಅನಾಸಕ್ತಿಯನ್ನುಂಟುಮಾಡುವಿಕೆ ಅವುಗಳ ಸಾಮಾನ್ಯ ಗುರಿ. ವ್ಯತ್ಯಾಸಗಳಲ್ಲಿ ಮುಖ್ಯವಾದುದು—ವೇದಾಂತದಂತೆ ಕಲೆಯ ಈ ಅನುಭವ ತಾತ್ಕಾಲಿಕವಾಗಿಯಾದರೂ ವ್ಯಕ್ತಿನಿಷ್ಠತಾತ್ಯಾಗವುಳ್ಳದ್ದು; ಸಾಂಖ್ಯಮತದಲ್ಲಿ ಅದು ವಾಸ್ತವಿಕ ಪ್ರಪಂಚದಿಂದ ಬಿಡುಗಡೆ ಹೊಂದುವುದರಿಂದುಂಟಾಗತಕ್ಕದ್ದು. ಅಂದರೆ ವೇದಾಂತದಂತೆ ಕಲೆ ತತ್ತ್ವಕ್ಕೆ ಸಾಧಕ, ಸಾಂಖ್ಯದ ಪ್ರಕಾರ ಅದು ವಾಸ್ತವಿಕತೆಯಿಂದ ವ್ಯುತ್ಕ್ರಮಣ. ಹೀಗೆ ಸೌಂದರ್ಯಮೀಮಾಂಸೆಗೆ ಮತ್ತು ರಸಾನುಭವಕ್ಕೆ ಸಂಬಂಧಪಟ್ಟಂತೆ ಇನ್ನೂ ಹಲವಾರು ವಿಷಯಗಳನ್ನು ಪ್ರತಿಪಾದಿಸಿ ಅವುಗಳ ಮಹತ್ತ್ವ ಪ್ರಾಮುಖ್ಯಗಳನ್ನು ಈ ಗ್ರಂಥದಲ್ಲಿ ವಿಶದಪಡಿಸಿದ್ದಾರೆ.

(6) Sanskrit Studies

pp. VI+63; Mysore, Kavyalaya Publishers, 1954

ಸಂಸ್ಕೃತಭಾಷೆ ಸಾಹಿತ್ಯಗಳಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಕುರಿತ ಸಂಕಲನ. ಸಂಸ್ಕೃತ ಕಾವ್ಯವನ್ನು ಕುರಿತ ಒಂದು ಚಾರಿತ್ರಿಕ ನೋಟವನ್ನೊಳಗೊಂಡ ಮೊದಲನೆಯ ಲೇಖನದಲ್ಲಿ ಆ ಕಾವ್ಯದ ಬೆಳವಣಿಗೆಯಲ್ಲಿ ಕಂಡುಬರುವ ಎರಡು ಹಂತಗಳ ವಿಚಾರವಿದೆ. ವೇದಗಳ ಕಾಲದಿಂದ ಪ್ರಾರಂಭಿಸಿ ರಾಮಾಯಣದ ವರೆಗಿನ ಕಾವ್ಯರಚನೆ ಬಾಹ್ಯ ಪ್ರಕೃತಿಸೌಂದರ್ಯವನ್ನೆ ವಿಷಯವಾಗಿ ಹೊಂದಿ, ಭಾವಪರವಾಗಿದ್ದರೂ ಭಾವವಿಷಯಕವಲ್ಲ. ಕಾವ್ಯದಲ್ಲಿನ ಈ ದೃಷ್ಟಿ ಕ್ರಮೇಣ ವ್ಯತ್ಯಾಸ ಹೊಂದಿ, ಸಂಸ್ಕೃತ ಭಾಷೆಗೆ ನೆಲೆಯನ್ನು ತಂದುಕೊಟ್ಟ

ರಾಮಾಯಣದಲ್ಲಿ ಮತ್ತು ಅಲ್ಲಿಂದ ಮುಂದೆ ಭಾವವಿಷಯಕವಾಗುವ ವಿಚಾರ ವನ್ನು ಇಲ್ಲಿ ತಿಳಿಸಿದ್ದಾರೆ. ಈ ಎರಡು ಪ್ರವೃತ್ತಿಗಳಲ್ಲಿ ಅನುಕ್ರಮವಾಗಿ ಬಾಹ್ಯ ವಸ್ತುವರ್ಣನೆಯೂ, ಭಾವನಿರ್ದೇಶವೂ ಪ್ರಧಾನವಾಗಿವೆ. ಮೊಟ್ಟಮೊದಲು ಗ್ರಹಿಸಲ್ಪಟ್ಟ ಬಾಹ್ಯವಿಶ್ವತತ್ತ್ವ 'ಬ್ರಹ್ಮ', ಅನಂತರ ಮನುಷ್ಯನಲ್ಲಿ ಆಂತರವಾದ 'ಆತ್ಮ' ತತ್ತ್ವಗ್ರಹಣ—ತರುವಾಯ ಅವೆರಡರ ಐಕ್ಯ—ದಾರ್ಶನಿಕ ವಿಚಾರದಲ್ಲಿ ಈ ಬಗೆಯ ಮಾರ್ಪಾಡು, ಮತ್ತು ಮೇಲ್ಕಂಡಂತೆ ಕಾವ್ಯದೃಷ್ಟಿಯಲ್ಲಿ ಮಾರ್ಪಾಡು ಪರಸ್ಪರ ಅನುಗುಣವೆಂದು ಈ ಲೇಖನದಲ್ಲಿ ನಿರೂಪಿತವಾಗಿವೆ.

ಆಮೇಲೆ 'ಸ್ವಪ್ನವಾಸವದತ್ತ'ದ ವಸ್ತು, ಕಾಳಿದಾಸ ಒಬ್ಬ ವ್ಯಕ್ತಿಯಾಗಿ, ಕವಿಯಾಗಿ ಎಂಬ ವಿಚಾರ, 'ಮಾಲತಿ ಮಾಧವ'ದ ವಸ್ತು, 'ಉತ್ತರರಾಮ ಚರಿತೆ'ಯ ಪಾತ್ರ ಚಿತ್ರಣ ಹಾಗೂ ರಸ—ಮುಂತಾದವು ಈ ಗ್ರಂಥದ ಇತರ ವಿಷಯಗಳು.

ಇದರಲ್ಲಿ ಪ್ರೊ. ಕೀತ್ ಅವರ ಸಂಸ್ಕೃತಕಾವ್ಯ ಚರಿತೆಯನ್ನು ಕುರಿತ ಚಿಕ್ಕ ಗ್ರಂಥದ ವಿಮರ್ಶೆಗೆ ಸಂಬಂಧಪಟ್ಟ ಒಂದು ಲೇಖನವಿದೆ. ಅಲ್ಲದೆ ಸಂಸ್ಕೃತ ವ್ಯಾಸಂಗಕ್ರಮದಲ್ಲಿ ಭಾಷೆ ಸಾಹಿತ್ಯಗಳೆರಡಕ್ಕೂ ಇರಬೇಕಾದ ಪ್ರಾಮುಖ್ಯ ವನ್ನೂ ಅದರೊಡನೆ ಭಾರತದ ಇತಿಹಾಸ ದರ್ಶನಗಳ ಅಭ್ಯಾಸದ ಅಗತ್ಯವನ್ನೂ ಚಾರಿತ್ರಕ ವಿಮರ್ಶಾತ್ಮಕ ಹಾಗೂ ತುಲನಾತ್ಮಕ ಅಧ್ಯಯನದ ಆವಶ್ಯಕತೆ ಯನ್ನೂ ತಿಳಿಯಪಡಿಸುವ ಒಂದು ಲೇಖನವಿದೆ. ಇದು ವಿದ್ಯಾಭ್ಯಾಸದ ಎಲ್ಲ ದೃಷ್ಟಿಗಳಿಂದಲೂ ಅತ್ಯಂತ ಉಪಯುಕ್ತವಾಗಿದೆಯೆಂದು ಧಾರಾಳವಾಗಿ ಹೇಳ ಬಹುದು.

(7) *Indian Philosophical Studies, Vol. I.*[8]

pp. V + 149 ; Mysore, Kavyalaya Publishers, 1957

ಇದು ಭಾರತೀಯ ದರ್ಶನದಲ್ಲಿ ಕೆಲವು ವಿಶೇಷ ವಿಷಯಗಳನ್ನು ಕುರಿತ ಲೇಖನಗಳಿಂದ ಕೂಡಿದೆ. ತತ್ತ್ವದ ವಿಚಾರದಲ್ಲಿ ಉದ್ಭವಿಸುವ ಸಮಸ್ಯೆಗಳು, ನ್ಯಾಯಸಾಂಖ್ಯ ಮೀಮಾಂಸಾ ಪದ್ಧತಿಗಳ ಪ್ರಕಾರ ಭ್ರಮಾಲಕ್ಷಣ, ಅದ್ವೈತ ದಲ್ಲಿ ತರ್ಕದ ಸ್ಥಾನ, ಸ್ವಭಾವವಾದ, ಪ್ರಾಚೀನ ವೇದಾಂತಿ ಭರ್ತೃಪ್ರಪಂಚ, ಭೇದಾಭೇದ ವಿಚಾರ, ರಾಮಾನುಜಾಚಾರ್ಯರು ಹಾಗೂ ಜ್ಞಾನದ ತಾತ್ತ್ವಿಕ ಸಮೀಕ್ಷೆ, ಬ್ರಹ್ಮಸ್ವರೂಪ—ಮುಂತಾದ ಗಹನ ವಿಷಯಗಳು ಇಲ್ಲಿ ಸುಲಭವಾಗಿ ತಿಳಿಯುವಂತೆ ಪ್ರತಿಪಾದಿತವಾಗಿವೆ. ಭಾರತೀಯ ದರ್ಶನದ ವಿವಿಧ ಮುಖಗಳನ್ನು

---

[8] ಇದರ ಎರಡನೆಯ ಸಂಪುಟ (Vol. II) ಸದ್ಯದಲ್ಲೇ ಹೊರಬೀಳುವುದೆಂದು ತಿಳಿದು ಬಂದಿದೆ.

ಪರಿಚಯ ಮಾಡಿಕೊಳ್ಳುವ ಅಪೇಕ್ಷೆಯುಳ್ಳವರಿಗೆ ಇದು ಅತ್ಯುಪಯುಕ್ತವಾದ ಗ್ರಂಥ.

(8) The Mission of Philosophy.

pp. V + 78 ; Mysore, Kavyalaya Publishers, 1960

ತತ್ತ್ವಜ್ಞಾನದ ಸ್ವಭಾವ ಮತ್ತು ವ್ಯಾಪ್ತಿ, ಅದರ ಪ್ರೇರಣಕ್ರಿಯೆ, ಕರ್ತವ್ಯದ ಲಕ್ಷಣ, ಮತಧರ್ಮ ವಿಚಾರದಲ್ಲಿ ಸಹಿಷ್ಣುತೆ, ಜೀವನದ ಆದರ್ಶ, ಅನುಭವ ವಿಷಯಕ ಧರ್ಮ, ಭಾವನೆಯಾಗಿ ಪ್ರಪಂಚ ಸ್ಥಿತಿ—ಇವು ಈ ಗ್ರಂಥದಲ್ಲಿ ಪ್ರತಿಪಾದಿತ ವಿಷಯಗಳು.

ಆತ್ಯಂತಿಕ ಆದರ್ಶವೊಂದರ ಅನ್ವೇಷಣೆ ತತ್ತ್ವಜ್ಞಾನದ ಗುರಿ. ಅದು ಮತಧರ್ಮದ ಗುರಿಯೂ ಹೌದು. ಎರಡರಲ್ಲೂ ಪುರುಷಾರ್ಥಗಳ ಪರಿಶೀಲನೆ ಇದೆ. ಆದರೆ ಮತಧರ್ಮ ವಿಜ್ಞಾನದ ಲಕ್ಷಣವಾದ ಅನುಸಂಧಾನವನ್ನೊಳಗೊಳ್ಳದಿರುವುದರಿಂದ ಅದಕ್ಕೂ ವಿಜ್ಞಾನಕ್ಕೂ ಅಂತರವೇರ್ಪಟ್ಟಿದೆ. ತತ್ತ್ವಜ್ಞಾನವಾದರೋ ಮತಧರ್ಮದ ಪುರುಷಾರ್ಥ ಪರಿಶೀಲನೆಯಿಂದಲೂ ವಿಜ್ಞಾನದ ಅನುಸಂಧಾನದಿಂದಲೂ ಕೂಡಿ, ಆ ಅಂತರವನ್ನು ತಡೆಗಟ್ಟಿದೆ. ತತ್ತ್ವಜ್ಞಾನ ಈ ಬಗೆಯ ವೈಶಿಷ್ಟ್ಯವುಳ್ಳದ್ದೆಂಬುದನ್ನು ಇಲ್ಲಿ ಪ್ರೊ. ಹಿರಿಯಣ್ಣನವರು ಅರ್ಥವತ್ತಾಗಿ ಪ್ರತಿಪಾದಿಸಿದ್ದಾರೆ.

ಮುಂದೆ ತತ್ತ್ವಜ್ಞಾನದ ಪ್ರೇರಕ ಕ್ರಿಯೆಯನ್ನು ಪ್ರಸ್ತಾಪಿಸುತ್ತ ಅವರು ಹೇಳಿರುವ ಈ ಮಾತುಗಳು ಗಮನೀಯವಾಗಿವೆ :

“ ತಾತ್ತ್ವಿಕ ಪಕ್ಷದಲ್ಲಿ, ಜೀವನದ ಅತ್ಯುಚ್ಚ ಆದರ್ಶದ ಬಗ್ಗೆ ಅಜ್ಞಾನವನ್ನು ಹೋಗಲಾಡಿಸುವುದೇ ತತ್ತ್ವಜ್ಞಾನದ ಉದ್ದೇಶ ; ಪ್ರಾಯೋಗಿಕ ಪಕ್ಷದಲ್ಲಿ, ಅದರ ಆ ಉದ್ದೇಶ ಸ್ವಾರ್ಥವನ್ನು ಮೀರಲು ಆವಶ್ಯಕವಾದ ಸಾಧನಗಳ ನಿರ್ಣಯ. ಅದನ್ನು ಕ್ರಮವಾಗಿ ಅವಿದ್ಯೆಯ ನಿರ್ಮೂಲ, ಆಸಂಗದ ಅಭಿಭವ ಎಂದು ವರ್ಣಿಸಲಾಗಿದೆ. ಈ ಉದ್ದೇಶದ್ವಯಗಳು ಪ್ರಾರಂಭದಿಂದಲೂ ನಮ್ಮ ದೇಶದಲ್ಲಿ ದಾರ್ಶನಿಕ ಪ್ರಯತ್ನಗಳನ್ನು ರೂಪಿಸಿವೆ.

ವಿವಿಧ ಧರ್ಮಗಳ ಗುರಿ ಪರಮ ಪುರುಷಾರ್ಥ ಲಾಭವೊಂದೇ ಆಗಿರುವುದರಿಂದ, ಅದು ಪ್ರಾಸಂಗಿಕವಾಗಿ ಉಂಟಾಗುವ ಭೇದಗಳ ವಿಚಾರದಲ್ಲಿ ಪರಸ್ಪರ ಗೌರವದಿಂದ ವರ್ತಿಸುವಂತೆ ಸ್ಫೂರ್ತಿ ನೀಡಬೇಕೆಂದು ಮತಧರ್ಮಸಹಿಷ್ಣುತೆಯನ್ನು ಕುರಿತ ಲೇಖನದಲ್ಲಿ ಪ್ರತಿಪಾದಿತವಾಗಿದೆ. ಅಲ್ಲೇ ಮತ್ತೊಂದು ಕಡೆ ಅತ್ಯಮೂಲ್ಯವಾದ ಈ ಮಾತುಗಳು ಕಂಡುಬರುತ್ತವೆ :

“ ಬೇರೆ ಯಾವ ಭೇದವೂ ಮತಧರ್ಮದಿಂದುಂಟಾಗುವುದರಷ್ಟು ತೀವ್ರವಲ್ಲವೆಂಬ ಹೇಳಿಕೆ ಸತ್ಯವಾಗಿದ್ದರೆ, ಬೇರೆ ಯಾವ ಐಕ್ಯವೂ ಜೀವನದ ಪರಮೋದ್ದೇಶ

2

ವಾದ ಮತಧರ್ಮೋದ್ದೇಶದಲ್ಲಿ ಅಭೇದವನ್ನು ಅಂಗೀಕರಿಸುವುದರಿಂದ ಬರುವುದರಷ್ಟು ಶಕ್ತಿಯುತವಲ್ಲವೆಂಬ ಮಾತು ಅಷ್ಟೇ ಸತ್ಯ."

(9) *Reviews*

pp XII + 291 ; Mysore, Kavyalaya Publishers, 1970

ಇದು ಇತ್ತೀಚೆಗೆ ಪ್ರಕಟವಾದ ಅವರ ಗ್ರಂಥ. ಇದರಲ್ಲಿ ೧೯೧೩ ರಿಂದ ೧೯೫೦ರ ವರೆಗೆ ಅವರು ಮಾಡಿದ ಅನೇಕ ಪುಸ್ತಕವಿಮರ್ಶೆಗಳಿವೆ. ಮುನ್ನುಡಿಯಲ್ಲಿ ಡಾ. ವಿ. ರಾಘವನ್ ಹೇಳಿರುವಂತೆ "ಗ್ರಂಥವಾಗಲಿ, ವಿಮರ್ಶೆಯಾಗಲಿ ಅವರು ಬರೆದದ್ದೆಲ್ಲ ಅವರ ಗುಣಶೀಲ ಮತ್ತು ಶೈಲಿ, ಪರಿಷ್ಕಾರ ನಿಷ್ಕೃಷ್ಟತೆಗಳು, ಲಾಲಿತ್ಯ ಮತ್ತು ಮಾರ್ದವ—ಇವುಗಳ ಮುದ್ರೆಯನ್ನು ಪಡೆದಿದೆ.

ಇದರಲ್ಲಿ ಒಟ್ಟು ೧೨೨ ವಿಮರ್ಶನ ಲೇಖನಗಳಿವೆ. ಅವುಗಳಲ್ಲಿ ಕಾಲುಭಾಗ ಅದ್ವೈತವೇದಾಂತಕ್ಕೆ ಸಂಬಂಧಪಟ್ಟವು ; ಈ ಲೆಕ್ಕಕ್ಕೆ ಉಪನಿಷತ್ತುಗಳನ್ನು ಕುರಿತ ೧೦, ಗೀತೆಯ ಮೇಲಿನ ೧೨, ಬ್ರಹ್ಮಸೂತ್ರವನ್ನು ಕುರಿತ ಒಂದು— ಇವೂ ಸೇರುತ್ತವೆ. ಅವುಗಳಲ್ಲಿ ೧೩ ಮತಧರ್ಮ ಹಿಂದೂಧರ್ಮಗಳಿಗನ್ವಯಿಸತಕ್ಕವು ; ಅಷ್ಟೇ ಸಂಖ್ಯೆಯಲ್ಲಿ ತತ್ತ್ವಜ್ಞಾನಕ್ಕೆ ಮತ್ತು ವಿಶೇಷವಾಗಿ ಭಾರತೀಯದರ್ಶನಕ್ಕೆ ಸಂಬಂಧಪಟ್ಟ ವಿಮರ್ಶೆಗಳಿವೆ. ಉಳಿದವು ವೇದ, ಮೀಮಾಂಸಾ, ಸಾಂಖ್ಯ, ಯೋಗ, ನ್ಯಾಯ, ರಾಮಾನುಜ ಮಧ್ವ ಇವರ ಪಂಥಗಳು, ಶೈವ ಚಾರ್ವಾಕ ಜೈನ ಬೌದ್ಧ ಸುಫಿದರ್ಶನಗಳು-ಇವನ್ನು ಕುರಿತಿವೆ. ಅನಂತರ ಸಾಹಿತ್ಯ ಮತ್ತು ವಿಮರ್ಶೆಗೆ ಸಂಬಂಧಿಸಿದಂತೆ ೫ ಲೇಖನಗಳಿವೆ. ವಿಮರ್ಶೆ ಮಾಡಿರುವ ಗ್ರಂಥಗಳಲ್ಲಿ ೨೩ ಪಾಶ್ಚಾತ್ಯ ವಿದ್ವಾಂಸರವು. ಈ ಬಗೆಯ ವಿಮರ್ಶನನೈಪುಣ್ಯ ಮತ್ತು ವೈವಿಧ್ಯ ಪ್ರೊ. ಹಿರಿಯಣ್ಣನವರ ಬಹುಮುಖ ಪ್ರತಿಭೆಯ ಪ್ರತೀಕಗಳಾಗಿವೆ.

ಮುಂದೆ ಪ್ರೊ. ಹಿರಿಯಣ್ಣನವರು ಪೀಠಿಕಾಪೂರ್ವಕವಾಗಿ ಇಂಗ್ಲಿಷ್ ಅನುವಾದಗಳಲ್ಲಿ ಅನುಗ್ರಹಿಸಿರುವ ಗ್ರಂಥಗಳು—

(1) ಈಶಾವಾಸ್ಯೋಪನಿಷದ್—ಶಂಕರಾಚಾರ್ಯರ ಭಾಷ್ಯದೊಡನೆ
ಶ್ರೀರಂಗಂ, ವಾಣೀವಿಲಾಸ ಪ್ರೆಸ್, ೧೯೧೧

(2) ಕೇನೋಪನಿಷದ್— ,, ೧೯೧೨

(3) ಕಾಠಕೋಪನಿಷದ್— ,, ೧೯೧೫

(4) ಬೃಹದಾರಣ್ಯಕೋಪನಿಷದ್, ಭಾಗ I ೧೯೧೯

ಇಂಗ್ಲಿಷಿನಲ್ಲಿ ಪೀಠಿಕೆ ಟಿಪ್ಪಣಿಗಳೊಡನೆ ವಿಮರ್ಶಾತ್ಮಕವಾಗಿ ಅವರಿಂದ ಸಂಪಾದಿತ ಗ್ರಂಥಗಳು—

(1) ನೈಷ್ಕರ್ಮ್ಯಸಿದ್ಧಿ—ಸುರೇಶ್ವರಾಚಾರ್ಯ
ಜ್ಞಾನೋತ್ತಮನ 'ಚಂದ್ರಿಕಾ' ವ್ಯಾಖ್ಯಾಸಹಿತಾ (ಪರಿಷ್ಕೃತ ಆವೃತ್ತಿ)
1925, ಬಾಂಬೆ ಸಂಸ್ಕೃತ ಮತ್ತು ಪ್ರಾಕೃತ ಸೀರೀಸ್ xxxviii

ಹೆಸರೇ ಸೂಚಿಸುವಂತೆ ಗ್ರಂಥದ ಉದ್ದೇಶ ಮೋಕ್ಷದ ಯಥಾರ್ಥ ಸಾಧನವನ್ನು ಕುರಿತ ಚರ್ಚೆ. ಜ್ಞಾನವೇ ಏಕೈಕ ಸಾಧನವೆಂಬುದೂ ಕರ್ಮ ಎಷ್ಟೇ ಪ್ರಯೋಜನಕಾರಿಯೂ ಆವಶ್ಯಕವೂ ಆಗಿದ್ದರೂ ನೇರವಾಗಿ ಮೋಕ್ಷಕ್ಕೆ ಸಂಬಂಧಪಟ್ಟಿಲ್ಲವೆಂಬುದೂ ಇಲ್ಲಿ ಗ್ರಂಥಕರ್ತೃ ತಾಳಿರುವ ನಿರ್ಣಯ.

(2) ವೇದಾಂತಸಾರ—ಸದಾನಂದ
(ಇಂಗ್ಲಿಷ್ ಅನುವಾದ ಸಮೇತ)
Poona, Oriental Book Agency, 1929

ಇದು ಅದ್ವೈತದರ್ಶನವನ್ನು ಸುಲಭವಾಗಿ ಪರಿಚಯ ಮಾಡಿಕೊಡುವ ಗ್ರಂಥ. ವೇದಾಂತಶಬ್ದಾರ್ಥ, ಅನುಬಂಧ ಚತುಷ್ಟಯ, ಅಧಿಕಾರೀ, ವಿಷಯ ಸಂಬಂಧ ಪ್ರಯೋಜನಗಳು, ಗುರೂಪಪತ್ತಿ ಉಪದೇಶ ಅಧ್ಯಾರೋಪಗಳು, ಅಪವಾದ ತತ್ತ್ವಂ ಪದಾರ್ಥಶೋಧನ ಮಹಾವಾಕ್ಯಾರ್ಥ ವಿಚಾರ ಅನುಭವಗಳು, ಸ್ವಸ್ವರೂಪ ಸಾಕ್ಷಾತ್ಕಾರ ಸಾಧನಗಳಾದ ಶ್ರವಣ ಮನನ ನಿದಿಧ್ಯಾಸನ ಸಮಾಧಿಗಳು, ಮುಕ್ತಿಸ್ವರೂಪ–ಜೀವನ್ಮುಕ್ತಿ, ವಿದೇಹಮುಕ್ತಿ–ಇವು ಈ ಗ್ರಂಥದಲ್ಲಿ ಕಂಡುಬರುವ ವಿಷಯಗಳು.

(3) ಇಷ್ಟಸಿದ್ಧಿ—ವಿಮುಕ್ತಾತ್ಮನ್
(ಜ್ಞಾನೋತ್ತಮನ 'ವಿವರಣ'ದಿಂದ ತೆಗೆದುಕೊಂಡಿರುವ ಭಾಗಗಳೊಡನೆ)
ಬರೋಡ, ಓರಿಯಂಟಲ್ ಇನ್‌ಸ್ಟಿಟ್ಯೂಟ್, 1933
(ಗಾಯಕವಾಡ್ ಓರಿಯಂಟಲ್ ಸೀರಿಸ್ lxv)

ಇದು ವೇದಾಂತ ದರ್ಶನಕ್ಕೆ ಸಂಬಂಧಪಟ್ಟ ಬಹು ಮುಖ್ಯವಾದ ಒಂದು ಪ್ರಕರಣ ಗ್ರಂಥ; ವೇದಾಂತ ವಾಙ್ಮಯದಲ್ಲೆಲ್ಲ ಕಂಡುಬರುವ ಅದರ ಉಲ್ಲೇಖ ಆ ಮುಖ್ಯತೆಗೆ ಒಂದು ಸಾಕ್ಷಿಯಾಗಿದೆ. ವೇದಾಂತದ ತಾತ್ತ್ವಿಕಪಕ್ಷದಲ್ಲಿ ಗ್ರಂಥ ಹೆಚ್ಚು ಗಮನವುಳ್ಳದ್ದೆಂದು ಸಾಮಾನ್ಯವಾಗಿ ಹೇಳಬಹುದು. ವಿಷಯ ಅದ್ವೈತಕ್ಕೆಲ್ಲ ವ್ಯಾಪಕವಾಗಿರುವಂತಹುದೆಂದು (ಸಮಸ್ತ ವೇದಾಂತಾರ್ಥಸಂಗ್ರಹ) ಸೂಚಿತವಾಗಿದ್ದರೂ ಆ ದರ್ಶನಕ್ಕೆ ಕೇಂದ್ರೀಭೂತವಾಗಿರುವ ಮಾಯಾ ಸಿದ್ಧಾಂತಕ್ಕೆ ವಿಶೇಷವಾಗಿ ಸಂಬಂಧಪಟ್ಟಿರುವುದನ್ನು ಕಾಣಬಹುದು; ಈ ಗ್ರಂಥದಲ್ಲಿ ಅದರ ವಿವರಣೆ ಸಂಪೂರ್ಣವಾಗಿದೆ.

ಹೀಗೆ ಪ್ರೊ. ಹಿರಿಯಣ್ಣನವರ ಹತ್ತಾರು ಕೃತಿಗಳು ಮಹತ್ತ್ವಪೂರ್ಣವಾದ ಜ್ಞಾನಸಂಪತ್ತಿನಿಂದ ತುಂಬಿವೆ. ಜೊತೆಗೆ ಅದನ್ನು ವ್ಯಕ್ತಪಡಿಸಿರುವ ಭಾಷೆ ಶೈಲಿಗಳ ಪರಿಶುದ್ಧತೆ, ಗಾಂಭೀರ್ಯ, ಸರಳತೆ, ನಿಷ್ಕೃಷ್ಟತೆ, ಅಂದ, ಅಚ್ಚುಕಟ್ಟುಗಳೂ ವಿಷಯದ ಮೇಲೆ ಅವರಿಗಿರುವ ಪ್ರಭುತ್ವ ಮತ್ತು ನಿರೂಪಣೆಯಲ್ಲಿನ ಅಪೂರ್ವ ಪ್ರಾಮಾಣಿಕತೆಯೇ ಮುಂತಾದ ಗುಣಗಳೂ ಒಟ್ಟಾಗಿ ಅವರ ವ್ಯಕ್ತಿತ್ವದ ಔನ್ನತ್ಯವನ್ನು ಹೊರಸೂಸುತ್ತವೆ. ಅವರು ಜೀವನದಲ್ಲಿ ವಿಶ್ವಾತ್ಮಕ ವ್ಯಕ್ತಿತ್ವವನ್ನು ಗಳಿಸಿಕೊಂಡ ಪುಣ್ಯಾತ್ಮರು. ಅಂಥವರ ಸಾಧನೆ ಸಿದ್ಧಿಗಳನ್ನು ನಿರೂಪಿಸುವ ಈ ಸಾಹಸದಲ್ಲಿನ ಹೊಣೆಯ ನಿರ್ವಹಣೆಯಲ್ಲಿರಬಹುದಾದ ಅಸಮರ್ಪಕತೆ ಮುಂತಾದ ಲೋಪದೋಷಗಳಿಗೆ ಪರಿಹಾರವೆಂದರೆ, ಸಹೃದಯರಾದ ವಿದ್ವಾಂಸರು ಅವನ್ನು ಮನ್ನಿಸುವರೆಂಬ ನಿರೀಕ್ಷಣೆ; ಮತ್ತು ಪ್ರಯತ್ನ ಕೇವಲ ಅಲ್ಪವಾದರೂ ಮಾಡುವ ಪ್ರೇರಣೆಗೆ ಕಾರಣವಾಗಿರುವ ಗುರುವಿನ ಅನುಗ್ರಹ—

ಗುರೋಃ ಪರತರಂ ನಾಸ್ತಿ ತಸ್ಮೈ ಶ್ರೀ ಗುರವೇ ನಮಃ ॥

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ವಿದೇಶೀ ನೆರವಿನ ಕೆಲವು ಸಮಸ್ಯೆಗಳು

ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಬೆಳೆವಣಿಗೆಯ ಮಟ್ಟವನ್ನು ಹೆಚ್ಚಿಸುವುದರಲ್ಲಿ ವಿದೇಶೀ ನೆರವು ಮಹತ್ತರ ಪಾತ್ರವಹಿಸುತ್ತದೆಂಬ ವಿಷಯ ಸರ್ವವಿದಿತವಾಗಿದೆ. ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವುದು ತಮ್ಮ ಕರ್ತವ್ಯವೆಂದು ಒಪ್ಪಿಕೊಂಡಿವೆ; ಆರ್ಥಿಕ ಮತ್ತು ರಾಜಕೀಯ ಕಾರಣಗಳಿಗಾಗಿ ನೆರವು ನೀಡುತ್ತ ಬಂದಿವೆ. ಈ ನೆರವಿನಿಂದ ಅಭಿವೃದ್ಧಿಶೀಲ ರಾಷ್ಟ್ರಗಳು ಬಹಳ ಮಟ್ಟಿನ ಪ್ರಗತಿ ಸಾಧಿಸಿವೆ. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಇನ್ನೂ ಹೆಚ್ಚಿನ ಪ್ರಯೋಜನವಾಗಬೇಕಾದರೆ ನೆರವಿನ ಪ್ರಮಾಣ ಗಣನೀಯವಾಗಿ ಹೆಚ್ಚಬೇಕು; ಅದರ ಗುಣಮಟ್ಟವೂ ಉತ್ತಮವಾಗಬೇಕು. ನೆರವಿನ ರೀತಿಯಲ್ಲಿ ಬದಲಾವಣೆಗಳಾಗಬೇಕು. ನೆರವು ನೀತಿಯಲ್ಲಿ ಕೆಲವು ನ್ಯೂನತೆಗಳು ಇಲ್ಲದಿದ್ದರೆ ನೆರವು ಹೆಚ್ಚು ಪರಿಣಾಮಕಾರಿಯಾಗುತ್ತಿದ್ದಿತೆಂಬುದರಲ್ಲಿ ಸಂಶಯವಿಲ್ಲ. ಈ ನ್ಯೂನತೆಗಳ ಸ್ವರೂಪ ಮತ್ತು ಅವುಗಳನ್ನು ನಿವಾರಿಸುವುದರ ಆವಶ್ಯಕತೆಗಳನ್ನು ಪರಿಶೀಲಿಸುವುದೇ ಪ್ರಸ್ತುತ ಲೇಖನದ ಉದ್ದೇಶ. ಕಮ್ಯೂನಿಸ್ಟೇತರ ರಾಷ್ಟ್ರಗಳ ಸರ್ಕಾರಗಳಿಂದ ಅಭಿವೃದ್ಧಿಶೀಲರಾಷ್ಟ್ರಗಳಿಗೆ ದೊರಕುವ ನೆರವಿಗೆ ಮಾತ್ರ ಈ ವಿಶ್ಲೇಷಣೆ ಸೀಮಿತವಾಗಿದೆ.

ನೆರವಿನ ಪ್ರಮಾಣ

ನೆರವಿನ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸುವುದು ಒಂದು ಮುಖ್ಯ ಸಮಸ್ಯೆಯಾಗಿದೆ. ಹೆಚ್ಚು ನೆರವು ಒದಗಿಸುವ ಆವಶ್ಯಕತೆಯನ್ನು ಮನಗಂಡಿದ್ದರೂ ಆ ನಿಟ್ಟಿನಲ್ಲಿ ಹೆಚ್ಚು ಯಶಸ್ಸು ಇನ್ನೂ ಸಾಧ್ಯವಾಗಿಲ್ಲ. ವಿಶ್ವಸಂಸ್ಥೆಯ ಮಹಾಸಭೆ ೧೯೬೦ರಲ್ಲಿ ದಾನಿ ರಾಷ್ಟ್ರಗಳು ತಮ್ಮ ನೆರವನ್ನು ತಮ್ಮ ರಾಷ್ಟ್ರೀಯ ವರಮಾನದ ಶೇಕಡಾ ಒಂದರಷ್ಟಕ್ಕೆ ಹೆಚ್ಚಿಸಬೇಕೆಂದು ಕರೆಕೊಟ್ಟಿತು ಮತ್ತು ಈ ಅಭಿಪ್ರಾಯವನ್ನು ವಿಶ್ವಸಂಸ್ಥೆಯ ಪ್ರಥಮ ವ್ಯಾಪಾರ ಮತ್ತು ಅಭಿವೃದ್ಧಿ ಸಭೆ (ಅಂಕ್ಟಾಡ್) ವಿಶದಪಡಿಸಿತು. ಹತ್ತು ರಾಷ್ಟ್ರಗಳನ್ನೊಳಗೊಂಡ ಅಭಿವೃದ್ಧಿ ಸಹಾಯ ಸಮಿತಿ

(ಡಿ.ಎ.ಸಿ.) ಇದನ್ನು ಅನುಮೋದಿಸಿತು. ಈ ನಿರ್ಣಯದ ಫಲವಾಗಿ ನೆರವಿನ ಪ್ರಮಾಣ ಪ್ರಥಮ ಅಭಿವೃದ್ಧಿ ದಶಕದಲ್ಲಿ (೧೯೬೦-೭೦) ಹೆಚ್ಚುವುದೆಂದು ಆಶಿಸಲಾಗಿತ್ತು. ಆದರೆ ದಾನಿ ರಾಷ್ಟ್ರಗಳು ಈ ಗುರಿಯನ್ನು ಮುಟ್ಟುವುದರಲ್ಲಿ ವಿಫಲಗೊಂಡಿವೆ. ೧೯೬೮ರಲ್ಲಿ ಒದಗಿಸಿದ ನೆರವು ಅಭಿವೃದ್ಧಿ ದಶಕದ ಪ್ರಾರಂಭದಲ್ಲಿ ಒದಗಿಸಿದ ನೆರವಿಗಿಂತ ಕಡಿಮೆಯಾಗಿದ್ದಿತೆಂಬುದು ವಿಷಾದದ ಸಂಗತಿ. ದಾನಿ ರಾಷ್ಟ್ರಗಳ ರಾಷ್ಟ್ರೀಯ ವರಮಾನದ ಸೇಕಡಾ ೦·೮೯ರಷ್ಟು ನೆರವು ೧೯೬೦ರಲ್ಲಿ ಒದಗಿತ್ತು. ಆದರೆ ೧೯೬೮ರಲ್ಲಿ ಇದು ಸೇಕಡಾ ೦·೭೭ಕ್ಕೆ ಇಳಿಯಿತು.[1] ಪ್ರಮುಖ ದಾನಿ ರಾಷ್ಟ್ರಗಳಾದ ಅಮೇರಿಕ, ಬ್ರಿಟನ್, ಜಪಾನ್, ಇಟಲಿ, ಆಸ್ಟ್ರೇಲಿಯ, ಆಸ್ಟ್ರಿಯ, ಡೆನ್‌ಮಾರ್ಕ್, ಕೆನಡ ಮತ್ತು ಸ್ವೀಡನ್ ೧೯೬೮ರಲ್ಲಿ ಸೇಕಡಾ ಒಂದರ ಗುರಿಯಿಂದ ಕೆಳಗೇ ಇದ್ದುವು. ಸ್ವಿಟ್ಜರ್‌ಲೆಂಡ್, ಫ್ರಾನ್ಸ್, ಜರ್ಮನಿ, ಬೆಲ್ಜಿಯಂ ಮತ್ತು ನೆದರ್‌ಲೆಂಡ್ಸ್ ತಮ್ಮ ರಾಷ್ಟ್ರೀಯ ವರಮಾನದ ಸೇಕಡಾ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನೆರವು ಒದಗಿಸಿವೆ. ನೆರವು ನೀಡುವ ಪ್ರಮುಖ ರಾಷ್ಟ್ರಗಳು ರಾಷ್ಟ್ರೀಯ ವರಮಾನದ ಸೇಕಡಾ ೧ಕ್ಕೆ ನೆರವನ್ನು ಹೆಚ್ಚಿಸುವುದರಿಂದ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೆಚ್ಚಿನ ಪ್ರಯೋಜನ ದೊರಕುತ್ತಿತ್ತು. ಕಡಿಮೆ ಬಡ್ಡಿದರ ಮತ್ತು ಮರುಪಾವತಿಗೆ ಹೆಚ್ಚಿನ ಅವಧಿ ಹೊಂದಿರುವ ಮತ್ತು ರಫ್ತು ಅಭಿವೃದ್ಧಿಗಾಗಿ ಕೊಡುವ ಸಾಲವಲ್ಲದೆ ಇತರ ಸಾಲ—ಇವುಗಳನ್ನು ನಿಜವಾದ ಅರ್ಥದಲ್ಲಿ "ಅಭಿವೃದ್ಧಿ ಸಾಲ"ವೆಂದು ಕರೆಯಬಹುದಾಗಿದೆ. ಈ ರೀತಿಯ ನೆರವಿನ ಪ್ರಮಾಣ ೧೯೬೧ರಲ್ಲಿ ದಾನಿ ರಾಷ್ಟ್ರಗಳ ರಾಷ್ಟ್ರೀಯ ಆದಾಯದ ಸೇಕಡಾ ೦·೫೪ ಇದ್ದದ್ದು ೧೯೬೮ರಲ್ಲಿ ಸೇಕಡಾ ೦·೩೯ಕ್ಕೆ ಇಳಿಯಿತು.[2] ೧೯೭೫ರ ವೇಳೆಗೆ ಇದು ಸೇ. ೦.೭೦ಗೆ ಹೆಚ್ಚಬೇಕೆಂದು ಮತ್ತು ಒಟ್ಟು ನೆರವು ಸೇ. ೧ಕ್ಕೆ ಹೆಚ್ಚಬೇಕೆಂದು ಪಿಯರ್ಸನ್ ಆಯೋಗ ಸಲಹೆ ಮಾಡಿದೆ.[3] ಆಯೋಗ ಲೆಕ್ಕಹಾಕಿರುವಂತೆ ಸೇಕಡಾ ಒಂದರ ಒಟ್ಟು ನೆರವಿನ ಗುರಿಯನ್ನು ೧೯೭೫ರ ವೇಳೆಗೆ ಮುಟ್ಟಬೇಕಾದರೆ ನೆರವಿನ ವಾರ್ಷಿಕ ಹೆಚ್ಚಳ ೮·೯% ಆಗಬೇಕು ಮತ್ತು ಸೇಕಡಾ ೦·೭೦ಯ ಅಭಿವೃದ್ಧಿನೆರವಿನ ಗುರಿಯನ್ನು ಮುಟ್ಟಬೇಕಾದರೆ ಅದರ ವಾರ್ಷಿಕ ಹೆಚ್ಚಳ ೧೪·೧%ಆಗಬೇಕು.[4]

ನೆರವನ್ನು ಒದಗಿಸುವುದರಲ್ಲಿ ಉದ್ದೇಶಿತ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗಿಲ್ಲವೆಂಬುದು ಮೇಲಿನ ವಿಶ್ಲೇಷಣೆಯಿಂದ ಸ್ಪಷ್ಟವಾಗಿದೆ. ಇದಕ್ಕೆ

---

[1] L. B. Pearson, *Report of the Commission on International Development*, New York : praeger publishers, 1969, p. 145

[2] *Ibid., p. 148*

[3] *Ibid.*

[4] ***Ibid., p. 149***

ಮುಖ್ಯವಾದ ಕಾರಣಗಳಿವು : ಮೊದಲನೆಯದಾಗಿ, ಅಭಿವೃದ್ಧಿಹೊಂದಿದ ದಾನಿ ರಾಷ್ಟ್ರಗಳಿಗೆ ತಮ್ಮವೇ ಆದ ಆರ್ಥಿಕ ಸಮಸ್ಯೆಗಳಿವೆ. ತಮ್ಮ ರಾಷ್ಟ್ರಗಳಲ್ಲೇ ಇರುವ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಮತ್ತು ಹಿಂದುಳಿದ ವರ್ಗಗಳವರ ಮುನ್ನಡೆಗೆ ವೆಚ್ಚಮಾಡಬೇಕಾಗಿದೆ. ತಮ್ಮ ತಮ್ಮ ರಾಷ್ಟ್ರಗಳ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಆದ್ಯತೆ ಕೊಡಬೇಕೆಂದು ತೆರಿಗೆದಾರರು ಆಶಿಸುವುದು ಸ್ವಾಭಾವಿಕ ವಾದುದೇ. ವಿಶ್ವಸಂಸ್ಥೆಯ ತಜ್ಞರೊಬ್ಬರು ಹೇಳಿರುವಂತೆ, ಪೂರ್ಣೋದ್ಯೋಗ ಸೃಷ್ಟಿಯ ದೃಷ್ಟಿಯಿಂದ ನೋಡಿದಾಗ ಬಂಡವಾಳದ ವಿರಳತೆ ಅಭಿವೃದ್ಧಿಹೊಂದಿದ ದೇಶಗಳಲ್ಲಿಯೂ ಇದೆ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಂಪನ್ಮೂಲಗಳನ್ನು ವರ್ಗಾಯಿಸುವುದರಿಂದ ತಮ್ಮ ರಾಷ್ಟ್ರಗಳ ಬೆಳವಣಿಗೆಯಲ್ಲಿ ನಷ್ಟವನ್ನನುಭವಿಸಿ ತ್ಯಾಗಮಾಡಬೇಕಾಗುತ್ತದೆಂಬ ಭಾವನೆ ಇದೆ.[5] ನೆರವು ಪ್ರಮಾಣ ಹೆಚ್ಚುವುದಕ್ಕೆ ಈ ಭಾವನೆ ಅಡಚಣೆಯಾಗಿದೆ. ಎರಡನೆಯದಾಗಿ, ನೆರವು ಒದಗಿಸುವುದರಲ್ಲಿ ರಾಜಕೀಯ ಕಾರಣಗಳೂ ಸೇರಿಹೋಗಿವೆ. ನೆರವು ಪಡೆಯುವ ರಾಷ್ಟ್ರಗಳಿಗೂ ನೆರವು ನೀಡುವ ರಾಷ್ಟ್ರಗಳಿಗೂ ರಾಜಕೀಯ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಉಂಟಾದಾಗ ನೆರವಿಗೆ ಅಡ್ಡಿಯುಂಟಾಗುತ್ತದೆ. ನೆರವು ಕೊಡುವ ರಾಷ್ಟ್ರಗಳ ವಿದೇಶೀ ನೀತಿಗೆ ಬೆಂಬಲಕೊಟ್ಟಾಗ ನೆರವು ಪಡೆಯುವುದು ಸುಲಭವಾಗುತ್ತದೆ. ಆದರೆ ದಾನಿರಾಷ್ಟ್ರಗಳ ನೀತಿಗೆ ಸದಾ ಬೆಂಬಲ ಸೂಚಿಸುವುದು ಅಸಾಧ್ಯವೇ ಸರಿ. ಮೂರನೆಯದಾಗಿ ನೆರವು ನೀಡುವ ರಾಷ್ಟ್ರಗಳು ತಮ್ಮವೇ ಆದ ಲೇಣೆ–ದೇಣೆ ಪಟ್ಟಿಯ ಸಮಸ್ಯೆಯನ್ನು ಹೊಂದಿವೆ. ಇಂತಹ ಸಂದರ್ಭದಲ್ಲಿ ಆಯವ್ಯಯದ ಮೇಲೆ ಪರಿಣಾಮ ಬೀರುವ ಯಾವುದೋ ಅಂತರರಾಷ್ಟ್ರೀಯ ಹಣಕಾಸು ವ್ಯವಹಾರಕ್ಕೆ ಕೈಹಾಕುವುದಕ್ಕೆ ಹಿಂಜರಿಯುವುದು ಸ್ವಾಭಾವಿಕ. ಲೇಣೆ–ದೇಣೆ ಸಮತೋಲನದ ಸಮಸ್ಯೆಯಿಂದಾಗಿ ನೆರವಿನ ಪ್ರಮಾಣದ ಮೇಲೆ ಮಾತ್ರವಲ್ಲದೆ ಗುಣಮಟ್ಟದ ಮೇಲೆಯೂ ಪರಿಣಾಮವಾಗಿದೆ.

ನೆರವಿನ ಗುಣಮಟ್ಟ

ಸಾಕಷ್ಟು ಪ್ರಮಾಣದಲ್ಲಿ ನೆರವು ಹೆಚ್ಚದಿರುವುದು ಒಂದು ಸಮಸ್ಯೆಯಾದರೆ, ಉತ್ತಮರೀತಿಯ ನೆರವು ದೊರಕದಿರುವುದು ಮತ್ತೊಂದು ಸಮಸ್ಯೆ. ಈಗ ದೊರ ಕಿರುವಷ್ಟೇ ಪ್ರಮಾಣದ ನೆರವು ಉತ್ತಮರೀತಿಯಲ್ಲಿ ದೊರಕಿದ್ದರೆ ಅಭಿವೃದ್ಧಿಶೀಲ ರಾಷ್ಟ್ರಗಳ ಬೆಳವಣಿಗೆಗೆ ಇನ್ನೂ ಹೆಚ್ಚು ಸಹಾಯವಾಗುತ್ತಿತ್ತು. ಈ ದೃಷ್ಟಿಯಿಂದ, ನೆರವು ನೀತಿಯ ಕೆಲವು ನ್ಯೂನತೆಗಳನ್ನೂ ಅವನ್ನು ಪರಿಹರಿಸಬೇಕಾದ ಅಗತ್ಯ ವನ್ನೂ ವಿವೇಚಿಸುವುದು ಆವಶ್ಯಕ.

---

[5] N. T. Wang, *New Proposals for International Finance of Development*, princeton : International Finance Section, 1967

ನಿರ್ಬಂಧ ನೆರವು

ನೆರವನ್ನು ಉಪಯೋಗಿಸುವುದಕ್ಕೆ ನಿರ್ಬಂಧ ಹಾಕುವ ಪದ್ಧತಿ ಬೆಳೆದುಬಂದಿದೆ. ಎರಡು ರೀತಿಯ ನಿರ್ಬಂಧಗಳು ಆಚರಣೆಗೆ ಬಂದಿವೆ. ಯಾವುದಾದರೂ ನಿರ್ದಿಷ್ಟ ಕಾರ್ಯಯೋಜನೆಗೆ (ಪ್ರಾಜೆಕ್ಟ್) ಮಾತ್ರ ನೆರವು ಕೊಡುವುದು ಒಂದು ರೀತಿಯ ನಿರ್ಬಂಧ. ನೆರವು ಕೊಡುವ ದೇಶದ ವಸ್ತುಗಳನ್ನು ಕೊಳ್ಳುವುದಕ್ಕೆ ಮಾತ್ರ ನೆರವು ಹಣ ವಿನಿಯೋಗವಾಗಬೇಕೆಂಬುದು ಮತ್ತೊಂದು ರೀತಿಯ ನಿರ್ಬಂಧ. ಈ ಎರಡು ನಿರ್ಬಂಧಗಳು ವಿದೇಶೀ ನೆರವು ಹೆಚ್ಚು ಪರಿಣಾಮಕಾರಿಯಾಗದಂತೆ ಮಾಡಿವೆ.

ಕಾರ್ಯಯೋಜನೆಯ ನೆರವು ವಿಶ್ವಬ್ಯಾಂಕಿನಿಂದ ಆರಂಭವಾಯಿತು. ವ್ಯವಸಾಯ, ಸಾರಿಗೆ, ವಿದ್ಯುಚ್ಛಕ್ತಿ ಮೊದಲಾದ ನಿರ್ದಿಷ್ಟ ಯೋಜನೆಗಳಿಗೆ ಮಾತ್ರ ನೆರವು ನೀಡುವ ಪದ್ಧತಿಯನ್ನು ಅದು ಆಚರಣೆಗೆ ತಂದಿತು. ನಿರ್ದಿಷ್ಟ ಕಾರ್ಯಯೋಜನೆಗಳಿಗಾಗಿ ನೆರವು ನೀಡುವುದರಿಂದ ನೆರವು ದುರುಪಯೋಗವಾಗದಂತೆ ನೋಡಿಕೊಳ್ಳಬಹುದೆಂಬುದೇ ಈ ಪದ್ಧತಿಗೆ ಕಾರಣವಾಯಿತು. ಅಮೆರಿಕದ ಪ್ರಾರಂಭದ ನೆರವು ಕೂಡ ಈ ರೀತಿಯದೇ ಆಗಿದ್ದಿತು. 1950ರ ವೇಳೆಗೆ ಎಲ್ಲ ಪ್ರಮುಖ ದಾನಿ ರಾಷ್ಟ್ರಗಳೂ ಈ ಪದ್ಧತಿಯನ್ನೇ ಅನುಸರಿಸಲಾರಂಭಿಸಿದುವು. ನೆರವು ದುರುಪಯೋಗವಾಗದಂತೆ ನೋಡಿಕೊಳ್ಳುವುದೊಂದೇ ಈ ರಾಷ್ಟ್ರಗಳು ಈ ಪದ್ಧತಿ ಅನುಸರಿಸುವುದಕ್ಕೆ ಕಾರಣವಾಗಿಲ್ಲ. ಇತರ ಒಂದೆರಡು ಮುಖ್ಯ ಕಾರಣಗಳೂ ಇವೆ. ತಮ್ಮ ಘನತೆಯನ್ನು ಹೆಚ್ಚಿಸುವ ಉದ್ದೇಶದಿಂದ ಕಾರ್ಯಯೋಜನಾ ನೆರವು ಕೊಡಲಾಗುತ್ತಿದೆ. ತಮ್ಮ ನೆರವಿನಿಂದ ದೊಡ್ಡ ದೊಡ್ಡ ಯೋಜನಾ ಕಾರ್ಯಗಳು ನಿರ್ಮಾಣವಾದರೆ ಅವೆಲ್ಲವೂ ತಮ್ಮ ಕೊಡುಗೆ ಎಂದು ತೋರಿಸಿಕೊಳ್ಳಬಹುದು. ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಘನತೆ ಇದರಿಂದ ಹೆಚ್ಚುತ್ತದೆ ಎಂಬ ನಂಬಿಕೆಯಿದೆ. ನೆರವು ಕೊಡುವುದಕ್ಕಾಗಿ ದಾನಿರಾಷ್ಟ್ರಗಳು ಹಣವನ್ನು ಪಡೆಯುವುದು ತೆರಿಗೆದಾರರಿಂದ. ನೆರವನ್ನು ಹೆಚ್ಚಿಸುವುದಕ್ಕೆ ಸಾಮಾನ್ಯವಾಗಿ ತೆರಿಗೆದಾರರಿಂದ ವಿರೋಧವಿರುತ್ತದೆ. ದೊಡ್ಡ ದೊಡ್ಡ ಕಾರ್ಯಯೋಜನೆಗಳಿಗೆ ನೆರವು ನೀಡಿ ದಾನಿರಾಷ್ಟ್ರದ ಘನತೆಯನ್ನು ಹೆಚ್ಚಿಸಿದರೆ ಮತ್ತು ನೆರವು ಹಣ ಸದುಪಯೋಗವಾಗುತ್ತಿದೆ ಎಂದು ತೋರಿಸಿಕೊಟ್ಟರೆ ತೆರಿಗೆದಾರರನ್ನು ಸಮಾಧಾನಪಡಿಸುವುದೂ ನೆರವು ನೀತಿಗೆ ಸಮರ್ಥನೆ ದೊರಕಿಸುವುದೂ ಸುಲಭವಾಗುತ್ತದೆ. ನಿರ್ದಿಷ್ಟ ಕಾರ್ಯಯೋಜನೆಗಲ್ಲದೆ ಯಾವ ಬಳಕೆಗಾದರೂ ನೆರವು ಹಣವನ್ನು ಉಪಯೋಗಿಸಿಕೊಳ್ಳುವಂತಿದ್ದರೆ ತೆರಿಗೆದಾರರಿಗೆ ಸಮರ್ಥನೆ ದೊರಕಿಸುವುದು ಕಷ್ಟವಾಗುತ್ತದೆ. ಈ ಕಾರಣಗಳಿಂದ ಕಾರ್ಯಯೋಜನಾ ನೆರವು ಆಚರಣೆಗೆ ಬಂದಿದೆ. ಆದರೆ ಇದು ಕೆಲವು ಸಮಸ್ಯೆಗಳಿಗೆ ಎಡೆಮಾಡಿದೆ. ಮೊದಲನೆಯದಾಗಿ ಅಭಿವೃದ್ಧಿಶೀಲ ರಾಷ್ಟ್ರಗಳು ನೆರವು ದೊರಕುವ ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಳ್ಳುವುದರಿಂದ ವಿವಿಧೋದ್ದೇಶಗಳಿಗೆ ಸಂಪನ್ಮೂಲಗಳು ಕ್ರಮವಾಗಿ

ಹಂಚಿಕೆಯಾಗುವುದಿಲ್ಲ. ಈ ಯೋಜನೆಗಳಿಗೆ ವಿದೇಶೀ ನೆರವಷ್ಟೇ ಅಲ್ಲದೆ ತಮ್ಮ ಪಾಲಿನ ಬಂಡವಾಳವನ್ನೂ ದೊಡ್ಡ ಪ್ರಮಾಣದಲ್ಲಿ ಹೂಡಬೇಕಾಗಿದೆ. ಈ ಕಾರಣದಿಂದ ಬಂಡವಾಳದ ವಿರಳತೆ ಇರುವ ಅಭಿವೃದ್ಧಿಶೀಲ ರಾಷ್ಟ್ರಗಳು ಇತರ ಕಾರ್ಯಗಳ ಆವಶ್ಯಕತೆ ಹೆಚ್ಚಾಗಿದ್ದರೂ ಅವುಗಳನ್ನು ಕೈಬಿಟ್ಟು ನೆರವುಕೊಡುವ ದೊಡ್ಡ ಕಾರ್ಯಯೋಜನೆಗಳನ್ನೇ ತೆಗೆದುಕೊಳ್ಳುತ್ತವೆ. ಎರಡನೆಯದಾಗಿ, ಕಾರ್ಯಯೋಜನಾ ನೆರವನ್ನು ಉಪಯೋಗಿಸಿಕೊಳ್ಳುವುದರಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಮತ್ತು ಈ ಸಮಸ್ಯೆಗಳಿಂದಾಗಿ ಶೀಘ್ರವಾಗಿ ಈ ನೆರವನ್ನು ಅಭಿವೃದ್ಧಿ ಸಾಧಿಸಲು ಬಳಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಕಾರ್ಯಯೋಜನೆಗಳ ತಾಂತ್ರಿಕ ವಿವರಗಳ ಬಗ್ಗೆ ನೆರವು ನೀಡುವವರಿಗೆ ಮತ್ತು ಪಡೆಯುವವರಿಗೆ ಒಮ್ಮತವಿಲ್ಲದಿರಬಹುದು. ಯಾವುದಾದರೂ ಅನಿರೀಕ್ಷಿತ ಕಾರಣದಿಂದ ಒಂದು ಯೋಜನೆಯನ್ನು ಮುಂದುವರಿಸುವುದು ಸಾಧ್ಯವಾಗದಿರಬಹುದು; ಆದರೆ ಅದೇ ಸಂದರ್ಭದಲ್ಲಿ ಬೇರೆಯದನ್ನು ಮುಂದುವರಿಸುವುದು ಸಾಧ್ಯವಿರಬಹುದಾದರೂ ಇದೇ ನೆರವನ್ನು ಅದಕ್ಕೆ ಉಪಯೋಗಿಸುವುದು ಸಾಧ್ಯವಿಲ್ಲ. ಒಂದೇ ಕಾರ್ಯಯೋಜನೆಗೆ ಹಲವು ರಾಷ್ಟ್ರಗಳು ನೆರವು ನೀಡುತ್ತಿದ್ದರಂತೂ ಇನ್ನೂ ಹೆಚ್ಚಿನ ತೊಂದರೆಗಳು ಉದ್ಭವಿಸುತ್ತವೆ. ನೆರವು ನೀಡುವವರೆಲ್ಲರ ಅಭಿರುಚಿಗೆ ಅನುಗುಣವಾಗಿ ಕಾರ್ಯಯೋಜನೆಗಳನ್ನು ರೂಪಿಸುವುದು ಕಷ್ಟವಾಗುತ್ತದೆ. ಅವರೆಲ್ಲರ ಸಹಕಾರ ಪಡೆದು ಯೋಜನೆಯನ್ನು ಪೂರ್ಣಗೊಳಿಸುವುದು ದೊಡ್ಡ ಸಮಸ್ಯೆಯೇ ಸರಿ. ಈ ಕಾರಣಗಳಿಂದ ನೆರವನ್ನು ಉಪಯೋಗಿಸಿಕೊಳ್ಳುವುದರಲ್ಲಿ ವಿಳಂಬವಾಗುತ್ತದೆ. ಮೂರನೆಯದಾಗಿ, ಎಲ್ಲ ಅಭಿವೃದ್ಧಿ ಕಾರ್ಯಗಳನ್ನೂ ಕಾರ್ಯಯೋಜನೆಗಳ ರೂಪದಲ್ಲೇ ಏರ್ಪಡಿಸುವುದು ಸಾಧ್ಯವಿಲ್ಲ. ಈಗಾಗಲೇ ಸಾಕಷ್ಟು ಕೈಗಾರಿಕಾಭಿವೃದ್ಧಿ ಪಡೆದಿರುವ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಇಂತಹ ಸಮಸ್ಯೆ ತೀವ್ರ ಸ್ವರೂಪ ತಾಳುತ್ತದೆ. ಇಂಥ ರಾಷ್ಟ್ರಗಳಲ್ಲಿ ನೆರವು ವಿಶೇಷವಾಗಿ ಬೇಕಾಗುವುದು ಹೊಸ ಕಾರ್ಯಯೋಜನೆಗಳಿಗಲ್ಲ; ಉತ್ಪಾದನ ಶಕ್ತಿಯನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸುವುದಕ್ಕೆ; ಹಳೆಯದಾಗಿರುವ ಯಂತ್ರೋಪಕರಣಗಳನ್ನು ಬದಲಾಯಿಸಿ ಹೊಸವುಗಳನ್ನು ಉಪಯೋಗಿಸುವುದೇ ಮುಂತಾದವಕ್ಕೆ. ಕಾರ್ಯಯೋಜನೆಗಳಿಗೇ ನೆರವು ನೀಡಬೇಕೆಂಬ ಧೋರಣೆಯನ್ನನುಸರಿಸಿದರೆ ನೆರವಿನ ಆವಶ್ಯಕತೆ ಹೆಚ್ಚಾಗಿದ್ದರೂ ಅಭಿವೃದ್ಧಿಶೀಲ ರಾಷ್ಟ್ರಗಳು ಅವನ್ನು ಸಾಕಷ್ಟು ಪ್ರಮಾಣದಲ್ಲಿ ಪಡೆಯಲಾರವು. ನಾಲ್ಕನೆಯದಾಗಿ, ಕಾರ್ಯಯೋಜನಾ ನೆರವು ಕಾರ್ಯಯೋಜನೆಗಳ ಮೂಲ ಆವಶ್ಯಕತೆಗಳನ್ನು ಪೂರೈಸುತ್ತದೆಯೇ ಹೊರತು ಇತರ, ಅಪ್ರಧಾನವೆಂದು ಪರಿಗಣಿತವಾದ, ಆವಶ್ಯಕತೆಗಳನ್ನು ಪೂರೈಸುವುದಿಲ್ಲ. ನೆರವು ನೀಡುವ ರಾಷ್ಟ್ರಗಳ ದೃಷ್ಟಿಯಲ್ಲಿ ಕೆಲವು ಆವಶ್ಯಕತೆಗಳು ಅಪ್ರಧಾನವೆಂದು ಪರಿಗಣಿತವಾಗಿದ್ದರೂ ಅವನ್ನು ಪೂರೈಸುವುದರಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳು ತೊಂದರೆ ಅನುಭವಿಸುತ್ತವೆ;

ಮತ್ತು ಅವನ್ನು ಒದಗಿಸುವುದು ಕಷ್ಟವಾದುದರಿಂದ ಕಾರ್ಯಯೋಜನೆಗಳನ್ನು ಪೂರೈಸುವುದೂ ಕಷ್ಟವಾಗುತ್ತದೆ. ಇದರಿಂದ ಕಾರ್ಯಯೋಜನೆಗಳಿಗೆ ಪಡೆದ ನೆರವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲ; ಮತ್ತು ನೆರವನ್ನು ಉಪಯೋಗಿಸಿಕೊಳ್ಳುವುದರಲ್ಲಿ ವಿಳಂಬವಾಗುತ್ತದೆ.[6]

ಕಾರ್ಯಯೋಜನಾ ನೆರವಿಗೆ ಕೊಡುವ ಸಮರ್ಥನೆಗಳಲ್ಲಿ ಮುಖ್ಯವಾದದ್ದು, ನೆರವು ಕ್ರಮವಾದ ರೀತಿಯಲ್ಲಿ ಉಪಯೋಗವಾಗುವಂತೆ ಭರವಸೆ ದೊರಕುತ್ತದೆ ಎಂಬುದಾಗಿದೆ. ಕ್ರಮವಾದ ಆರ್ಥಿಕಯೋಜನೆಯನ್ನು ಹಾಕಿಕೊಂಡು ಅದಕ್ಕನುಸಾರವಾಗಿ ಕಾರ್ಯಯೋಜನೆಗಳನ್ನು ರೂಪಿಸಿ ಅವಕ್ಕೆ ನೆರವು ಪಡೆದರೆ ನೆರವು ಸದುಪಯೋಗವಾಗುತ್ತದೆ. ಹಾಗಲ್ಲದಿದ್ದರೆ ನೆರವು ಕೊಡುವವರೇ ಸೂಕ್ತವಾದ ಕಾರ್ಯಯೋಜನೆಗಳನ್ನು ನಿರ್ಧರಿಸಿ ಅವುಗಳಿಗೇ ನೆರವು ಕೊಡುವುದು ಅನಿವಾರ್ಯವಾಗುತ್ತದೆ. ಹೀಗೆ ಯೋಜನಾಬದ್ಧ ಅಭಿವೃದ್ಧಿ ಮಾರ್ಗವನ್ನನುಸರಿಸದಿರುವ ದೇಶಗಳಿಗೆ ನೆರವು ಕೊಡುವಾಗ ಕಾರ್ಯಯೋಜನೆಗಳಿಗೆ ಮಾತ್ರ ಕೊಡುವ ನೀತಿಯನ್ನನುಸರಿಸಬಹುದು. ಆದರೆ ಯೋಜನಾಬದ್ಧ ಅಭಿವೃದ್ಧಿ ಮಾರ್ಗವನ್ನು ಅನುಸರಿಸುವ ಭಾರತದಂಥ ದೇಶಕ್ಕೆ ಕೊಡುವ ನೆರವನ್ನು ಕೇವಲ ಕಾರ್ಯಯೋಜನೆಗಳಿಗೆ ಸೀಮಿತಗೊಳಿಸಬೇಕಾಗಿಲ್ಲ. ವ್ಯವಸ್ಥಿತವಾದ ಯೋಜನಾ ಮಾರ್ಗವನ್ನನುಸರಿಸುವುದರಿಂದ ನೆರವು ದುರುಪಯೋಗವಾಗುವ ಸಾಧ್ಯತೆ ಅಷ್ಟಾಗಿ ಇರುವುದಿಲ್ಲ.

ಕಾರ್ಯಯೋಜನಾ ನೆರವಿನಲ್ಲಿ ಕೆಲವು ಅನುಕೂಲಗಳೂ ಇರುವುದರಿಂದ, ಈ ಮಾದರಿಯ ನೆರವನ್ನು ಸಂಪೂರ್ಣವಾಗಿ ನಿಲ್ಲಿಸಬೇಕಾಗಿಲ್ಲ. ಆದರೆ ಇದರ ಪ್ರಮಾಣವನ್ನು ಕಡಿಮೆ ಮಾಡಿ ಯಾವ ಬಾಬಿಗಾದರೂ ಉಪಯೋಗಿಸುವಂಥ ನೆರವಿನ ಪ್ರಮಾಣವನ್ನು ಹೆಚ್ಚಿಸುವುದು ಆವಶ್ಯಕ.

ರಾಷ್ಟ್ರಬದ್ಧ ನೆರವು

ಸಹಾಯ ನೀಡುತ್ತಿರುವ ದೇಶದ ವಸ್ತುಗಳನ್ನು ಕೊಳ್ಳುವುದಕ್ಕೆ ಮಾತ್ರ ನೆರವು ಹಣವನ್ನು ಬಳಸಿಕೊಳ್ಳಬೇಕೆಂಬ ನಿರ್ಬಂಧ ಬಹಳಮಟ್ಟಿಗೆ ಆಚರಣೆಯಲ್ಲಿದೆ. ಸರ್ಕಾರದಿಂದ ಸರ್ಕಾರಕ್ಕೆ ಕೊಡುವ ನೆರವಿನ ಸೇಕಡಾ ಎಪ್ಪತ್ತೈದರಷ್ಟು ಈ ರೀತಿಯ ನಿರ್ಬಂಧಕ್ಕೆ ಒಳಪಟ್ಟಿದೆ ಎಂದು ಅಂದಾಜು ಮಾಡಲಾಗಿದೆ. ನೆರವಿನ ಮುಖಾಂತರ ತಮ್ಮ ರಫ್ತು ಅಭಿವೃದ್ಧಿಮಾಡುವುದು ಮತ್ತು ತನ್ಮೂಲಕ ತಮ್ಮ ಲೇಣೆ-ದೇಣೆ ಪಟ್ಟಿಯ ಮೇಲೆ ಅನುಕೂಲಕರ ಪರಿಣಾಮ ಉಂಟುಮಾಡುವುದು ಈ

[6] ನೋಡಿ: V. K. R. V. Rao, *Report of the Committee on the Utilisation of External Assistance*, New Delhi: Ministry of Finance, Govt. of India, 1964, p li

ರೀತಿಯ ನಿರ್ಬಂಧ ವಿಧಿಸುವುದರ ಉದ್ದೇಶವಾಗಿದೆ. ಅಮೆರಿಕ ಸರ್ಕಾರ ಈ ನೀತಿಯನ್ನನುಸರಿಸಿ ನೆರವು ಕೊಡುವುದರಿಂದ ರಫ್ತು ಅಭಿವೃದ್ಧಿಮಾಡುವ ಸಾಧ್ಯತೆಯನ್ನು ತೋರಿಸಿಕೊಟ್ಟಿತು. ಇದರಿಂದ ಪ್ರೇರಿತವಾಗಿ ಇತರ ರಾಷ್ಟ್ರಗಳೂ ಇದನ್ನು ಪ್ರಾರಂಭಿಸಿದುವು. ಈಗ ಎಲ್ಲ ನೆರವು ರಾಷ್ಟ್ರಗಳೂ ತಮ್ಮ ತಮ್ಮ ಲೇಣೆ-ದೇಣೆ ಪಟ್ಟಿಯ ಸಮತೋಲವನ್ನು ಕಾಪಾಡುವುದಕ್ಕಾಗಿ ಈ ನಿರ್ಬಂಧವನ್ನು ಹಾಕುತ್ತಿವೆ. ಒಂದು ರಾಷ್ಟ್ರ ಈ ನೀತಿಯನ್ನು ಅನುಸರಿಸಿದಾಗ ಇತರ ರಾಷ್ಟ್ರಗಳೂ ಅನುಸರಿಸದಿದ್ದರೆ ಅವುಗಳ ರಫ್ತು ಪ್ರಮಾಣ ಇಳಿಯುತ್ತದೆ. ಆದ್ದರಿಂದ ನೆರವು ಹಣವನ್ನು ನೆರವು ಕೊಟ್ಟ ದೇಶದ ವಸ್ತುಗಳನ್ನೇ ಕೊಳ್ಳುವುದಕ್ಕೆ ಉಪಯೋಗಿಸ ಬೇಕೆಂಬ ನಿರ್ಬಂಧ ವಿಶ್ವವ್ಯಾಪಿಯಾಗಿದೆ.

ಇದರಿಂದ ನೆರವು ಪಡೆಯುವ ರಾಷ್ಟ್ರಗಳಿಗೆ ದೊರಕುವ ಪ್ರಯೋಜನ ಕಡಿಮೆ ಯಾಗಿದೆ. ಬೆಲೆ ಎಲ್ಲಿ ಕಡಿಮೆಯಾಗಿರುತ್ತದೆಯೋ ಅಲ್ಲಿ ಮತ್ತು ತಮಗೆ ಬೇಕಾದ ರೀತಿಯ ವಸ್ತುಗಳು ಎಲ್ಲಿ ದೊರಕುತ್ತವೆಯೋ ಅಲ್ಲಿ ಕೊಳ್ಳುವ ಸ್ವಾತಂತ್ರ್ಯವಿರು ವುದಿಲ್ಲ. ನೆರವು ಹಣದಿಂದ ಕೊಳ್ಳುವ ವಸ್ತುಗಳಿಗೆ ಹೆಚ್ಚು ಬೆಲೆ ತೆರುವುದು ಅನಿವಾರ್ಯವಾಗಿದೆ. ಭಾರತ ಅಮೆರಿಕದಿಂದ ಈ ರೀತಿಯ ನೆರವಿನ ಮುಖಾಂತರ ಕೊಂಡಿರುವ ವಸ್ತುಗಳಿಗೆ ಸೇಕಡಾ ೩೦ರಿಂದ ೪೦ರಷ್ಟು ಹೆಚ್ಚು ಬೆಲೆ ಕೊಟ್ಟಿರು ವುದಾಗಿ ಒಂದು ಅಧ್ಯಯನ ತಿಳಿಸುತ್ತದೆ.[7] ನೆರವು ಕೊಡುವ ರಾಷ್ಟ್ರದ ವಸ್ತುಗಳನ್ನೇ ಕೊಳ್ಳುವುದಕ್ಕೆ ನೆರವು ಹಣ ವಿನಿಯೋಗವಾಗಬೇಕೆಂಬ ನಿರ್ಬಂಧ ವನ್ನು ತೆಗೆದು ಹಾಕಿದರೆ ನೆರವು ಪಡೆಯುವ ಒಂದೊಂದು ರಾಷ್ಟ್ರಕ್ಕೂ ಒಂದೊಂದು ಪ್ರಮಾಣದಲ್ಲಿ ಅನುಕೂಲ ದೊರಕುತ್ತದೆ. ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಇದರಿಂದ ಸೇಕಡಾ 10ರಿಂದ 15ರ ವರೆಗೆ ವೆಚ್ಚದಲ್ಲಿ ಉಳಿತಾಯ ವಾಗಬಹುದೆಂದು ಅಂದಾಜುಮಾಡಲಾಗಿದೆ.[8] ಕಡಿಮೆ ಬೆಲೆಯಲ್ಲಿ (ಅಂತರ ರಾಷ್ಟ್ರೀಯ ಬೆಲೆಗೆ ಹೋಲಿಸಿದಾಗ) ಒದಗಬಹುದಾದಂಥ ವಸ್ತುಗಳನ್ನು ಮಾತ್ರ ಈ ನೆರವಿನಲ್ಲಿ ಸೇರಿಸದಿರುವುದರಿಂದ ನೆರವುಪಡೆಯುವ ರಾಷ್ಟ್ರಗಳಿಗೆ ಹೆಚ್ಚಿನ ವೆಚ್ಚ ತಗಲುತ್ತಿದೆ; ಕಾರ್ಯಯೋಜನೆಗಳ ವೆಚ್ಚ ಜಾಸ್ತಿಯಾಗುತ್ತಿದೆ; ಮತ್ತು ಇದರಿಂದ ಬೆಳವಣಿಗೆಯ ಮಟ್ಟದ ಮೇಲೆ ಪ್ರತಿಕೂಲ ಪರಿಣಾಮವಾಗುತ್ತಿದೆ. ಬೆಳವಣಿಗೆಯ ಮಟ್ಟವನ್ನು ಉತ್ತಮಗೊಳಿಸುವುದರಲ್ಲಿ ನೆರವು ಹೆಚ್ಚು ಪರಿಣಾಮಕಾರಿಯಾಗ ಬೇಕಾದರೆ ಈ ರೀತಿಯ ನಿರ್ಬಂಧವನ್ನು ತೆಗೆದುಹಾಕುವುದು ಅತ್ಯಂತ ಆವಶ್ಯಕ. ಆದರೆ ನೆರವು ಕೊಡುವ ರಾಷ್ಟ್ರಗಳು ಈ ಪದ್ಧತಿಯನ್ನು ಸುಲಭವಾಗಿ ಬಿಡಲಾರವು.

---

[7] Columbia University School of Law, *Public International Development Financing*, Mimiograph, 1964

[8] Bimal Jalan "Gains to Donor Countries from Tied Aid," ***Finance and Development***, September, 1969. p. 15

ತಮ್ಮ ವಸ್ತುಗಳನ್ನೇ ಕೊಳ್ಳುವಂತೆ ನಿರ್ಬಂಧ ಹಾಕುವುದರಿಂದ ತಮ್ಮ ರಫ್ತನ್ನು ಹೆಚ್ಚಿಸುವುದರ ಮೂಲಕ ಅನುಕೂಲ ಪಡೆಯಬಹುದೆಂಬ ನಂಬಿಕೆಯೇ ಇದಕ್ಕೆ ಕಾರಣ. ಆದರೆ ಇದರಿಂದ ಅವರಿಗೆ ಉಂಟಾಗುವ ಅನುಕೂಲ ಅಷ್ಟಾಗಿ ಇಲ್ಲವೆಂಬುದು ಕೆಲವು ಅಧ್ಯಯನಗಳಿಂದ ದೃಢಪಟ್ಟಿದೆ.[9] ಅಲ್ಪ ಪ್ರಮಾಣದ ಫಾಯಿದೆ ಮಾತ್ರ ಇರುವುದರಿಂದ ಈ ಪದ್ಧತಿಯನ್ನು ಬಿಡುವುದು ನೆರವು ನೀಡುವ ರಾಷ್ಟ್ರಗಳಿಗೆ ಕಷ್ಟವಾಗಲಾರದೆಂದು ಸೂಚಿಸಲಾಗುತ್ತಿದೆ. ನೆರವು ನೀಡುವ ಹತ್ತು ಪ್ರಮುಖ ರಾಷ್ಟ್ರಗಳು ತಮ್ಮ ಲೇಣೆದೇಣೆ ಪಟ್ಟಿಯ ಮೇಲೆ ಯಾವ ಪ್ರತಿಕೂಲ ಪರಿಣಾಮವೂ ಇಲ್ಲದೆ ಒಂದು ವರ್ಷಕ್ಕೆ ೮೫ ಕೋಟಿ ಡಾಲರುಗಳಿಂದ ೧೦೫ ಕೋಟಿ ಡಾಲರುಗಳ ವರೆಗೆ ನಿರ್ಬಂಧರಹಿತ ನೆರವು ನೀಡಬಹುದೆಂದು ಪಿಯರ್ಸನ್ ಆಯೋಗದ ವರದಿಯಿಂದ ತಿಳಿದುಬಂದಿದೆ.[10] ನಿರ್ಬಂಧ ವಿಧಿಸುವುದನ್ನು ಒಂದೇ ಬಾರಿಗೆ ನಿಲ್ಲಿಸುವುದು ಕಷ್ಟವಾಗುತ್ತದೆಂಬುದನ್ನು ಮನಗಂಡ ಪಿಯರ್ಸನ್ ಆಯೋಗ ಹಂತಹಂತವಾಗಿ ಅದನ್ನು ಕೈಬಿಡಬಹುದೆಂದು ಸೂಚಿಸುತ್ತ, ಅದಕ್ಕಾಗಿ ಅನುಸರಿಸಬಹುದಾದ ಕಾರ್ಯಕ್ರಮಗಳನ್ನು ಈ ರೀತಿಯಾಗಿ ಹೇಳಿದೆ: (೧) ನೆರವು ನೀಡುವ ರಾಷ್ಟ್ರಗಳು ನಿರ್ಬಂಧ ವಿಧಿಸುವ ಕ್ರಮವನ್ನು ಹೆಚ್ಚಿಸುತ್ತಾ ಹೋಗಬಾರದೆಂದು ಒಪ್ಪಬೇಕು. (೨) ನಿರ್ಬಂಧ ತೆಗೆಯುವುದರಿಂದುಂಟಾಗುವ ಲೇಣೆದೇಣೆ ಲಾಭನಷ್ಟಗಳನ್ನು ಪರಿಶೀಲಿಸಲು ಅಂತರ ರಾಷ್ಟ್ರೀಯ ಹಣ ನಿಧಿಯ (ಐ.ಎಂ.ಎಫ್.) ಸಹಕಾರದೊಡನೆ ಅಭಿವೃದ್ಧಿ ಸಹಾಯ ಸಮಿತಿಯು (ಡಿ.ಎ.ಸಿ.) ಒಂದು ಅಧ್ಯಯನ ನಡೆಸಿ ವರದಿ ತಯಾರಿಸಬೇಕು. (೩) ಈ ವರದಿಯ ಆಧಾರದ ಮೇಲೆ ಪ್ರಮುಖ ನೆರವು ನೀಡುವ ರಾಷ್ಟ್ರಗಳ ಸಮ್ಮೇಳನವೊಂದನ್ನು ಏರ್ಪಡಿಸಿ ನಿರ್ಬಂಧವನ್ನು ಶೀಘ್ರವಾಗಿ ತೆಗೆದುಹಾಕುವ ಸಾಧ್ಯತೆಯನ್ನು ಪರಿಶೀಲಿಸಬೇಕು. ಪಿಯರ್ಸನ್ ಆಯೋಗದ ವರದಿ ಈಗಾಗಲೇ ಪ್ರಮುಖ ನೆರವು ನೀಡುವ ರಾಷ್ಟ್ರಗಳ ನೆರವುನೀತಿಯ ಮೇಲೆ ಪ್ರಭಾವ ಬೀರಿದೆ. ೧೫ನೆಯ ಸೆಪ್ಟೆಂಬರ್ ೧೯೭೦ರಂದು ಅಧ್ಯಕ್ಷ ನಿಕ್ಸನ್ ಅಮೆರಿಕದ ಕಾಂಗ್ರೆಸಿನ ಮುಂದೆ ಮಂಡಿಸಿದ ವಿದೇಶೀ ನೆರವಿನ ಸೂಚನೆಗಳಲ್ಲಿ ಈ ರೀತಿ ಹೇಳಿದರು: "ನೆರವು ನೀಡುವ ರಾಷ್ಟ್ರಗಳೆಲ್ಲವೂ ತಮ್ಮ ವಸ್ತುಗಳನ್ನು ಕೊಳ್ಳುವುದಕ್ಕೇ ನೆರವು ಹಣವನ್ನು ಉಪಯೋಗಿಸಬೇಕೆಂಬ ನಿರ್ಬಂಧವನ್ನು ತೆಗೆದು ಹಾಕಬೇಕು. ಇತರ ರಾಷ್ಟ್ರಗಳೊಡನೆ ಕಲೆತು ನಿರ್ಬಂಧವನ್ನು ಸಂಪೂರ್ಣವಾಗಿ ತೆಗೆದುಹಾಕುವ ಪ್ರಯತ್ನ ಮಾಡಬೇಕಾಗಿದೆ; ಅದಕ್ಕಾಗಿ

---

[9] Jagadish Bhagavathi, "*Tying of Aid,*" in the *Report of the United Nations Conference on trade and Development* Second Session, Vol IV

[10] *Report of the Commission on International Development*, New York, Praeger Publishers, 1969, p. 173

ಅವರೊಡನೆ ನಾವು ಈಗಾಗಲೇ ಚರ್ಚೆ ಆರಂಭಿಸಿದ್ದೇವೆ. ಮೊದಲ ಹೆಜ್ಜೆಯಾಗಿ, ನಾನು ನಮ್ಮ ನೆರವನ್ನು ಕಡಿಮೆ ವರಮಾನದ ರಾಷ್ಟ್ರಗಳಿಂದಲೇ ವಸ್ತುಗಳನ್ನು ಕೊಳ್ಳುವುದಕ್ಕೆ ತತ್‌ಕ್ಷಣವೇ ಉಪಯೋಗಿಸುವಂತೆ ಮಾಡಲು ನಿರ್ದೇಶನ ನೀಡಿದ್ದೇನೆ.”[11] ಅಧ್ಯಕ್ಷ ನಿಕ್ಸನರ ಈ ನಿರ್ದೇಶನ ಈಗಾಗಲೇ ಕಾರ್ಯಗತವೂ ಆಗಿದೆ. ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿನಿಯೋಗ (ಯು. ಎಸ್. ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವೆಲಪ್‌ಮೆಂಟ್) ಒದಗಿಸುವ ನೆರವನ್ನು ಅಮೆರಿಕದ ವಸ್ತುಗಳನ್ನು ಕೊಳ್ಳುವುದಕ್ಕೇ ಉಪಯೋಗಿಸಬೇಕೆಂಬ ನಿರ್ಬಂಧ ಇನ್ನು ಮೇಲೆ ಇರುವುದಿಲ್ಲ. ನೆರವು ಪಡೆಯುವ ರಾಷ್ಟ್ರಗಳು ಈ ಸಂಸ್ಥೆಯಿಂದ ಪಡೆಯುವ ನೆರವನ್ನು ಕಡಿಮೆ ಆದಾಯ ಪಡೆಯುತ್ತಿರುವ ತೊಂಬತ್ತು ರಾಷ್ಟ್ರಗಳಲ್ಲಿ ವಸ್ತುಗಳನ್ನು ಕೊಳ್ಳಲು ಉಪಯೋಗಿಸುವುದಕ್ಕೆ ಈಗ ಅವಕಾಶ ಮಾಡಲಾಗಿದೆ.[12]

ನೆರವಿನ ಷರತ್ತುಗಳು

ಬಡ್ಡಿದರ, ಮರುಪಾವತಿಯ ಅವಧಿ ಮುಂತಾದವುಗಳಿಗೆ ಸಂಬಂಧಿಸಿದ ಷರತ್ತುಗಳ ವಿಷಯದಲ್ಲಿ ನೆರವು ಪಡೆಯುವ ರಾಷ್ಟ್ರಗಳು ಸಮಸ್ಯೆಯನ್ನು ಎದುರಿಸಬೇಕಾಗಿದೆ. ಇದುವರೆಗೆ ಅಧಿಕಪ್ರಮಾಣದಲ್ಲಿ ನೆರವು ಪಡೆದಿರುವುದರಿಂದ ಅಭಿವೃದ್ಧಿಶೀಲ ರಾಷ್ಟ್ರಗಳು ಮರುಪಾವತಿ ಮಾಡಲು ಮತ್ತು ಬಡ್ಡಿಕೊಡಲು ಸಂಪನ್ಮೂಲಗಳನ್ನು ಹೊಂದಿಸುವುದರಲ್ಲಿ ಬಹಳ ತೊಂದರೆ ಅನುಭವಿಸುತ್ತಿವೆ. ಸಾಲದ ಹೊರೆ ಹೆಚ್ಚಿದಂತೆ ಸಾಲ ಮರುಪಾವತಿ ಮಾಡುವ ಶಕ್ತಿ ಹೆಚ್ಚದಿರುವುದು ಇದಕ್ಕೆ ಕಾರಣ. ಅಂಕ್ಟಾಡ್ ಕಾರ್ಯಾಲಯ ಲೆಕ್ಕಾಚಾರ ಮಾಡಿರುವಂತೆ ೧೯೬೬–೭೫ರ ಅವಧಿಯಲ್ಲಿ ಸಾಲ ಮರುಪಾವತಿ ಮತ್ತು ಬಡ್ಡಿಗಾಗಿ ಅಗತ್ಯವಾಗುವ ಹಣ ದ್ವಿಗುಣಗೊಂಡು ೧,೦೦೦ ಕೋಟಿ ಡಾಲರುಗಳನ್ನು ಮೀರುವುದಾಗಿ ಕಂಡುಬರುತ್ತದೆ. ರಫ್ತು ಸಂಪಾದನೆಯ ಬಹುಪಾಲನ್ನು ಅಭಿವೃದ್ಧಿಶೀಲ ರಾಷ್ಟ್ರಗಳು ವಿದೇಶೀ ಸಾಲದ ಮರುಪಾವತಿ ಮತ್ತು ಬಡ್ಡಿಗಾಗಿ ಬಳಸುತ್ತಿವೆ. ಪೆಟ್ರೋಲಿಯಂ ರಫ್ತು ಮಾಡುವ ದೇಶಗಳೂ ಸೇರಿದಂತೆ ಋಣ ಸೇವೆಗಾಗಿ (ಡೆಟ್ ಸರ್ವಿಸಸ್) ೧೯೬೬ರಲ್ಲಿ ರಫ್ತುಸಂಪಾದನೆಯ ಸೇಕಡಾ ೧೩ರಷ್ಟು ವಿನಿಯೋಗವಾಗುತ್ತಿತ್ತು. ೧೯೭೫ರ ವೇಳೆಗೆ ಇದು ಸೇಕಡಾ ೧೪ಕ್ಕೆ ಏರುತ್ತದೆ. ಪೆಟ್ರೋಲಿಯಂ ರಫ್ತು ಮಾಡುವ ದೇಶಗಳನ್ನುಳಿದು ಇತರ ಋಣಿ ದೇಶಗಳನ್ನು ತೆಗೆದುಕೊಳ್ಳುವುದಾದರೆ ಇದು ೧೯೬೬ರಲ್ಲಿ ಸೇಕಡಾ ೧೬ ಇದ್ದು ೧೯೭೫ರ ವೇಳೆಗೆ ಸೇಕಡಾ ೨೩ಕ್ಕೆ

---

[11] *Foreign Aid for the Seventies*—President Nixon's Message on Foreign aid Proposals, September 15, 1970

[12] *The Hindu*, December 25, 1970

ಏರುತ್ತದೆ.[13] ನಮ್ಮ ದೇಶ ಈಗಿನ ಪ್ರಮಾಣದಲ್ಲಿ ಮತ್ತು ಈಗಿನ ಷರತ್ತುಗಳೊಡನೆ ನೆರವು ಪಡೆಯುವುದಾದರೆ ಮುಂದಿನ ಕೆಲವು ವರ್ಷಗಳಲ್ಲಿ ಋಣ ಸೇವೆಯ ಪ್ರಮಾಣ ರಫ್ತು ಸಂಪಾದನೆಯ ಸೇಕಡಾ ೩೦ರಿಂದ ೪೦ರಷ್ಟಕ್ಕೆ ಏರುವ ಸಂಭವವಿದೆ. ಇಂಥ ಪರಿಸ್ಥಿತಿಯಲ್ಲಿ ಅತ್ಯಲ್ಪ ಬಡ್ಡಿದರ ಮತ್ತು ಹೆಚ್ಚು ಮರುಪಾವತಿ ಅವಧಿ ಇರುವ ಸಾಲ ಒದಗಿಸಬೇಕು; ಹಾಗೂ ಸಹಾಯಧನದ ರೂಪದಲ್ಲಿ ಹೆಚ್ಚು ನೆರವು ಒದಗಿಸಬೇಕು. ಆದರೆ ಇವುಗಳಲ್ಲಿ ಋಣದ ಹೊರೆ ಕಡಿಮೆ ಪ್ರಮಾಣದಲ್ಲಿರುವಂತೆ ಮಾಡುವ ರೀತಿಯಲ್ಲಿ ಬದಲಾವಣೆಗಳಾಗದೆ ಷರತ್ತು ಹೆಚ್ಚು ಕಠಿಣತರವಾಗುತ್ತಿವೆ; ಮತ್ತು ಇದರಿಂದಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ವಿದೇಶೀ ಸಾಲದ ಹೊರೆ ತಾಳಲಾರದ್ದಾಗುತ್ತಿದೆ. ೧೯೬೭ರ ಪರಿಸ್ಥಿತಿಯನ್ನು ೧೯೬೪ರ ಪರಿಸ್ಥಿತಿಯೊಡನೆ ಹೋಲಿಸುವುದಾದರೆ, ಈ ಅವಧಿಯಲ್ಲಿ ಭರವಸೆ ನೀಡಿದ್ದ ಒಟ್ಟು ನೆರವಿನಲ್ಲಿ ಸಹಾಯಧನದ ಪಾಲು ಸೇಕಡಾ ೬೦ರಿಂದ ಸೇಕಡಾ ೫೫ಕ್ಕೆ ಇಳಿಯಿತು; ಸರಾಸರಿ ಮರುಪಾವತಿ ಅವಧಿ ೨೮ ವರ್ಷಗಳಿಂದ ೨೩ ವರ್ಷಗಳಿಗೆ ಇಳಿಯಿತು; ಮತ್ತು ಸರಾಸರಿ ಬಡ್ಡಿದರ ಸೇಕಡಾ ೩.೧ರಿಂದ ೩.೮ಕ್ಕೆ ಏರಿತು.[14] ಈ ರೀತಿಯಾಗಿ ನೆರವಿನ ಷರತ್ತುಗಳು ಕಠಿಣಗೊಳ್ಳುತ್ತಿರುವುದನ್ನು ಬದಲಾಯಿಸದಿದ್ದರೆ ಅಭಿವೃದ್ಧಿಶೀಲ ರಾಷ್ಟ್ರಗಳು ಸಂಕಷ್ಟಕ್ಕೆ ಗುರಿಯಾಗುತ್ತವೆ. ಷರತ್ತುಗಳನ್ನು ಸುಲಭಗೊಳಿಸುವ ಆವಶ್ಯಕತೆ ಹಿಂದೆಂದಿಗಿಂತ ಈಗ ಹೆಚ್ಚಾಗಿದೆ. ಸಾಲದ ಹೊರೆಯನ್ನು ಮಿತಿಗೊಳಿಸಬೇಕಾದರೆ ಅಭಿವೃದ್ಧಿ ಸಹಾಯ ಸಮಿತಿ ಸೂಚಿಸಿರುವಂತೆ ಒಟ್ಟು ನೆರವಿನಲ್ಲಿ ಸೇಕಡಾ ೭೫ರಷ್ಟು ಸಹಾಯಧನರೂಪದಲ್ಲಿರಬೇಕು; ಇಲ್ಲವೇ ಒಟ್ಟು ನೆರವಿನಲ್ಲಿ ಸೇಕಡಾ ೮೫ರಷ್ಟು ಕೆಳಕಂಡ ಮೂರು ಗುಂಪಿನ ಷರತ್ತುಗಳಲ್ಲಿ ಯಾವುದಾದರೂ ಒಂದರಂತಿರಬೇಕು: (i) ೩೦ ವರ್ಷಗಳ ಮರುಪಾವತಿ ಅವಧಿ, ೮ ವರ್ಷಗಳ ತಳ್ಳುಪಡಿ ಮತ್ತು ಸೇಕಡಾ ೨.೫ ಬಡ್ಡಿದರ; (ii) ೩೮ ವರ್ಷಗಳ ಮರುಪಾವತಿ ಅವಧಿ, ೧೦ ವರ್ಷಗಳ ತಳ್ಳುಪಡಿ ಮತ್ತು ಸೇಕಡಾ ೩ ಬಡ್ಡಿದರ; (iii) ೨೫ ವರ್ಷಗಳ ಮರುಪಾವತಿ, ೭ ವರ್ಷಗಳ ತಳ್ಳುಪಡಿ ಮತ್ತು ಸೇಕಡಾ ೨ ಬಡ್ಡಿದರ. ಅಭಿವೃದ್ಧಿಶೀಲ ರಾಷ್ಟ್ರಗಳ ಋಣಭಾರ ತಾಳಲಾರದ್ದಾಗುತ್ತಿರುವಾಗ ಈ ರೀತಿಯಾಗಿ ಷರತ್ತುಗಳನ್ನು ಸುಲಭಗೊಳಿಸುವುದು ಆವಶ್ಯಕವಾಗಿದೆ.

ನೆರವಿನ ಪ್ರಮಾಣವನ್ನು ಹೆಚ್ಚಿಸಬೇಕಾದ ಮತ್ತು ಅದಕ್ಕಿಂತ ಮಿಗಿಲಾಗಿ ಅದನ್ನು ಗುಣಾತ್ಮಕವಾಗಿ ಉತ್ತಮಪಡಿಸಬೇಕಾದ ಅಗತ್ಯ ಮೇಲಿನ ವಿವರಣೆಯಿಂದ ಸ್ಪಷ್ಟವಾಗಿದೆ. ನೆರವಿನ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ಏನೇ

---

[13] Talat A. Abdel-Malek, "External Finance and the Management of Economic Development," *MSU Business Topics*, Spring 1970, p. 40

[14] *OECD Observer*, June 1969, p. 16

ಅಡ್ಡಿಗಳಿದ್ದರೂ ಅವೆಲ್ಲವೂ ಪರಿಹರಿಸಲಾಗದಂಥ ಸಮಸ್ಯೆಗಳೇನಲ್ಲ. ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಗತಿಯಲ್ಲಿ ನೆರವು ವಹಿಸುವ ಪಾತ್ರವನ್ನು ನೆರವು ನೀಡುವ ರಾಷ್ಟ್ರಗಳ ತೆರಿಗೆದಾರರಿಗೆ ಮನವರಿಕೆ ಮಾಡಿಕೊಟ್ಟು ಅವರ ಮನೋಭಾವ ಬದಲಾವಣೆಯಾಗುವಂತೆ ಪ್ರಯತ್ನಿಸುವುದು ಅತ್ಯಗತ್ಯ. ಅಭಿವೃದ್ಧಿಹೊಂದಿದ ನೆರವು ಕೊಡುವ ರಾಷ್ಟ್ರಗಳು ಅಭಿವೃದ್ಧಿಶೀಲ ರಾಷ್ಟ್ರಗಳ ಕ್ಷಿಪ್ರ ಪ್ರಗತಿಯಾಗುವುದಕ್ಕೆ ಸಹಾಯಕವಾಗುವಂತೆ ತಮ್ಮ ಅಂತರರಾಷ್ಟ್ರೀಯ ವ್ಯಾಪಾರ ನೀತಿಯನ್ನು ಮತ್ತು ರಾಜ್ಯಕೋಶ ನೀತಿಯನ್ನು ಸೂಕ್ತ ರೀತಿಯಲ್ಲಿ ಮಾರ್ಪಡಿಸುವುದರ ಮೂಲಕ ನೆರವು ಕೊಡುವುದು ಅವಶ್ಯಕವಾಗಿದೆ. ನೆರವು ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಪ್ರಗತಿಯಲ್ಲಿ ಹೆಚ್ಚು ಪರಿಣಾಮಕಾರಿಯಾಗಬೇಕಾದರೆ ನೆರವು ನೀಡುವ ರಾಷ್ಟ್ರಗಳ ವಸ್ತುಗಳನ್ನು ಕೊಳ್ಳುವುದಕ್ಕೆ ಮಾತ್ರ ನೆರವುಹಣ ವಿನಿಯೋಗವಾಗಬೇಕೆಂಬ ನಿರ್ಬಂಧ ಹೋಗಬೇಕು; ಕೇವಲ ಕಾರ್ಯಯೋಜನೆಗಳಿಗೇ ನೆರವು ಕೊಡುವುದನ್ನು ಬಿಟ್ಟು, ನೆರವು ಪಡೆಯುವ ರಾಷ್ಟ್ರಗಳು ತಮ್ಮ ಅಭಿವೃದ್ಧಿಗೆ ಅವಶ್ಯಕವಾದ ಯಾವುದೇ ಕಾರ್ಯಕ್ಕಾಗಿ ಉಪಯೋಗಿಸಿಕೊಳ್ಳುವಂಥ ನೆರವಿನ ಪ್ರಮಾಣ ಹೆಚ್ಚಬೇಕು; ಮತ್ತು ನೆರವಿನ ಷರತ್ತುಗಳು ಸೂಕ್ತರೀತಿಯಲ್ಲಿ ಸರಳಗೊಳ್ಳಬೇಕು. ಈ ರೀತಿಯಾದ ಗುಣಾತ್ಮಕ ಬದಲಾವಣೆಯ ಅವಶ್ಯಕತೆಯನ್ನು ಮನಗಂಡು ಅದಕ್ಕಾಗಿ ಪ್ರಯತ್ನಗಳೂ ನಡೆಯುತ್ತಿವೆ. ಇಂಥ ಪ್ರಯತ್ನಗಳು ತ್ವರಿತವಾಗಿ ಫಲಪ್ರದವಾಗುವುದು ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಅವಶ್ಯಕವಾಗಿದೆ; ಮತ್ತು ಅವು ಫಲಪ್ರದವಾದಾಗ ಆರ್ಥಿಕ ಅಭಿವೃದ್ಧಿಯಲ್ಲಿ ನೆರವು ಹೆಚ್ಚು ಪರಿಣಾಮಕಾರಿಯಾಗುವುದೆಂಬುದರಲ್ಲಿ ಸಂಶಯವಿಲ್ಲ.

ತಾಂತ್ರಿಕ ಪ್ರಗತಿಯು ಭರದಿಂದ ಸಾಗುತ್ತಿರುವ ಅರ್ವಾಚೀನ ಕಾಲದಲ್ಲಿ ಪ್ರತಿಯೊಂದು ದೇಶವೂ ಉದ್ಧಾರವಾಗಲಿಕ್ಕೆ ಬೇಕಾದಷ್ಟು ಪ್ರಚ್ಛನ್ನ ಶಕ್ತಿ ಪ್ರಪಂಚದಲ್ಲಿದೆ. ಭಾರತದೇಶವನ್ನೇ ತೆಗೆದುಕೊಂಡರೆ ನಮ್ಮ ಜಲಶಕ್ತಿಯೂ ಮೂಲಸಾಮಗ್ರಿಗಳ ಉತ್ಪಾದಕ ಶಕ್ತಿಯೂ ಜನಶಕ್ತಿಯೂ ನಾಲ್ಕನೆಯದಾದ ಬಂಡವಾಳದೊಡನೆ ಸಂಗಮಿಸಿದರೆ ಇನ್ನು ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ಜೀವನದ ಮಟ್ಟದಲ್ಲಿ ಎಷ್ಟೋ ಸುಧಾರಣೆ ಆಗಲು ಸಾಧ್ಯವಿದೆ. ಅಷ್ಟುಹೊತ್ತಿಗೆ ಅಂತರರಾಷ್ಟ್ರೀಯ ವ್ಯಾಪಾರದ ತೊಡಕು ತೊಂದರೆಗಳು— ಡಾಲರು ಕೊರತೆ, ಟಾರೀಫು ಪೌಳಿ, ಮಾರುಪೇದರ ಇಳಿಸುವುದರಲ್ಲಿ ಪೈಪೋಟಿ ಮುಂತಾದುವು— ಅಂತರರಾಷ್ಟ್ರೀಯ ಸಂಘ ಸಂಘಟನೆಗಳಿಂದ ಬಗೆಹರಿಸಲ್ಪಟ್ಟರೆ, ನಮ್ಮ ದೇಶದ ಆರ್ಥಿಕ ಅಭ್ಯುದಯದಿಂದ ಪ್ರಪಂಚದ ಕಲ್ಯಾಣವೂ ನೆರವೇರುವುದು.

ಒಂದು ದೇಶದ ಉದ್ಯಮಗಳು ಹೇಗೆ ಬೆಳೆಯಬಲ್ಲುವು, ಹಣಪ್ರಪಂಚವು ಹೇಗೆ ವಿಸ್ತಾರವಾಗುವುದು, ಜನಸಂಖ್ಯೆಯು ಎಷ್ಟಿದ್ದರೆ ಒಳಿತು, ಸಂಚಾಲಕರಿಗೆಷ್ಟು ಮುನಾಫೆ ಬಿಡೋಣ, ಕೂಲಿಯ ಸಮಸ್ಯೆಗಳೇನು, ಅವಯವ ಸಂಯೋಜನೆಯ ಮುಖ್ಯ ಪ್ರಶ್ನೆಯನ್ನೆಂತು ಇದಿರಿಸೋಣ, ಅಂತರರಾಷ್ಟ್ರೀಯ ವ್ಯಾಪಾರದ ಪರಮಾವಧಿ ಲಾಭ ಪಡೆಯುವುದು ಹೇಗೆ, ನಿರುದ್ಯೋಗವನ್ನು ನಿವಾರಿಸಿ ಪೂರ್ಣೋದ್ಯೋಗವನ್ನು ಶಾಶ್ವತವಾಗಿ ನಿಲ್ಲಿಸಲು ರಾಷ್ಟ್ರೀಯ ಸರಕಾರವು ಏನು ಮಾಡಬೇಕು, ಮುಂಬರಿದ ರಾಷ್ಟ್ರಗಳ ಕರ್ತವ್ಯವೇನು, ಅಂತರರಾಷ್ಟ್ರೀಯ ರಂಗದಲ್ಲಿ ಏನೆಲ್ಲ ಪರಿಹಾರಗಳು ನಡೆಯತಕ್ಕದು, ನವಸಮಾಜದ ರಚನೆಗೆ ಯೋಗ್ಯವಾದ ಆರ್ಥಿಕ ತತ್ತ್ವವು ಯಾವುದು? ಮೊದಲಾದ ಹಲವಾರು ಪ್ರಶ್ನೆಗಳನ್ನು ದೇಶದ ಜನ ತಮ್ಮ ಸ್ವಂತ ತಿಳಿವಳಿಕೆಯಿಂದ ಉತ್ತರಿಸಲು ಕಲಿಯಬೇಕು[1].

—ಕು. ಶಿ. ಹರಿದಾಸ ಭಟ್ಟ

1 ಅರ್ಥಶಾಸ್ತ್ರ, ಕಾವ್ಯಾಲಯ, ಮೈಸೂರು, ೧೯೫೨, ಪು. ೨೯೧–೨

ಕುಕ್ಕಿಲ ಕೃಷ್ಣಭಟ್ಟ

ದೇಶೀಯ ಛಂದಸ್ಸುಗಳ ಮೂಲ–'ಏಲೆ'

ಸಂಸ್ಕೃತದ ಮತ್ತು ದೇಶಭಾಷೆಯ ಕಾವ್ಯನಾಟಕಾದಿ ಪ್ರಾಚೀನ ಸಾಹಿತ್ಯ ಗ್ರಂಥಗಳಲ್ಲಿ ಪ್ರಯುಕ್ತವಾದ ಛಂದೋಬಂಧಗಳಲ್ಲಿ ಹೆಚ್ಚಿನವು ಪ್ರಾಚೀನ ಕಾಲದ ಮಾರ್ಗ ಮತ್ತು ದೇಶೀ ಸಂಗೀತಪದ್ಧತಿಗಳಲ್ಲಿ ಗೇಯವಸ್ತುಗಳಾಗಿದ್ದುವೆಂದು ಭರತನ ನಾಟ್ಯಶಾಸ್ತ್ರ, ಮತಂಗನ ಬೃಹದ್ದೇಶಿ ಮೊದಲಾದ ಸಂಗೀತಶಾಸ್ತ್ರ ಗ್ರಂಥಗಳಿಂದ ತಿಳಿಯಬಹುದಾಗಿದೆ. ನಾಟ್ಯಪ್ರಯೋಗಕ್ಕೆ ಸಂಬಂಧಿಸಿದಂತೆ, ಗಾಂಧರ್ವವೆಂದು ಭರತನಿಂದ ಪ್ರಸಿದ್ಧವಾದ ಧ್ರುವಾದಿ ಪ್ರಬಂಧಗಳ ಜಾತಿಗಾನಪದ್ಧತಿಯನ್ನು ಮಾರ್ಗವೆಂದೂ ಗಾನೈಕದೃಷ್ಟಿಯಿಂದ ಮತಂಗನು ನಿರೂಪಿಸಿರುವಂತೆ ಪ್ರಸಿದ್ಧಿಗೆ ಬಂದ ದೇಶೀಯ ಭಾಷಾಪ್ರಬಂಧಗಳ ಲೋಕರೂಢಿಯ ಗಾನಪದ್ಧತಿಯನ್ನು ದೇಶೀ ಎಂದೂ ಸಂಗೀತಶಾಸ್ತ್ರದಲ್ಲಿ ವರ್ಗೀಕರಿಸಿ ವ್ಯವಹರಿಸಲಾಗಿದೆ. ಮತಂಗನು ಗೇಯವಸ್ತುಗಳನ್ನು 'ದೇಶಿಕಾರ' ಪ್ರಬಂಧಗಳೆಂದೇ ಕರೆದಿರುತ್ತಾನೆ. 'ಮಾರ್ಗ–ದೇಶೀ' ಎಂಬ ಭೇದವು ಮೊದಲಾಗಿ ಹುಟ್ಟಿರುವುದು ಪ್ರಾಯಶಃ ಸಂಗೀತ ಪದ್ಧತಿಯಲ್ಲಿ; ಅದೂ ಮತಂಗನ ಬೃಹದ್ದೇಶಿಯ ಅನಂತರ. ಸಾಹಿತ್ಯಕ್ಕೆ ಇದು ಆಮೇಲೆ ಅನ್ವಯಿಸಲ್ಪಟ್ಟುದಿರಬೇಕೆಂದು ಊಹಿಸಲು ನ್ಯಾಯವಿದೆ. ಮೂಲತಃ ವೈದಿಕ ಛಂದಸ್ಸುಗಳಿಂದ ವಿಕಾಸಗೊಂಡ ನಾನಾವಿಧ ವೃತ್ತಜಾತಿಗಳಲ್ಲಿ ಅರ್ಥಕ್ಕೆ ಭಂಗವಾಗುವಷ್ಟು ವಿಕಾರಗೊಳಿಸದೆ ತಾಳಕ್ಕೆ ಹೊಂದಿಸಿ ಹಾಡಲು ಯೋಗ್ಯವಾದವುಗಳೆಂದು ಭರತನು ಆಯ್ದುಕೊಂಡಿರುವ ಸಂಸ್ಕೃತ ಹಾಗೂ ಪ್ರಾಕೃತ ಛಂದಸ್ಸುಗಳೇ ಮಾರ್ಗಸಂಗೀತದ ಗೇಯವಸ್ತುಗಳೆಂದು ಪ್ರಸಿದ್ಧವಾದ "ಸಪ್ತರೂಪಾಂಗದ ಧ್ರುವಾಗೀತೆಗಳಾಗಿವೆ. ದೇಶಭಾಷೆಯ ಕಾವ್ಯಾದಿಗಳಲ್ಲಿ ಪ್ರರೂಢವಾಗಿದ್ದ ದೇಶೀಯ ಛಂದೋಬಂಧಗಳು ಮತಂಗಾದಿಗಳ ದೇಶೀ ಸಂಗೀತ ಪದ್ಧತಿಯಲ್ಲಿ ಗೇಯ ಪ್ರಬಂಧಗಳಾಗಿದ್ದುವು. ನಾಗವರ್ಮ ಜಯಕೀರ್ತಿಗಳ ಛಂದೋಗ್ರಂಥಗಳ ಕರ್ಣಾಟಕ ವಿಷಯ ಜಾತಿವಿಭಾಗದಲ್ಲಿ ಕಾಣದಿರುವ ಕೆಲವು ಛಂದಸ್ಸುಗಳು (ವರ್ಣ, ವರ್ಣಸರ, ಶುಕಸಾರಿಕೆ, ಶುಕಚಂಚು ಇತ್ಯಾದಿ) ಮತಂಗ ಶಾರ್ಙ್ಗದೇವಾದಿಗಳ ಸಂಗೀತಶಾಸ್ತ್ರಗ್ರಂಥಗಳಲ್ಲಿ ಲಕ್ಷಣೋಕ್ತವಾಗಿವೆ. ನಾಗವರ್ಮ

ಜಯಕೀರ್ತಿಗಳ ಕಾಲಕ್ಕೆ ಸಾಹಿತ್ಯದ ಲಕ್ಷ್ಯಮಾರ್ಗದಲ್ಲಿ ಅವು ಪ್ರಾಕ್ಪ್ರಸಿದ್ಧವೋ ನಾಮಾವಶಿಷ್ಟವೋ ಆಗಿರಬೇಕು. ಕರ್ಣಾಟಕ ವಿಷಯ ಜಾತ್ಯಧಿಕಾರದ ಕೊನೆಯಲ್ಲಿ

> " ಕಿಮೇತಾವಂತಿ ಪದ್ಯಾನಿ ಚೇಹಾನುಕ್ತಾನ್ಯನೇಕಧಾ ।
> ಸಂತಿ ಷಟ್ಪ್ರತ್ಯಯೇತಾನಿ ದೃಶ್ಯಂತೇ ಸೂಚಿತಾನಿಚ ॥ "

ಎಂದಿರುವ ಜಯಕೀರ್ತಿಯ ಮಾತಿನಿಂದ ಪ್ರಾಕ್ಪ್ರಸಿದ್ಧವಾದ ಛಂದೋಬಂಧಗಳು ಕೆಲವಿದ್ದುವೆಂದು ವ್ಯಕ್ತವಾಗುವುದಷ್ಟೆ? ನಾಗವರ್ಮ, ಜಯಕೀರ್ತಿಗಳು ಕೊಟ್ಟಿರುವ ಕೆಲವೇ ಕನ್ನಡ ಛಂದಸ್ಸುಗಳಲ್ಲಿಯಾದರೂ ಎಲ್ಲವೂ ನಮ್ಮ ಪಂಪಾದಿಗಳ ಕಾವ್ಯಗಳಲ್ಲಿ ಕಾಣುವುದಿಲ್ಲ.

ಹೀಗೆ ಹೆಸರು ಮಾಸಿದ ಛಂದಸ್ಸುಗಳಲ್ಲಿ ಏಳೆಯೂ ಒಂದು. ನಾಗವರ್ಮ ಜಯಕೀರ್ತಿಗಳಿಬ್ಬರೂ ಇದರ ಲಕ್ಷಣವನ್ನು ಹೇಳಿರುತ್ತಾರೆ. ಈ ಲಕ್ಷಣಗಳು ಒಂದರಿಂದೊಂದು ಭಿನ್ನವಾಗಿವೆ, ಎಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಜಯಕೀರ್ತಿಯು ತ್ರಿಪದಿಯ ಮೂಲಕ ಇದರ ಲಕ್ಷಣವನ್ನು ಕೊಟ್ಟಿದ್ದಾನೆ; ಎಂದರೆ ತ್ರಿಪದಿಯ ನಾಲ್ಕನೆಯ ಪಾದವನ್ನು ಬಿಟ್ಟರೆ ಏಳೆಯಾಗುತ್ತದೆ ಎಂದಿದ್ದಾನೆ. ಆ ಲಕ್ಷಣವು ಹೀಗಿದೆ:

> " ತ್ರಿಪದೀ ತೃತೀಯಾಂಘ್ರಾ
> ವಪಮುಂಚತ್ಯೇ ಲೇತಿ
> ಸುಪಠಿತಾ ಗೇಯವಿದಜನ್ಯೈಃ "

ನಾಗವರ್ಮನ ಲಕ್ಷಣ ಪದ್ಯವು ಹೀಗಿದೆ:

> " ಭುಜಗಪಕ್ಷ ಪುರಗಣ
> ವ್ರಜದೊಳಾರರೊಳಕ್ಕು
> ಮಜಗಣೇಳೆಗಿಭಗತೀ "

ಮುದ್ರಿತ ಛಂದೋಂಬುಧಿಯಲ್ಲಿರುವ ಈ ಪದ್ಯವು ಜಯಕೀರ್ತಿಯ ಲಕ್ಷಣಕ್ಕಿಂತ ಸ್ವಲ್ಪ ಭಿನ್ನವಾಗಿರುವುದೆಂದು ಕಾಣುವುದೇನೋ ನಿಜ. ಆದರೆ ಈ ಪದ್ಯಕ್ಕೆ ಸರಿಯಾದ ಅರ್ಥವಾಗದಿರುವುದರಿಂದಲೂ ಗಣಭಂಗ, ಯತಿಭಂಗವಿದ್ದಂತೆ ತೋರುವುದರಿಂದಲೂ ಇದರಲ್ಲಿ ಏನೋ ಪಾಠದೋಷ ಅಥವಾ ಲಿಪಿದೋಷವಿದೆ ಎಂಬ ಅನುಮಾನವಾಗುತ್ತದೆ. ಲಕ್ಷಣ ಪದ್ಯವೇ ಲಕ್ಷ್ಯವಾಗಿರುವ ಇದರಲ್ಲಿ 'ಗಣವ್ರಜ' ಎಂಬ ಪದದ ಹಿಂದಿರುವ ಮೂರು ಪದಗಳು ಆ ಬಂಧದಲ್ಲಿರುವ ಗಣಸಂಖ್ಯೆಯನ್ನು ತಿಳಿಸಬೇಕೆಂಬುದರಲ್ಲಿ ಸಂದೇಹವಿಲ್ಲ. ಮತ್ತು ಭುಜಗ, ಪಕ್ಷ, ಪುರ ಎಂಬ ಪದಗಳು ಕ್ರಮವಾಗಿ ಮೂರು ಪಾದಗಳಲ್ಲಿರುವ ಗಣಸಂಖ್ಯೆಯನ್ನು ಸೂಚಿಸಬೇಕು. ಇತರ ಛಂದಸ್ಸುಗಳ ಲಕ್ಷಣಗಳಲ್ಲಿ ಆತನು ಈ ಕ್ರಮವನ್ನು

ಅನುಸರಿಸಿದ್ದಾನೆ ಎನ್ನುವಾಗ ಇಲ್ಲಿ 'ಭುಜಗ' ಪದವು ಸೂಚಿಸುವ ಪ್ರಥಮ ಪಾದದ ಗಣಸಂಖ್ಯೆ ಯಾವುದು ? 'ಭುಜಗ' ಎಂಬುದು ಸಮಯ ಪ್ರಸಿದ್ಧವಾದ ಸಂಖ್ಯಾಸೂಚಕ ಪದ ಪ್ರಾಯಶಃ ಅಲ್ಲ; ಒಂದು ವೇಳೆ ಆಗಿರಬಹುದೆಂದೆಣಿಸಿದರೂ ಪ್ರಸಿದ್ಧ ಭುಜಗರಾಜನಾದ ಮಹಾಶೇಷನೆಂಬರ್ಥವಾದರೆ, ಅದು ಸೂಚಿಸುವ ಸಂಖ್ಯೆ ೧. ಇದಲ್ಲದೆ ಜ್ಯೋತಿಃಶಾಸ್ತ್ರದಲ್ಲಿ ಪ್ರಸಿದ್ಧ ಭುಜಂಗಮನೆಂದರೆ ರಾಹು. ಆ ಅರ್ಥದಲ್ಲಿ ಸೂಚಿತವಾಗುವ ಸಂಖ್ಯೆಯಾದರೆ ೮. ಇವೆರಡೂ ಸಂಖ್ಯೆಗಳೂ ಈ ಲಕ್ಷ್ಯಕ್ಕೆ ಹೊಂದುವುದಿಲ್ಲವೆಂಬುದು ಸ್ಪಷ್ಟ. ಆದುದರಿಂದ ಭುಜಗ ಎಂಬ ಪದದಲ್ಲಿ ದೋಷವಿರಬೇಕು. ಪ್ರಾಸಬದ್ಧವಾಗಿರುವ ಈ ಪದ್ಯದ ಮೂರು ಪಾದಗಳಲ್ಲಿಯೂ ಜಕಾರವು ದ್ವಿತೀಯಾಕ್ಷರವಾದುದರಿಂದ ಮೊದಲ ಪಾದಾರಂಭದ 'ಭುಜ' ಎಂಬ ಅಕ್ಷರಗಳು ತಪ್ಪಾಗಿರಲಾರವು ಎಂದೆಣಿಸಬಹುದು. ಅವೆರಡು ಅಕ್ಷರಗಳೇ ಅರ್ಥವತ್ತಾದ ಒಂದು ಪದವೂ ಆಗಿದೆ. ಇದಕ್ಕೆ ಸೇರಿಕೊಂಡು ಸರ್ಪ ಎಂಬ ಅರ್ಥಕ್ಕೆ ಕಾರಣವಾಗುವ 'ಗ' ಕಾರವನ್ನು ಲೋಪಿಸಿದ್ದಾದರೆ ಆಗ ಈ ಪ್ರಥಮ ಪಾದವು 'ಭುಜಪಕ್ಷ, ಪುರಗಣ' ಎಂದಾಗುವುದು. ಲಕ್ಷಣದಲ್ಲಿರಬೇಕಾಗುವಂತೆ ಎರಡು ವಿಷ್ಣುಗಣಗಳೂ ಸರಿಯಾಗುವವು. 'ಭುಜ' ಎಂಬುದು 'ಪಕ್ಷ' ಎಂಬಂತೆ ಎರಡು ಎಂಬ ಸಂಖ್ಯೆಯನ್ನು ಸೂಚಿಸುವ ಪ್ರಸಿದ್ಧ ಪದವೂ ಹೌದು. ಈಗ ಮೊದಲ ಎರಡು ಪಾದಗಳಲ್ಲಿ ಭುಜ, ಪಕ್ಷ ಸಂಖ್ಯೆಯ ಎಂದರೆ ಎರಡು ಮತ್ತು ಎರಡು ಗಣಗಳಿರಬೇಕೆಂದಾಯಿತು. ಮೂರನೆಯ ಪಾದದಲ್ಲಿ ಪುರಸಂಖ್ಯೆಯ ಎಂದರೆ ಮೂರು ಗಣಗಳಿರಬೇಕು ; ಮತ್ತು ಆ ಪಾದದ ಎರಡನೆಯ ಗಣವು, ಆ ಲಕ್ಷಣ ಪದ್ಯದಲ್ಲಿ ಹೇಳಿರುವಂತೆ ಗಣವ್ರಜದಲ್ಲಿ ಆರನೆಯದು, ಬ್ರಹ್ಮಗಣವಾಗಿರಬೇಕು. ಇಲ್ಲಿಯೂ ಗಣಭಂಗವಿದೆ. 'ಗಣೇಳೆ' ಎಂಬಲ್ಲಿ ಸಂಧಿ ದೋಷವೂ ಇದೆ, ಒಂದು ಮಕಾರ ಅಲ್ಲಿ ಲೋಪವಾಗಿದೆ ಎಂದು ನ್ಯಾಯವಾಗಿ ಅನುಮಾನಿಸಬೇಕು: 'ಅಜಗಣೇಳೆಗಿಭಗತೀ' ಎಂಬಲ್ಲಿ 'ಅಜಗಣಮೇಳೆಗಿಭಗತೀ' ಎಂದಾದರೆ, ಅರ್ಥ, ಯತಿ, ಗಣ ಎಲ್ಲವೂ ಸರಿಯಾಗುವುವು. ಶುದ್ಧಪಾಠ ಹೀಗಿದ್ದಿರಬೇಕು (ಛಂದೋಂಬುಧಿಯಲ್ಲಿ 'ಚಿತ್ರ' ಎಂಬ ಛಂದಸ್ಸಿಗೆ ಕೊಟ್ಟಿರುವ ಲಕ್ಷಣದಲ್ಲಿಯೂ ಭುಜ ಎಂದಿರಬೇಕಾದಲ್ಲಿ 'ಗ'ಕಾರ ಸೇರಿಕೊಂಡು 'ಭುಜಗ' ಎಂದಾಗಿ ಅಪಾರ್ಥಕ್ಕೆಡೆಯಾಗಿದೆ). ಹೀಗಾಗುವಾಗ ಜಯಕೀರ್ತಿ ಹೇಳಿದ ಲಕ್ಷಣಕ್ಕಿಂತ ಇದು ಭಿನ್ನವೆಂದಾಗುವುದಿಲ್ಲ. ತ್ರಿಪದಿಯ ನಾಲ್ಕನೆಯ ಪಾದವನ್ನು ಬಿಟ್ಟರೆ ಉಳಿಯುವುದು ಇಷ್ಟು ತಾನೆ ? ಮೊದಲ ಮತ್ತು ಎರಡನೆಯ ಪಾದಗಳಲ್ಲಿ ಎರಡೆರಡು ವಿಷ್ಣುಗಣ. ಮೂರನೆಯ ಪಾದದಲ್ಲಿ ಎರಡು ವಿಷ್ಣುಗಣಗಳ ಮಧ್ಯದಲ್ಲಿ ಒಂದು ಬ್ರಹ್ಮಗಣ. ಒಟ್ಟು ಗಣಸಂಖ್ಯೆ ಏಳು. ಇದು ಆ 'ಏಲೆ'ಯ ಲಕ್ಷಣ.

ಜಯಕೀರ್ತಿ ಹೇಳುವ ಲಕ್ಷಣದಲ್ಲಿ ಒಂದು ವಿಶೇಷ ಸೂಚನೆ

ಕಾಣುತ್ತದೆ. "ಏಲೇತಿಸುಪರಿತಾಗೇಯವಿದಜನೈಃ' ಎಂದಿರುತ್ತಾನೆ. ಸಂಗೀತ ತಜ್ಞರು ಹೀಗೆ ಹೇಳುತ್ತಾರೆ ಎಂಬ ವಿಶೇಷೋಕ್ತಿ ಇರುವುದರಿಂದ, ಇದು ಸಂಗೀತದಲ್ಲಿ ಪ್ರಸಿದ್ಧವಾಗಿರುವ ಬಂಧ ಎಂಬ ಅನುಮಾನ ಹುಟ್ಟುತ್ತದೆ. ಸಂಗೀತಶಾಸ್ತ್ರ ಗ್ರಂಥಗಳನ್ನು ಪರಿಶೀಲಿಸಿದರೆ ಜಯಕೀರ್ತಿಯ ಈ ಮಾತಿಗೆ ನಿಜವಾಗಿ ಅರ್ಥವಿದೆ ಎಂದು ಕಾಣುವುದು. ಪ್ರಸಿದ್ಧ ಸಂಗೀತಶಾಸ್ತ್ರ ಗ್ರಂಥಗಳೆಲ್ಲ ಗೇಯಪ್ರಬಂಧಗಳಲ್ಲಿ ಏಲೆಗೆ ವಿಶೇಷ ಮಹತ್ತ್ವವನ್ನು ಕೊಟ್ಟಿವೆ. ನಾಗವರ್ಮನಿಗಿಂತ ಎಷ್ಟೋ ಪೂರ್ವದಲ್ಲಿಯೇ ಕರ್ಣಾಟಕ ಏಲೆಯು ದೇಶೀಯ ಸಂಗೀತದಲ್ಲಿ ಸರ್ವಪ್ರಧಾನವಾದ ಗೇಯವಸ್ತುವಾಗಿತ್ತೆಂದು ಮತಂಗನ ಬೃಹದ್ದೇಶಿಯಿಂದ ತಿಳಿಯಬಹುದಾಗಿದೆ. 'ವಲ್ಲಭಾದಿ ಪೂರ್ವಾಚಾರ್ಯರೂ' ಬಹುವಿಧವಾದ ಏಲೆಗಳನ್ನು ಹೇಳಿರುವರೆಂದೂ ಏಲೆ ಎಂಬುದು 'ಬಹುಭೇದಪ್ರವಿಸ್ತರ'ವಾಗಿದೆ ಎಂದೂ ಹೇಳುತ್ತಾನೆ. ತನ್ನ ಗ್ರಂಥದಲ್ಲಿ ಮೂವತ್ತೆಂಟು ಏಲಾಭೇದಗಳನ್ನು ಲಕ್ಷಣಿಸಿದ್ದಾನೆ. ಮತ್ತು ಏಲೆಯನ್ನು ಕುರಿತಾಗಿ 'ಸಾ ಏಕೈವಹಿಗಾತವ್ಯಾಗೀತಜ್ಞೈರ್ಗೀತ ವಸ್ತುಷು' ಎಂದಿದ್ದಾನೆ. ಅನಂತರ ಚಾಲುಕ್ಯ ಸೋಮೇಶ್ವರ ಪಾರ್ಶ್ವದೇವಾದಿಗಳು ಇನ್ನೂ ಅನೇಕ ಭೇದಗಳನ್ನು ಹೇಳಿದ್ದಾರೆ. ಸೋಮೇಶ್ವರನು ಕೆಲವಕ್ಕೆ ಲಕ್ಷ್ಯವನ್ನೂ ಕೊಟ್ಟಿದ್ದಾನೆ. ಇವನ ಮಗನಾದ ಜಗದೇಕಮಲ್ಲನ 'ಸಂಗೀತ ಚೂಡಾಮಣಿ' ಗ್ರಂಥದಿಂದ, ಏಲೆಗೆ ಆಗಲೂ ಅದೆಷ್ಟು ಪ್ರಾಧಾನ್ಯವಿತ್ತೆಂದು ತಿಳಿಯಬಹುದು. 'ಏಲಯಾವಿರಹಿತೇ ಸೂಡೋ ನಧತ್ತೇ ಶ್ರಿಯಂ' ಎಂದಿರುವ ಈತ ಅದೊಂದು ಪ್ರಬಂಧವನ್ನು ವಿಶೇಷವಾಗಿ ಹೀಗೆ ವರ್ಣಿಸಿದ್ದಾನೆ—

'ರಾಗೋ ಮೂಲಂ ಪೃಥುರ ನುಘಸ್ಕಂಧ ದೇಶಾಚಕಾಲಾಃ
ಶಾಖಾಬಂಧಾಃ ಪದಸಮುದಯಃ ಪಲ್ಲವಾಸ ಪ್ರಯೋಗಾಃ
ವರ್ಣಾಃ ಪುಷ್ಪಸ್ತ ಬಕ ನಿವಹೋ ಯಸ್ಯ ಸೋಽಯಂ ಪ್ರಸೂತೇ
ಸ್ವಾದಿಷ್ಠಂ ಲಃ ಫಲ (ಪದ) ಮುಮುಪಮುಂ ಗೀತಶಾಖೀ ವಿಶಾಲಃ |'

ಏಲಾ ಭೇದಗಳ ಲಕ್ಷಣ ವಿಸ್ತಾರವಾಗಿರುವುದು ಶಾರ್ಙ್ಗದೇವನ ಸಂಗೀತ ರತ್ನಾಕರದಲ್ಲಿ. ಆತ ಗೇಯ ಪ್ರಬಂಧಗಳನ್ನು 'ಶುದ್ಧ ಸೂಡ', 'ಸಾಲಗ ಸೂಡ' ಎಂಬ ಎರಡು ಮುಖ್ಯ ಭೇದಗಳನ್ನಾಗಿ ವರ್ಗೀಕರಿಸಿದ್ದಾನೆ. 'ಸೂಡ' ಎಂಬುದು ಪ್ರಬಂಧ ಸಾಮಾನ್ಯವೆಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿರುವ ಕನ್ನಡ ಪದ. ಏಲೆಯು ಶುದ್ಧ ಸೂಡಗಳಲ್ಲಿ ಪ್ರಥಮವೂ ಪ್ರಧಾನವೂ ಆದ ಪ್ರಬಂಧವೆಂಬುದು 'ಏಲಾದಿಃ ಶುದ್ಧ ಇತ್ಯುಕ್ತೋ ಧ್ರುವಾದಿಃ ಸಾಲಗೋಮತಃ' ಎಂಬ ಸಂಗೀತರತ್ನಾಕರದ ಲಕ್ಷಣದಿಂದ ವ್ಯಕ್ತವಾಗುವುದು. 'ಸಾಲಗ'ವು 'ಛಾಯಾಲಗ' ಪದದ ಅಪಭ್ರಂಶವೆಂದು ಲಕ್ಷಣಗ್ರಂಥಗಳಲ್ಲಿ ಹೇಳಲಾಗಿದೆ. ಎಂದರೆ ಏಲಾದಿ ಪ್ರಬಂಧಗಳ ಮಾದರಿಯಲ್ಲಿಯೆ ರಚಿಸಿದ ಮತ್ತು ಹಾಡತಕ್ಕ ಲಕ್ಷಣದಲ್ಲಿ

ಅಷ್ಟೇ ಹೃತ್ಕರ್ಣಮನೋಹರವಾದ ಪ್ರಬಂಧ ಎಂದರ್ಥ. ಈ 'ಸೂಳ' ಮತ್ತು 'ಸಾಲಗ' ಶಬ್ದಗಳ ನಿಷ್ಪತ್ತಿಯ ಕುರಿತು ಡಿ. ಟಿ. ಎಸ್. ವೆಂಕಣ್ಣಯ್ಯನವರ ಸ್ಮಾರಕಗ್ರಂಥ 'ಸವಿನೆನಪು'ದಲ್ಲಿ ನನ್ನ ಲೇಖನವಿರುವುದನ್ನು ನೋಡಬಹುದು. ಸಂಗೀತ ರತ್ನಾಕರದಲ್ಲಿ 'ಏಲಾನಾಂ ಬಹವಸ್ಸಂತಿ ವಿಶೇಷಾಸ್ತೇಷು ಕೇಚನ| ವ್ಯಕ್ತ್ಯೈಯೋಗ್ಯಾನಿರೂಪ್ಯಂತೇ ಮತಂಗಾದಿ ಮತೋದಿತಾಃ' ಎಂದು ಕೆಲವೊಂದು ವಿಶೇಷ ಭೇದಗಳನ್ನು ಮಾತ್ರ ತಾನು ಕೊಟ್ಟಿರುವುದಾಗಿ ಹೇಳಿದ ಶಾರ್ಙ್ಗದೇವ ೨೫೬ ಏಲಾಭೇದಗಳನ್ನು ಲೆಕ್ಕಿಸಿದ್ದಾನೆ—

> "ಷಟ್ಪಂಚಾಶದ್ಯುತಂ ಪ್ರೋಕ್ತಮೇಲಾನಾಂ ಶತದ್ವಯಂ
> ಅನಂತತ್ವಾತ್ತು ಸಂಕೀರ್ಣಾ ನಸಂಖ್ಯಾತಿ ಹರಿಪ್ರಿಯಃ" ಎಂದಿದೆ.

ಸಂಗೀತದ ಲಕ್ಷ್ಯಮಾರ್ಗದಲ್ಲಿ ದಿನದಿನಕ್ಕೆ ಹೊಸ ಹೊಸ ಪ್ರಯೋಗಗಳಾಗಿ ಸ್ವಭಾವತಃ ವಿಸ್ತರಿಸಿರುವಷ್ಟು ಗಾನಕ್ರಮಾನುಗತವಾದ ತಾಂತ್ರಿಕ ಭೇದಗಳು ಕಾವ್ಯಾದಿಗಳಲ್ಲಿರಲಾರವೆಂಬುದು ಸಹಜ. ಉದಾಹರಣೆಗಾಗಿ ಕರ್ಣಾಟಕ ಭಾಷಾ ರಚನೆ ಎಂದೇ ಹೇಳಿರುವ ಕಂದಭೇದಗಳು ಸಂಗೀತಶಾಸ್ತ್ರದಲ್ಲಿ ಹಲವಿವೆ. "ಏಕೋನ ತ್ರಿಂಶದಾಖ್ಯಾತಾಃ ಕಂದ ಭೇದಾಃಪುರಾತನೈಃ" ಎಂದು ಶಾರ್ಙ್ಗದೇವ ಹೇಳುತ್ತಾನೆ. ನಮ್ಮ ಕಾವ್ಯಾದಿಗಳಲ್ಲಿ ಅಥವಾ ಛಂದೋಗ್ರಂಥಗಳಲ್ಲಿ ಕಾಣುವ ಕಂದ ಒಂದೇ ವಿಧವಷ್ಟೆ? ಹಾಗೆಯೇ ಪುರಾತನ ಕಾವ್ಯ ಸಾಹಿತ್ಯ ಗ್ರಂಥಗಳಲ್ಲಿ 'ಏಲೆ'ಯೂ ನಾಗವರ್ಮ ಜಯಕೀರ್ತಿಗಳು ಹೇಳಿರುವಂತೆ ಒಂದೇ ವಿಧವಾಗಿದ್ದಿರುವುದರಲ್ಲಿ ಆಶ್ಚರ್ಯವಿಲ್ಲ. ಸಂಗೀತ ಗ್ರಂಥಗಳನ್ನು ಪರಿಶೀಲಿಸಿದಲ್ಲಿ, ಕ್ರಮಶಃ 'ಬಹುಭೇದ ಪ್ರವಿಸ್ತರ'ವಾಗಿ ವಿಕಾಸಗೊಂಡ ಏಲಾ ಪದಗಳಿಗೆಲ್ಲಾ ಆಧಾರವಾದ ಮೂಲ ಏಲೆಯ ಲಕ್ಷಣ ಹೀಗಿದೆ: ಆ ಬಂಧದಲ್ಲಿರುವ ಪಾದಗಳು ಮೂರು. ಪ್ರಥಮ ಪಾದದಲ್ಲಿ ಇರುವ ಪದಗಳು ಎರಡು, ದ್ವಿತೀಯ ಪಾದದಲ್ಲಿ ಮೂರು, ತೃತೀಯಾಂಘ್ರಿಯಲ್ಲಿ ಎರಡು; ಹೀಗೆ ಏಳು ಪದಗಳಿರಬೇಕು. ಮೂರನೆ ಪಾದದ ಕೊನೆಯ ಪದವು ಸಂಬೋಧನಾರ್ಥ ಉಳ್ಳದ್ದಾಗಿರಬೇಕು. (ಈ ಸಂಬೋಧನಾರ್ಥ ಪದವೂ ಸೇರಿ ತೃತೀಯ ಪಾದದಲ್ಲಿ ಪದಗಳು ಮೂರಿರುತ್ತವೆ ಎಂಬ ಮತಾಂತರವೂ ಇದ್ದಂತೆ ತೋರುತ್ತದೆ) ದ್ವಿತೀಯಾಂಘ್ರಿಯ ಮೂರು ಪದಗಳಿಗೆ ಪಲ್ಲವ ಪದಗಳೆಂದು ಹೆಸರು. ಈ ಪದಗಳೂ ಪಾದಗಳೂ ಅನುಪ್ರಾಸಯುಕ್ತವಾಗಿರಬೇಕು. ಹಾಡುವ ಕ್ರಮದಲ್ಲಿ ಪ್ರಥಮಪಾದದ ಎರಡು ಪದಗಳನ್ನು ಉಚ್ಚರಿಸಿ, ಆಮೇಲೆ ಯತ್ಕಿಂಚಿದಕ್ಷರ ಯುಕ್ತವಾಗಿ ಸ್ವಲ್ಪ ರಾಗಾಲಾಪನೆಯನ್ನು ಮಾಡಿ, ಪುನಃ ಅದೇ ಪಾದವನ್ನು ಆರಂಭದಿಂದ ಎತ್ತಿಕೊಂಡು ಎರಡನೆಯ ಪಾದವನ್ನು ಆ ಧಾಟಿಯಿಂದಲೇ ಹಾಡಬೇಕು. ಮೂಲ ಲಕ್ಷಣವಿರುವುದು ಇಷ್ಟು ಮಾತ್ರ. ಗಣ ಮಾತ್ರಾದಿ ಛಂದೋನಿಯಮಗಳಲ್ಲಿ ಇದಕ್ಕೆ ಅನೇಲಾದ

ಸಂಸ್ಕಾರಗಳು. ಮತಂಗನ ಗ್ರಂಥದಲ್ಲಿ ಮೂಲ ಲಕ್ಷಣದ ಈ ಭಾಗವು ಗ್ರಂಥಪಾತದಿಂದಲಾಗಿ ಸುಸ್ಪಷ್ಟವಾಗಿಲ್ಲ, ಅಲ್ಲಿರುವ ತ್ರುಟಿತವಾದ ಭಾಗ ಹೀಗಿದೆ: 'ಆದ್ಯಂ ಪದದ್ವಯಂ ಯತ್ರಸ್ಯಾದನುಪ್ರಾಸವರ್ಧಿತಂ। ಸಾನು ಪ್ರಾಸ ಸ್ತೃತೀಯೋಪಿ ಚತುರ್ಥೋ ವಾಚಗೀಯತೇ। ತ..........ಸಾನು ಪ್ರಾಸಶ್ಚ ಪಂಚಮಃ। ಚತ..................ಯತ್ರ ಪಾದೇ ಪಾದೇ ಭವಂತಿಚ। ಗೀತ್ವಾ ತದೀಯ ಪಾದಾರ್ಧಂ ಅನುಪ್ರಾಸೋ ವಿಧೀಯತೇ। ಯಸ್ಯಾಂ ಭವತಿ? ಗೀತಜ್ಞಾ ಸ್ತಾ ಮೇಲಾಂ ಸಂಪ್ರಚಕ್ಷತೇ। ಸಾ ಏಕೈವ ಹಿ ಗಾತವ್ಯಾ ಗೀತಜ್ಞೈಃ ಗೀತವಸ್ತುಷು। ತ್ರಿಪದಂ ಪಾದ ಸಂಖ್ಯಾನಂ..................ಮೂರ್ಛನಾ....ಬಿಂದು ಸಂಕುಲಂ।'

ಸೋಮೇಶ್ವರ ಹೇಳಿರುವುದು ಹೀಗೆ: "ಸಾನುಪ್ರಾಸಂ ಪದ ದ್ವಂದ್ವಂ ಗಮಕಸ್ತದನಂತರಂ। ತತೋವರ್ಣಾದಿಕ ಪದಮೇಕಮುದ್ಗ್ರಾಹ ಉಚ್ಯತೇ। ಏವ ಮುದ್ಗ್ರಾಹಯುಗಳಂ ತೃತೀಯೇಚ ಪದ ದ್ವಯಂ।" ಇವನು ಕೊಟ್ಟಿರುವ ಲಕ್ಷ್ಯದಿಂದ ಮೊದಲ ಎರಡು ಪಾದಗಳಲ್ಲಿ ಎರಡೆರಡೆ ಪದಗಳಿದ್ದಂತೆ ತೋರುತ್ತದೆ. ಆ ಪಾದಾಂತ್ಯದಲ್ಲಿ ಮಾಡತಕ್ಕ ಪ್ರಯೋಗವೆಂಬ ಗಮಕಾಲಪ್ತಿಗೆ ಮೂರನೆಯ ಪದ ಸೇರತಕ್ಕದ್ದೆಂಬುದರಿಂದ ಬಂಧ ಲಕ್ಷಣದಲ್ಲಿ ಅದನ್ನು ಬಿಟ್ಟಿರಬಹುದೆಂಬುದಕ್ಕೆ ಕಾರಣವಿದೆ. ಶಾರ್ಙದೇವನೂ ಮೂಲ ಲಕ್ಷಣದಲ್ಲಿ ಪದನಿಯಮವನ್ನು ಮಾತ್ರ ಹೇಳಿರುವುದು. ಹೀಗೆ ಇಂತಿಷ್ಟು ಪದಗಳಿರಬೇಕೆಂಬ ನಿಯಮವೊಂದೇ ಮೂಲತಃ ಏಲೆಯ ಲಕ್ಷಣವಾಗಿದ್ದುದರಿಂದ 'ಏಲಾಪದ' ಎಂಬ ಸಾರ್ಥಕವಾದ ಹೆಸರು ಇದಕ್ಕೆ ಪ್ರಸಿದ್ಧವಾಯಿತು. ಕಾಲಕ್ರಮೇಣ ನಾಮೈಕ ದೇಶಗ್ರಹಣವಾಗಿ 'ಏಲಾಪದ' ಎಂಬುದಕ್ಕೆ ಬದಲು ಕೇವಲ 'ಪದ' ಎಂಬ ವ್ಯವಹಾರವೂ ರೂಢಿಯಲ್ಲಿ ಬಂತು—ಸತ್ಯಭಾಮೆಯು ಬರಿಯ 'ಭಾಮೆಯಾದಂತೆ; ಬಲರಾಮ ಬರಿಯ 'ರಾಮ'ನೆಂದಾದಂತೆ. 'ದೇಶ್ಯೈಲಾ ಪದವಾಚ್ಯತ್ವಂ ಭಟತೀತ್ಯವಧಾರ್ಯತಾಂ' ಎಂದು ವೆಂಕಟಮಖಿ ಹೇಳಿದ ಮಾತನ್ನು ಇಲ್ಲಿ ಲಕ್ಷಿಸಬಹುದು.

ಇನ್ನು ಗಣಮಾತ್ರಾದಿ ನಿಯಮಾನುಸಾರ ಪ್ರತ್ಯೇಕವಾಗಿ ವರ್ಣಿಸಲಾದ ಏಲಾ ಭೇದಗಳಲ್ಲಿ ಮುಖ್ಯವಾದವು ರತಿಲೇಖೆ, ಕಾಮಲೇಖೆ, ಬಾಣಲೇಖೆ ಎಂದು ಮೂರು. ಈ ಮೂರರಲ್ಲಿ ರತಿಲೇಖೆಯೇ ಸರ್ವ ಪ್ರಧಾನವಾದುದು. ಲಕ್ಷಣ ಗ್ರಂಥಕಾರರೆಲ್ಲ ಸಂಗೀತ ಪದ್ಧತಿಯಲ್ಲಿ ಇದನ್ನೇ ಮೂಲ ರೂಪವೆಂದು ಗ್ರಹಿಸಿದ್ದಾರೆ. ಈ ಹೆಸರುಗಳೇ ಸೂಚಿಸುವಂತೆ ಇವು ಕ್ರಮವಾಗಿ ಮೂಲತಃ ರತಿ, ಕಾಮ, ಬಾಣ ಎಂಬ ಅಂಶಗಣಬದ್ಧವಾದ ಬಂಧಗಳು. (ಈ ಅಂಶಗಣಗಳು ಸಂಗೀತ ಗ್ರಂಥಗಳಲ್ಲಿ ಮಾತ್ರಾಗಣಗಳೆಂದು ಕರೆಯಲ್ಪಟ್ಟಿವೆ.)

'ರತಿಲೇಖಾರತಿಗಣೈಃ ಕಾಮಲೇಖಾತು ಮಾನ್ಮಥೈ
ಬಾಣಲೇಖಾ ಬಾಣಗಣೈಃ ಚಂದ್ರಲೇಖಾತು ಮಿಶ್ರಿತೈಃ॥'

ನಾಗವರ್ಮನು ರತಿ, ಕಾಮ, ಬಾಣ ಎಂಬ ಈ ಅಂಶಗಣಗಳನ್ನು ಬ್ರಹ್ಮ, ವಿಷ್ಣು,

ರುದ್ರ ಎಂಬ ಸಂಜ್ಞೆಗಳಿಂದ ವ್ಯವಹರಿಸಿದ್ದಾನೆ. ಮತಂಗನಿಂದ ವೆಂಕಟಮುಖಿಯ ವರೆಗಣ ಸಂಗೀತಶಾಸ್ತ್ರಗ್ರಂಥಗಳೆಲ್ಲ ದೇಶೈಲೆಗಳಲ್ಲಿ 'ರತಿಲೇಖೆ'ಯೇ ಮೂಲವೂ ಪ್ರಾಧಾನವೂ ಆದುದೆಂದು ಪರಿಗಣಿಸಿವೆ. ಶುದ್ಧಸೂಡಗಳ ಪ್ರಸಿದ್ಧಿಯಳಿಯುತ್ತ ಸಾಲಗ ಸೂಡಗಳು ಮುಂದೆ ಬಂದಿರುವ ವೆಂಕಟಮುಖಿಯ ಕಾಲದಲ್ಲಿ ಸಹ 'ರತಿ ಲೇಖೆ'ಯೊಂದು ಉಳಿದಿತ್ತು ಎಂದು ಅವನ ಗ್ರಂಥದಿಂದ ತಿಳಿಯುತ್ತದೆ. ಶಾರ್ಙ ದೇವಾದಿಗಳು ಹೇಳಿದ ಇತರ ಏಲಾ ಭೇದಗಳನ್ನೆಲ್ಲಾ ಪ್ರಾಕ್ಪ್ರಸಿದ್ಧ ಅಥವಾ ರೂಢಿ ಬಾಹಿರವೆಂದು ಕಡೆಗಣಿಸಿದ ಈತ ಇದನ್ನೊಂದನ್ನು ಮಾತ್ರ ಲಕ್ಷಣಿ ಸಿದ್ದಾನೆ. ಈ ಕುರಿತು ಆತನ ಹೇಳಿಕೆ ಹೀಗಿದೆ—

'ಏಲಾಸ್ತು ಬಹವಃಸಂತಿ ಮತಂಗಾದ್ಯಾಗವೋದಿತಾಃ |
ಶ್ರೀಮತಾ ಶಾರ್ಙದೇವೇನ ಸಂಕ್ಷಿಪ್ಯೋಕ್ತಾ ಸುತಾಃಪುನಃ |
ಇದಾನೀಂ ನೈವ ಲಕ್ಷ್ಯೇ ತಾಃ ಸಂಲಕ್ಷ್ಯಂ ತೇಪಿ ಕುತ್ರಚಿತ್ |
ಇತ್ಯ ಸ್ಮಾಭಿರ್ವಿ ಸೃಜ್ಯೈತಾ ಮಾತ್ರೈಲಾ ಪ್ರತಿಪಾದ್ಯತೇ |
ರತಿಲೇಖಾಭಿಧಾನೈಕಾ ಮಾತ್ರೈಲಾ ಪಾರ್ವತೀಮತಾ |'

ಹೀಗೆ ಪದನಿಯಮವೊಂದೇ ಲಕ್ಷಣವಾಗಿದ್ದ ಏಲೆಯ ಮೂಲಸ್ವರೂಪಕ್ಕೆ ಅಂಶ ಗಣಾನ್ವಯವಾದ ಛಂದಸ್ಸಂಸ್ಕಾರದಂತೆ ರತಿಲೇಖೆ ಕಾಮಲೇಖೆ ಇತ್ಯಾದಿ ಹೆಸರಾಯಿತು. ಆ ಲಕ್ಷಣದಂತೆ ಮೂರು ಪಾದಗಳಲ್ಲಿ ಒಟ್ಟು ಆರು ಅಥವಾ ಏಳು (ಎಂಟು ಎಂಬ ಮತಭೇದವೂ ಇದೆ) ಪದಗಳಿದ್ದ ಆ ಬಂಧವು ರತಿಗಣಬದ್ಧ ವಾಗಿರಬೇಕು ಎಂಬುದಾಗಿ ಮೂಲ ಲಕ್ಷಣವಿದ್ದರೂ ಕ್ರಮೇಣ ಲಕ್ಷ್ಯ ಮಾರ್ಗದಲ್ಲಿ ಇತರ ಗಣಗಳೂ ಮಿಶ್ರವಾಗುತ್ತ ಬಂದುವು. ಪದಸಂಖ್ಯಾನಿಯಮವೂ ಶಿಥಿಲ ವಾಯಿತು. ಅಂಶಗಣಾನ್ವಯವಾದ ಈ ಬಂಧಕ್ಕೆ ನಿಬದ್ಧ ಗಾನ ಕ್ರಮದಲ್ಲಿ ಒಂದು ಸ್ಥಿರವಾದ ಸ್ವರೂಪವನ್ನು ಉಳಿಸುವ ಪ್ರಯತ್ನವಾಗಿ ಗಣನಿಯಮದೊಂದಿಗೆ ಮಾತ್ರಾನಿಯಮವೂ ಅವಶ್ಯವೆಂದು ವಿಧಿಸಲ್ಪಟ್ಟಿತು. ಈ ಅಂಶಗಳಲ್ಲಿ ಮಾತ್ರಾ ಸಂಖ್ಯೆಯು ಹೆಚ್ಚು ಕಡಮೆಯಾಗಿರುತ್ತದೆ. ಎಂದರೆ, ಬ್ರಹ್ಮಗಣದಲ್ಲಿ (ರತಿಗಣ) ಮೂರು ಅಥವಾ ನಾಲ್ಕು ಮಾತ್ರೆಗಳಿರಬಹುದು; ವಿಷ್ಣುಗಣದಲ್ಲಿ (ನಾಮಗಣದಲ್ಲಿ) ನಾಲ್ಕು, ಐದು ಅಥವಾ ಆರು ಮಾತ್ರೆಗಳಿರುತ್ತವೆ; ಬಾಣಗಣದಲ್ಲಿ ಹೆಚ್ಚೆಂದರೆ ಎಂಟು, ಕಡಿಮೆ ಎಂದರೆ ಐದು ಮಾತ್ರೆಗಳಿರುತ್ತವೆ. ಹಾಗಾಗಿ ಗಣನಿಯಮವು ಸರಿಯಾಗಿರುವ ಪದ್ಯಗಳಲ್ಲಿ ಅಥವಾ ಪಾದಗಳಲ್ಲಿ ಮಾತ್ರಾಸಂಖ್ಯೆಯಲ್ಲಿ ವ್ಯತ್ಯಾಸ ವಾಗುತ್ತದೆ. ಮಾತ್ರಾಸಂಖ್ಯೆ ಹೆಚ್ಚುಕಡಮೆಯಾದರೆ ತಾಳಕ್ಕೆ ವಿಷಮ ವಾಗುತ್ತದೆ. ಹಾಗಾಗಿ ಪ್ರತಿ ಪಾದದಲ್ಲಿ ಇಂತಿಷ್ಟೇ ಮಾತ್ರೆಗಳಿರಬೇಕೆಂದು ವಿಧಿಸುವುದು ಅನಿವಾರ್ಯವಾಯಿತು. ಹಾಗೆನ್ನುವಾಗ ಇಲ್ಲಿ ಒಂದು ಸಂದೇಹ ಬರಬಹುದು. ಏನೆಂದರೆ ಮುಂದೆ ಹೇಳುವಂತೆ ರತಿಲೇಖೆಯ ಪಾದಗಳಲ್ಲಿ

೧೧ ರಂತೆ ಮಾತ್ರೆಗಳಿರಬೇಕೆಂಬ ಲಕ್ಷಣವಿದೆ; ಈ ಹನ್ನೊಂದು ಮಾತ್ರೆಗಳು ಸರಿಹೊಂದುವ ತಾಳವಿದೆಯೆ? ಎಂದು. ಇದಕ್ಕೆ ಸಮಾಧಾನವೇನೆಂದರೆ: ಹನ್ನೊಂದು ಮಾತ್ರೆಗಳು ತಾಳಕ್ಕೆ ವಿಷಮವೆಂಬುದು ನಿಜ. ಇಲ್ಲಿ ಉದ್ದೇಶ ಪೂರ್ವಕವಾಗಿಯೇ ಹನ್ನೊಂದು ಮಾತ್ರೆಗಳನ್ನಿಟ್ಟಿರುವುದಾಗಿದೆ. ಕಾರಣ–ಎಲಾ ಬಂಧಗಳನ್ನು ಅತೀತ ಅಥವಾ ಅನಾಗತ ಗ್ರಹಗಳಲ್ಲಿಯೇ ಹಾಡಬೇಕೆಂಬ ನಿಯಮವಿರುವುದರಿಂದ ಇಲ್ಲಿ ತಾಳಕ್ಕೆ ವೈಷಮ್ಯ ವುಂಟಾಗುವಂತಿಲ್ಲ. ಅನಾಗತ ಗ್ರಹವೆಂದರೆ ಗೀತಕ್ಕೆ ಮೊದಲೇ ತಾಳದ ಘಾತ ಬೀಳುವುದು; ಅತೀತ ಗ್ರಹವೆಂದರೆ ಗೀತಾರಂಭವಾದ ಮೇಲೆ ತಾಳಾರಂಭ ವಾಗುವುದು. 'ಗೀತಾತೀತೇತ್ವತೀತಃ ಸ್ಯಾತ್ತಾಳಾತೀತೇತ್ವನಾಗತಃ'. ಅತೀತಗ್ರಹವಾದರೆ ತಾಳಕ್ಕೆ ಸಿಕ್ಕುವ ಮಾತ್ರೆಗಳು ೧೦. ತಾಳದ ಪೆಟ್ಟು ಬಿದ್ದಮೇಲೆ ಗೀತವನ್ನು ಎತ್ತುವ ಅನಾಗತಗ್ರಹದಲ್ಲಿಯಾದರೆ ತಾಳಕ್ಕೆ ಸಿಕ್ಕುವ ಮಾತ್ರೆಗಳು ೧೨. ಆದುದರಿಂದ ೧೧ ಮಾತ್ರೆಗಳ ನಿಯಮವನ್ನು ಇಲ್ಲಿ ಉದ್ದೇಶಪೂರ್ವಕವಾಗಿಯೇ ವಿಧಿಸಿರುವುದೆಂದು ತಿಳಿಯಬಹುದು.
ಸಂಗೀತರತ್ನಾಕರದ ಆ ಗ್ರಹಲಕ್ಷಣವು ಹೀಗಿದೆ :

ಗೇಯೋ ವಾಕ್ಗೇಯ ಕಾರೇಣಸ್ವಾಭಿಧಾನ ವಿಭೂಷಿತಃ|
ಪ್ರಸಗೀರ್ಣತ್ವಾಪಧ್ರುವೇ ತ್ಯಾಗೋಗ್ರಹಸ್ತು ವಿಷಮೋಭವೇತ್ ||

ಕಲ್ಲಿನಾಥನ ವ್ಯಾಖ್ಯಾನ: ಗ್ರಹಃ ಸಮಾತೀತಾನಾಗತ ಭೇದೇನ ತ್ರೇಧಾ ವಕ್ಷ್ಯತೇ, ತುಶಬ್ದಃ ಪ್ರಬಂಧಾಂತರಾದಸ್ಯ ವಿಶೇಷದ್ಯೋತನಾರ್ಥಃ| ಪ್ರಬಂಧಾಂತರೇಷು ಗ್ರಹಾಣಾಮನಿಯಮಃ ಅತ್ರ ನಿಯಮ ಇತಿ ವಿಶೇಷಃ| ವಿಷಯೋಭವೇದಿತಿ| ವಿಷಮಃ ಸಮಾದನ್ಯೋ ಅತೀತಾನಾಗತಯೋರೇಕತರ ಇತ್ಯರ್ಥಃ| ವಾಗ್ಗೇಯ ಕಾರೇಚ್ಛಯಾ ಅತೀತೋವಾ ಅನಾಗತೋವಾಗ್ರಹಃ ಕರ್ತವ್ಯ ಇತ್ಯುಕ್ತಂ ಭವತಿ||
ಕ್ರಮಶಃ ಸಂಗೀತದಲ್ಲಿ ಮಾತ್ರಾನಿಯಮವೇ ಮುಖ್ಯವಾಗಿ ಉಳಿದು ಬಂದು ಗಣಾದಿ ನಿಯಮಗಳು ಸ್ವಭಾವತಃ ಶಿಥಿಲವಾದುವು ಎಂದೂ ತಿಳಿಯಬಹುದಾಗಿದೆ. ಗಣ ಮತ್ತು ಮಾತ್ರಾನಿಯಮಗಳೆರಡನ್ನೂ ಹೇಳಿರುವ ಮಂತಗನ ರತಿಲೇಖೆಯ ಲಕ್ಷಣ ಹೀಗಿದೆ :

'ಯಸ್ಯಾ ಮಂಘ್ರಿದ್ವಯೇಮಾತ್ರಾ ರುದ್ರ ಸಂಖ್ಯಾಸ್ತೃತೀಯಕೇ|
ರುದ್ರಹಸ್ತ ಸಮಾಶ್ಚೈವ ರತ್ನಾಖ್ಯಗಣಸಂಮಿತಾಃ|
ಭವಂತೀತಿ ಯತಸ್ತಜ್ಞೈಃ ಧಾತು ಮನ್‌ಮಾತು ಭಿರ್ಯುತಾ|
ಕಥಿತಾ ಗೀತಶಾಸ್ತ್ರಜ್ಞೈ ರತಿಲೇಖೇತಿ ನಾಮತಃ|'

ಇದರ ಪ್ರಕಾರ ಮೂರು ಪಾದಗಳಲ್ಲಿ ಕ್ರಮವಾಗಿ ೧೨+೧೧+೧೦. ಒಟ್ಟು ೩೨ ಮಾತ್ರೆಗಳಿರಬೇಕು. ಮತ್ತು ಪದ್ಯವು ಆದ್ಯಂತವಾಗಿ ರತಿಗಣಬದ್ಧವಾಗಿರಬೇಕು. ಶಾರ್ಙದೇವ ಕೊಟ್ಟಿರುವ ಲಕ್ಷಣ ಇದರಂತೆಯೇ ಹೀಗಿದೆ :

'...........ತತ್ರಾದ್ಯೇಪಾದೇ ರುದ್ರಾಃ ಕಲಾಯಪಿ |
ದ್ವಿತೀಯೇಚ, ತೃತೀಯೇತು ಮಾತ್ರಾದಶತದಾ ಭವೇತ್ |
ರತಿಲೇಖಾರತಿಗಣೈಃ ....' ಇತ್ಯಾದಿ.

ರತಿಲೇಖೆಯ ದ್ವಿಗುಣಿತಮಾತ್ರೆಗಳಿದ್ದು, ಕಾಮಗಣಬದ್ಧವಾಗಿರುವದೇ ಕಾಮಲೇಖೆ; ತ್ರಿಗುಣಿತಮಾತ್ರಾ ಸಂಖ್ಯೆಯಲ್ಲಿ ಬಾಣಗಣಬದ್ಧವಾಗಿರುವದು ಬಾಣಲೇಖೆ; ಚತುರ್ಗುಣಿತ ಮಾತ್ರೆಗಳಿದ್ದು ಮಿಶ್ರಗಣಗಳಿರುವದು ಚಂದ್ರಲೇಖೆ ಎಂಬ ಲಕ್ಷಣವಿದೆ.

ಹೀಗೆ ಕ್ರಮಪ್ರಾಪ್ತವಾದ ಲಕ್ಷಣವಿದ್ದರೂ ಗಣನಿಯಮಗಳ ವಿಪರ್ಯಾಸವಾಗಿ ರತಿ, ಕಾಮ, ಬಾಣ ಗಣಗಳು ಸಂಮಿಶ್ರವಾಗಿರುವಂಥವು ರತಿಲೇಖೆಯೇ ಮೊದಲಾದ ದೇಶೀ ಏಲೆಗಳು ಎಂಬ ಲಕ್ಷಣವನ್ನು ಬೇರೆ ಕೊಟ್ಟಿದ್ದಾನೆ. ಆ ರತಿಲೇಖೆಯ ಲಕ್ಷಣ ಹೀಗಿದೆ :

ಆದ್ಯಾಂಘ್ರೀ ಆದ್ಯನುಪ್ರಾಸೌ ರತ್ಯಂತಂ ಮದನದ್ವಯಂ |
ಪ್ರತ್ಯೇಕಂಚ ತಯೋರಾದಿಮಧ್ಯ ಪ್ರಾಸಃ ತೃತೀಯಕಃ |
ಚತುಷ್ಕಾಮೋ ರತಿಪ್ರಾಂತಃ ರತಿಲೇಖಾ ತದಾದಿಮಾ |

ಇದರ ಪ್ರಕಾರ ಮೊದಲ ಎರಡು ಪಾದಗಳಲ್ಲಿ ಪ್ರತ್ಯೇಕ ಎರಡು ಕಾಮಗಣಗಳೂ ಒಂದು ರತಿಗಣವೂ ಮೂರನೆಯ ಪಾದದಲ್ಲಿ ನಾಲ್ಕು ಗಣಗಳ ಮುಂದೆ ಒಂದು ರತಿಗಣವೂ ಇರಬೇಕು. ನಮ್ಮ ಪದ್ಯ ಸಾಹಿತ್ಯದಲ್ಲಿ, ಯಕ್ಷಗಾನಾದಿಗಳಲ್ಲಿ ಸಹ, ಪರಂಪರೆಯಿಂದ ಉಳಿದು ಬಂದ ಈ ಬಂಧವು ಬೇಕಷ್ಟಿದೆ. ಉದಾಹರಣೆಗಾಗಿ, ಪಾರ್ತಿಸುಬ್ಬ ಕವಿಯ ಕೃಷ್ಣಚರಿತೆ ಯಕ್ಷಗಾನದ ಇದೊಂದು ಪದ್ಯವನ್ನು ಪರಿಶೀಲಿಸಿರಿ. ದೇವಕಿಯು ಹೆಣ್ಣುಮಗುವನ್ನು ಕಂಸನು ಕೊಲ್ಲಲುದ್ಯುಕ್ತನಾದಾಗ "ಅಣ್ಣಾ ಕೊಲ್ಲಬೇಡ" ಎಂದು ಆಕೆಯು ಬೇಡಿಕೊಳ್ಳುವ ಮಾತು :

ಗಗನದ, ನುಡಿತಪ್ಪಿ,ತಲ್ಲ
ಮಗು ನಿನ್ನ,ಸೊಸೆವೈರಿ,ಯಲ್ಲ
ಮುಗಿದು ಕೈ,ಗಳ ಬೇಡು,ವೆನುಪಾಲಿ,ಸಿದನೊಂದು, ಸೊಲ್ಲ
ಅಣ್ಣ ಕೊ,ಲ್ಲುವದೇಕೊ, ಮಗಳ—(ಪಲ್ಲವಿ)

ಈ ಪದ್ಯವು ಮೇಲೆ ಕೊಟ್ಟ ಲಕ್ಷಣಕ್ಕೆ ಒಂದಿಷ್ಟೂ ಹೆಚ್ಚು ಕಡಮೆ ಇಲ್ಲದ ಲಕ್ಷ್ಯವಾಗಿದೆಯಷ್ಟೆ? ಹೀಗೆ ಕಾಮಲೇಖೆ, ಬಾಣಲೇಖೆ, ಚಂದ್ರಲೇಖೆಗಳಿಗೂ ಗಣನಿಯಮ ಪ್ರಧಾನವಾದ ಪ್ರತ್ಯೇಕ ಲಕ್ಷಣಗಳಿವೆ. ಇಂತಹ ಬಂಧಗಳೂ ನಮ್ಮ ಪದಸಾಹಿತ್ಯದಲ್ಲಿ ದೊರೆಯುತ್ತವೆ.

ಇದಲ್ಲದೆ, ರತಿಲೇಖಾದಿಗಳ ಗಣಗಳು ಹೆಚ್ಚುಕಡಮೆ ಆದ ಇನ್ನೂ ನಾಲ್ಕು ಭೇದಗಳಿಗೆ 'ಛಂದಸ್ವತೀ' ಏಲೆಗಳೆಂಬ ಹೆಸರೆಂದು ಸಂಗೀತರತ್ನಾಕರದಲ್ಲಿ

ಲಕ್ಷಣವಿದೆ. ಆ ಪ್ರಕಾರ ಮೂರೂ ಪಾದಗಳಲ್ಲಿ ಸೇರಿ, ಐದು ಕಾಮಗಣ, ಆಮೇಲೊಂದು ರತಿಗಣ, ಅದರ ಮುಂದೊಂದು ಕಾಮಗಣ, ಹೀಗೆ ಏಳು ಗಣಗಳು ನಿಂದರೆ, ಅವಕ್ಕೆ 'ಛಂದಸ್ಷಟ್ಪದಿ ಏಲೆ'ಗಳೆಂಬ ಹೆಸರು. ಆ ಲಕ್ಷಣ ಹೀಗಿದೆ :

'ಪಂಚ ಕಾಮಾರತಿಶ್ಚೈಕಃ ಕಾಮೋಂತೇ ಚರಣತ್ರಯೇ |
ಪ್ರತ್ಯೇಕಂ ತಾಸು ಚೇದೇತಾಶ್ಛಂದಸ್ಷಟ್ಪದ್ಯಃ |'

ಹೀಗೆ ಏಳು ಗಣಗಳು ನಿಲ್ಲುವಾಗ ಬಂಧದ ಮೂರೂ ಪಾದಗಳು ಭರ್ತಿ ಆಗದೆ ಉಳಿವ ಭಾಗದಲ್ಲಿ ಬೇರೆ ಪದಗಳನ್ನಿಟ್ಟು ಪಾದ ಪೂರ್ತಿಮಾಡಬೇಕು. ಹಾಗೆ ಭರ್ತಿಮಾಡುವ ಅಂಶಕ್ಕೆ ಶಿಖಾಪದವೆಂದು ಹೆಸರು. ಅದು ಮೂರನೆಯ ಪಾದ ದಲ್ಲಿಯೇ ಇರಬೇಕು. ಎಂದಿರುವ ಆ ಲಕ್ಷಣ ಹೀಗಿದೆ :

'ಯಥೈಕಸ್ಯ ದ್ವಯೋರಂಘ್ರ್ಯೋ ಸ್ತ್ರಯಾಣಾಂ ಚಾಂತತಃ ಕ್ರಮಾತ್
ಅಂಘ್ರಿಪೂರ್ತ್ಯೈ ಕೃತಪದಸ್ಯಚ್ಛೇತ್ ತೃತೀಯಾಂಘ್ರಿ ಮಿತಂ ಪದಂ
ಶಿಖಾಪದಂ ತತ್ತ್ರೃತೀಯೇತ್ವಂಘ್ರೌ............'

ಇದರ ವ್ಯಾಖ್ಯಾನದಲ್ಲಿ '....ಏಕಸ್ಯ ಪಾದಸ್ಯ ದ್ವಯೋಃ ಪಾದಯೋಃ ತ್ರಯಾಣಾಂ ಪಾದಾನಾಂ ಅಂತೇ ಯತ್ಕೃತಂ ಕಾಮೋಂತೇ ಚರಣತ್ರಯೇ ಇತ್ಯಂಘ್ರಿ ಪೂರ್ತ್ಯೈರ್ಕೃತದನ್ಯಚ್ಛೇದಿತ್ಯನ್ವಯಃ |....ಶಿಖಾಪದಂ ನಾಮಪದಂ ತೃತೀಯೇಂ ಘ್ರೌ ಕರ್ತವ್ಯಮಿತ್ಯರ್ಥಃ—ಎಂದು ಕಲ್ಲಿನಾಥನೂ ತ್ರಯಾಣಾಮಂಘ್ರೀಣಾಂ ಅಂಘ್ರಿ ಪೂರ್ತ್ಯೈರ್ ತೃತೀಯಾಂಘ್ರಿ ಪ್ರಮಾಣಂ ಪದಂ ಕ್ರಿಯತೇ ತಚ್ಛಿಖಾಪದಮುಚ್ಯತೇ | ತತ್ತು ತೃತೀಯಾಂಘ್ರೌ ಪ್ರಯೋಗಾತ್—ಎಂದು ಸಿಂಹಭೂಪಾಲನೂ ಸ್ಪಷ್ಟಪಡಿಸಿದ್ದಾರೆ. ಇದರ ಅರ್ಥವೇನೆಂದರೆ—ಹಿಂದೆ ಹೇಳಿದ ರತಿಲೇಖಾದಿ ಬಂಧಗಳು ಪ್ರತಿಯೊಂದರಲ್ಲಿ ಆರಂಭದಿಂದ ಕ್ರಮವಾಗಿ ಈ ಏಳು ಗಣಗಳನ್ನಿಡ ಬೇಕು. ಹಾಗೆ ಇಡುವಾಗ ಆ ಬಂಧದ ಮೂರು ಪಾದಗಳಲ್ಲಿ ಮತ್ತೆಷ್ಟು ಭಾಗ ಉಳಿಯುವುದೋ ಆ ಭಾಗಕ್ಕೆ ಗಣಸಿಯಮವಿಲ್ಲ. ಐಚ್ಛಿಕ ಪದಗಳಿಂದ ಅದನ್ನು ಪೂರ್ತಿಗೊಳಿಸಬೇಕು. ಹಾಗೆ ಪೂರ್ತಿಗೊಳಿಸುವ ಅಂಶವು ಮೂರನೆಯ ಪಾದಕ್ಕೇ ಸೇರಬೇಕು. ಅದಕ್ಕೆ ಶಿಖಾಪದವೆಂದು ಹೆಸರು. ಎಂದರೆ ಮೊದಲ ಎರಡು ಪಾದಗಳಲ್ಲಿ ಈ ಏಳು ಗಣಗಳೇ ನಿಲ್ಲಬೇಕು ಎಂಬ ತಾತ್ಪರ್ಯ. ಹೀಗೆ ರತಿಲೇಖೆ, ಕಾಮಲೇಖೆ, ಬಾಣಲೇಖೆ, ಚಂದ್ರಲೇಖೆ ಎಂಬವು ನಾಲ್ಕು ಛಂದಸ್ಷಟ್ಪದಿ ಭೇದ ಗಳಾಗುತ್ತವೆ. ಹಿಂದೆ ಹೇಳಿದ ಲಕ್ಷಣ ಪ್ರಕಾರ ಮೂವತ್ತೆರಡು ಮಾತ್ರೆಗಳಿರುವ ರತಿಲೇಖೆಯಲ್ಲಿ ಮಾತ್ರ ಈ ಏಳು ಗಣಗಳು ಮೂರೂ ಪಾದಗಳಲ್ಲಿ ನಿಶ್ಶೇಷವಾಗಿ ನಿಲ್ಲುತ್ತವೆ. ಮಿಕ್ಕ ಕಾಮಲೇಖಾದಿಗಳಲ್ಲಿ ಈ ಏಳು ಗಣಗಳು ನಿಂತಲ್ಲಿಗೆ ಬಂಧ ಪೂರ್ತಿಯಾಗುವುದಿಲ್ಲ. ಅವುಗಳಲ್ಲಿ ಮಾತ್ರ ಮೇಲೆ ಹೇಳಿದಂತೆ ಶಿಖಾಪದವನ್ನು

ಸೇರಿಸಬೇಕಾಗುತ್ತದೆ. ಆದುದರಿಂದ ಈ ರತಿಲೇಖೆಯೆ ನಮ್ಮ ಛಂದೋಗ್ರಂಥಗಳಲ್ಲಿ ಹೇಳಿದ ಏಲೆಯೆಂದು ನ್ಯಾಯವಾಗಿ ಅನುಮಾನಿಸಬೇಕಾಗುವದು. ನಾಗವರ್ಮ ಜಯಕೀರ್ತಿಗಳು ಹೇಳಿದ ಗಣನಿಯಮವೂ ಇದಲ್ಲವೆ? (ಹೀಗೆ ಶಿಖಾಪದಗಳು ಸೇರಿದ ಛಂದಸ್ವತೀ ಭೇದಗಳಿಗೂ ನಮ್ಮ ಪದಸಾಹಿತ್ಯದಲ್ಲಿ ಬೇಕಾದಷ್ಟು ಲಕ್ಷ್ಯೋದಾಹರಣೆಗಳಿವೆ.)

ಸಂಗೀತ ಗ್ರಂಥಗಳಲ್ಲಿ ಹೇಳಿದ ಆ ರತಿಲೇಖೆಯ ಮಾತ್ರಾನಿಯಮ ಇಲ್ಲಿ ಸರಿಹೋಗುವುದೋ ನೋಡೋಣ. ಜಯಕೀರ್ತಿಯ ಲಕ್ಷಣದ ಮೊದಲನೆಯ ಪಾದದ "ತ್ರಿಪದೀ ತೃತೀಯಾಂಘ್ರಾ" ಎಂಬಲ್ಲಿ ಮಾತ್ರೆಗಳು ಹನ್ನೊಂದಿವೆ. ಎರಡನೆಯ ಪಾದದ, "ವಪಮುಂಚತ್ಯೇಲೇತಿ" ಎಂಬಲ್ಲಿಯೂ ಹನ್ನೊಂದು ಮಾತ್ರೆಗಳಿವೆ. "ಸುಪಠಿತಾಗೇಯ ವಿದಜನೈಃ" ಎಂಬ ಕೊನೆಯ ಪಾದದಲ್ಲಿ ಹದಿಮೂರು ಮಾತ್ರೆಗಳಾಗುತ್ತವೆ. ನಾಗವರ್ಮನ ಲಕ್ಷಣಪದ್ಯದಲ್ಲಿ ಕ್ರಮವಾಗಿ ೧೦ + ೧೧ + ೧೨ ಮಾತ್ರೆಗಳಿವೆ. ಶಾರ್ಙದೇವನು ಹೇಳುವ ಲಕ್ಷಣ ಪ್ರಕಾರ ಹೀಗೆ ಒಂದೆರಡು ಮಾತ್ರೆಗಳಲ್ಲಿ ವ್ಯತ್ಯಾಸವಿರುವದೂ ಛಂದಸ್ವತಿಯಲ್ಲಿ ಸಂಭವನೀಯವೇ ಆಗಿದೆ. "ಗಣಾದೇರ್ನ್ಯೂನತಾಧಿಕ್ಯಾದೇಲಾ ಭಾಸಾ ಇಮೇ ಮತಾಃ" ಎಂದಿದ್ದಾನೆ. ಇದರ ವ್ಯಾಖ್ಯಾನದಲ್ಲಿ ಕಲ್ಲಿನಾಥನು "ಅತ್ರ ಆದಿಶಬ್ದೇನ ಮಾತ್ರಾಗೃಹ್ಯಂತೇ ಗಣಾದೇರ್ನ್ಯೂನತಾಧಿಕ್ಯಂಚೇತ್ಯನೇನ ಪ್ರಕಾರೇಣ ಏಲಾ ಭಾಸಾಃ" ಎಂದು ಸ್ಪಷ್ಟಪಡಿಸಿದ್ದಾನೆ. ಹೀಗಿರುವದರಿಂದ ನಾಗವರ್ಮಾದಿಗಳು ಲಕ್ಷಣಿಸಿದ ಏಲೆಯು ವಿಕೃತರತಿಲೇಖೆ ಅಥವಾ ಛಂದಸ್ವತೀ ಏಲೆ ಎಂಬುದರಲ್ಲಿ ಸಂದೇಹವಿಲ್ಲ. ಚಾಲುಕ್ಯ ಸೋಮೇಶ್ವರನು ಮಾತ್ರಾನಿಯಮ ಮತ್ತು ಪದನಿಯಮದಿಂದ ಕೊಟ್ಟಿರುವ ರತಿಲೇಖೆಯ ಲಕ್ಷ್ಯವೂ ಇದಕ್ಕೆ ಹೊಂದಿಕೆಯಾಗಿಯೆ ಇದೆ. ಅವನು ಕೊಟ್ಟ ಲಕ್ಷಣ :

ಪದಂ ಷಣ್ಮಾತ್ರಮೇಕಂಸ್ಯಾತ್ ದ್ವಿತೀಯಂ ಪಂಚಮಾತ್ರಿಕಂ।
ಅನುಪ್ರಾಸ ಸಮೋಪೇತಃ ಪಾದಃ ಪ್ರಥಮ ಈರಿತಃ।
ಏವಂ ವಿಧೋ ದ್ವಿತೀಯಸ್ಸ್ಯಾತ್ತೃತೀಯೋದಶಮಾತ್ರತಃ।
ಅನುಪ್ರಾಸೇನ ಸಂಯುಕ್ತಃ ಪಂಕ್ತಿಭಿಶ್ಚ ಯಥಾಪದ್ಯೈಃ।
ವಿಭಜ್ಯ ತ್ರಿಷು ಪಾದೇಷು ದ್ವಾತ್ರಿಂಶನ್ಮಾತ್ರಕಾಃ ಕ್ರಮಾತ್।
ಕ್ರಿಯತೇಸಾ ಭವೇದೇಲಾ ರತಿಲೇಖೇತಿ ಸಂಜ್ಞಿತಾ।

ಯತ್ಕಿಂಚಿತ್ ಪಾಠದೋಷವಿರಬಹುದಾದ ಆ ಲಕ್ಷ್ಯವು ಹೀಗಿದೆ :

ಪದ್ಮಸ,ಯನಜಲ, ಶಯನ
ಲ,ಕ್ಷ್ಮೀಸ್ತನ,ಯುಗಮಧ್ಯ,
ಸ್ಥಿತಮು,ಕ್ತಾಹಾರ,
ಭಕ್ತಶ,ರಣ ಭೂಧ,ರಣ

ವಿಬು,ಧಾರ್ತಿ ಹ,ರಣದೈತ್ಯ,
ವಂಶ,ಚ್ಛೇದನ, (ಕುಠಾರ)
ನಾರಾಯ,ಣ ನಮೋಸ್ತು, ತೇ
ಸೋಮೇ,ಶ್ವರದೇವ, ವಿರ,
ಚಿತಾ, ಏಷಾ, ರತಿಲೇಖಾ

(ಈ ಲಕ್ಷಣದಂತೆ ಮೂರು ಪಾದಗಳಲ್ಲಿ, ಆರು ಪದಗಳಿರಬೇಕೆಂದು ಕಾಣುತ್ತದೆ. ಆದರೆ ಪದ ಗಣನೆಯಲ್ಲಿ ಒಂದು ಪದಕ್ಕೆ ವ್ಯಾಪ್ತಿ ಎಷ್ಟು? ಸಮಸ್ತಪದದಲ್ಲಿ ಸೇರಿರುವ ಪದಗಳನ್ನು ಪ್ರತ್ಯೇಕವೆಂದೆಣಿಸಬೇಕೇ, ಬೇಡವೇ, ಎಂಬುದು ಸ್ಪಷ್ಟವಿಲ್ಲ. ಲಕ್ಷ್ಯದಿಂದಲೂ ಇದು ನಿಷ್ಕರ್ಷವಾಗುವುದಿಲ್ಲ. 'ಪಾದ' ಶಬ್ದಕ್ಕೆ ಪಾದಖಂಡ ಎಂಬ ಅರ್ಥವೂ ಲಕ್ಷಣಗ್ರಂಥಗಳಲ್ಲಿ ಕಾಣುವುದು.)

ಹೀಗೆ ಸೋಮೇಶ್ವರನು ಲಕ್ಷಿಸಿದಂತೆ ಸಹ ಸಂಗೀತ ಗ್ರಂಥಗಳಲ್ಲಿ ಮಾತ್ರಾ ನಿಯಮವೇ ಪ್ರಧಾನವೆಂದೆಣಿಸಲಾದ ರತಿಲೇಖೆ ಅಥವಾ ನಮ್ಮ ಛಂದೋಗ್ರಂಥಗಳಲ್ಲಿ ಹಿಂದೆ ಹೇಳಿದ 'ಪಂಚಕಾಮಾ....' ಇತ್ಯಾದಿ ಗಣನಿಯಮದಿಂದಿರುವ 'ಏಲಿ' ಸಹ ನಿಜವಾದ ಮೂಲಸ್ವರೂಪವಲ್ಲ. ಶಾರ್ಙ್ಗದೇವ ಇದನ್ನು ಏಲಾಭಾಸ ಎಂದಿರುವನಷ್ಟೆ? ಶುದ್ಧಸ್ವರೂಪವು ರತಿಗಣಬದ್ಧವಾಗಿರಬೇಕೆಂದು ಲಕ್ಷಣವು ಹೇಳುತ್ತದೆ. ನಾನು ತಿಳಿದಂತೆ ಸಂಗೀತ ಗ್ರಂಥಗಳಲ್ಲಿ ಇದಕ್ಕೆ ಲಕ್ಷ್ಯೋದಾಹರಣೆ ಸಿಕ್ಕುವುದಿಲ್ಲ. ಲಕ್ಷ್ಯಪ್ರಸಿದ್ಧವೆನ್ನಲಾದ ಅಂತಹ ರೂಪವು ಇಲ್ಲದಿರುತ್ತಿದ್ದರೆ ಇದಕ್ಕಿರುವ ರತಿಲೇಖೆ ಎಂಬ ಹೆಸರಿನ ಸಾರ್ಥಕ್ಯವಾದರೂ ಏನು? ನಮ್ಮಲ್ಲಿ ಪರಂಪರೆಯಿಂದ ರೂಢಿಯಲ್ಲಿರುವ ಪದಸಾಹಿತ್ಯದಲ್ಲಿ ಕೆಲವು ಯಕ್ಷಗಾನಗಳಲ್ಲಿ ಸಹ 'ಯಾಲಪದ' ಎಂಬೊಂದು ಬಂಧವು ಅಲ್ಲಲ್ಲಿ ಕಂಡುಬರುತ್ತಿದೆಯಷ್ಟೆ? ತೆಲುಗು ಸಾಹಿತ್ಯದಲ್ಲಿ ಈ ಬಂಧಕ್ಕೆ 'ಏಲ' ಎಂದೇ ಹೆಸರಿದೆ. ಇದೀಗ ಯಾವ ಲಕ್ಷಣಕ್ಕೆ ಹೊಂದುತ್ತದೆ ಎಂದು ನೋಡೋಣ. ಇಂತಹ ಕೆಲವು ಯಾಲ ಪದಗಳ ಸ್ವರೂಪವು ಹೀಗಿದೆ:

'ಬಿದಿರ,ದಬ್ಬೆ, ಹೆಗಲ, ಮೇಲೆ,
ಎದುರು, ಬಂದ,ನಾತ, ನೋಡಿ,
ಚದುರ, ಕೊರಚಿಯು, ಕಾಣೆ,ನೆನುತಲಿ,—ಓ ಸಿಂಗ್ರಿ,ಯೆನುತ,
ಒದಗಿ,ಬಂದ, ಬೇಗ, ಸಿಂಗನು.'

ಇದು ವೆಂಕಪ್ಪ ಕವಿಯ ಪಾರ್ವತೀ ಕೊರವಂಜಿ ಎಂಬ ಯಕ್ಷಗಾನದಲ್ಲಿರುವ ಯಾಲಪದ.

'ಶ್ರೀಗಿ,ರಿಯ ಸು,ಕ್ಷೇತ್ರ,ಕಿಂದು,
ಹೋಗಿ, ಯಾತ್ರೆ, ಮಾಡಿ, ಬಂದೆ,
ಶ್ರೀಗಿ,ರಿಯು ಶ,ರೀರ, ದೊಳಗುಂಟು,—ಓ ಶ್ರೀಗುರು, ಸಿದ್ಧ,
ಯೋಗಿ,ಜನರ, ಮರ್ಮ, ಬೇರುಂಟು.'

ಇದು ಸರ್ಪಭೂಷಣ ಶಿವಯೋಗಿಯ ಕೈವಲ್ಯ ಕಲ್ಪವಲ್ಲರಿಯಲ್ಲಿರುವ, ಯಾಲಪದಗಳಲ್ಲಿ ಒಂದು :

'ಸುತ್ತಿ,ದಾ ಸ,ಮುದ್ರ,ದೊಳಗೆ,
ವರ್ತಿ,ಸಿರ್ದ, ಜಂಬೂ,ದ್ವೀಪ,
ಬಿತ್ತ,ರಿಸಿದ, ಮಹಾ, ಮೇರುವೇ,—ಮಧ್ಯ, ದೊಳಿದ,
ಸುತ್ತಿ, ಶೋಭಿ,ಸುತ್ತ, ಭೂಮಿ,ಯು.'

ಇದು ಚಂದ್ರಸಾಗರವರ್ಣಿ ಎಂಬ ಜೈನ ಕವಿಯಿಂದ ವಿರಚಿತವಾದ 'ಚಂದನೆಯ ಯಕ್ಷಗಾನ'ದಲ್ಲಿರುವ ಯಾಲಪದ. ಆಂಧ್ರಭಾಷಾ ಸಾಹಿತ್ಯದಲ್ಲಿಯೂ ಇಂತಹ ಏಲಗಳು ಬಹಳ ಹಿಂದಿನಿಂದಲೇ ರೂಢಿಯಲ್ಲಿವೆ. ಸುಮಾರು ಹನ್ನೆರಡನೆಯ ಶತಮಾನದವನೆನ್ನಲಾಗುವ ಆಂಧ್ರದ ಲಕ್ಷ್ಮಯ್ಯ ಕವಿ ಎಂಬ ಪ್ರಸಿದ್ಧ ಗೇಯ ಕರ್ತನ 'ಏಲ' ಒಂದು ಹೀಗಿದೆ :

'ಸೂರ್ಯ, ಚಂದ್ರ, ವಹ್ನಿ, ನಡುಮ,
ಶೌರ್ಯ, ಮಾನೀ, ಚಿಲುಕ, ಗಂಟಿ,
ಸೂರ್ಯ, ದೀಪ್ತಿ, ಕಾಯ, ಚುಂಡ, ಗಾ—ಓ, ಏಗಂಟಿ, ಲಿಂಗ,
ಚೂಡ, ಚೂಡಾ,ಶ್ಚರ್ಯ, ಮಾಯೆ,ಗಾ.'

ಪರಂಪರೆಯಿಂದ ರೂಢಿಯಲ್ಲಿರುವ ನಮ್ಮ ಹಳ್ಳಿಯ ಹೆಂಗುಸರ ಹಾಡುಗಳಲ್ಲಿ, ಯಕ್ಷಗಾನಾದಿಗಳಲ್ಲಿ ಇಂತಹ ಬಂಧಗಳು ಹೇರಳವಾಗಿದ್ದರೂ ಎಲ್ಲವಕ್ಕೂ 'ಯಾಲ ಪದ'ವೆಂಬ ಹೆಸರು ಕೊಟ್ಟಿರುವುದಿಲ್ಲ; 'ಪದ'ಗಳೆಂದು ಕರೆಯುತ್ತಾರೆ. ಉದಾಹರಿಸಿದ ಈ ಪದ್ಯಗಳೆಲ್ಲ ರತಿಗಣಪ್ರಾಯವಾದವುಗಳೇ. ಆದರೂ ಇವುಗಳಲ್ಲಿ ಪಾದಗಳು ಮೂರಲ್ಲ, ನಾಲ್ಕಿವೆ. ಹೀಗೆ ನಾಲ್ಕನೆಯ ಪಾದವೂ ಸೇರಿದರೆ ಅದು, ಸಂಕೀರ್ಣೈಲೆ ಎಂದಾಗುತ್ತದೆ ಎಂದು ಮತಂಗನೂ ಅದಕ್ಕೆ ಸಹ 'ಛಂದಸ್ವತೀ' ಎಂಬ ಸಂಜ್ಞೆ ಎಂದು ಶಾರ್ಙದೇವನೂ ಹೇಳಿದ್ದಾರೆ. ಮತಂಗ ಹೇಳಿರುವುದು ಹೀಗೆ :

"ತೃತೀಯ ಪಾದವತ್ಪಾದಃ ಚತುರ್ಥೋ ಯದಿ ವರ್ತತೇ
ಏಲಾ ಸಂಕರ ತಾಮೇತಿ ಮತಂಗ ಮುನಿ ಭಾಷಿತಂ"

ಸಂಗೀತ ರತ್ನಾಕರದ ಆ ಲಕ್ಷಣವು ಹೀಗಿದೆ :

"ತತ್ರಲ್ಲಕ್ಷ್ಮಾ ಯದಾ ತಾಸು ಪಾದಸ್ತು ರ್ಯೋ ನಿಬಧ್ಯತೇ।
ತದೈತಾಗದಿ ತಾಃ ಸರ್ವಾಃ ಛಂದಸ್ವತ್ಯಃ ಪುರಾತನೈಃ"॥

(ಇಲ್ಲಿ ಏತಾಃ ಎಂದರೆ ರತಿಲೇಖಾದಿಗಳು ಎಂಬ ಅರ್ಥ.)

ದಾಸಕೂಟದ ಅಥವ ಯಕ್ಷಗಾನಾದಿ ಪದ ಸಾಹಿತ್ಯವನ್ನು ಪರಿಶೀಲಿಸಿದರೆ ಮೂರೇ ಪಾದಗಳುಳ್ಳ ರತಿಗಣಬದ್ಧವಾದ ಬಂಧಗಳು ಕೆಲವು ದೊರೆಯುತ್ತವೆ. ಕುಂಬಳೆಯ ಪಾರ್ತಿ ಸುಬ್ಬಕವಿಯ ರಾಮಾಯಣ ಯಕ್ಷಗಾನದಲ್ಲಿರುವ ಆ ಒಂದು ಬಂಧ ಹೀಗಿದೆ :

‘ ಬಂದಿ,ರುವವ,ನಾರೊ, ನೀನು,
ಮುಂದೆ, ನಿನ್ನ, ಕಾರ್ಯ,ವೇನು,
ತಂದೆ,ತಾಯ್ಗ,ಳಾರೈ, ನಿನ್ನ—ಏ ಸಂ,ಪನ್ನ.
ಆನೆ, ಕುದುರೆ, ತೇರು, ಒಂಟೆ,
ಸೇನೆ, ಸದರ, ಇನ್ನೆ,ಷ್ಟುಂಟೆ,
ಜಾಣ,ನಹುದು, ಅಹುದಯ್ಯಾ, ನೀನು—ಮುಂದೇನು ? ’

ಇದು ರತಿಗಣಬದ್ಧವಾಗಿದ್ದರೂ, ಮೂರನೆಯ ಪಾದವು ಮಿಕ್ಕ ಪಾದಗಳಿಗಿಂತ ಸ್ವಲ್ಪ ದೀರ್ಘವಾಗಿದೆ. ಕೊನೆಯಲ್ಲಿ “ ಏ–ಸಂಪನ್ನ ”, “ ಮುಂದೇನು ” ಎಂಬಂತೆ ಪಾದವನ್ನು ಮೀರಿ ನಿಂದಿರುವ ಸಂಬೋಧನಾರ್ಥವಾದ ಶಿಖಾಪದಗಳಿವೆ. ಆದುದರಿಂದ, ಇದೂ ಏಳೆಯ ಮೂಲಪ್ರಕೃತಿ ಎಂದಾಗುವುದಿಲ್ಲ. ಮೂಲ ಏಳೆಯ ಲಕ್ಷಣಕ್ಕಿಂತ ಇವುಗಳಲ್ಲಿ ಪದಸಂಖ್ಯೆಯೂ ಅಧಿಕವಾಗಿದೆ. ಹಿಂದೆ ಹೇಳಿರುವ ಪ್ರಕಾರ (ಪದಸಂಖ್ಯಾನಿಯಮದಲ್ಲಿ ಮತಭೇದವಿರುವಂತೆ ಆರು) ಏಳು ಅಥವಾ ಎಂಟು ಪದಗಳಿದ್ದು ರತಿಗಣಬದ್ಧವಾಗಿದ್ದರೆ ಮಾತ್ರ ಅದನ್ನು ಮೂಲ ರತಿಲೇಖೆ ಎಂದೆಣಿಸಬಹುದು. ಅದರ ಮೂರನೆಯ ಪಾದದ ಕೊನೆಯ ಪದ, ಸಂಬೋಧನಾರ್ಥವುಳ್ಳದ್ದಾಗಿಯೂ ಇರಬೇಕು. ಇಂತಹ ಬಂಧಗಳು ನಮ್ಮ ಮತ್ತು ಆಂಧ್ರದ ಜಾನಪದಗೀತೆಗಳಲ್ಲಿಯೂ ಅಂತಹ ‘ ಮಟ್ಟು ’ಗಳನ್ನು ಅಳವಡಿಸಿಕೊಂಡಿರುವ ಯಕ್ಷಗಾನಾದಿ ಪದಸಾಹಿತ್ಯದಲ್ಲಿಯೂ ಇದ್ದೇ ಇದೆ. ದಿಙ್ಮಾತ್ರ ಉದಾಹರಣೆಗಾಗಿ ಕೆಲವನ್ನು ಉದ್ಧರಿಸಿಕೊಡುತ್ತೇನೆ: ಯಕ್ಷಗಾನ “ಪಂಚವಟಿ—ವಾಲಿ ಸಂಹಾರ”ದ ಪದ್ಯ (ಕುಂಬಳೆಯ ಕವಿ ಪಾರ್ತಿಸುಬ್ಬನ ಕೃತಿ) :

‘ ಯಾರು, ನೀವೆ,
ಲ್ಲಿಂದ, ಬಂದಿ,। ರಯ್ಯ, ಬಾಲ,ಕರಿರ
ಊರೆ, ಲ್ಲಿರುವ,
ತಂದೆ, ತಾಯ್ಗ,। ಳಾರು, ಬಾಲ,ಕರಿರ
ಪುಸಿಯ, ಲ್ಲೆನ್ನೊ,
ಉಸುರಿ, ನೀವ್ ಸಾ। ಹಸಿಗ ಬಾಲಕರಿರ ’

ನಗರದ ಸುಬ್ಬನ ‘ ರಾವಣೋದ್ಭವ ’ದಲ್ಲಿ (ಇವನಿಗೆ ಅಪ್ಪಣ್ಣ ಜೋಯನೆಂದೂ ಹೆಸರಿದ್ದಂತೆ ತಿಳಿಯುತ್ತದೆ) :

'ಕಂಕು, ಪಾತ್ರ,
ಕೇಳ್ಳ, ಶಾಸ್ತ್ರ, ತ್ಯಾಂತ, ಜಾಮೂ, ಆದಲು
ಗುಟ್ಟಿ, ಸಿನ್ನ,
ಕೈಯ್ಯ, ನೆಳಿದ, ಜಟ್ಟ, ಯಂಗ, ಕೋರ
ದುರು, ರಿಪದ,
ಕೃಕ್ಕ, ದಲ್ಲಿ, ತೊರೆವು, ದಾಯ್ತು, ಧರ್ಮ'

ತುಳು ಸೀಮೆಯಲ್ಲಿ ಕಿನ್ನರಿ ಜೋಗಿಗಳು ಮನೆಮನೆಗೆ ಬಂದು ಭಿಕ್ಷೆ ಬೇಡುವಾಗ ಕಿನ್ನರಿಯನ್ನು ನುಡಿಸಿಕೊಂಡು ಹಾಡುವ ಒಂದು ಮಟ್ಟು :

'ಬಟ್ಟಿ, ಕೂಲಿ,
ಚಿಟ್ಟಿ, ಕೂಲಿ, | ಕೊಟ್ಟಿ, ಬಂಜ್ಯ, ಜೋಕುಳಿ
(ಪಲ್ಲ)—ಜೋಕು, ಆಪ್ಪ, ಜೋಕು, ಆಪ್ಪೆ—ಕುಪ್ಪೆ, ಬಂಜ್ಯ, ಜೋಕುಳು

ಈ ಪದಗಳು ರತಿಲೇಖೆ ಎಂಬ ಏಲೆಯ ಮೂಲ ಛಂದೋರೂಪವಾಗಿರಬಹುದೆಂದು ಅನುಮಾನಿಸಬಹುದಲ್ಲವೆ ?

ಇನ್ನೀಗ ಏಲೆ, ಎಂಬ ಹೆಸರು ಹೇಗೆ ಸಿದ್ಧವಾಯಿತು ? ಅದರ ಔಚಿತ್ಯವೇನಿರಬಹುದು ? ಎಂದು ಊಹಿಸುವುದಾದರೆ—ಕೊನೆಯ ಪದದಲ್ಲಿ ಸಂಬೋಧನೆಯಿರಬೇಕೆಂಬುದೂ ಏಲೆಯ ನಿಯತವಾದ ಮೂಲ ಲಕ್ಷಣ ಎಂಬುದನ್ನು ಈ ಮೊದಲೇ ನೋಡಿದೆವಷ್ಟೆ ? ಉದಾಹರಿಸಿದ ಯಾಲಪದಾದಿ ಬಂಧಗಳಲ್ಲಿ ಹಾಗಿರುವುದೂ ಸ್ಪಷ್ಟವಾಗಿದೆ. ("ಯಾಲಪದ"ವೆಂಬುದು, ಎ ಕಾರದ ಸ್ಥಾನದಲ್ಲಿ ಯಕಾರವನ್ನು ಉಚ್ಚರಿಸುವ ಸ್ವಭಾವ ನಮ್ಮಲ್ಲಿರುವುದರಿಂದ, ರೂಢಿಯಾದ ಅಪಭ್ರಂಶ ರೂಪವೆಂಬುದರಲ್ಲಿ ವಿದ್ವಾಂಸರಿಗೆ ಸಂದೇಹವಿರದು. ಏಕಾರಾದಿಯಾದ ಪದಗಳಲ್ಲಿ ಸರ್ವಸಾಮಾನ್ಯವಾಗಿ ಯಕಾರವೇ ಉಚ್ಚರಿಸಲ್ಪಡುತ್ತದೆ. "ಏಲಕ್ಕಿ"ಯು "ಯಾಲಕ್ಕಿ"ಯಾದಂತೆ; "ಏಕೆ"—"ಯಾಕೆ," 'ಏತಕ್ಕೆ—ಯಾತಕ್ಕೆ,' 'ಬೇಡ—ಬ್ಯಾಡ,' ಎಂದೂ ಆಗಿದೆಯಲ್ಲ ?) ಈ ಜಾನಪದ ಮಟ್ಟುಗಳಲ್ಲಿಯೂ ಕೊನೆಯಲ್ಲಿ ಸಂಬೋಧನೆಯಿದೆ. ಏಕಾರವೆಂಬುದು ಸಂಬೋಧನೆಯ ಸ್ವರಾಕ್ಷರವಲ್ಲವೆ ? ಏ ರಾಮ, ಏ ಕೃಷ್ಣ, ಏಲೇ, ಇತ್ಯಾದಿ ಈ ಏಕಾರ ಏ ಏ ಏ ಎಂದು ಪುನರಾವರ್ತಿತವಾಗುವಾಗ, ಪುನರುಚ್ಚಾರಣೆಯ ವ್ಯಂಜಕವಾಗಿ ಲಕಾರವು ಸೇರುವುದು ಸ್ವಭಾವ. ಆದುದರಿಂದಲೇ ಜಾನಪದ ಗೀತೆಗಳಲ್ಲಿ ಒಕ್ಕೊರಲಿನಿಂದ ಹಾಡುವ ಏ ಲೇ ಲೇ ಲೇ ಲೆಲಾಂ, ಎಲ್ಲಲಾಂ, ಲೀಲಾಂ, ಲೋಲೀ ಲಾಲೀ, ಮೊದಲಾದ ಸೋಗುಡುವ ಸೊಲ್ಲುಗಳಲ್ಲಿ ಹೆಚ್ಚಾಗಿ ಲ ಕಾರವು ಸ್ತೋಭಾಕ್ಷರವಾಗಿರುವುದನ್ನು ಕಾಣುತ್ತೇವೆ. ಲಾಲಿಪದ, ಲೋಲಿಪದ, ಜಾಲಪದ, ಓವಿ, ಲೋಲೀ ಎಂದು ಮುಂತಾಗಿ ಸಂಗೀತ ಗ್ರಂಥಗಳಲ್ಲಿ ಲಕ್ಷಣೋಕ್ತವಾಗಿರುವಂತೆ ಸಹ, ಜಾನಪದ ಬಂಧ ವಿಶೇಷಗಳಿಗಿರುವ

ಈ ಹೆಸರುಗಳಿಗೆ ಆ ಸೊಲ್ಲುಗಳೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಏಲೆ ಎಂಬ ಹೆಸರೂ ಹಾಗೆಯೇ ಸಹಜವಾಗಿ ವ್ಯವಹಾರಕ್ಕೆ ಬಂದದಿರಬೇಕು. ಇದಕ್ಕೆ ದೃಷ್ಟಾಂತವಾಗಿ ತುಳು ಸೀಮೆಯಲ್ಲಿ ಕೈಯ್ಯೊಲಗಳಲ್ಲಿ (ಬತ್ತದ ಗದ್ದೆಗಳು) ಬತ್ತದ ಸಸಿಗಳನ್ನು 'ನಟ್ಟಿ' ಮಾಡುವಾಗ ಹೆಂಗುಸರು ಹಾಡುವ ಗೀತೆಗಳಲ್ಲಿ 'ಏಲೆ' ಎಂಬ ಹೆಸರಿನದೇ ಒಂದು 'ಪಣ್' ಇರುತ್ತದೆ. ಅದರ ಒಕ್ಕೊರಲಿನ ಸೊಲ್ಲೂ 'ಏಲೇ' ಎಂದೇ ಆಗಿದೆ (ಕೆಲವರು ಉಚ್ಚರಿಸುವಾಗ ಏಕಾರವು ಹೇಕಾರವಾಗಿ 'ಹೇಲೇ' ಎಂದಾಗುವುದೂ ಉಂಟು)—ಹೀಗೆ ಸೊಲ್ಲುಗಳೇ ಬಂಧಕ್ಕೆ ಹೆಸರಾಗಿರುವ 'ಓ ಬೇಲೆ', 'ಟ್ರುವೇಲೆ' ಎಂಬ ತುಳು ಭಾಷೆಯ 'ನಾಟಿ'ಯ ಹಾಡುಗಳಿರುವದನ್ನು ಕೇಳಿರಬಹುದು. ಆ ಏಲೆ ಎಂಬುದರಲ್ಲಿ ಮೂರೇ ಪಾದಗಳಿದ್ದು, ಆರು ಅಥವ ಏಳು ಪದಗಳಿರುತ್ತವೆ. ಅದರ ಕೆಲವು ನುಡಿಗಳು ಹೀಗಿವೆ :

'ಏಲೇ | ಓ—ಏಲೆಲಾ, ಏಲೇ,ಓ—ಏಲಿಲಾ
ಅಟ್ಟಿಗಿರಿತ,| ಡಪ್ಪ, ಗಿರಿ ಮಾ, ಮೇರೆ,| ಪರ್ವ, ತೊಡುಯೆ—ಏಲೇ
ಮುಪೆಲು, ಪೋತು,| ತರೆಲ, ಪೋತು, ಮುನ್ನೊ,| ದೊರ್ಸೊ, ಲಾಂಡೇ ಏ—ಲೇ
ಆ ಒಂ, ಜಿಮುರ| ಕಡ್ಪೊ, ಡೆಂಪ್, ಊರ್ದ| ಜನೊಕು, ಳ್ಪಪ್ಪೇರ್—ಏ—ಲೇ
ಕುಡಲ, ಗುತ್ತು,| ಜಕ್ರಿ, ಪುರ್ಬು, ಮಡುನು,| ಕೊಂಡು ಬತ್ತೇ—ಏ—ಲೇ
....
ಮರೊನೆ, ಬೂಂಡ್ಸ್| ಸೊಪೊನೆ, ಕೇಂಡ್, ಬರೊನೆ,| ಕೂಪ್ಡ್ ಬಪ್ಪಿಲ್ಲ—ಏಲೇ
ಇತ್ಯಾದಿ

ಸಂಗೀತಶಾಸ್ತ್ರ ಗ್ರಂಥಗಳಿಂದ ತಿಳಿಯಲಾಗುವಂತೆ, ದೇಶೀಯ ಛಂದಸ್ಸುಗಳಲ್ಲಿ ಆದ್ಯ ಪ್ರಬಂಧವಾದ ಏಲೆಯ ವಿಚಾರವಾಗಿ ಇದುವರೆಗೆ ವಿವರಿಸಿದ ಮುಖ್ಯಾಂಶಗಳನ್ನು ಈಗ ಹೀಗೆ ಸಂಗ್ರಹಿಸಬಹುದು :

ಏಲೆಯು ಮೂಲತ: ಮೂರು ಪಾದಗಳುಳ್ಳ ಅತ್ಯಂತ ಚಿಕ್ಕದಾದ ಬಂಧ. ಇಂತಿಷ್ಟು ಪದಗಳಿರಬೇಕೆಂಬುದೇ ಇದಕ್ಕೆ ಇದ್ದ ಲಕ್ಷಣ. ಪ್ರಥಮ ಪಾದದ ಎರಡು ಪದಗಳನ್ನು ಉಚ್ಚರಿಸಿ, ಮೂರನೆಯ ಪದದ ಆರಂಭದ ಒಂದೆರಡು ಅಕ್ಷರಗಳನ್ನೆತ್ತಿಕೊಂಡು, ಸ್ವಲ್ಪ ರಾಗ ಪ್ರಸ್ತಾರವನ್ನು ಮಾಡಿ (ಇದಕ್ಕೆ ಪ್ರಯೋಗ ಅಥವಾ ಗಮುಕಾಲಪ್ತಿ ಎಂಬ ಸಂಜ್ಞೆ) ಪುನಃ ಆ ಪಾದವನ್ನೂ ಮುಂದಣ ಪಾದಗಳನ್ನೂ ಹಾಡುವ ಪದ್ಧತಿ ಇದ್ದುದು. ಮೂರನೆಯ ಪಾದದ ಕೊನೆಯ ಪದವು ಸಂಬೋಧನಾ ಪರವಾಗಿ ಇರುವುದಾಗಿತ್ತು. ಮೂಲತಃ ಜಾನಪದ ಗೀತವಾಗಿದ್ದ ಈ ಬಂಧವು ದೇಶೀಯ ಸಂಗೀತದಲ್ಲಿ ಸ್ಥಾನವನ್ನು ಪಡೆದು ಲಕ್ಷ್ಯ ಮಾರ್ಗದಲ್ಲಿ ಭಿನ್ನ ಪ್ರಮಾಣದ ಪದಗಳ ಎಂದರೆ ಪಾದ ಖಂಡಗಳ ಸಂಯೋಜನೆಯಿಂದ ಅನೇಕ ರೂಪಗಳಾಗಿ ವಿಕಾಸಗೊಂಡಿತು. ಇವುಗಳನ್ನೆಲ್ಲ ಗಣಮಾತ್ರಾದಿ ಛಂದೋ

ಲಕ್ಷಣಗಳಿಗನುಸಾರವಾಗಿ ಗಣೈಲೆ, ಮಾತ್ರೈಲೆ, ವರ್ಣೈಲೆ, ಎಂದು ತ್ರಿಧಾ ವರ್ಗೀಕರಿಸಲಾಯಿತು. ಇವುಗಳಲ್ಲಿ ಅಂಶಗಣಾನ್ವಯವಾದ ರತಿಲೇಖೆ, ಕಾಮಲೇಖೆ, ಬಾಣಲೇಖೆ, ಚಂದ್ರಲೇಖೆ ಎಂಬ ಅನ್ವರ್ಥ ನಾಮ ಉಳ್ಳ ಭೇದಗಳೇ ಸಂಗೀತಕ್ಕೆ ಪ್ರಶಸ್ತವಾದ ದೇಶ್ಯೈಲೆಗಳೆಂದೆಣಿಸಲ್ಪಟ್ಟವು. ಈ ನಾಲ್ಕರಲ್ಲಿ ರತಿಲೇಖೆಯೇ ಮೂಲವೂ ಪ್ರಧಾನವೂ ಆದ ಛಂದಸ್ಸೆಂದು ಪರಿಗಣಿಸಲ್ಪಟ್ಟಿತ್ತು. ಕ್ರಮೇಣ ಸಂಗೀತದ ಲಕ್ಷ್ಯ ಮಾರ್ಗದಲ್ಲಿ ಗಣನಿಯಮವು ಶಿಥಿಲವಾಗುತ್ತ ಬಂದು ಇದಕ್ಕೊಂದು ನಿಯತವಾದ ಹಾಗೂ ತಾಳಾನುಕೂಲವಾದ ಸ್ಥಿರಸ್ವರೂಪವನ್ನು ಕೊಡುವುದಕ್ಕಾಗಿ ಈ ರತಿಲೇಖೆಯ ಮೂರು ಪಾದಗಳಲ್ಲಿ ೧೧+೧೧+೧೦ರಂತೆ ಮಾತ್ರೆಗಳಿರಬೇಕೆಂಬುದಷ್ಟೇ ಇದರ ಸರ್ವ ಸಾಮಾನ್ಯ ಲಕ್ಷಣವಾಗಿ ಉಳಿಯಿತು. ಗಣಗಳಿಗೆ ಸಂಮಿಶ್ರವಾಗಿದ್ದರೂ ಈ ಮಾತ್ರಾನಿಯಮಕ್ಕೆ ಒಳಪಟ್ಟಿರುವ ಬಂಧವು 'ರತಿಲೇಖೆ' ಎಂದೇ ಕರೆಯಲ್ಪಟ್ಟಿತು. ಕ್ರಮೇಣ ಮಾತ್ರಾ ವೃದ್ಧಿ, ಪದವೃದ್ಧಿ, ಗಣವಿಪರ್ಯಾಸ ಮೊದಲಾದ ವಿಕಾರಗಳಿಂದ ಈ ರತಿಲೇಖಾದಿಗಳಲ್ಲಿ ಮತ್ತೆ ಕೆಲವು ಅವಾಂತರ ಭೇದಗಳಾದುವು. ಇವುಗಳೆಲ್ಲಾ 'ಛಂದಸ್ವತಿ'ಗಳೆಂಬ ಸಂಜ್ಞೆಯಿಂದ ಕರೆಯಲ್ಪಟ್ಟವು. ಈ ಛಂದಸ್ವತಿಗಳಲ್ಲಿ ಗಣನಿಯಮ ಪ್ರಧಾನವಾದ ಒಂದು ಭೇದವೇ ನಾಗವರ್ಮ ಜಯಕೀರ್ತಿಗಳು ಹೇಳಿರುವ ಏಲೆಯಾಗಿದೆ. ಈ ಏಲೆಯಲ್ಲಿ ಕೊನೆಯ ಪದವು ಸಂಬೋಧನಾ ಪರವಾಗಿರಬೇಕು ಎಂಬ ನಿಯಮವನ್ನು ಸಂಗೀತಶಾಸ್ತ್ರ ಗ್ರಂಥಗಳಲ್ಲಿಯೂ ಕಡ್ಡಾಯವಾಗಿ ಹೇಳಿರುವುದಿಲ್ಲವೆಂಬುದನ್ನು ಲಕ್ಷಿಸಬಹುದು.

ಸಂಗೀತಗ್ರಂಥಗಳೇ ಹೇಳುವಂತೆ, ಏಲೆಯು ಕನ್ನಡಭಾಷೆಯೊಂದರ ಸ್ವತ್ತಲ್ಲವೆಂದೂ ತಿಳಿಯಬಹುದಾಗಿದೆ. ಆಂಧ್ರ, ದ್ರಾವಿಡ, ಲಾಟ, ಗೌಡ, ದೇಶೀಯ ಭಾಷೆಗಳಲ್ಲಿಯೂ ಇವೇ ಬಂಧಗಳಿದ್ದುವೆಂದು ಮತಂಗಾದಿ ಲಾಕ್ಷಣಿಕರು ಹೇಳುತ್ತಾರೆ. ಮತ್ತು ಕರ್ಣಾಟಕ ಏಲೆಗೆ ಹೇಳಿದ ಲಕ್ಷಣವೇ ಇವಕ್ಕೂ ಅನ್ವಯಸಲ್ಪಡುತ್ತದೆ, ಎಂದಿದ್ದಾರೆ. ಭೇದವಿರುವುದು ಭಾಷೆಯಲ್ಲಿ ಮಾತ್ರ. ಮತಂಗ ಹೀಗೆ ಹೇಳುತ್ತಾನೆ :

> 'ಲಾಟ ಕರ್ಣಾಟ ಗೌಡಾಂಧ್ರ ದ್ರವಿಡಾನಾಂ ಸ್ವಭಾಷಯಾ
> ಪೃಥಕ್ ಪೃಥಕ್ ಭವಂತ್ಯೇಲಾ ಮಾರ್ಗಯುಕ್ತಾ ಮನೋಹರಾಃ
> ಪ್ರಾಸೈರ್ಮನೋಹರೈರ್ದಿವ್ಯೈರಾದಿ ಮಧ್ಯಾಂತ ಗೋಚರೈಃ
> ಏಲಾ ಕರ್ಣಾಟಕಾ ಪ್ರೋಕ್ತಾ ಲಲಿತ ಧ್ವನಿ ಸಂಯುತಾ'

ಗೌಡ ಏಲೆಯಲ್ಲಿ ಪ್ರಾಸವಿಲ್ಲ. ಆಂಧ್ರ ಏಲೆಯ ವಿಶೇಷ ಲಕ್ಷಣ ಹೀಗಿದೆ....

> 'ಅನೇಕ ಗಮಕಾ ಕೀರ್ಣಾಮನೇಕ ಧ್ವನಿ ಮಿಶ್ರಿತಾಂ
> ಅನೇಕ ರಾಗ ಸಂಕೀರ್ಣಾಮೇಲಾಮಾಂಧ್ರೀಂ ವಿದುರ್ಬುಧಾಃ'

ದ್ರಾವಿಡ ಏಲೆಯ ವಿಶೇಷ ಲಕ್ಷಣ :

‘ ಭಾಷಾಭಿನಯ ತಾಳಾಢ್ಯಾ ವಿಚಿತ್ರ ಧ್ವನಿ ರಂಜಿತಾ ।
ಪ್ರಾಸಹೀನಾ ರಸಸ್ಥಾ ಚ ಏಲಾದ್ರವಿಡ ದೇಶಜಾ । ’

ಹೀಗೆ ಸಂಗೀತದಲ್ಲಿ ಬಹುಭೇದ ಪ್ರವಿಸ್ತರವಾಗಿದ್ದು, ಕಾಲಕ್ರಮೇಣ ರೂಢಿ ಸಾಮಾನ್ಯದಲ್ಲಿ ‘ ಪದ ’ಗಳೆಂದು ವ್ಯವಹಾರಕ್ಕೆ ಬಂದ ಈ ದೇಶ್ಯೈಲಾಬಂಧವು, ಒಂದೇ ಮೂಲದಿಂದ ಕವಲೊಡೆದ ನಮ್ಮೀ ದ್ರಾವಿಡ ಭಾಷೆಗಳ ಸಾಹಿತ್ಯದಲ್ಲಿ ಬಹುಪ್ರಕಾರವಾಗಿ ವಿಕಾಸಗೊಂಡ ನಾನಾ ಪದ್ಯ ಜಾತಿಗಳಿಗೆ ಮೂಲವಾದ ಛಂದಸ್ಸೆಂದು ನ್ಯಾಯವಾಗಿ ಅನುಮಾನಿಸಬಹುದಾಗಿದೆ. ದ್ರಾವಿಡಭಾಷೆಯ ಪವಿತ್ರ ಗ್ರಂಥವಾದ ತಿರುಕ್ಕುರಳಿನ ರಚನೆಯೂ ವಿಶ್ವತ್ಯೈಲಾಪ್ರಭೇದವಾದ ‘ ಛಂದಸ್ವತಿ ’ಯ ಲಕ್ಷಣಕ್ಕೆ ಸಮನ್ವಯವಾಗಿಯೇ ಇರುತ್ತದೆ.

ಕನ್ನಡ ಛಂದಸ್ಸುಗಳಿಗೆಲ್ಲಾ ತ್ರಿಪದಿಯೇ ಮೂಲವಾಗಿರಬೇಕೆಂದು ವಿದ್ವಾಂಸರು ಸಕಾರಣವಾಗಿಯೇ ಅಭಿಪ್ರಾಯಪಟ್ಟಿರುತ್ತಾರಷ್ಟೆ ? ಸಂಗೀತ ಗ್ರಂಥ ಗಳನ್ನು ಪರಿಶೀಲಿಸಿದಲ್ಲಿ ತ್ರಿಪದಿಗಿಂತಲೂ ಏಲೆಯೇ ಪ್ರಾಚೀನವಾದ ಮೂಲ ಛಂದಸ್ಸೆಂದೂ ಅನುಮಾನಿಸಬೇಕಾಗುವದು. ನಿಜವಾಗಿ ನಾಲ್ಕುಪಾದಗಳಿರುವ ತ್ರಿಪದಿಗೆ ಆ ಹೆಸರು ಸಾರ್ಥಕವಾಗಿಲ್ಲ. ನಿಜವಾದ ತ್ರಿಪದಿಯೆಂಬುದು ಏಲೆಯೇ ಸರಿ. ಜಯಕೀರ್ತಿಯ ಲಕ್ಷಣದಿಂದಲೇ ಇದು ವ್ಯಕ್ತವಾಗಿದೆ. ಏಲೆಯ ಮೂಲಕ ನಮ್ಮ ತ್ರಿಪದಿಯ ಲಕ್ಷಣವನ್ನು ಹೇಳುವದಿದ್ದರೆ—‘ ಪಾದಸ್ತ್ರಯೋರ್ಯದಿ ನಿಬಧ್ಯತೇ ’ ಎಂದು ಹಿಂದೆ ಹೇಳಿರುವ ಮತಂಗನ ಲಕ್ಷಣದಂತೆ ನ್ಯಾಯವಾಗಿ ಅದನ್ನು ಏಲೆಯ ವಿಕಾರವೆಂದೆಣಿಸಬೇಕು. ಸಹಜವಾಗಿ ಅದು ಹಾಗಿರಬಹುದಾ ಗಿದ್ದರೂ ಸಂಗೀತಗ್ರಂಥಗಳಲ್ಲಿ ತ್ರಿಪದಿಯ ಲಕ್ಷಣವನ್ನು ಪ್ರತ್ಯೇಕವಾಗಿಯೇ ಕೊಡ ಲಾಗಿದೆ. ಮಾತ್ರ ಅಲ್ಲ, ಅದು ಸಭಾ ಸಂಗೀತಕ್ಕೆ ಅಪ್ರಶಸ್ತವಾದ ಜಾನಪದ ಗೀತವೆಂದೂ ಹೇಳಲಾಗಿದೆ. ತ್ರಿಪದಿ, ಧವಳ, ಓವೀ, ಲೋಲೀ ಇತ್ಯಾದಿ ಕೆಲವು ಬಂಧಗಳಿಗೆ ‘ ಏತೇಸೂಡೇಷುನೋಗೇಯಾಃ ಪ್ರಬಂಧಾ ಲೌಕಿಕಾಮತಾಃ ’ ಎಂದು ಶುದ್ಧ ಸಂಪ್ರಾಯದಲ್ಲಿ ಅವಕ್ಕೆ ನಿಷೇಧವಿದೆ :

‘ ತ್ರಿಪದೀ ಕಂಡನೇಚ್ಚೈವ ಶೃಂಗಾರೇ ವಿಪ್ರಲಂಭಕೇ ।
ಪ್ರಾಯಃಶಃ ತ್ರಿಭಿರೇವೈಷಾ ಗೇಯಾ ನಾನಾರ್ಥ ಭೂಷಿತಾ । ’

ಇದು ಚಾಲುಕ್ಯ ಸೋಮೇಶ್ವರನು ತ್ರಿಪದಿಯನ್ನು ಕುರಿತಾಗಿ ಹೇಳಿದ ಮಾತು. ಬತ್ತ ಕುಟ್ಟುವಾಗ ಹೆಂಗುಸರು ಹಾಡುವ ‘ ಒನಕೆವಾಡು’ ವಿರಹ ವ್ಯಥೆಯನ್ನು ಬಣ್ಣಿಸುವ ಅರ್ಥವುಳ್ಳ ರಚನೆಗಳು ಎಂದಿರುವುದರಿಂದ ಗ್ರಾಮೀಣ ಸಾಹಿತ್ಯದ ಆ ರಚನೆಗಳು ಶುದ್ಧ ಸಂಪ್ರದಾಯಕ್ಕೆ ಪ್ರಶಸ್ತವಾದುವಲ್ಲವೆಂಬುದರಿಂದ ಸಂಗೀತ

ಗ್ರಂಥಗಳಲ್ಲಿ ತ್ರಿಪದಿಯನ್ನು ಏಲೆಯಿಂದ ಪ್ರತ್ಯೇಕಿಸಲಾಗಿದೆ ಎಂದು ಊಹಿಸಬಹುದು.

ಸಂಗೀತ ಸಂಪ್ರದಾಯದಲ್ಲಿ ಅಂದಿಂದ ಇಂದುವರೆಗೆ ಬಳಕೆಯಲ್ಲಿ ಇದ್ದಿರುವ ನಾನಾವಿಧ ಗೇಯ ಪ್ರಬಂಧಗಳು ಏಲೆಯಿಂದಲೇ ವಿಕಾಸಗೊಂಡುವೆಂದು ಲಕ್ಷಣ ಗ್ರಂಥಗಳಿಂದ ತಿಳಿದುಬರುವಂತೆ, ಸಾಹಿತ್ಯದ ಕಾವ್ಯಭಾಗದಲ್ಲಿಯೂ ಬಳಸಲಾದ ಅನೇಕ ಕನ್ನಡ ಛಂದಸ್ಸುಗಳು ಏಲೆಯ ರೂಪಾಂತರಗಳೇ ಎಂದು ಅನುಮಾನಿಸಲು ತಕ್ಕ ಕಾರಣಗಳಿವೆ. ಜಯಕೀರ್ತಿಯು ತ್ರಿಪದಿಯ ಭೇದಗಳೆಂದು ಪರಿಗಣಿಸಿದ 'ಚಿತ್ರ' 'ವಿಚಿತ್ರ' ಮೊದಲಾದ ಕೆಲವು ಛಂದಸ್ಸುಗಳನ್ನು ಹೇಳಿರುವನಷ್ಟೆ? ಇವು ಸಂಗೀತ ಗ್ರಂಥಗಳಲ್ಲಿ ಏಲಾ ಭೇದಗಳೆಂದು ಕೊಟ್ಟಿರುವ 'ಚಿತ್ರ' 'ವಿಚಿತ್ರಾ'ದಿ ಹೆಸರಿನ ಬಂಧಗಳಿಂದ ಭಿನ್ನವಾಗಿಲ್ಲವೆಂದು ತಿಳಿಯಬಹುದಾಗಿದೆ. ಜಯಕೀರ್ತಿಯು 'ಚಿತ್ರ' ತ್ರಿಪದಿಯ ಲಕ್ಷಣವಾಗಿ ಹೀಗೂ ಹೇಳಿರುತ್ತಾನೆ:

ಮಾತ್ರಾ ಭಿರ್ದ್ವಾರ್ಷಷ್ಯಾ| ಚಿತ್ರಾಸ್ಯಾದಿತ್ಯೇವಂ
ಮಾತ್ರಾ ವರ್ಧಂತೇ ಕ್ವಚಿದಸ್ಯಾನ್ಯೂನಾಸ್ತಾ
ಸೂತ್ರಂ ಪೂರ್ವೋಕ್ತಂ ಕಿಮುಮೂಭಿಃ
ಋತು ಹತ ಗಿರಿಪರಿ|ಮಿತ ಲಘು ರಿಯ ಮತ
ಯತಿ ಯತಿ ರಖಿಲಗುರು ರಿಹ ನಭವತಿ
ಯತಿ ಪತಿ ಗದಿತ ಮತ ಇತಿ
ಸರ್ವ ಗುರುರ್ನ ಚೇತ್ ಸರ್ವಥಾ ತ್ರಿಪದಿ ಕಾ'

ಶಾರ್ಙದೇವನು ಹೇಳುವ ಚಿತ್ರಾದಿ ಏಲೆಗಳ ಲಕ್ಷಣವೂ ಇದಕ್ಕೆ ಸಂವಾದಿಯಾಗಿಯೇ ಇದೆ:

'ಏಕ ದ್ವಿತ್ರಿ ಚತುಃ ಪಂಚ ಮಾತ್ರಾವೃದ್ಧಿರ್ಯಥಾಂಘ್ರಿಷು
ತದಾವಿಚಿತ್ರಮಾತ್ರೈಲಾಂ ತಾಂ ಜಗಾದ ದನಂಜಯಃ
ನಂದಿನೀ ಚಿತ್ರಿಣೀ ಚಿತ್ರಾ ವಿಚಿತ್ರೇತ್ಯಭಿಧಾನತಃ
ರತಿಲೇಖಾದಯಃ ಪ್ರೋಕ್ತಾಃ ಕ್ರಮಾದನಿಯತೈರ್ಗಣೈಃ'
'ಯೇಲಯೋರಾದ್ಯಯೋರಂಘ್ರೀ ವೃತ್ತಸ್ತಾವಯುಜಾ ವಿಹ
ತತ್ತಲ್ಲಕ್ಷ್ಮ್ಯಯದಾ ತಾಸು ತುರ್ಯಃ ಪಾದೋ ನಿಬಧ್ಯತೇ
ಗಣಾದೇರ್ನೂನತಾಧಿಕ್ಯಾದೇಲಾಭಾಸಾ ಇಮೇ ಮತಾಃ'

ಹಿಂದೆ ಹೇಳಿರುವ ಏಲಾಭಾಸದ ಲಕ್ಷಣದಂತೆ ನಾಲ್ಕು ಪಾದಗಳಿದ್ದ ರತಿಲೇಖೆಯ ಪಾದಗಳಲ್ಲಿ ಒಂದರಿಂದ ಐದರ ವರೆಗೆ ಮಾತ್ರೆಗಳು ಹೆಚ್ಚಿರುವ ಭೇದಗಳು 'ವಿಚಿತ್ರಾ'ದಿ ಹೆಸರುಗಳನ್ನು ಪಡೆಯುತ್ತವೆ ಎಂಬ ತಾತ್ಪರ್ಯ. ರತಿಲೇಖೆಯ ಮೂರು ಪಾದಗಳಿಗೆ ನಿಯತವಾದ ಮಾತ್ರಾಸಂಖ್ಯೆ ೩೨. ನಾಲ್ಕನೆಯ ಪಾದ ಮೂರನೆಯ ಪಾದದಷ್ಟೇ ದೊಡ್ಡದಿರಬೇಕೆಂಬ ನಿಯಮವಿದೆ. ಆಗ ಹತ್ತು ಮಾತ್ರೆಗಳು

ಹೆಚ್ಚಾದುವು. ಇನ್ನು ಪ್ರತಿಪಾದದಲ್ಲಿ ಐದು ಮಾತ್ರೆಗಳಂತೆ ವೃದ್ಧಿ ಆದರೆ, ಇಪ್ಪತ್ತು ಮಾತ್ರೆಗಳು ಇನ್ನೂ ಹೆಚ್ಚಾಗಿ ಒಟ್ಟು ಮಾತ್ರೆಗಳ ಸಂಖ್ಯೆ ೬೨ ಆಯಿತು. ಇದು 'ಚಿತ್ರ' ಎಂಬ ಏಲೆಗಿಂತ ಭಿನ್ನವಾಗಿಲ್ಲ. 'ಮಾತ್ರಾಭಿರ್ದ್ವಾರ್ಷಷ್ಟ್ಯಾ ಚಿತ್ರಾಸ್ಯಾತ್' ಎಂಬ ಜಯಕೀರ್ತಿಯ ಲಕ್ಷಣಕ್ಕೆ ಇದು ಸರಿಯಾಗಲಿಲ್ಲವೆ? ಇತರ ಭೇದಗಳನ್ನು ಹೀಗೆಯೇ ನೋಡಿಕೊಳ್ಳಬಹುದು. 'ಮದನವತಿ' ಎಂಬ ಇನ್ನೊಂದು ಛಂದಸ್ಸಿದೆಯಷ್ಟೆ? ಛಂದಸ್ಪತೀ ರೂಪಗಳಲ್ಲಿ 'ಏಲಾ ಮದನವತಿ' ಎಂಬುದೊಂದು ಭೇದವೂ ಇದೆ. ಸೋಮೇಶ್ವರ ಅದಕ್ಕೆ ಕೊಟ್ಟಿರುವ ಲಕ್ಷ್ಯವು ಜಯಕೀರ್ತಿಯ ಆ ಲಕ್ಷಣ ಪದ್ಯಕ್ಕೆ ಹೊಂದಿಕೆಯಾಗಿ ಕಾಣುತ್ತದೆ. ಅದು ಹೀಗಿದೆ:

'ಅನವರತ ಭುವನ ಶರಣ (ಅವನತ) ಪ್ರಣತಜನರುದಿತ ಹರಣ
ಸಕಲ ಸುರಾಸುರ ಪೂಜಿತಪದಯುಗ(ಳ) ನಾರಾಯಣ
ದಿತಿಜಾಧಿಪತಿ ಬಲದಮನ ಸತತ ವಿಬುಧಭಯಶಮನ
ಪ್ರಶಸ್ತ ಶಂಖ ಚಕ್ರ ಗದಾ ಪಾಣಿ ಹರೇ (ಸದಾ) ದಾಮೋದರ'

(ಈ ಪದ್ಯದಲ್ಲಿ ಕೆಲವು ಪಾಠದೋಷಗಳಿದ್ದಂತೆ ಮೂಲಗ್ರಂಥದಿಂದ ತಿಳಿಯುತ್ತದೆ.)
ಜಯಕೀರ್ತಿಯ ಲಕ್ಷಣ:

ಪ್ರಥಮಕ ಇಹಗುರು ಪರಕೃತಿ ಪರಿಮಿತ ಲಘ್ವಿತರೇ
ಪೃಥಪಾದಾ ರತಿಗಣ ಪದಗತಿ ಮದನಗಣಾಸ್ಯುಃ
ಗ್ರಥಿತ ಪದಾವಲಯಸ್ತ್ವೈಕ್ಷೇದಿತಿ ಮದನವತೀ
ಪ್ರಥಿತ ಯತಿಃ ಪ್ರತಿಚರಣಂ ದ್ವಾವಿಂಶತಿಮಾತ್ರಾಃ

ಈ ಮಾತ್ರಾಸಂಖ್ಯೆಯಿಂದ, ಪ್ರಥಮ ಪಾದದಲ್ಲಿ ಲಘ್ವಕ್ಷರಗಳಿರುವದರಿಂದ ಮತ್ತು ಒಂದೇ ಹೆಸರಿರುವದರಿಂದ ಹೀಗೆಂದು ಊಹಿಸಬಹುದಷ್ಟೆ ಹೊರತು ಇತರ ಪಾದಗಳ ಗುಣಸಂಖ್ಯೆಯಲ್ಲಿ ಸಮಾನತ್ವವಿಲ್ಲ. ಹಾಗಾಗಿ, ಅದೇ ಇದು ಎಂದು ನಿಷ್ಕರ್ಷೆಯಾಗದು; ಗಣನಿಯಮವು ಶಿಥಿಲವಾದ ವಿಕೃತೈಲಾರೂಪವಾಗಿರುವುದು ಸಂಭವನೀಯ ಎಂದಿಷ್ಟೆ ಹೇಳಬಹುದು.

ವಿಶೇಷ ಗಮನಾರ್ಹವಾದ ಇನ್ನೊಂದು ಸಂಗತಿ ಎಂದರೆ, ನಾಗವರ್ಮ ಜಯಕೀರ್ತಿಗಳು ಹೇಳಿರುವ ಅಥವಾ ಸಂಗೀತ ಗ್ರಂಥಗಳಲ್ಲಿ ಹಿಂದೆ ಹೇಳಿದಂತೆ ಅದಕ್ಕೆ ಸದೃಶವಾದ 'ಛಂದಸ್ಪತೀ ರತಿಲೇಖೆಗೂ' ನಮ್ಮ 'ಸಾಂಗತ್ಯ'ಕ್ಕೂ ಹೇಳಬಹುದಾದ ಭೇದವೇ ಇಲ್ಲ ಎಂಬುದು. 'ತ್ರಿಪದೀ ತೃತೀಯಾಂಘ್ರಾ ವಪಮುಂಚತ್ಯೇ ಲೇತಿ ಸುಪಠಿತಾಗೇಯ ವಿದಜನ್ಯೈಃ' ಎಂಬ ಜಯಕೀರ್ತಿಯ ಏಲಾ ಲಕ್ಷಣವು ಸಾಂಗತ್ಯದ ಅರ್ಧಭಾಗವಾಗುವದಷ್ಟೆ? ಪಾದದ ಕೊನೆಯದು ರತಿಗಣವಾಗಬೇಕೆಂಬುದು ಸಾಂಗತ್ಯದಲ್ಲಿ ಸಾಮಾನ್ಯವಾಗಿ ಕಾಣುವ ನಿಯಮ. ಅಂತೆಯೇ

ಉಳಿದ ಆರು ಕಾಮಗಣಗಳಾಗಿರಬೇಕು. ಲಕ್ಷ್ಯದಲ್ಲಿ ಇದಕ್ಕೆ ಅಪವಾದವಿದ್ದೇ ಇದೆ. ಕೊನೆಯಲ್ಲಿ ಎರಡು ರತಿಗಣವಿರುವುದೂ ಆರನೆಯದು ರತಿಗಣವಾಗಿ ಏಳನೆಯದು ಕಾಮಗಣವಾಗಿರುವುದೂ ಇದೆ. ಕೊನೆಯ ಯತಿಸ್ಥಾನವು ಒಂದಕ್ಷರದಷ್ಟು ಹಿಂದೆ ಮುಂದಾಗುವ ಮಾತ್ರದಿಂದ ಆ ರತಿಗಣ ಕಾಮಗಣಗಳು ಹಿಂದೆ ಮುಂದಾಗುವುದೂ ಸಂಭವನೀಯವೇ. ಉದಾಹರಣೆಗಾಗಿ—'ಸುಪರಿತಾ, ಗೇಯವಿ,ದಜನೈಃ,' ಎಂಬಂತೆ ಯತಿಸ್ಥಾನವನ್ನು ಒಂದಕ್ಷರ ಮುಂದೆ ದೂಡಿದರೆ ಶುದ್ಧಸಾಂಗತ್ಯವಾಗುವದು. ಹೀಗಾಗುವ ಒಂದೆರಡು ಪಾದಗಳನ್ನು ಪರಿಶೀಲಿಸಿರಿ—ಭರತೇಶ ವೈಭವದಿಂದ :

'ಅನಿತರೊಳಗೆ ಸಮರಾತ್ರಿಯ ಘಂಟೆತೊಂ।ಣನೆ ಕೇಳ,ಲಾಯ್ತು, ಹೋಯೆಂದು'
'ಈ ಧೂರ್ತೆಗಾಗಿ ಮುಸುಕನಿಕ್ಕಬೇಕೆಯೆಂ।ದಾದೊರೆ,ಯೊಡನೆ, ಸುಡಿದರು'

ಹೀಗಾಗುವಾಗ, ಸಾಂಗತ್ಯವೆಂಬುದು ಹನ್ನೆರಡನೆಯ ಶತಮಾನದಲ್ಲಿ ಯದೃಚ್ಛೆಯಿಂದ ಅಕಸ್ಮಾತ್ ಹುಟ್ಟಿದ ನವೀನ ಛಂದಸ್ಸೆಂದು ಎಣಿಸಬೇಕಾಗಿಲ್ಲ. ಎರಡು ಏಲಾ ಪದಗಳು ಒಟ್ಟು ಸೇರಿದರೆ ಆಗುವುದು ಒಂದು ಸಾಂಗತ್ಯ. ಸಂಗೀತದ ಗಾನಕ್ರಮದಲ್ಲಿ ತ್ರಿಪಾದಾತ್ಮಕವಾದ ಏಲೆಯನ್ನು ಒಂದನ್ನಾಗಿ ಹಾಡುತ್ತಿದ್ದಿಲ್ಲ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಬಂಧಗಳು ಸೇರಿದ ಗೇಯವಸ್ತುವು ಸಂಪೂರ್ಣವೆಂದೆಣಿಸಲ್ಪಡುತ್ತಿತ್ತು. ಪ್ರಬಂಧವೊಂದರಲ್ಲಿ ಉದ್ಗ್ರಾಹ, ಮೇಲಾಪಕ, ಧ್ರುವ, ಆಭೋಗ ಎಂಬ ನಾಲ್ಕು ಧಾತುಗಳಿರಬೇಕೆಂದು ಸಾಮಾನ್ಯ ನಿಯಮವಿರುವುದು. ಆಧುನಿಕ ಸಂಪ್ರದಾಯದ ಕೀರ್ತನೆಗಳಿಗೆ ಅನ್ವಯಿಸಿ ಹೇಳುವದಿದ್ದರೆ ಈ ನಾಲ್ಕು ಧಾತುಗಳನ್ನು ಕ್ರಮವಾಗಿ ಪಲ್ಲವಿ, ಅನುಪಲ್ಲವಿ, ಮಧ್ಯದ ಚರಣ, ಮುಗಿತಾಯದ ಚರಣ ಎಂದು ಹೇಳಬಹುದು. ಇವುಗಳಲ್ಲಿ ಮೇಲಾಪಕ, ಆಭೋಗಗಳೆಂಬ ಧಾತುಖಂಡಗಳು ಇಲ್ಲದಿರಲೂಬಹುದು. ಕನಿಷ್ಠಪಕ್ಷ ಉದ್ಗ್ರಾಹ ಮತ್ತು ಧ್ರುವ, ಪಲ್ಲವಿ ಅಥವಾ ಚರಣ ಇವೆರಡು ಇರಲೇಬೇಕು. ತ್ರಿಪಾದಾತ್ಮಕವಾದ ಏಲಾ ಬಂಧವೊಂದು ಉದ್ಗ್ರಾಹವಾಗಿ ಹಾಡಲ್ಪಡುತ್ತಿತ್ತು; ಇಂತಹ ಇನ್ನು ಮೂರು ಪಾದಗಳಲ್ಲಿ ಒಂದನ್ನು ಮೇಲಾಪಕವಾಗಿಯೂ ಇನ್ನೊಂದನ್ನು ಧ್ರುವವಾಗಿಯೂ ಕೊನೆಯದನ್ನು ಆಭೋಗವಾಗಿಯೂ ಹಾಡಲಾಗುತ್ತಿತ್ತು. ಇದು ಒಂದು ಕ್ರಮ. ಇನ್ನೊಂದು ಕ್ರಮದಂತೆ, ಕ್ರಮವಾಗಿ ಎರಡೆರಡು ಪಾದಗಳನ್ನು ಚರಣವೆಂದು ಗ್ರಹಿಸಿ ಆ ಪ್ರಕಾರ ಎರಡು ಬಂಧಗಳನ್ನೂ ಒಂದುಗೂಡಿಸಿ ಎಂದರೆ ಆರು ಪಾದಗಳನ್ನು ಮೂರು ಪಾದಗಳೆಂದೆಣಿಸಿ ಹಾಡಲಾಗುತ್ತಿತ್ತು. ಏಲಾಪದ ಗಾನದ ಸಾಮಾನ್ಯ ಲಕ್ಷಣ ಹೀಗೆ.

ಈ ಪ್ರಕಾರ ಉದ್ಗ್ರಾಹಾದಿ ಚತುರ್ಧಾತುಗಳು ಏಲೆಯ ಎರಡು ಬಂಧಗಳ ಹದಿನಾರು ಪದಗಳಲ್ಲಿ ಪರಿಪೂರ್ಣವೆಂದು ಎಣಿಸಲಾಗುತ್ತಿತ್ತು. ಆಭೋಗವೆಂಬುದು

ಪ್ರಬಂಧದ ಕೊನೆಯ ಧಾತು ಅಥವಾ ಗೀತಖಂಡ. ಆಭೋಗವೆಂದರೆ ಪರಿಪೂರ್ಣ ಎಂದರ್ಥ (' ಆಭೋಗಃ ಪರಿಪೂರ್ಣತಾ '–ಅಮರ) ಮೊದಲು ಹೇಳಿದಂತೆ ಎರಡು ' ಛಂದಸ್ಪತೀ ರತಿಲೇಖಾ ' ಬಂಧಗಳು ಒಟ್ಟು ಸೇರುವಾಗ ಒಂದು ಸಾಂಗತ್ಯ ವಾಗುವುದು. ಎರಡು ಏಲಿಗಳು ಸಂಗತವಾಗಿರುವುದರಿಂದಲಿ ಇದು ಸಾಂಗತ್ಯ ವೆಂಬ ಸಾರ್ಥಕವಾದ ಸಂಜ್ಞಾಂತರವನ್ನು ಪಡೆದಿರುವುದೂ ಸಂಭವನೀಯ. ಕೆಲವು ಯಕ್ಷಗಾನಾದಿ ಗ್ರಂಥಗಳಲ್ಲಿ ಸಾಂಗತ್ಯಕ್ಕೆ ಸಂಗೀತವರ್ಣ, ಸಾಂಗೀತ್ಯತ ಎಂಬ ಹೆಸರಿರುವುದೂ ಕಾಣುತ್ತದೆ.

ಇದಲ್ಲದೆ, ಸಾಂಗತ್ಯವೆಂಬ ಹೆಸರಾಗಲು ಇನ್ನೂ ಒಂದು ಕಾರಣವಿದೆ. ಅನೇಕ ಗ್ರಂಥಗಳಲ್ಲಿ ಸಾಂಗತ್ಯಕ್ಕೆ ಚರಿತೆ ಎಂದು ಹೆಸರಿರುವುದು ಕಾಣುತ್ತದೆ. ಈ ಬಂಧದಲ್ಲಿ ರಚಿತವಾದ ಕಾವ್ಯಗಳನ್ನು ಹೆಚ್ಚಾಗಿ, ' ಚರಿತೆ ', ' ಸಂಗತಿ ' ಎಂದು ಆಯಾ ಕವಿಗಳೇ ಹೆಸರಿಸಿರುತ್ತಾರೆ. ಉದಾಹರಣೆಗಾಗಿ—ಅಂಜನಾ ಚರಿತೆ, ಅನಂತನಾಥ ಚರಿತೆ, ಅಬ್ಬಲೂರು ಚರಿತೆ, ಕರಸ್ಥಳದ ನಾಗಲಿಂಗನ ಚರಿತೆ, ಪ್ರಭಂಜನ ಚರಿತೆ, ಕಾಮಚರಿತೆ, ಭರತೇಶ್ವರ ಚರಿತೆ, ಉದ್ಧವ ಚರಿತೆ ಇತ್ಯಾದಿ ಹೆಸರುಗಳಿರುವವು ಕೆಲವು. ಇನ್ನು ಕೆಲವು ತ್ರಿಪುರದಹನ ಸಂಗತಿ, ನೇಮಿ ಜಿನೇಶ ಸಂಗತಿ, ಕುಮಾರರಾಮನ ಸಂಗತಿ, ಮರುಳು ಸಿದ್ಧೇಶ್ವರ ಸಂಗತಿ, ಭೈರವೇಶ್ವರ ಸಂಗತಿ, ಬಸವ ಪವಾಡ ಸಂಗತಿ ಇತ್ಯಾದಿ ಹೆಸರುಗಳುಳ್ಳವು. ಏಕ ಕರ್ತೃಕವಾದ ಎರಡು ಸಾಂಗತ್ಯ ಕಾವ್ಯಗಳಲ್ಲಿ ಒಂದಕ್ಕೆ ಚರಿತೆ ಎಂದೂ ಇನ್ನೊಂದಕ್ಕೆ ಸಂಗತಿ ಎಂದೂ ಹೆಸರಿದೆ. ಶಿಶು ಮಾಯಣನ ಕೃತಿಗಳಲ್ಲಿ ಒಂದು ' ಅಂಜನಾ ಚರಿತೆ ', ಇನ್ನೊಂದು ' ತ್ರಿಪುರದಹನ ಸಂಗತಿ.' ಹಾಗೆಯೇ ಮಂಗರಸನೂ ಒಂದನ್ನು ' ಪ್ರಭಂಜನ ಚರಿತೆ ' ಎಂದೂ ಇನ್ನೊಂದನ್ನು ' ನೇಮಿ ಜಿನೇಶ ಸಂಗತಿ ' ಎಂದೂ ಕರೆದಿದ್ದಾನೆ. ಈ ಸಂಗತಿಯೇ ಸಾಂಗತ್ಯವಾಗಿರುವುದೂ ಈ ಎರಡು ಹೆಸರು ಗಳೇ ಆ ಬಂಧಕ್ಕೆ ಲಾಕ್ಷಣಿಕವಾಗಿ ರೂಢಿಯಲ್ಲಿ ಬಂದಿರುವುದೂ ಹೆಚ್ಚು ಸಂಭವ ನೀಯವೆಂದು ಹೇಳಬಹುದು—ದೇವರಾಜನು ತನ್ನ ಕಾವ್ಯವನ್ನು 'ಸೊಬಗಿನ ಸೋನೆ' ಎಂದು ಕರೆದಿರುವುದರಿಂದ ಆ ಕಾವ್ಯದ ಬಂಧಕ್ಕೂ ಸೊಬಗಿನ ಸೋನೆ ಎಂದು ಹೆಸರಾಗಿರುವಂತೆ.

' ಈ ಸೊಬಗಿನ ಸೋನೆ ' ಎಂಬ ಬಂಧವನ್ನೇ ಪರಿಶೀಲಿಸೋಣ. ಇದು ಹೊಸತಾಗಿ ನಿರ್ಮಾಣವಾದ ಛಂದಸ್ಸೇನೂ ಅಲ್ಲ. ಹರಿದಾಸರ ಮತ್ತು ಶಿವದಾಸರ ಪದ ಸಾಹಿತ್ಯಗಳಲ್ಲಿ, ಯಕ್ಷಗಾನಾದಿಗಳಲ್ಲಿ ಸಹ ಬಂಧದ ರಚನೆಗಳು ವಿಶೇಷ ವಾಗಿವೆ. ತ್ರಿವಿಧ, ತ್ರಿವುಡೆ, ತ್ರಿವದಿ ಎಂಬ ಹೆಸರುಗಳೂ ಇದಕ್ಕಿವೆ. ಸಾಂಗತ್ಯಕ್ಕೂ ಇದಕ್ಕೂ ಹೆಚ್ಚು ಅಭ್ಯಂತರವಿಲ್ಲವಷ್ಟೆ; ಸಾಂಗತ್ಯದ ಒಂದು ಪಾದದಲ್ಲಿ ಆರು ಕಾಮಗಣಗಳ ಮುಂದೆ ಒಂದು ರತಿಗಣವಿರುವ ನಿಯಮ; ಏಳೂ ಕಾಮಗಣ ಗಳಾದರೆ ತಿವದಿ ಅಥವಾ ' ಸೊಬಗಿನ ಸೋನೆ 'ಯಾಗುತ್ತದೆ.

ಪ್ರತಿಪಾದದಲ್ಲಿ ಏಳು ಕಾಮಗಣಗಳೂ ಏಳು ಪದಗಳೂ ಇರುವ ದೇವರಾಜನ ' ಸೊಬಗಿನ ಸೋನೆ '—ಕಾವ್ಯದ ಒಂದೆರಡು ಬಂಧಗಳನ್ನು ಪರಿಭಾವಿಸಿರಿ :

ಹರಿಯೆನೆ, ಶಂಖ ಚ,ಕ್ರಾಂಕಿತ, ಶಿವನೆನೆ, | ಸುರಸಿಂಧು,ವಹನಬ್ಜ,ಭವನೆನೆ |
ಸರಸತಿ, ಯಾಜ್ಞಸಿಂ,ದ್ರನೆನೆ ಬ,ಳಾಹಕ, | ಪರಿವೃತ, ಮುದ್ರ ಪೂ,ರ್ವಸಮುದ್ರ |

ಪಾರ್ತಿ ಸುಬ್ಬಕವಿಯ ಕೃಷ್ಣಚರಿತೆ ಯಕ್ಷಗಾನದ ಒಂದು ತ್ರಿವುಡೆ :

ಕಂಕಣ. ಕೈಯ ತೋ,ಳ್ಬಳೆ ಮುಂಗೈ, ಸರಿಗೆ ಪ,|ದ್ಮಾಂಕಿತ, ಹಸ್ತೆ ಕೇ,ಸರಿ ಮಧ್ಯೆ |
ಕುಂಕುಮ, ಗಂಧ ಕ,ಸ್ತೂರಿ ಪರಿ,ಮಳಸರ್ವಾ,| ಲಂಕಾರ,ಪಾದಳಂ, ಬುಜಗಂಧಿ ||

ಪರಿಶೀಲಿಸಿ ನೋಡಿದರೆ, ಪರಂಪರೆಯಿಂದ ನಮ್ಮ ಸಾಹಿತ್ಯದಲ್ಲಿ ಬಳಸಿ ಬಂದಿರುವ ಈ ಬಂಧವು ಶುದ್ಧವಾದ ಏಲೆಯೆ ಆಗಿದೆ. ' ರತಿಲೇಖಾರತಿಗಣ್ಯೈಃ ಕಾಮಲೇಖಾತು ಮಾನ್ಮಥೈಃ ' ಎಂದು ಹಿಂದೆ ಹೇಳಿದ ಲಕ್ಷಣಪ್ರಕಾರ ಏಳುಪದಗಳಿದ್ದು ಸಂಪೂರ್ಣ ಕಾಮಗಣಬದ್ಧವಾಗಿರುವುದು ಏಲೆಯ ಮೂಲ ಛಂದಸ್ಸುಗಳಲ್ಲಿ ಎರಡನೆಯದಾದ ಕಾಮಲೇಖೆ. ಈ ಸೊಬಗಿನ ಸೋನೆಯ ಒಂದು ಪಾದವು ಅದೇ ನಿಯಮದಲ್ಲಿರುವುದಷ್ಟೆ? ಎರಡು ಕಾಮಲೇಖೆ ಸೇರುವಾಗ ಅದು ಸೊಬಗಿನ ಸೋನೆ ಎಂದು ಹೆಸರಾದ ' ತಿವದಿ 'ಯೇ ಆಗುವುದು. ತಿವದಿ, ತ್ರಿವುಡೆ ಎಂಬ ಹೆಸರು ಬಿದ್ದಿರಲು ಇದು ತ್ರಿಪಾದಾತ್ಮಕವಾದ ಏಲೆಯಾಗಿದ್ದುದೇ ಕಾರಣವೆಂಬುದು ಸ್ಪಷ್ಟವೇ ಸರಿ.

ಹೀಗೆ ಸ್ವತಂತ್ರ ಛಂದಸ್ಸುಗಳೆಂದು ಪರಿಗಣಿಸಲಾದ ಅನೇಕ ಬಂಧಗಳು ನಿಜವಾದ ಏಲಾ ಭೇದಗಳೇ ಎಂದು ಸಂಗೀತಶಾಸ್ತ್ರ ಗ್ರಂಥಗಳಲ್ಲಿ ಹೇಳಿದ ಲಕ್ಷಣಗಳಿಂದ ಸಿದ್ಧವಾಗುತ್ತದೆ.

ಸಂಗೀತದಲ್ಲಿ ಏಲಾಪ್ರಬಂಧಗಳನ್ನು ಮಂಠ, ದ್ವಿತೀಯ, ಕಂಕಾಲ, ಪ್ರತಿ ತಾಲಗಳೆಂಬ ನಾಲ್ಕರಲ್ಲಿ ಯಾವುದಾದರೂ ಒಂದು ತಾಳದಲ್ಲಿ ಹಾಡಬೇಕೆಂಬ ನಿಯಮವಿದೆ. ಇತರ ತಾಳಗಳಲ್ಲಿ ಹಾಡಕೂಡದು. ಆ ತಾಳಗಳ ಗುರು, ಲಘು ದ್ರುತಪ್ರಮಾಣವನ್ನು ಛಂದೋಗಣನೆಯ ಗುರು ಲಘ್ವಕ್ಷರ ಪ್ರಮಾಣಕ್ಕೆ ಅನ್ವಯಿಸಿ ಹೇಳುವುದಾದರೆ ಈ ನಾಲ್ಕು ತಾಳಗಳು ೪, ೫, ೬, ೭ ಅಕ್ಷರ ಕಾಲದವೆಂದು ಹೇಳಬಹುದು. ನಮ್ಮ ರೂಢಿಯ ತಾಳಗಳಲ್ಲಿ ಏಕತಾಳ, ಝಂಪೆ ತಾಳ (ಖಂಡ ಛಾಪು), ರೂಪತಾಳ, ತ್ರಿಪುಟತಾಳ (ಮಿಶ್ರಛಾಪು) ಇವುಗಳ ಲಯ ಗತಿಗಳಿಗೆ ಹೊಂದುವ ಬಂಧಗಳಿವು. ದ್ವಿತೀಯ ತಾಲ, ಪ್ರತಿತಾಲ, ಜಗಣಮಟ್ಟೆ, ಸಗಣಮಟ್ಟೆ–ಇವು ಚತುರಸ್ರ ಏಕತಾಲದ ಲಯಗತಿಗೂ ಚತುರ್ವಿಧ ಕಂಕಾಲಗಳು ಖಂಡಜಾತಿ ಝಂಪೆ ಕಾಲದ ಲಯಗತಿಗೂ ಸಗಣಮಟ್ಟೆಯು ಚತುರಸ್ರ ಜಾತಿ ರೂಪಕ ತಾಲದ ಲಯಗತಿಗೂ ಮಟ್ಟೆತಾಳದ ಇನ್ನೊಂದು ಭೇದವು ಮಿಶ್ರ ಛಾಪುವಿನ ಲಯಕ್ಕೂ ಸರಿಯಾಗುವ ತಾಲಗಳಾಗಿವೆ.

ಏಲೆ—ಏಳೆ

('ಮಾನಸೋಲ್ಲಾಸ'ದಲ್ಲಿ) ಹೇಳಿರುವ ಏಲಾ ಪ್ರಬಂಧಗಳಿಗೂ ಕರ್ಣಾಟಕ ವಿಷಯ ಜಾತಿಯಲ್ಲಿ ನಾಗವರ್ಮ ಜಯಕೀರ್ತಿಗಳು ಹೇಳಿರುವ ಏಳೆ ಎಂಬ ವೃತ್ತಕ್ಕೂ ಯಾವ ಸಂಬಂಧವೂ ಇರುವಂತೆ ತೋರುವುದಿಲ್ಲ.[1]

ತ್ರಿಪದಿಯನ್ನು, ಧಾನ್ಯವನ್ನು ಒರಳಲ್ಲಿ ಹಾಕಿ ಕುಟ್ಟುವಾಗಲೂ (=ಕಂಡನ) ಶೃಂಗಾರ ವಿಪ್ರಲಂಭಗಳನ್ನು ವರ್ಣಿಸುವಾಗಲೂ ಹಾಡಬೇಕು; ಕಥನಕಾವ್ಯದಲ್ಲಿ ಷಟ್ಪದಿಯನ್ನು ಬಳಸಬೇಕು; ವಿವಾಹಕಾಲದಲ್ಲಿ ಧವಲವನ್ನು ಆಲಾಪಿಸಬೇಕು; ಮಂಗಲಗೀತವನ್ನು ಉತ್ಸವ ಕಾಲದಲ್ಲಿ ಉಪಯೋಗಿಸಬೇಕು; ಯೋಗಿಜನರು ಅಧ್ಯಾತ್ಮ ನಿರೂಪಣೆಯಲ್ಲಿ ಚರ್ಯಾ ಎಂಬ ಪ್ರಬಂಧವನ್ನು ರಚಿಸಿಕೊಳ್ಳಬೇಕು; ಮಹಾರಾಷ್ಟ್ರದ ಸ್ತ್ರೀಯರು ಒನಕೆವಾಡಾಗಿ ಓವಿಯನ್ನು ಉಪಯೋಗಿಸುತ್ತಾರೆ; ಚಚ್ಚರೀ ಪ್ರಬಂಧವನ್ನು ವಸಂತಕಾಲದ ಹೋಳಿ ಹಬ್ಬದಲ್ಲಿಯೂ (=ಹೋಲಾಕಾ) ವೀರವರ್ಣನೆಯಲ್ಲಿ ರಾಹಡಿಯನ್ನೂ ದಂತಿಯನ್ನು ಗೋಪಾಲಕರ ಸಂವಾದದಲ್ಲೂ ತಂತಮ್ಮ ಸಹಜ ಭಾಷೆಯಲ್ಲಿ ಹಾಡಬೇಕು....ಅಂಕದಲ್ಲಾಗಲಿ ಮಲ್ಲಯುದ್ಧ ದಲ್ಲಾಗಲಿ ಸೋತವನನ್ನು ರಾಗಯುಕ್ತವಾದ ಪರಿಹಾಸಗರ್ಭಿತವಾದ ಮತ್ತು ಮರ್ಮಭೇದಕವೂ ಮಿತವೂ ಆದ ನಿಂದೆಯನ್ನುಳ್ಳ ತ್ರಿಪದಿಗಳಿಂದ ಹಾಡಿಸಬೇಕು. ಇಂಥ ಛಂದಸ್ಸನ್ನು ಇಂಥ ಕೆಲಸಕ್ಕೆ ಉಪಯೋಗಿಸಬೇಕೆಂಬ ವಿಷಯದಲ್ಲಿ (ಮಾನಸೋಲ್ಲಾಸ'ದ) ಶ್ಲೋಕಗಳು ಹೊಸ ತಿಳಿವಳಿಕೆಯನ್ನು ನೀಡುತ್ತವೆ.... ಇಲ್ಲಿ ಬರುವ ಏಲಾ ಪ್ರಬಂಧಗಳ ರಚನೆಯನ್ನು ಛಂದಸ್ಸಿನ ದೃಷ್ಟಿಯಿಂದಲೂ ಸಂಗೀತದ ದೃಷ್ಟಿಯಿಂದಲೂ, ಎರಡನ್ನೂ ಬಲ್ಲವರು ಹೆಚ್ಚು ಗಾಢವಾಗಿ ವಿಚಾರ ಮಾಡಬೇಕಾಗಿದೆ.[2]

—ಡಿ. ಎಲ್. ನರಸಿಂಹಾಚಾರ್

---

[1] 'ಮಾನಸೋಲ್ಲಾಸ'ದಲ್ಲಿ ಛಂದಸ್ಸು: ಪ್ರಬುದ್ಧ ಕರ್ಣಾಟಕ, ಸಂಪುಟ ೪೫, ಸಂಚಿಕೆ ii, ಪು. ೬೯೦

[2] ಅದೇ ಲೇಖನ, ಪು. ೭೨–೭೩ (ಆವರಣಗಳೊಳಗೆ ಕೊಟ್ಟಿರುವ ಪದಗಳು ಸಂಪಾದಕರವು)

ಡಾ. ಟಿ. ಆರ್. ರಾವ್

ಕಲಿಕೆ*

'ಕಲಿಕೆ' (ಲರ್ನಿಂಗ್) ಮನೋವಿಜ್ಞಾನದ ಒಂದು ಶಾಖೆ. ಅನೇಕ ಮನೋವಿಜ್ಞಾನಿಗಳು ಕಲಿಕೆಯ ಪ್ರಕ್ರಿಯೆಯನ್ನು (ಲರ್ನಿಂಗ್ ಪ್ರೋಸೆಸ್) ವಿವರಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಕಲಿಕೆಯ ಪರಿಭಾಷೆಯ ವಿಚಾರವಾಗಿ ಭಿನ್ನಾಭಿಪ್ರಾಯಗಳು ಮೊದಲಿನಂತೆಯೇ ಉಳಿದಿವೆ. ಇಷ್ಟಾದರೂ ಪ್ರಾಣಿಗಳ ಕಲಿಕೆಗೆ ಸಂಬಂಧಿಸಿದಂತೆ ಇರುವ ಅನೇಕ ಅಂಶಗಳ ಬಗ್ಗೆ ಸಾಮಾನ್ಯವಾಗಿ ಎಲ್ಲಾ ಮನೋವಿಜ್ಞಾನಿಗಳಲ್ಲೂ ಏಕಾಭಿಪ್ರಾಯವಿದೆ. ಯಾವ ರೀತಿಯಲ್ಲಿ ಪ್ರಾಣಿಗಳ ಸಂವೇಗ, ಚಯಾಪಚಯ, ಚಟುವಟಿಕೆ, ಚೋದನೆ ಮತ್ತು ಅಭ್ಯಾಸಗಳು ಅವುಗಳ ಕಲಿಕೆಗೆ ಸಂಬಂಧಿಸಿವೆ ಎಂಬ ವಿಷಯವನ್ನು ಈ ಲೇಖನದಲ್ಲಿ ವಿಮರ್ಶಿಸಲಾಗಿದೆ. ಈ ವಿಚಾರವಾಗಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಣಿಮನೋವಿಜ್ಞಾನದ ಪ್ರಯೋಗಶಾಲೆಯಲ್ಲಿ ೧೯೬೫ರಿಂದೀಚೆಗೆ ನಡೆಸಿದ ಪ್ರಯೋಗಗಳನ್ನೂ ಇವುಗಳಿಂದ ಹೊರಬಿದ್ದ ಅಂಶಗಳನ್ನೂ ಈ ಲೇಖನದಲ್ಲಿ ವಿವೇಚಿಸಿದೆ.

ಉಪಕರಣಗಳು

ಈ ಪ್ರಯೋಗಗಳಿಗಾಗಿ ಬಳಸಿದ ಉಪಕರಣಗಳಲ್ಲಿ ಮುಖ್ಯವಾದವು ಶ್ವಾಸಮಾಪಕ, ನೀರಿನ ವ್ಯೂಹ, ತೆರೆದ ಕ್ಷೇತ್ರದ ಪರೀಕ್ಷೋಪಕರಣ ಮತ್ತು ಕ್ರಿಯಾಮಾಪಕ ಪಂಜರಗಳು. ಇವುಗಳ ಜೊತೆಗೆ ಉಷ್ಣಮಾಪಕ, ಭಾರಮಾಪಕ ಮೊದಲಾದ ಉಪಕರಣಗಳನ್ನೂ ಬಳಸಲಾಯಿತು. ಶ್ವಾಸಮಾಪಕ ಮತ್ತು ನೀರಿನ ವ್ಯೂಹಗಳಿಗಾಗಿ ಆದ ವೆಚ್ಚವನ್ನು ಭಾರತ ಸರ್ಕಾರದ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನ ಕೇಂದ್ರ ವಹಿಸಿಕೊಂಡು ಸಂಶೋಧನೆಗೆ ಸಹಾಯ ಮಾಡಿತು.

---

* ಪ್ರಾಣಿಗಳ ಕಲಿಕೆಯ ವಿಚಾರವಾಗಿ ಲೇಖಕರು ನಡೆಸಿದ ಪ್ರಯೋಗಗಳು

ಶ್ವಾಸಮಾಪಕ

ಶ್ವಾಸಮಾಪಕ (ಚಿತ್ರ ೧) ಜೋಡಣೆಯಾದದ್ದು ಪ್ರಯೋಗಶಾಲೆಯಲ್ಲೇ. ಅದರಲ್ಲಿ ತೋರಿಸಿರುವಂತೆ ಪ್ರನಾಳದಲ್ಲಿ ಪೊಟಾಸಿಯಂ ಪರ್‌ಮ್ಯಾಂಗನೇಟನ್ನು ಹಾಕಿ ಕಾಯಿಸಿದಾಗ ಆಮ್ಲಜನಕದ ಶೇಖರಣೆ ಸಮತಲದ ಫ್ಲಾಸ್ಕಿನಲ್ಲಾಗುತ್ತದೆ. ನಮಗೆ ಬೇಕಾದಷ್ಟು ಪ್ರಮಾಣದಲ್ಲಿ ಆಮ್ಲಜನಕವನ್ನು, ಪರೀಕ್ಷೆಗೆ ಒಳಪಡಿಸಿರುವ ಪ್ರಾಣಿಯಿರುವ ಸೀಸೆಗೆ, ವರ್ಗಾಯಿಸಬೇಕಾದರೆ ಅಷ್ಟೇ ಪ್ರಮಾಣದಲ್ಲಿ ನೀರನ್ನು ಸೀಸೆಯ (4) ಮೇಲಿದ್ದ ಬ್ಯೂರೆಟ್‌ನಿಂದಬಿಡಬೇಕು. 6 ಎಂದು ಸೂಚಿಸಲಾಗಿರುವ ಸೀಸೆಯೊಳಕ್ಕೆ ಆಮ್ಲಜನಕ ಪ್ರವೇಶಿಸುವುದರ ಪರಿಣಾಮವಾಗಿ ಮಾನೊಮೀಟರಿ (ಚಿತ್ರ ೧ : 5)ನಲ್ಲಿದ್ದ ಬ್ರ್ಯಾಡಿದ್ರವದ ಅಂತಸ್ತಿನಲ್ಲಿ ವ್ಯತ್ಯಾಸವಾಗುತ್ತದೆ. ಆ ಸೀಸೆಯಲ್ಲಿ ಅಲ್ಬಿನೋ ಜಾತಿಯ ಇಲಿಯನ್ನಿಟ್ಟು ಮಾನೊಮೀಟರಿನ ದ್ರವವಸ್ತು ಮೊದಲಿನ ಅಂತಸ್ತನ್ನು ಮುಟ್ಟುವುದಕ್ಕೆ ಆಗುವ ಕಾಲವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. '6' ಸೀಸೆಯಲ್ಲಿದ್ದ ಸೋಡಾ ಲೈಂ ಇಲಿಯ ನಿಃಶ್ವಾಸದ ಗಾಳಿಯಲ್ಲಿದ್ದ ಇಂಗಾಲಾಮ್ಲವನ್ನೂ ನೀರಿನ ಕಣಗಳನ್ನೂ ಹೀರಿಕೊಳ್ಳುತ್ತದೆ. ಶ್ವಾಸಮಾಪಕದ ಸಹಾಯದಿಂದ ಇಲಿಗಳು ಉಸಿರಾಡುವ ವೇಗವನ್ನು ನಿರ್ಧರಿಸಿದ ಕಾಲದಲ್ಲೇ ಪ್ರಯೋಗಶಾಲೆಯ ವಾಯುಮಂಡಲದ ಒತ್ತಡವನ್ನೂ ಉಷ್ಣಾಂಶವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಇದಾದ ಅನಂತರ ೨೩° ಸೆಂ. ಮತ್ತು ೭೬೦ ಮಿ.ಮೀ. ಒತ್ತಡದ ಸನ್ನಿವೇಶದಲ್ಲಿ ಇಲಿಯ ಉಸಿರಾಟದ ವೇಗ ಎಷ್ಟರ ಮಟ್ಟಿಗೆ ಇರಬಹುದೆಂಬುದನ್ನು ಲೆಕ್ಕಹಾಕಿ ಅದರ ದೇಹದ ತೂಕದಿಂದ ಭಾಗಿಸಿದಾಗ ಇಲಿಯ ಮೂಲ ಚಯಾಪಚಯ ದೊರೆಯುತ್ತದೆ. ಇದು ಈ ಉಪಕರಣವನ್ನುಪಯೋಗಿಸುವಾಗ ಅನುಸರಿಸಿದ ವಿಧಾನ. ಈ ಉಪಕರಣ ಎಂ. ಎಕ್ಸ್. ಸ್ಯಾರೋ ಬರೆದಿರುವ ಎಕ್ಸ್‌ಪೆರಿಮೆಂಟಲ್ ಎಂಡೋಕ್ರಿನಾಲಜಿ ಎಂಬ ಗ್ರಂಥದಲ್ಲಿರುವಂತೆ ಇದ್ದರೂ ಇಲ್ಲಿಯ ಪ್ರಯೋಗಗಳಿಗೆ ಅನುಕೂಲವಾಗುವಂತೆ ಸ್ವಲ್ಪ ಬದಲಾವಣೆ ಮಾಡಬೇಕಾಯಿತು.

ನೀರಿನ ವ್ಯೂಹ

ಚಿತ್ರ ೨ರಲ್ಲಿ ತೋರಿಸಿರುವಂತೆ ನೀರಿನ ವ್ಯೂಹ ಎರಡು ಗುರಿಪೆಟ್ಟಿಗೆಗಳಿಂದ ಕೂಡಿದ ೧೧⅔ ಅಡಿಗಳ ಉದ್ದದ ಉಪಕರಣ. ಮರದಿಂದ ಮಾಡಲಾದ ಈ ಉಪಕರಣದ ಅಗಲ ೧ ಅಡಿ, ಆಳ ೧½ ಅಡಿ. ಇದರ ಮೇಲ್ಭಾಗದಲ್ಲಿ ಚಚ್ಚೌಕಾಕಾರದ ೧ ಅಡಿ ಅಳತೆಯ ಗಾಜಿನ ತಟ್ಟೆಗಳೇ ಮುಚ್ಚಳ. ಗುರಿಪೆಟ್ಟಿಗೆಯಲ್ಲಿ ಎರಡು ಕಡೆಗಳಲ್ಲೂ ಇಲಿ ಕುಳಿತುಕೊಳ್ಳುವುದಕ್ಕೆ ಅನುಕೂಲವಾಗುವಂತೆ ವೇದಿಕೆಗಳು. ಬೇಕಾದಾಗ ಈ ವೇದಿಕೆಗಳಿಗೆ ಹೋಗದಂತೆ ಇಲಿಗಳಿಗೆ ಅಡಚಣೆಯನ್ನು ಒಡ್ಡುವುದಕ್ಕಾಗಿ ಮರದ ಹಲಗೆಗಳನ್ನು ಉಪಯೋಗಿಸುವುದಕ್ಕೆ ಅನುಕೂಲವಿದೆ. ಇಲಿಗೆ

ಕಾಣಿಸುವಂತೆ, ಅದು ಓಡುವ ಮಾರ್ಗಕ್ಕೆ ಎದುರಾಗಿ, ಹಸುರು ಮತ್ತು ಕೆಂಪು ದೀಪಗಳು. ದೀಪಗಳಿಂದ ಒಂದು ಅಡಿಯು ದೂರದಲ್ಲಿ ವರಣಸ್ಥಾನ (ಚಾಯ್ಸ್ ಪಾಯಿಂಟ್). ಈ ವ್ಯೂಹದಲ್ಲಿ ಒಂದು ಅಡಿಯಷ್ಟು ಆಳದ ನೀರು. ದೀಪಗಳ ಬಣ್ಣಗಳನ್ನೂ ಇಲಿಗಳು ಆಯ್ಕೆಯ ಪೆಟ್ಟಿಗೆಯ ಕಕ್ಷೆಗಳಿಗೆ ಹೋಗಬೇಕಾದ ದಾರಿಯನ್ನೂ ಸಂಶೋಧಕ ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವುದಕ್ಕೆ ಸಾಕಾದಷ್ಟು ಅನುಕೂಲಗಳುಂಟು. ಗುರಿಪೆಟ್ಟಿಗೆಯ ಬಲ ಮತ್ತು ಎಡಭಾಗದ ಕಕ್ಷೆಗಳಿಗೆ ಎಷ್ಟು ಸಾರಿ, ಯಾವ ಕ್ರಮದಲ್ಲಿ ಇಲಿಗಳನ್ನು ಬಿಡಬೇಕೆಂಬ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಮೊದಲು ಐದು ಇಲಿಗಳ ಮೇಲೆ ಪ್ರಯೋಗ ನಡೆಸಿ, ಈ ಉಪಕರಣಕ್ಕೆ ಯೋಗ್ಯವಾದ ಕ್ರಮವನ್ನು ನಿರ್ಧರಿಸಲಾಯಿತು. ಐದು ಸಾರಿ ಬಲಗಡೆಗೆ ಮತ್ತು ಐದು ಸಾರಿ ಎಡಗಡೆಗೆ ಬಿಡುವುದೂ ೧, ೪, ೫, ೬, ೮ನೆಯ ಪ್ರಯೋಗಗಳನ್ನು (ಟ್ರಯಲ್ಸ್) ಒಂದು ಕಡೆಗೂ ೨, ೩, ೭, ೯, ೧೦ನೆಯ ಪ್ರಯೋಗಗಳನ್ನು ಇನ್ನೊಂದು ಕಡೆಗೂ ವಿಭಾಗಿಸುವುದು ಸೂಕ್ತವಾಗಿ ಕಂಡುಬಂದುವು. ಹತ್ತು ಪ್ರಯೋಗಗಳನ್ನು ಒಂದು ತಂಡ (ಬ್ಲಾಕ್) ಎಂದು ನಿಶ್ಚಯಿಸಲಾಯಿತು. ಇಂಥ ತಂಡಗಳನ್ನು ಪ್ರಾಯೋಗಿಕ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತೆ ಹೆಚ್ಚಿಸಬಹುದಾಗಿತ್ತು ಅಥವಾ ಕಡಮೆ ಮಾಡಬಹುದಾಗಿತ್ತು. ಇಲಿಗಳು ನೀರಿನ ವ್ಯೂಹದ ಒಂದು ಕೊನೆಯಿಂದ ಗುರಿಪೆಟ್ಟಿಗೆಯನ್ನು ತಲಪುವ ಕಾಲವನ್ನು ನಿಲ್‌ಗಡಿಯಾರದ (ಸ್ಟಾಪ್-ವಾಚ್) ಸಹಾಯದಿಂದ ಗುರುತಿಸಿಕೊಂಡು, ಅವು ಈಜುವ ವೇಗವನ್ನು ನಿಶ್ಚಯಿಸಬಹುದಾಗಿತ್ತು. ಈ ಉಪಕರಣವನ್ನು ತಯಾರಿಸಿದ್ದೂ ಮೈಸೂರಿನಲ್ಲಿಯೇ. ಇದರ ತಯಾರಿಕೆಯನ್ನು ಯೋಜಿಸಿದ್ದು ಈ ಲೇಖಕ.

ತೆರೆದ ಕ್ಷೇತ್ರದ ಪರೀಕ್ಷೋಪಕರಣ

ಈ ಉಪಕರಣವನ್ನು (ಚಿತ್ರ ೩) ಇಲಿಗಳ ಸಂವೇಗದ ಅಳತೆಗಾಗಿ ಬಳಸಲಾಯಿತು. ಇದು ಮರದಿಂದ ಮಾಡಿದ ಚಚ್ಚೌಕನಾದ ಪೆಟ್ಟಿಗೆ. ಇದರ ಒಂದು ಪಕ್ಕದ ಉದ್ದ ೯೦. ಸೆಂಮೀ. ಇದರ ಒಳಗಡೆ ಕೆಳಭಾಗದ ಕ್ಷೇತ್ರ ೪೫ ಸೆಂಮೀ.ಗಳ ತ್ರಿಜ್ಯದ ಗೆರೆಗಳಿಂದ ೩೦°ಗಳ ಕಕ್ಷೆಗಳಾಗುವಂತೆ ವಿಭಾಗಿಸಲಾಗಿದೆ. ಇದರ ಮಧ್ಯ ಭಾಗದಲ್ಲಿ ಒಂದು ಧ್ವನಿಯಂತ್ರವನ್ನು (ಸ್ಪೀಕರ್) ಇಡಲಾಗಿದೆ. ಈ ಯಂತ್ರದ ಸುತ್ತಲೂ ೦ ವಾಟಿನ ದೀಪಗಳಿವೆ. ಇವೆರಡಕ್ಕೂ ಸಂಬಂಧಿಸಿದಂತೆ ಉಪಕರಣದ ಹೊರಗಡೆ ಒಂದು ಕಾಲನಿಯಾಮಕ (ಟೈಮರ್) ಇದೆ ಇದನ್ನು ಬಲಗಡೆಗೆ ತಿರುಗಿಸಿದಾಗ ಎರಡು ನಿಮಿಷಗಳ ಕಾಲ ಉಪಕರಣದ ಒಳಭಾಗದಲ್ಲಿ ದೀಪಗಳು ತಮ್ಮ ಪ್ರಕಾಶವನ್ನೂ ಧ್ವನಿಯಂತ್ರ ಶಬ್ದವನ್ನೂ ಏಕಕಾಲದಲ್ಲಿ ತೋರಿಸುವಂತೆ ಏರ್ಪಡಿಸಲಾಗಿದೆ. ಈ ಉಪಕರಣಕ್ಕೆ ವಿದ್ಯುತ್ತಿನ

ತಂತಿಗಳ ಸಹಾಯದಿಂದ ಧ್ವನಿ ಉತ್ಪಾದಕವನ್ನೂ (ಆಡಿಯೋಜನರೇಟರ್) ಧ್ವನಿವರ್ಧಕವನ್ನೂ (ಆಂಪ್ಲಿಫೈಯರ್) ಡಿಮ್ಮರ್‌ಸ್ಟ್ಯಾಟ್ ಮತ್ತು ವೋಲ್ಟ್ ಮೀಟರುಗಳನ್ನೂ ಜೋಡಿಸಲಾಗಿದೆ. ಇಲಿಯನ್ನು ಉಪಕರಣದ ಒಳಗಡೆ ಇಟ್ಟ ಕಾಲದಲ್ಲಿ ಬೆಳಕಿನ ಪರಿಣಾಮದಿಂದ ಅದು ಓಡಾಡುತ್ತದೆ. ಆಗ ಅದು ಮಲಮೂತ್ರಗಳ ವಿಸರ್ಜನೆಯನ್ನೂ ಮಾಡುತ್ತದೆ. ಈ ಉಪಕರಣದ ಹೊರಗಡೆಯ ಶಬ್ದ ಪ್ರಯೋಗದ ಕಾಲದಲ್ಲಿ ಇಲಿಗೆ ಕೇಳಿಸದೇ ಇರಲೆಂಬ ಉದ್ದೇಶ ದಿಂದಲೇ ಧ್ವನಿ-ಉತ್ಪಾದಕ ಯಂತ್ರದಿಂದ ಬಂದ ಶಬ್ದವನ್ನು ದೊಡ್ಡದನ್ನಾಗಿ ಮಾಡಿ ಉಪಕರಣದ ಒಳಗಡೆಗೆ ಧ್ವನಿಯಂತ್ರದ ಮೂಲಕ ಬಿಡುವ ಏರ್ಪಾಡು ಮಾಡಲಾಗಿದೆ. ಇಲಿಗಳ ಮಲ ಮೂತ್ರಗಳ ವಿಸರ್ಜನೆಯ ಆಧಾರದ ಮೇಲೆ ಅವುಗಳನ್ನು ಅಧಿಕ ಪ್ರಮಾಣದ ಮತ್ತು ಅಲ್ಪ ಪ್ರಮಾಣದ ಸಂವೇಗದಿಂದ ಕೂಡಿದ ಇಲಿಗಳೆಂದು ನಿರ್ಧರಿಸಬಹುದು. ಈ ಉಪಕರಣವನ್ನೂ ಮೈಸೂರಿನಲ್ಲಿ ಮಾಡಿಸಲಾಯಿತು. ಸುಮಾರು ೪೦ ವರ್ಷಗಳ ಹಿಂದೆ ಈ ಉಪಕರಣವನ್ನು ಸಿ. ಎಸ್. ಹಾಲ್ ಎಂಬ ವಿಜ್ಞಾನಿ ತಯಾರಿಸಿದ. ಅದರ ಅಳತೆಯನ್ನು ಬದಲಾಯಿಸಿ ಇಲ್ಲಿ ನಡೆದ ಪ್ರಯೋಗಕ್ಕೆ ಅನುಕೂಲವಾಗುವಂತೆ ಏರ್ಪಡಿಸಿದ ಕೆಲಸ ಪಾಲ್ ಎಂಬ ಸಂಶೋಧಕನಿಂದ ನಡೆಯಿತು. ಈ ಉಪಕರಣದ ತಯಾರಿಕೆ ಪ್ರೊಫೆಸರ್ ಬಿ. ಕೃಷ್ಣನ್ ಅವರ ನೇತೃತ್ವದಲ್ಲಿ ನಡೆಯಿತು.

ಕ್ರಿಯಾಮಾಪಕ ಪಂಜರ

ಇಲಿಗಳ ಚಟುವಟಿಕೆಯನ್ನು ಅಳೆಯಲು ಬಳಸಲಾದ ಕ್ರಿಯಾಮಾಪಕ ಪಂಜರ ವನ್ನು (ಚಿತ್ರ ೪) ಪ್ರೊ. ಕೃಷ್ಣನ್ ಭಾರತದಲ್ಲೇ ಇರುವ ಒಂದು ಕಂಪನಿಯಿಂದ ತರಿಸಿಕೊಟ್ಟದ್ದು. ಈ ಉಪಕರಣದಲ್ಲಿ ಎರಡು ಚೌಕಾಕಾರದ ಹಲಗೆಗಳು ಒಂದಕ್ಕೊಂದು ೯೦ ಡಿಗ್ರಿಗಳಾಗುವಂತೆ ಜೋಡಿಸಲ್ಪಟ್ಟಿವೆ. ಒಂದು ಹಲಗೆಯ ಮಧ್ಯಕ್ಕೆ ಗೋಲಾಕಾರದ ಪಂಜರವನ್ನು ಸೇರಿಸಿದೆ. ಪಂಜರ ಅದರ ಆಧಾರದ ಮರದ ಹಲಗೆಯ ಒಂದು ಪಾರ್ಶ್ವದಲ್ಲಿ ಯಾವ ಕಡೆಗೆ ಬೇಕಾದರೂ ತಿರುಗ ಬಹುದು. ಈ ಪಂಜರದ ಹಿಂಭಾಗದಲ್ಲಿ ಒಂದು ಗೋಲಾಕೃತಿಯ ದೊಡ್ಡ ರಂಧ್ರದ ಮೂಲಕ ಇಲಿ ತನ್ನ ಪೆಟ್ಟಿಗೆಯಿಂದ ಪ್ರವೇಶಿಸುವುದಕ್ಕೆ ಅವಕಾಶವಿದೆ. ಈ ಪಂಜರ ಸುತ್ತಿದಂತೆಲ್ಲ ಇದು ಎಷ್ಟು ಸಾರಿ ಸುತ್ತಿರುವುದೆಂದು ತೋರಿಸುವ ಗಣನ ಯಂತ್ರ (ಕೌಂಟರ್) ಇದೆ. ಪಂಜರಕ್ಕೂ ಗಣನ ಯಂತ್ರಕ್ಕೂ ಒಂದು ದಪ್ಪನಾದ ತಂತಿಯಿಂದ ಸಂಬಂಧ ಕಲ್ಪಿಸಲಾಗಿದೆ. ಇಲಿಯ ಪೆಟ್ಟಿಗೆ ಯಲ್ಲಿ ಆಹಾರವನ್ನೂ ನೀರನ್ನೂ ಇಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ.

ಪ್ರಯೋಗಗಳು

ಪ್ರಯೋಗಗಳನ್ನು ನಡೆಸುವುದಕ್ಕೆ ಮುಂಚೆ ಸುಮಾರು ಆರು ಯೋಜನೆಗಳನ್ನು

ತಯಾರಿಸಲಾಯಿತು. ಕಾರಣಾಂತರಗಳಿಂದ ಅವುಗಳನ್ನು ಪ್ರಯೋಗದ ರೂಪದಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವಾಗಲಿಲ್ಲ. ಇದಾದ ಅನಂತರ ಹಾಕಿದ ಯೋಜನೆಗಳು ಸುಸೂತ್ರವಾಗಿ ನೆರವೇರಿದುವು.

ಮೊದಲನೆಯ ಪ್ರಯೋಗ

ಮೊದಲನೆಯ ಪ್ರಯೋಗದಲ್ಲಿ ಇಲಿಗಳ ಸಂವೇಗಕ್ಕೂ (ಇಮೋಷನಾಲಿಟಿ) ಅವುಗಳ ಮೂಲ ಚಯಾಪಚಯಕ್ಕೂ ಇರುವ ಸಂಬಂಧವನ್ನು ಕಂಡುಹಿಡಿಯುವ ಪ್ರಯತ್ನ ಮಾಡಲಾಯಿತು. ಪ್ರಾಣಿಗಳ ವ್ಯಕ್ತಿತ್ವದಲ್ಲಿ ಸಂವೇಗ ದೀರ್ಘಕಾಲ ಉಳಿಯುವುದಾದರೆ ಸಂವೇಗಕ್ಕೂ ಪ್ರಾಣಿಗಳ ಮೂಲ ಚಯಾಪಚಯಕ್ಕೂ ಸಂಬಂಧವಿರಬೇಕೆಂಬುದಾಗಿ ಮಾಡಿಕೊಳ್ಳಲಾದ ಪ್ರಾಕ್-ಕಲ್ಪನೆಯನ್ನು ಪರೀಕ್ಷಿಸುವುದಕ್ಕಾಗಿ ೪೧ ಆಲ್ಬಿನೋ ಜಾತಿಯ ಇಲಿಗಳ ಮೇಲೆ ಪ್ರಯೋಗ ನಡೆಸಲಾಯಿತು. ಅವುಗಳಲ್ಲಿ ೧೯ ಗಂಡಿಲಿಗಳೂ ೨೨ ಹೆಣ್ಣಿಲಿಗಳೂ ಇದ್ದುವು. ಮೊದಲು ನಾಲ್ಕು ದಿನಗಳು ಅನಾಚ್ಛಾದಿತ ಕ್ಷೇತ್ರಪರೀಕ್ಷೋಪಕರಣದಲ್ಲಿ ಇಲಿಗಳನ್ನು ಒಂದಾದ ಮೇಲೆ ಇನ್ನೊಂದರಂತೆ ಎರಡು ನಿಮಿಷಗಳ ಕಾಲ ಬಿಟ್ಟು, ಅವುಗಳ ಸಂವೇಗದ ಪ್ರಮಾಣವನ್ನು ಅಳೆಯಲಾಯಿತು. ಇದಾದ ಅನಂತರ ಅವುಗಳನ್ನು ಒಂದಾದ ಮೇಲೆ ಇನ್ನೊಂದರಂತೆ ಶ್ವಾಸಮಾಪಕದ ಸೀಸೆಯಲ್ಲಿಟ್ಟು ಅವುಗಳ ಮೂಲ ಚಯಾಪಚಯವನ್ನು (ಬೇಸಲ್ ಮೆಟಾಬೊಲಿಸಂ) ಕಂಡುಹಿಡಿಯಲಾಯಿತು. ಸಂವೇಗದ ಪರೀಕ್ಷೆ ನಡೆದ ಅನಂತರ ಬಂದ ಫಲಿತಾಂಶಗಳ ಆಧಾರದ ಮೇಲೆ ೬ ಗಂಡಿಲಿಗಳೂ ೧೨ ಹೆಣ್ಣಿಲಿಗಳೂ ಪ್ರತಿಕ್ರಿಯೆಯ (ರಿಯಾಕ್ಟಿವ್) ಗುಂಪಿಗೆ ಸೇರಿದವುಗಳೆಂದೂ, ಉಳಿದ ಇಲಿಗಳು ಅಪ್ರತಿಕ್ರಿಯೆಯ (ನಾನ್-ರಿಯಾಕ್ಟಿವ್) ಗುಂಪಿಗೆ ಸೇರಿದವುಗಳೆಂದೂ ನಿಶ್ಚಯವಾಯಿತು. ಈ ಪ್ರಯೋಗದಿಂದ ಇಲಿಗಳ ಸಂವೇಗಕ್ಕೂ ಅವುಗಳ ಮೂಲ ಚಯಾಪಚಯಕ್ಕೂ ನಿಕಟ ಸಂಬಂಧವಿರುವುದು ವ್ಯಕ್ತವಾಯಿತು. ಒಂದನೆಯ ಪಟ್ಟಿಯಲ್ಲಿ ತೋರಿಸಿರುವಂತೆ ಹೆಚ್ಚಾದ ಸಂವೇಗದಿಂದ ಕೂಡಿದ ಇಲಿಗಳು ಹೆಚ್ಚು ಮೂಲ ಚಯಾಪಚಯದಿಂದ ಕೂಡಿದ್ದುವು. ಇದರಂತೆಯೇ ಗಂಡಿಲಿಗಳ ಮೂಲ ಚಯಾಪಚಯ ಹೆಣ್ಣಿಲಿಗಳ ಮೂಲ ಚಯಾಪಚಯಕ್ಕಿಂತ ಕಡಮೆ. ಇದಕ್ಕೆ ಅವುಗಳ ದೇಹದ ಗಾತ್ರ ಒಂದು ಕಾರಣವಾಗಿರಬಹುದೆಂದು ಯೋಚಿಸಬಹುದಾದರೂ ಸಂವೇಗವೂ ಕಾರಣವಾಗಿರಬಹುದು. ಸಂವೇಗದ ದೃಷ್ಟಿಯಿಂದ ವಿಶ್ಲೇಷಿಸಿದಾಗ ಗಂಡಿಲಿಗಳಿಗೂ ಹೆಣ್ಣಿಲಿಗಳಿಗೂ ಸಂವೇಗದ ಪ್ರಮಾಣದಲ್ಲಿ ಹೆಚ್ಚು ವ್ಯತ್ಯಾಸವಿರಲಿಲ್ಲವೆನಿಸಿದರೂ ಹೆಣ್ಣಿಲಿಗಳು ಹೆಚ್ಚು ಸಂವೇಗದಿಂದ ಕೂಡಿದ ಅಂಶ ವ್ಯಕ್ತವಾಯಿತು.

ಪಟ್ಟಿ ೧

ಇಲಿಗಳ ಪಂಗಡಗಳು	ಸಂವೇಗದ ಪ್ರಮಾಣ ಸರಾಸರಿ	ಮೂಲ ಚಯಾಪಚಯದ ಪ್ರಮಾಣ ಸರಾಸರಿ
ಪ್ರತಿಕ್ರಿಯೆಯ ಗಂಡಿಲಿಗಳು	೩.೫೪	೦.೯೬
ಪ್ರತಿಕ್ರಿಯೆಯ ಹೆಣ್ಣಿಲಿಗಳು	೪.೨೫	೧.೪೧
ಅಪ್ರತಿಕ್ರಿಯೆಯ ಗಂಡಿಲಿಗಳು	೨.೧೦	೧.೧೦
ಅಪ್ರತಿಕ್ರಿಯೆಯ ಹೆಣ್ಣಿಲಿಗಳು	೧.೮೫	೧.೩೩

ಮೊದಲನೆಯ ಪ್ರಯೋಗದಲ್ಲಿ ಇಲಿಗಳ ಸಂವೇಗಕ್ಕೂ ಅವುಗಳ ಮೂಲ ಚಯಾಪಚಯಕ್ಕೂ ಸಂಬಂಧವನ್ನು ಕಂಡುಹಿಡಿದ ಅನಂತರ ಮೂಲ ಚಯಾ

ಪಟ್ಟಿ ೨

ಇಲಿಗಳ ಪಂಗಡಗಳು	ಆಮ್ಲಜನಕದ ಸೇವನೆ, ಲೀಟರುಗಳಲ್ಲಿ ಸರಾಸರಿ	ಶಾಖದ ಉತ್ಪತ್ತಿ, ಕೆಲರಿಗಳಲ್ಲಿ ಸರಾಸರಿ
ಪ್ರತಿಕ್ರಿಯೆಯ ಗಂಡಿಲಿಗಳು	೦.೪೨	೦.೦೬
ಪ್ರತಿಕ್ರಿಯೆಯ ಹೆಣ್ಣಿಲಿಗಳು	೦.೫೪	೨.೬೬
ಅಪ್ರತಿಕ್ರಿಯೆಯ ಗಂಡಿಲಿಗಳು	೦.೪೩	೨.೧೪
ಅಪ್ರತಿಕ್ರಿಯೆಯ ಹೆಣ್ಣಿಲಿಗಳು	೦.೫೨	೨.೫೪

ಪಚಯದಿಂದ ಇಲಿಗಳ ದೇಹದಲ್ಲಿ ಉತ್ಪತ್ತಿಯಾಗುವ ಶಾಖದ ಪ್ರಮಾಣವನ್ನು ಒಂದು ಸೂತ್ರದ ಸಹಾಯದಿಂದ ನಿರ್ಧರಿಸಲಾಯಿತು. ಇದರಿಂದ ದೊರೆತ ಅಂಕಿಗಳ ವಿಶ್ಲೇಷಣೆಯಿಂದ ಇಲಿಗಳ ಪ್ರತಿಕ್ರಿಯೆಗೂ ಅವುಗಳ ದೇಹದ ಶಾಖಕ್ಕೂ ಪರಸ್ಪರ ಸಂಬಂಧವಿರುವುದು ವ್ಯಕ್ತವಾಯಿತು (ಪಟ್ಟಿ ೨, ಪು. ೬೨). ಈ ಸಂದರ್ಭ ದಲ್ಲಿ ಇಲಿಗಳ ಆಮ್ಲಜನಕದ ಸೇವನೆಯ ಲೆಕ್ಕಾಚಾರವನ್ನು ಮಾಡಬೇಕಾದರೆ ಅದರ ದೇಹದ ಚದರ ಮೀಟರಿನ ಪ್ರದೇಶಕ್ಕೆ ಒಂದು ಗಂಟೆಗೆ ಎಷ್ಟು ಲೀಟರುಗಳ ಆಮ್ಲಜನಕ ಬೇಕಾಗಬಹುದೆಂದು ಕಂಡುಹಿಡಿಯಲಾಯಿತು. ಇದನ್ನು ೪.೮೩ ರಿಂದ ಗುಣಿಸಿ ಒಂದು ಚದರ ಮೀಟರಿನ ಪ್ರದೇಶಕ್ಕೆ ಒಂದು ಗಂಟೆಗೆ ಎಷ್ಟು ಕೆಲೊರಿಗಳ ಶಾಖ ಬೇಕಾಗುವುದೆಂಬ ಅಂಶವನ್ನು ಕಂಡುಹಿಡಿಯಲಾಯಿತು. ಪ್ರಾಣಿಗಳ ದೇಹದ ಶಾಖದ ಪ್ರಮಾಣದ ಆಧಾರದ ಮೇಲೆ ಅವುಗಳ ಸಂವೇಗ ವನ್ನು ನಿರ್ಧರಿಸಬಹುದೆಂಬ ಅಂಶ ಇಂಥ ಲೆಕ್ಕಾಚಾರದಿಂದ ತಿಳಿದುಬಂದಿತು.

ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ಪ್ರಯೋಗಗಳು

ಮೊದಲನೆಯ ಪ್ರಯೋಗದಲ್ಲಿ ಇಲಿಗಳ ಉಸಿರಾಟಕ್ಕೂ ಅವುಗಳ ಸಂವೇಗಕ್ಕೂ ಇರುವ ಸಂಬಂಧವನ್ನು ಕಂಡುಹಿಡಿದ ಅನಂತರ ಇಲಿಗಳ ಮೂಲ ಚಯಾಪ ಚಯಕ್ಕೂ ಅವುಗಳ ಕಲಿಕೆಯ ವೇಗಕ್ಕೂ ಇರುವ ಪರಸ್ಪರ ಸಂಬಂಧವನ್ನು ಎರಡನೆಯ, ಮೂರನೆಯ ಮತ್ತು ನಾಲ್ಕನೆಯ ಪ್ರಯೋಗಗಳಲ್ಲಿ ಕಂಡುಹಿಡಿಯುವ ಪ್ರಯತ್ನಮಾಡಲಾಯಿತು. ಪ್ರಾಣಿಗಳ ಉಸಿರಾಟಕ್ಕೂ ಅವುಗಳ ಕಲಿಕೆಯ ದಕ್ಷತೆಗೂ ಯಾವ ವಿಧವಾದ ಸಂಬಂಧವಾದರೂ ಇದೆಯೇ ಎಂಬ ವಿಚಾರವನ್ನು ವಿಮರ್ಶಿಸುವುದೇ ಈ ಪ್ರಯೋಗಗಳ ಉದ್ದೇಶ. ಪ್ರಾಣಿಗಳ ಉಸಿರಾಟ ವಿವಿಧ ಸನ್ನಿವೇಶಗಳಲ್ಲಿ ವ್ಯತ್ಯಾಸವನ್ನು ಹೊಂದುವುದರಿಂದ ಅವುಗಳ ಮೂಲ ಚಯಾಪ ಚಯವನ್ನು ಆಧಾರವನ್ನಾಗಿ ತೆಗೆದುಕೊಂಡು ಕಲಿಕೆಯ ದಕ್ಷತೆಗೂ ಮೂಲ ಚಯಾಪಚಯಕ್ಕೂ ಇರುವ ಸಂಬಂಧವನ್ನು ಕಂಡುಹಿಡಿಯುವುದು ಸೂಕ್ತವಾದ ದ್ದೆಂದು ಭಾವಿಸಲಾಯಿತು. ಮೂಲ ಚಯಾಪಚಯಕ್ಕೂ ಕಲಿಕೆಯ ದಕ್ಷತೆಗೂ ಸಂಬಂಧವಿಲ್ಲವೆಂಬ ಅಂಶವೇನಾದರೂ ಕಂಡುಬಂದರೆ ಈ ಪ್ರಯೋಗಗಳು ನಿಷ್ಪ್ರಯೋಜಕಗಳಾಗದೇ ಇರಬೇಕೆಂಬ ಉದ್ದೇಶದಿಂದ ಇನ್ನೊಂದು ಚರವನ್ನೂ (ವೇರಿಯಬಲ್) ಪ್ರಾಯೋಗಿಕ ಸನ್ನಿವೇಶದಲ್ಲಿ ಬಳಸಲಾಯಿತು. ಆ ಚರವೇ ಚೋದನೆಗಳ ಸಮುದಾಯ (ಸಮೇಷನ್ ಆಫ್ ಡ್ರೈವ್ಸ್). ಇಲಿಗಳಿಗೆ ನೀರಿನಿಂದ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿದ್ದ ಸನ್ನಿವೇಶ ಒಂದು ವಿಧದ ಚೋದನೆ. ತಪ್ಪಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಡುವುದರ ಜೊತೆಗೆ ಅವುಗಳಿಗೆ ಗುರಿ ಪೆಟ್ಟಿಗೆಯಲ್ಲಿ ಆಹಾರ ಕೊಡುವುದು ಚೋದನೆಗಳ ಸಮುದಾಯ. ಈ ಎರಡು ವಿಧದ ಸನ್ನಿವೇಶಗಳಲ್ಲಿ ಇಲಿಗಳ ಕಲಿಕೆಯ ದಕ್ಷತೆಯಲ್ಲಿ ವ್ಯತ್ಯಾಸವಿದೆಯೇ ಎಂದು

ಪರೀಕ್ಷಿಸಲಾಯಿತು. ಇನ್ನೊಂದು ಚರವನ್ನೂ ಈ ಪ್ರಯೋಗಗಳಲ್ಲಿ ಬಳಸಲಾಯಿತು. ಅದೇನೆಂದರೆ ಒಂದು ಗುಂಪಿನ ಇಲಿಗಳನ್ನು ಅವಕ್ಕೆ ಆಹಾರ ಕೊಟ್ಟು ಒಂದು ಗಂಟೆಯಾದ ಅನಂತರ ಚೋದನೆಗಳ ಸಮುದಾಯದ ಪರಿಸ್ಥಿತಿಯಲ್ಲಿ ನಿರೀಕ್ಷಿಸಿ ಅವುಗಳ ಕಲಿಕೆಯ ದಕ್ಷತೆಯನ್ನು ಪರೀಕ್ಷಿಸಲಾಯಿತು. ಇನ್ನೊಂದು ಗುಂಪಿನ ಇಲಿಗಳಿಗೆ ೩೦ ಗಂಟೆಗಳ ಕಾಲ ಆಹಾರ ಕೊಡದೆ ಈ ಚೋದನೆಗಳ ಸಮುದಾಯದ ಪರಿಸ್ಥಿತಿಯಲ್ಲಿ ಅವುಗಳ ಕಲಿಕೆಯ ದಕ್ಷತೆಯನ್ನು ವೀಕ್ಷಿಸಲಾಯಿತು. ಮೊದಲನೆಯ ಪ್ರಯೋಗದಲ್ಲಿ ಬಳಸಿದ ಇಲಿಗಳ ಸಂಖ್ಯೆಯನ್ನೂ ಅವುಗಳ ಮೂಲ ಚಯಾಪಚಯುವನ್ನೂ ೩ನೆಯ ಪಟ್ಟಿಯಲ್ಲಿ ಕೊಡಲಾಗಿದೆ. ಈ ಪಟ್ಟಿಯಲ್ಲಿರುವ ಅಂಕಿಗಳನ್ನು ವಿಶ್ಲೇಷಿಸಿದರೆ ಇಲಿಗಳ ಸರಾಸರಿ ಆಮ್ಲಜನಕದ ಸೇವನೆಯ ಪರಿಮಾಣ ೦.೭೮ ಲೀಟರು ಆಗಿರುವುದೆಂದೂ ಆಮ್ಲಜನಕದ ಸೇವನೆಯಲ್ಲಿ ಪ್ರಯೋಗದ ಗುಂಪಿನ (ಎಂದರೆ ೩೦ ಗಂಟೆಗಳ ಕಾಲ ಆಹಾರವನ್ನು ಪಡೆಯದ) ಇಲಿಗಳಿಗೂ ನಿಯಂತ್ರಣದ ಗುಂಪಿನ (ಎಂದರೆ ಆಹಾರವನ್ನು ಕೊಟ್ಟ ಅನಂತರ ಒಂದು ಗಂಟೆಯಾದ ಮೇಲೆ ಪ್ರಯೋಗಕ್ಕೆ ಗುರಿಯಾದ) ಇಲಿಗಳಿಗೂ ಯಾವ ವ್ಯತ್ಯಾಸವೂ ಇಲ್ಲವೆಂದೂ ವ್ಯಕ್ತವಾಗುತ್ತದೆ.

ಪಟ್ಟಿ ೩

ಮುಖ್ಯವಾದ ಗುಂಪುಗಳು	ಉಪವರ್ಗಗಳು	ಇಲಿಗಳ ಸಂಖ್ಯೆ	ಇಲಿಗಳ ಆಮ್ಲಜನಕದ ಸೇವನೆ (ಸರಾಸರಿ)	ತಪ್ಪಿಸಿಕೊಳ್ಳುವ ಸನ್ನಿವೇಶದಲ್ಲಿ ಇಲಿಗಳ ಕಲಿಕೆಯ ದಕ್ಷತೆ (ಸರಾಸರಿ)
ಪ್ರಯೋಗದ ಗುಂಪು	ಅಧಿಕ ಪ್ರಮಾಣದ ಮೂಲ ಚಯಾಪಚಯದ ಗಂಡಿಲಿಗಳು	೮	೦.೯೩	೨೯.೭
	ಅಧಿಕ ಪ್ರಮಾಣದ ಮೂಲ ಚಯಾಪಚಯದ ಹೆಣ್ಣಿಲಿಗಳು	೭	೦.೯೦	೩೪.೨
	ಅಲ್ಪ ಪ್ರಮಾಣದ ಮೂಲ ಚಯಾಪಚಯದ ಗಂಡಿಲಿಗಳು	೮	೦.೬೦	೨೪.೪
	ಅಲ್ಪ ಪ್ರಮಾಣದ ಮೂಲ ಚಯಾಪಚಯದ ಹೆಣ್ಣಿಲಿಗಳು	೮	೦.೭೧	೩೨.೨
	ಮೊತ್ತ	೩೧	೦.೭೯	೩೦.೧

ಮುಖ್ಯವಾದ ಗುಂಪುಗಳು	ಉಪವರ್ಗಗಳು	ಇಲಿಗಳ ಸಂಖ್ಯೆ	ಇಲಿಗಳ ಆಮ್ಲ ಜನಕದ ಸೇವನೆ (ಸರಾಸರಿ)	ತಪ್ಪಿಸಿಕೊಳ್ಳುವ ಸನ್ನಿವೇಶದಲ್ಲಿ ಇಲಿಗಳ ಕಲಿಕೆಯ ದಕ್ಷತೆ (ಸರಾಸರಿ)
ನಿಯಂತ್ರಣದ ಗುಂಪು	ಅಧಿಕ ಪ್ರಮಾಣದ ಮೂಲ ಚಯಾಪಚಯದ ಗಂಡಿಲಿಗಳು	೮	೦.೯೩	೩೨.೪
	ಅಧಿಕ ಪ್ರಮಾಣದ ಮೂಲ ಚಯಾಪಚಯದ ಹೆಣ್ಣಿಲಿಗಳು	೭	೦.೮೨	೨೮.೧
	ಅಲ್ಪ ಪ್ರಮಾಣದ ಮೂಲ ಚಯಾಪಚಯದ ಗಂಡಿಲಿಗಳು	೯	೦.೬೮	೪೭.೩
	ಅಲ್ಪ ಪ್ರಮಾಣದ ಮೂಲ ಚಯಾಪಚಯದ ಹೆಣ್ಣಿಲಿಗಳು	೭	೦.೬೮	೨೯.೫
	ಮೊತ್ತ	೩೧	೦.೭೮	೩೪.೩
	ಒಟ್ಟು ಮೊತ್ತ	೬೨	೦.೭೮	೩೨.೨

ಅಧಿಕ ಪ್ರಮಾಣದ ಮೂಲ ಚಯಾಪಚಯದ ಇಲಿಗಳು ಅಲ್ಪ ಪ್ರಮಾಣದ ಮೂಲ ಚಯಾಪಚಯದ ಇಲಿಗಳಿಗಿಂತ ಜಾಗ್ರತೆಯಾಗಿ ಕಲಿಯುವುವೆಂಬುದು ಮೇಲಿನ ಪಟ್ಟಿಯಿಂದ ತಿಳಿದುಬರುತ್ತದೆ ಈ ಸರಾಸರಿಯ ಲೆಕ್ಕಾಚಾರ ಮಾಡುವುದಕ್ಕೆ ಮುಂಚೆ ದಿನಕ್ಕೆ ೧೦ ಸಾರಿ ನೀರಿನ ವ್ಯೂಹದಲ್ಲಿ ಇಲಿಯನ್ನು ಬಿಟ್ಟು ಮೂರು ದಿನಗಳ ಅವಧಿಯ ವರೆಗೂ ಅದು ಗುರಿಪೆಟ್ಟಿಗೆಯನ್ನು ತಲಪುವುದಕ್ಕೆ ತೆಗೆದುಕೊಳ್ಳುತ್ತಿದ್ದ ಸೆಕಂಡುಗಳನ್ನು ಗಣನೆಗೆ ತೆಗೆದುಕೊಂಡಿದ್ದಾಯಿತು. ಹೆಣ್ಣಿಲಿಗಳು ಗಂಡಿಲಿಗಳಿಗಿಂತ ಜಾಗ್ರತೆಯಾಗಿ ಕಲಿತುಕೊಳ್ಳುವ ಅಂಶ ಮೇಲೆ ಕೊಟ್ಟಿರುವ ಪಟ್ಟಿಯಿಂದ ತಿಳಿಯುತ್ತದೆ.

ನೀರಿನಿಂದ ತಪ್ಪಿಸಿಕೊಳ್ಳುವುದನ್ನು ಒಂದು ಚೋದನೆಯನ್ನಾಗಿ ಉಪಯೋಗಿಸಿದ ಅನಂತರ ಮೊದಲು ತಿಳಿಸಿದಂತೆ ಚೋದನೆಗಳ ಸಮುದಾಯದ ಪರಿಸ್ಥಿತಿಯಲ್ಲಿ ಇಲಿಗಳ ಕಲಿಕೆಯ ವೇಗವನ್ನು ಪರೀಕ್ಷಿಸಲಾಯಿತು. ಪ್ರಾಯೋಗಿಕ ಗುಂಪಿನ ಅನೇಕ ಉಪವರ್ಗಗಳಿಗೆ ಸೇರಿದ ಇಲಿಗಳ ಕಲಿಕೆಯ ವೇಗ ಕ್ರಮವಾಗಿ ಸರಾಸರಿ ೧೭.೦, ೨೧.೩, ೧೯.೯, ಮತ್ತು ೨೩.೨ ಸೆಕಂಡುಗಳಾಗಿದ್ದುವು. ನಿಯಂತ್ರಣದ ಗುಂಪಿನ ಇಲಿಗಳ ಉಪವರ್ಗಗಳ ಕಲಿಕೆಯ ವೇಗ ಸರಾಸರಿ ೧೪.೯, ೧೪.೨, ೨೩.೩, ೧೫.೧ ಸೆಕಂಡುಗಳಾಗಿದ್ದವು. ಒಟ್ಟು ಮೊತ್ತದ ಕಲಿಕೆಯ ಸರಾಸರಿ ವೇಗ ೧೮.೭ ಸೆಕಂಡುಗಳಾಗಿದ್ದವು. ಇದರಿಂದ ಚೋದನೆಗಳ ಸಮು

ದಾಯದ ಪರಿಸ್ಥಿತಿಯಲ್ಲಿ ಇಲಿಗಳ ಕಲಿಕೆಯ ವೇಗ ಹೆಚ್ಚುವುದೆಂಬ ಅಂಶವನ್ನು ದೃಢೀಕರಿಸಿದಂತಾಯಿತು. ಪ್ರಯೋಗದ ಗುಂಪಿನ ಇಲಿಗಳಿಗಿಂತ ಹೆಚ್ಚಾಗಿ ನಿಯಂತ್ರಣದ ಗುಂಪಿನ ಇಲಿಗಳು ಜಾಗ್ರತೆಯಾಗಿ ಕಲಿತ ಅಂಶವೂ ಈ ಪ್ರಯೋಗ ದಿಂದ ತಿಳಿದುಬಂತು. ಇದರಿಂದ ಚೋದನೆಯ ಪ್ರಮಾಣ ಕಡಮೆಯಾದಷ್ಟೂ ಪ್ರಾಣಿಗಳ ಪ್ರತಿಕ್ರಿಯೆ ಹೆಚ್ಚುವುದೆಂಬ ಅಂಶಕ್ಕೆ ಬೆಂಬಲ ದೊರೆಯಿತು. ಈ ಪರಿಸ್ಥಿತಿಯಲ್ಲಿಯೂ ಹೆಣ್ಣಿಲಿಗಳು ಗಂಡಿಲಿಗಳಿಗಿಂತ ಜಾಗ್ರತೆಯಾಗಿ ಕಲಿತುವು. ಇದೇ ರೀತಿಯಾದ ಎರಡನೆಯ ಮತ್ತು ಮೂರನೆಯ ಪ್ರಯೋಗಗಳನ್ನು ನಡೆಸಿದಾಗ ಪ್ರಾಣಿಗಳ ಮೂಲ ಚಯಾಪಚಯದ ಪ್ರಮಾಣ ಹೆಚ್ಚಿದಂತೆಲ್ಲಾ ಅವುಗಳ ಕಲಿಕೆಯ ವೇಗ ಕಡಮೆಯಾಗುತ್ತಿದ್ದ ಅಂಶ ತಿಳಿದುಬಂತು.

ಈ ಸಂಶೋಧನೆಗಳನ್ನು ನಡೆಸುತ್ತಿದ್ದ ಕಾಲದಲ್ಲಿಯೇ ಇಲಿಗಳು ನೀರಿನ ವ್ಯೂಹದ ಯಾವುದಾದರೂ ಒಂದು ಪಕ್ಕಕ್ಕೆ ಹೆಚ್ಚಾಗಿ ಹೋಗುವುದು ಕಂಡುಬಂತು. ಇಂಥ ಅಭ್ಯಾಸಕ್ಕೂ, ಅವುಗಳ ಕಲಿಕೆಯ ವೇಗಕ್ಕೂ ಚೋದನೆಗಳ ಸಮು ದಾಯಕ್ಕೂ ಅನ್ಯೋನ್ಯ ಸಂಬಂಧವಿದೆಯೇ ಎಂಬ ಪ್ರಶ್ನೆ ಎದ್ದದ್ದು ಸಹಜವೇ. ಇದರ ಪರಿಣಾಮವಾಗಿ ಅಂಶಗಳ ಸಂಗ್ರಹವೂ ಆಯಿತು. ಇದರಿಂದ ಬಂದ ಅಂಶಗಳನ್ನು ವಿಶ್ಲೇಷಿಸಿದಾಗ ಕೆಲವು ಹೊಸ ಅಂಶಗಳು ಬೆಳಕಿಗೆ ಬಂದುವು. ಅಧಿಕ ಪ್ರಮಾಣದ ಚಯಾಪಚಯವನ್ನು ಹೊಂದಿದ ಇಲಿಗಳು ಹೆಚ್ಚಾಗಿ ನೀರಿನ ವ್ಯೂಹದ ಪಕ್ಕಗಳ ಕಡೆಗೆ ತಿರುಗುವುದಿಲ್ಲ ಎನ್ನುವುದು ಇವುಗಳಲ್ಲೊಂದು. ಎರಡನೆಯ ದಾಗಿ, ಬಲಗಡೆಗೆ ಹೆಚ್ಚಾಗಿ ತಿರುಗುವ ಅಭ್ಯಾಸದಿಂದ ಕೂಡಿದ ಇಲಿಗಳು ಜಾಗ್ರತೆ ಯಾಗಿ ಕಲಿಯುತ್ತಿದ್ದುವು. ಆದರೆ ಇಂಥ ಸನ್ನಿವೇಶದಲ್ಲಿ ಅಲ್ಪ ಪ್ರಮಾಣದ ಪ್ರಚೋದನೆಯ ಆವಶ್ಯಕತೆ ಇತ್ತು. ಚೋದನೆಯಲ್ಲಿ ವ್ಯತ್ಯಾಸಗಳನ್ನುಂಟು ಮಾಡುವುದರಿಂದ ಹೆಚ್ಚಾಗಿ ಪಕ್ಕಗಳಿಗೆ ತಿರುಗುವ ಅಭ್ಯಾಸದ ಇಲಿಯನ್ನೂ ಜಾಗ್ರತೆಯಾಗಿ ಕಲಿಯುವಂತೆ ಮಾಡಬಹುದೆಂಬ ಸೂಚನೆ ಈ ವೀಕ್ಷಣೆಯಿಂದ ದೊರೆಯಿತು.

ಐದನೆಯ ಪ್ರಯೋಗ

ಮೂಲ ಚಯಾಪಚಯಕ್ಕೂ ಕಲಿಕೆಗೂ ಇರುವ ಸಂಬಂಧವನ್ನು ಕಂಡುಹಿಡಿದ ಅನಂತರ ಮಧ್ಯಸ್ಥ ಚಯಾಪಚಯಕ್ಕೂ (ಇಂಟರ್ಮೀಡಿಯರಿ ಮೆಟಾಬೊಲಿಸಂ) ಪ್ರಾಣಿಗಳ ಕಲಿಕೆಯ ದಕ್ಷತೆಗೂ ಸಂಬಂಧವೇನಾದರೂ ಇರಬಹುದೆ ಎಂಬ ಸಮಸ್ಯೆ ಬಂತು. ಇದನ್ನು ಬಗೆಹರಿಸುವುದಕ್ಕಾಗಿ ಐದನೆಯ ಪ್ರಯೋಗ ನಡೆಸ ಲಾಯಿತು. ಪ್ರಾಣಿಗಳ ತಾತ್ಕಾಲಿಕ ದೇಹದ ಪರಿಸ್ಥಿತಿಯ ಸೂಚಕ, ಮಧ್ಯಸ್ಥ ಚಯಾಪಚಯವಾಗಬಹುದೆಂದೂ ಕಲಿಕೆಯ ದಕ್ಷತೆಗೂ ಈ ಪರಿವರ್ತ್ಯಕ್ಕೂ ಪರಸ್ಪರ ಸಂಬಂಧವಿರುವುದಾದರೆ ಪ್ರಾಣಿಗಳ ಕಲಿಕೆಯ ದಕ್ಷತೆಯನ್ನು ಅಂದಾಜುಮಾಡು

ವುದಕ್ಕೆ ಇದರಿಂದ ಸಹಾಯವಾಗಬಹುದೆಂದೂ ಯೋಚಿಸಿದ್ದೇ ಈ ಪ್ರಯೋಗ ನಡಸಲು ಮುಖ್ಯ ಕಾರಣ. ಇದರ ಜೊತೆಗೆ, ಪ್ರಾಣಿಗಳ ದೈಹಿಕ ಪರಿಸ್ಥಿತಿಯನ್ನು ಅಳೆಯುವುದಕ್ಕೆ ಮಧ್ಯಸ್ಥ ಚಯಾಪಚಯಕ್ಕಿಂತ ಮೂಲ ಚಯಾಪಚಯ ಎಷ್ಟರ ಮಟ್ಟಿಗೆ ಉತ್ತಮವಾದ ಪರಿವರ್ತ್ಯವೆಂದು ನಿರ್ಧರಿಸಲು ಈ ಪ್ರಯೋಗದಿಂದ ಅನುಕೂಲವಾಗಬಹುದೆಂದು ಯೋಚಿಸಲಾಯಿತು. ಈ ಪ್ರಯೋಗಕ್ಕೆ ಒಟ್ಟು ೬,೮ ಇಲಿಗಳನ್ನು ಉಪಯೋಗಿಸಲಾಯಿತು. ನಿಯಂತ್ರಣದ ಗುಂಪಿನ ಇಲಿಗಳ ಮೂಲ ಚಯಾಪಚಯುವನ್ನು ಕಂಡುಹಿಡಿದು ಅದರ ಪ್ರಮಾಣದ ಆಧಾರದ ಮೇಲೆ ಅವುಗಳ ಉಪವರ್ಗಗಳನ್ನು ವಿಂಗಡಿಸಲಾಯಿತು. ಪ್ರಯೋಗದ ಗುಂಪಿನ ಇಲಿಗಳನ್ನು ಶ್ವಾಸಮಾಪಕದಿಂದ ಹೊರಗಡೆಗೆ ತೆಗೆದ ತತ್‌ಕ್ಷಣವೇ ನೀರಿನ ವ್ಯೂಹದಲ್ಲಿ ಬಿಟ್ಟು ಅವುಗಳ ಕಲಿಕೆಯ ದಕ್ಷತೆಯನ್ನು ಪರೀಕ್ಷಿಸಲಾಯಿತು. ಪ್ರಾಣಿಗಳ ಮೂಲ ಚಯಾಪಚಯ ಹೆಚ್ಚಿದಂತೆಲ್ಲಾ ಅವುಗಳ ಕಲಿಕೆಯ ದಕ್ಷತೆ ಕಡಮೆಯಾಗುವುದೂ, ಹೆಣ್ಣಿಲಿಗಳು ಗಂಡಿಲಿಗಳಿಗಿಂತ ಜಾಗ್ರತೆಯಾಗಿ ಕಲಿಯುವುದೂ ಈ ಪ್ರಯೋಗದಿಂದ ಕಂಡುಬಂದುವು. ನಿಯಂತ್ರಣದ ಗುಂಪಿನ ಇಲಿಗಳು ಪ್ರಯೋಗದ ಗುಂಪಿನ ಇಲಿಗಳಿಗಿಂತ ಜಾಗ್ರತೆಯಾಗಿ ಕಲಿತುವು. ಈ ಎರಡು ಗುಂಪುಗಳಲ್ಲಿಯೂ ಅಧಿಕ ಮತ್ತು ಅಲ್ಪಪ್ರಮಾಣದ ಉಪವರ್ಗಗಳಿಗೆ ಸೇರಿದ ಇಲಿಗಳ ಕಲಿಕೆಯ ದಕ್ಷತೆಯಲ್ಲಿ ಗಮನಾರ್ಹವಾದ ವ್ಯತ್ಯಾಸಗಳು ಕಂಡುಬರಲಿಲ್ಲ. ಇಷ್ಟಾದರೂ ಪ್ರಯೋಗದ ಗುಂಪಿನ ಇಲಿಗಳ ಕಲಿಕೆಯ ದಕ್ಷತೆಯಲ್ಲಿ ಒಂದು ವೈಶಿಷ್ಟ್ಯವಿತ್ತು.


ಆರನೆಯ ಪ್ರಯೋಗ

ಆರನೆಯ ಪ್ರಯೋಗವನ್ನು ೨೦ ಗಂಡಿಲಿಗಳ ಮೇಲೆ ನಡೆಸಲಾಯಿತು. ಹತ್ತು ಇಲಿಗಳನ್ನು ಪ್ರಯೋಗದ ಗುಂಪಿನಲ್ಲೂ ಉಳಿದವುಗಳನ್ನು ನಿಯಂತ್ರಣದ ಗುಂಪಿನಲ್ಲೂ ಇಡಲಾಗಿತ್ತು. ಪ್ರಯೋಗದ ಗುಂಪಿನ ಇಲಿಗಳು ಶ್ವಾಸಮಾಪಕದ ಸೀಸೆಯಲ್ಲಿದ್ದಾಗ ೧೦೦ ಸಿ.ಸಿ.ಗಳಷ್ಟು ಆಮ್ಲಜನಕವನ್ನು ಹಾಯಿಸಲಾಯಿತು. ಗಾಳಿಯಿಂದ ಮಿಶ್ರಿತವಾದ ಈ ಆಮ್ಲಜನಕವನ್ನು ಇಲಿ ಸೇವಿಸಿದ ಅನಂತರ ಅದನ್ನು ಕಲಿಕೆಯ ಪರೀಕ್ಷೆಗಾಗಿ ನೀರಿನ ವ್ಯೂಹದಲ್ಲಿ ಬಿಡಲಾಯಿತು. ಇದರಂತೆಯೇ ನಿಯಂತ್ರಣದ ಗುಂಪಿನ ಇಲಿಗಳನ್ನು ಶ್ವಾಸಮಾಪಕದ ಸೀಸೆಯಲ್ಲಿಟ್ಟಾಗ ೫೦ ಸಿ.ಸಿ. ಗಳಷ್ಟು ಆಮ್ಲಜನಕವನ್ನು ಸೀಸೆಯೊಳಕ್ಕೆ ಬಿಡಲಾಯಿತು. ಈ ಪ್ರಮಾಣದ ಗಾಳಿಯನ್ನು ಸೇವಿಸಿದ ಅನಂತರ ಇಲಿಯನ್ನು ನೀರಿನ ವ್ಯೂಹದಲ್ಲಿ ಬಿಡಲಾಯಿತು. ಈ ಪ್ರಯೋಗದಿಂದ ಪ್ರಯೋಗದ ಗುಂಪಿನ ಇಲಿಗಳು ನಿಯಂತ್ರಣದ ಗುಂಪಿನ ಇಲಿಗಳಿಗಿಂತ ಜಾಗ್ರತೆಯಾಗಿ ಕಲಿತುವು. ಸ್ಮೃತಿ ಪರೀಕ್ಷೆಯಿಂದಲೂ ಈ ಅಂಶವನ್ನು ದೃಢಪಡಿಸಿದಂತಾಯಿತು. ಕೇವಲ ೨೫ ಸಿ.ಸಿ.ಯಷ್ಟು ಆಮ್ಲಜನಕವನ್ನು ಶ್ವಾಸಮಾಪಕದ ಸೀಸೆಯೊಳಕ್ಕೆ ಬಿಡುವುದರಿಂದ ಕಲಿಕೆಯ ಮೇಲಾಗುವ


ಪರಿಣಾಮ ಹೆಚ್ಚು ಗಮನಾರ್ಹವಾದುದಲ್ಲವೆಂಬುದೂ ೫೦ ಅಥವಾ ೧೦೦ ಸಿ.ಸಿ. ಗಳಷ್ಟು ಆಮ್ಲಜನಕವನ್ನು ಹಾಯಿಸುವುದರಿಂದ ಅದು ಪ್ರಾಣಿಗಳ ಕಲಿಕೆಯ ಮೇಲೆ ಪರಿಣಾಮಕಾರಿಯಾಗುವಂತೆ ಮಾಡಬಹುದೆಂಬುದೂ ಈ ಪ್ರಯೋಗದಿಂದ ತಿಳಿದುಬಂದ ಅಂಶ.

ಏಳನೆಯ ಪ್ರಯೋಗ


ಪ್ರಾಣಿಗಳ ಚಟುವಟಿಕೆಗೂ ಪಂಜರದ ವರ್ತನೆಗೂ ಸಂವೇಗಕ್ಕೂ ಕಲಿಕೆಯ ದಕ್ಷತೆಗೂ ಇರುವ ಪರಸ್ಪರ ಸಂಬಂಧವನ್ನು ನಿರ್ಧರಿಸುವುದೇ ಏಳನೆಯ ಪ್ರಯೋಗದ ಉದ್ದೇಶ. ಒಂದೇ ಪ್ರಾಣಿಗೆ ಈ ಅನೇಕ ಪ್ರಾಯೋಗಿಕ ಪರಿವರ್ತ್ಯಗಳ ಅನುಭವವುಂಟಾಗುವಂತೆ ಏರ್ಪಾಡನ್ನು ಈ ಪ್ರಯೋಗದಲ್ಲಿ ಮಾಡಲಾಯಿತು. ಒಂದು ವಿಧದ ಪ್ರಾಯೋಗಿಕ ಸನ್ನಿವೇಶದಿಂದ ಇನ್ನೊಂದು ವಿಧದ ಸನ್ನಿವೇಶದಲ್ಲಿ ಪ್ರಾಣಿ ತೋರಿಸುವ ಪ್ರತಿಕ್ರಿಯೆಯ ಮೇಲಾಗಬಹುದಾದ ಅನ್ಯೋನ್ಯ ಪ್ರತಿಕ್ರಿಯೆಯ ಪರಿಣಾಮದ (ಇಂಟರಾಕ್ಷನ್ ಎಫೆಕ್ಟ್) ಲೆಕ್ಕಾಚಾರವನ್ನೂ ಮಾಡಿದ್ದಾಯಿತು. ಈ ಪ್ರಯೋಗದಲ್ಲಿ ಬಳಸಲಾದದ್ದು ೨೧ ಗಂಡಿಲಿಗಳು, ೨೪ ಹೆಣ್ಣಿಲಿಗಳು. ಈ ಪ್ರಯೋಗದಿಂದ ಹೊರಬಿದ್ದ ಅಂಶಗಳು ಅನೇಕ. ಸೀಏನ ವ್ಯೂಹದ ಉದ್ದವನ್ನು ಐದನೆಯ ಒಂದು ಭಾಗದ ಪ್ರಮಾಣಕ್ಕೆ ಇಳಿಸುವುದರಿಂದ ಗಂಡಿಲಿಗಳು ಹೆಣ್ಣಿಲಿಗಳಿಗಿಂತ ಜಾಗ್ರತೆಯಾಗಿ ಕಲಿಯುವುದಕ್ಕೆ ಸಹಾಯವಾಗುವುದೆಂಬುದು ಒಂದು. ಒಂದು ಸಾರಿ ಕಲಿತ ಅಂಶವನ್ನು ಮರೆಯಬೇಕಾದರೆ ಗಂಡಿಲಿಗಳಿಗೂ ವ್ಯೂಹದ ರಚನೆಯನ್ನು ನಿಧಾನವಾಗಿ ಅರಿತುಕೊಂಡ ಇಲಿಗಳಿಗೂ ಹೆಚ್ಚು ಕಾಲ ಹಿಡಿಯುತ್ತದೆ ಎಂಬುದು ಇನ್ನೊಂದು ಅಂಶ. ವ್ಯೂಹವನ್ನು ಜಾಗ್ರತೆಯಾಗಿ ತಿಳಿದುಕೊಳ್ಳುವ ಇಲಿಗಳು ಸಾಮಾನ್ಯವಾಗಿ ಹೆಚ್ಚಾದ ಸಂವೇಗದಿಂದ ಕೂಡಿರುತ್ತವೆ ಎಂಬುದೂ ಗೊತ್ತಾಯಿತು. ಸ್ವಯಂಚಲಿ ಕ್ರಿಯೆ (ಮೋಟಾರ್ ಆಕ್ಟಿವಿಟಿ) ಹೆಚ್ಚಿದಷ್ಟೂ ಪ್ರಾಣಿಗಳ ಕಲಿಕೆಯ ದಕ್ಷತೆ ಕಡಮೆಯಾಗುವುದೆಂಬುದು ನಮಗೆ ಗೊತ್ತಾದ ಮತ್ತೊಂದು ಅಂಶ. ಆದರೆ ಪಂಜರದ ವರ್ತನೆಯ ಆಧಾರದ ಮೇಲಾಗಲೀ ಸಂವೇಗದ ಆಧಾರದ ಮೇಲಾಗಲೀ ಪ್ರಾಣಿಗಳ ಉಪವರ್ಗಗಳನ್ನೇರ್ಪಡಿಸಿದರೆ ಇಂಥ ವರ್ತನೆಗೂ ಪ್ರಾಣಿಗಳ ಚಟುವಟಿಕೆಗೂ ಯಾವ ಸಂಬಂಧವೂ ಇದ್ದಂತೆ ಕಂಡುಬರಲಿಲ್ಲ. ವ್ಯೂಹವನ್ನು ಜಾಗ್ರತೆಯಾಗಿ ಕಲಿತುಕೊಳ್ಳುವ ಇಲಿಗಳು ತೆರೆದ ಕ್ಷೇತ್ರದ ಪರೀಕ್ಷೋಪಕರಣದಲ್ಲಿ ಹೆಚ್ಚಾಗಿ ಸುತ್ತುತ್ತಿದ್ದುವು. ಹೆಣ್ಣಿಲಿಗಳೂ ಇಂಥ ಉಪಕರಣದಲ್ಲಿ ಹೆಚ್ಚಾಗಿ ಸುತ್ತುವ ಅಭ್ಯಾಸದಿಂದ ಕೂಡಿದ್ದುವು. ಕ್ರಿಯಾಮಾಪಕ ಪಂಜರದಲ್ಲಿ ಗಂಡಿಲಿಗಳಿಗಿಂತ ಹೆಣ್ಣಿಲಿಗಳು ಹೆಚ್ಚಾಗಿ ಚಟುವಟಿಕೆ ತೋರಿಸುತ್ತಿದ್ದುವು. ಕಡಮೆಯ ಪ್ರಮಾಣದಲ್ಲಿ ಪಂಜರದ ವರ್ತನೆಯನ್ನೂ ಸಂವೇಗವನ್ನೂ ಸುತ್ತುವಿಕೆಯನ್ನೂ ವ್ಯಕ್ತಪಡಿಸಿದ ಇಲಿಗಳು ಹೆಚ್ಚು ಚಟುವಟಿಕೆಯನ್ನು ಪ್ರದರ್ಶಿಸಿದುವು.



ಚಿತ್ರ ೧ ಶ್ವಾಸಮಾಪಕ: 1 ವಿದ್ಯುತ್‌ತಾಪಕ, 2 ಪೊಟಾಸಿಯಂ ಪರ್‌ಮ್ಯಾಂಗನೇಟ್ ಇರುವ ಪ್ರನಾಳ, 3 ಸಮತಲದ ಫ್ಲಾಸ್ಕ್, 4 ಬ್ಯೂರೆಟ್ ಮತ್ತಿತರ ಸಂಪರ್ಕನಾಳಗಳನ್ನೊಳಗೊಂಡ ಗಾಜಿನ ಸೀಸೆ, 5 ಮಾನೊಮೀಟರ್, 6 ಸೋಡಾ ಲೈಂ ಮತ್ತು ಪರೀಕ್ಷೆಗೆ ಒಳಪಡಿಸಿರುವ ಪ್ರಾಣಿಯನ್ನು ಹೊಂದಿರುವ ಗಾಜಿನ ಸೀಸೆ




ಚಿತ್ರ ೧ ಮಗ್ಗದ ನೋಟ



ಚಿತ್ರ ೩ ತೆರೆದ ಕ್ಷೇತ್ರದ ಪರಿಕ್ಷೋಪಕರಣ:

ವಿವಿಧ ಭಾಗಗಳು: 1 ತ್ರಾಸು, 2 ಶಬ್ದೋತ್ಪಾದಕ ಯಂತ್ರ. 3 ಪ್ರವರ್ಧಕ
4 ಡಿಮ್ಮರ್‌ಸ್ಟ್ಯಾಟ್, 5 ವೋಲ್ಟ್‌ಮೀಟರ್, 6 ತೆರೆದ ಕ್ಷೇತ್ರದ ಪರಿಕ್ಷೋಪಕರಣ
7 ಉಪಕರಣದ ನೇರನೋಟ



ಚಿತ್ರ ೪ ಕ್ರಿಯಾಮಾಪಕ ಪಂಜರ

ವಿ. ಜಿ. ಕೃಷ್ಣಮೂರ್ತಿ

ಶಾಸನದ ಹಲವರು ಶಾಂತಲೆಯರು

ಜೈನ ತೀರ್ಥಂಕರರಲ್ಲಿ ಏಳನೆಯ ತೀರ್ಥಂಕರ ಸುಪಾರ್ಶ್ವ. ಆತನ ಲಾಂಛನ ಸ್ವಸ್ತಿಕ; ಆತನ ಶಾಸನದೇವಿ ಶಾಂತ. ಹದಿನಾರನೆಯ ತೀರ್ಥಂಕರ ಶಾಂತಿ ನಾಥ. ಶಾಂತಲ, ಶಾಂತವ್ವೆ, ಶಾಂತಕ್ಕರಸಿ, ಶಾಂತಲದೇವಿ ಎಂಬ ಹೆಸರುಗಳು ಶಾಸನದೇವಿ ಶಾಂತಲೆಯ ಇಲ್ಲವೆ ತೀರ್ಥಂಕರ ಶಾಂತಿನಾಥನ ನಾಮಾಂಕಿತದಲ್ಲಿ ಹೆಣ್ಣುಮಕ್ಕಳಿಗಿಡುವ ಹೆಸರಿನ ಹಲವು ರೂಪಗಳು. ಕರ್ಣಾಟಕ ಶಾಸನಗಳಲ್ಲಿ ಹಲವರು ಶಾಂತಲೆಯರು ನಮ್ಮ ನೋಟಕ್ಕೆ ಬೀಳುತ್ತಾರೆ. ಅವರೆಲ್ಲ ಅರಸಿಯರು, ಪೆರ್ಗಡತಿಯರು, ದಂಡನಾಯಕಿತ್ತಿಯರು ಇಲ್ಲವೆ ಧರ್ಮಕಾರ್ಯಗಳನ್ನೆಸಗಿ ಕಣ್ಮರೆಯಾದ ಪುಣ್ಯವತಿಯರು.

ಹೊಯ್ಸಳ ವಿಷ್ಣುವರ್ಧನನ ಅಂತಃಪುರದಲ್ಲಿ ಪ್ರಮುಖಸ್ಥಾನ ಪಡೆದಿದ್ದ ಪಿರಿಯರಸಿಯರು ಶಾಂತಲ, ಬೊಮ್ಮಲ, ಲಕ್ಷ್ಮಿ, ರಾಜಲ, ದೇವಕಿ, ಕಿರಿಯ ಶಾಂತಲ ಮತ್ತು ಚಂದಲ. ಇವರಲ್ಲಿ ಶಾಂತಲ ತನ್ನ ಪ್ರಭಾವದಿಂದ ಇನಿಯ ವಿಷ್ಣುವರ್ಧನನ್ನು ಆಕರ್ಷಿಸಿದ್ದಳಲ್ಲದೆ, ಆಧುನಿಕ ಸಾಹಿತಿಗಳನ್ನೂ ಜನತೆ ಯನ್ನೂ ಬೆರಗುಮಾಡಿದ್ದಾಳೆ. ಆಕೆ ಅವನ ಮೊದಲ ಹೆಂಡತಿ ಹಾಗೂ 'ಪಟ್ಟ ಮಹಾದೇವಿ'. ಅವನ ಅರಸಿಯರಲ್ಲೆಲ್ಲಾ ದೀರ್ಘಕಾಲ ಅವನ ಒಲವನ್ನು ಪಡೆದ ಚತುರೆ. ಆಕೆಯ ಹುಟ್ಟೂರು ಬಲಿಪುರವೆಂದು ತಿಳಿಯುತ್ತದೆ.[1] ಆಕೆ "ಕಲಿ ಕಾಲ ವಿಷ್ಣುವಕ್ಷಸ್ಥಳದೊಳು ಕಲಿಕಾಲ ಲಕ್ಷ್ಮಿ ನೆಲಸಿದಳೆನೆ" ವಿಷ್ಣುವರ್ಧನನ ಹೃದಯದಲ್ಲಿ ಅಗ್ರಸ್ಥಾನ ಪಡೆದಿದ್ದಳು. ಅವಳನ್ನು ಈ ರೀತಿ ವರ್ಣಿಸಿದೆ:

ಗುರುಗಳು ಪ್ರಭಾಚಂದ್ರ ಸಿದ್ಧಾಂತದೇವರೆ, ಪೆತ್ತ ತಾಯಿ
ಗುಣನಿಧಿ ಮಾಚಿಕಬ್ಬೆ।
ಪಿರಿಯ ಪೆರ್ಗಡೆ ಮಾರಸಿಂಗಯ್ಯ ತಂದೆ, ಮಾವನುಂ
ಪೆರ್ಗ್ಗಡೆ ಸಿಂಗಮಯ್ಯ।

[1] ಬೇಲೂರು ಶಾ. 58

ಅರಸಂ ವಿಷ್ಣುವರ್ಧನ ನೃಪಂ ವಲ್ಲಭಂ, ಜಿನನಾಥಂ
ತನಗೆಂದುಂ ಇಷ್ಟದೈಯ್ವಂ।
ಅರಸಿ ಶಾನ್ತಲ ದೇವಿಯ ಮಹಿಮೆಯುಂ ಬಣ್ಣಿಸಲು
ಬಕ್ಕುಮೆ ಭೂತಳದೊಳು ॥[2]

ಶಾಂತಲ ವಿಷ್ಣುವರ್ಧನನ 'ವಿಜಯಶ್ರೀ', 'ಕೀರ್ತಿಶ್ರೀ'; ರಾಜಕೀಯ ಮತ್ತು ಧಾರ್ಮಿಕ ವಿಚಾರಗಳಲ್ಲಿ ಅವನನ್ನು ನಿಯಂತ್ರಿಸುವಷ್ಟು ಪ್ರಭಾವಯುತೆ; ಸವತಿಯರ ಗಂಧವಾರಣೆ. "ಶಾಂತಲ ದೇವಿಯ ಗುಣಮಂ| ಶಾಂತಲದೇವಿಯ ಸಮಸ್ತ ದಾನೋನ್ನತಿಯಂ। ಶಾಂತಲ ದೇವಿಯ ಶೀಳವಂ" ವರ್ಣಿಸಲು ಕವಿಗೂ ಸಾಧ್ಯವಿಲ್ಲ. ಅವಳನ್ನು "ಪರಮಕಲ್ಯಾಣಾಭ್ಯುದಯ ಸತಸಹಸ್ರ ಫಳಭೋಗ ಭಾಗಿನೀ ದ್ವಿತೀಯ ಲಕ್ಷ್ಮಿ ಸಮಾನೆಯುಂ| ಸಕಳಕಳಾಗಮಾನುನೆಯುಂ| ಮಭಿನವ ರುಕ್ಮಿಣಿ ದೇವಿಯುಂ| ಪತಿಹಿತಾ ಸತ್ಯಭಾವೆಯುಂ। ವಿವೇಕಯ್ಕ ಬೃಹಸ್ಪತಿಯುಂ| ಪ್ರತ್ಯುತ್ಪನ್ನ ವಾಚಸ್ಪತಿಯುಂ | ಮುನಿಜನ ವಿನೇಯಜನ ವಿನೀತೆಯುಂ| ಪತಿಬ್ರತಾ ಪ್ರಭಾವ ಪ್ರಸಿದ್ಧ ಶೀಲೆಯುಂ| ಸಕಳ ವಂದಿಜನ ಚಿಂತಾಮಣಿಯುಂ | ಸಮ್ಯಕ್ತ ಚುಡಾಮಣಿಯುಂ। ಮುದ್ವೃತ್ತ ಸವತಿ ಗಂಧವಾರಣೆಯುಂ| ಚತುಸ್ಸಮಯ ಸಮುದ್ಧರ ಕಾರಣೆಯುಂ | ಮನೋಜರಾಜವಿಯ ಪತಾಕೆಯುಂ। ನಿಜಕುಳಾಭ್ಯುದಯ ದೀಪಿಕೆಯುಂ| ಗೀತಾವಾದ್ಯನೃತ್ಯ ಸೂತ್ರದಾರೆಯುಂ। ಜಿನಸಮಯ ಸಮುದಿತ ಪ್ರಾಕಾರೆಯುಂ| ಮಹಾರಾಭಯ ಭೈಷಜ್ಯ ಸಾಸ್ತ್ರದಾನ ವಿನೋದೆಯುಮಪ್ಪ ವಿಷ್ಣುವರ್ಧನ ಪೊಯ್ಸಳ ದೇವರ ಪಿರಿಯರಸಿ ಪಟ್ಟಮಹಾದೇವಿ ಶಾಂತಲದೇವಿ" ಎಂದು ಹೊಗಳಿದೆ.[3]

ಶಾಂತಲದೇವಿಯ ಗುಣವರ್ಣನೆಯ ಶಾಸನಸಂಖ್ಯೆಗಳನ್ನು ನೋಡಿದರೆ ಅವಳಷ್ಟು ಖ್ಯಾತಿವಂತೆ ಹೊಯ್ಸಳ ಅರಸಿಯರಲ್ಲಿರಲಿಲ್ಲವೆಂದು ಕಾಣುತ್ತದೆ. ಇಷ್ಟು ಪ್ರಸಿದ್ಧಳಾದ ಶಾಂತಲ ವಿಷ್ಣುವರ್ಧನನ ಪಟ್ಟದ ರಾಣಿಯಾಗಿದ್ದ ವಿಷಯವನ್ನು ಕೆಲವು ಶಾಸನಗಳು ತಿಳಿಸುತ್ತವೆ:

"ಶ್ರೀ ವಿಷ್ಣುವರ್ಧನ ಭೂಪಾಳರ ಹೊಯ್ಸಳ ದೇವರ
ವೀರಲಕ್ಷ್ಮಿಂಗನೆಯರಪ್ಪ ಶ್ರೀಮತು ಪಿರಿಯರಸಿ
ಪಟ್ಟಮಾಹಾದೇವಿ ಶಾಂತಲ........"[4]

"ಪಿರಿಯರಸಿ ಪಟ್ಟಮಹಾದೇವಿ ಶಾನ್ತಲದೇವಿ."[5]

---

2 ಶ್ರ.ಬೆಳಗೊಳ ಶಾ. 53

3 ಶ್ರ.ಬೆಳಗೊಳ ಶಾ. 56

4 ಕೃಷ್ಣರಾಜಪೇಟೆ ಶಾ. 68

5 ಶ್ರ.ಬೆಳಗೊಳ ಶಾ. 53

" ಪತಿಭಕ್ತಿ ಭವದ್ಧೆಯ್ವಕ್ಕಂ
ಹಿತಮೆಂಬುದಱಿದು ವಿನಿಯದಿಂ ವಿಷ್ಣುಮಹೀ
ಪತಿಯಂ ಮೆಚ್ಚಿಸುತೆ ಮಹಾ
ಸತಿ ಶಾನ್ತಲೆದೇವಿ ಪಟ್ಟಮುಂ ಧರೆಯಿಸಿದಳು."[6]

ಕ್ರಿ.ಶ. ೧೧೪೦ರ ಸಮಯದ ಒಂದು ಶಾಸನದಲ್ಲಿ[7] 'ಶಾನ್ತಲೆ'ಗೆ ಪ್ರತಿಯಾಗಿ ಇದೇ ಪದ್ಯ 'ದೇವಕಿದೇವಿ' ಎಂಬ ಅರಸಿಯನ್ನು ವರ್ಣಿಸುತ್ತದೆ:

" ಪತಿಭಕ್ತಿ ಭವದೆಯ್ವಕ್ಕುಂ
ಹಿತಮೆಂಬುದನರಿತು ವಿನಯದಿಂ ವಿಷ್ಣುಮಹೀ
ಪತಿಯಂ ಮೆಚ್ಚಿಸುತೆ ಮಹಾ
ಸತಿ ದೇವಕಿದೇವಿ ಪಟ್ಟಮುಂ ಧರಿಸಿದಳು"

ವಿಷ್ಣುವರ್ಧನನ ಈ ಪತ್ನಿ ದೇವಕಿದೇವಿ ಪಟ್ಟಮಹಿಷಿಯಾಗುವ ಹೊತ್ತಿಗೆ ಶಾಂತಲ ಮಡಿದು ಸುಮಾರು ಒಂಬತ್ತು ವರ್ಷಗಳಾಗಿದ್ದುವು.

ಶಾಂತಲ ಪಟ್ಟಧರಿಸಿದ್ದು ವಿಶೇಷಸಂದರ್ಭದಲ್ಲಿ: ಆವರೆಗೆ ಬಿಟ್ಟಿದೇವನೆಂದು ಹೆಸರು ಹೊತ್ತಿದ್ದ ಪತಿ ಶ್ರೀರಾಮಾನುಜರ ಅನುಗ್ರಹದಿಂದ ವಿಷ್ಣುವರ್ಧನ ಎಂಬ ಹೆಸರನ್ನು ತಾಳಿದಾಗ. ಈ ವಿಶೇಷ-ಸಂದರ್ಭದ ನೆನಹಿಗಾಗಿ ವಿಷ್ಣುವರ್ಧನ ಕಟ್ಟಿಸಿದ ಬೇಲೂರು ಚೆನ್ನಕೇಶವ ದೇವಾಲಯದ ಬಗ್ಗೆ ಶಾಂತಲೆಯ ಪಾತ್ರ ಗಣನೀಯವಾದದ್ದು. ಅಲ್ಲಿಯ ಮೂಲಗುಡಿಯ ಚೆನ್ನಕೇಶವ ಅಥವಾ ವಿಜಯನಾರಾಯಣನನ್ನು ವಿಷ್ಣುವರ್ಧನ ಪ್ರತಿಷ್ಠಾಪಿಸಿದ.[8] ಅಲ್ಲಿಯ ಕಪ್ಪೆಚೆನ್ನಿಗರಾಯನ ವಿಗ್ರಹದ ಪೀಠದ ಮೇಲಣ ಲಿಪಿ, ಶಾಂತಲ ಅದನ್ನು ಪ್ರತಿಷ್ಠೆಮಾಡಿಸಿದಳೆಂದು ತಿಳಿಸುತ್ತದೆ:

" ಶಾಂತಿಕೃತ್ಸರ್ವಭೂತಾನಾಂ ಪ್ರತಿಷ್ಠಾ ವಿಷ್ಣುಕಾಂತಯಾ
ಚೆಂನ್ನಕೇಶವದೇವಸ್ಯ ಶಾಂತಿದೇವ್ಯಾ ಕೃತೋತ್ತಮಾ ॥
ಪಟ್ಟಮಹಾದೇವಿ ॥ "[9]

ಕಪ್ಪೆಚೆನ್ನಿಗರಾಯನ ಗುಡಿಯ ಮುಂದೆ, ಅನತಿದೂರದಲ್ಲಿ ಒಂದೇ ಶಿಲೆಯಲ್ಲಿ ಅಂಜಲಿಮುದ್ರೆಯಲ್ಲಿರುವ ಸರ್ವಾಲಂಕೃತ ಗಂಡು-ಹೆಣ್ಣಿನ ವಿಗ್ರಹಗಳನ್ನು ವಿಷ್ಣುವರ್ಧನ-ಶಾಂತಲೆಯರದೆಂದು ಆರ್. ನರಸಿಂಹಾಚಾರ್ಯರು

[6] ಹಾಸನ ಶಾ. 116
[7] ಕಡೂರು ಶಾ. 79
[8] ಬೇಲೂರು ಶಾ. 58
[9] ಬೇಲೂರು ಶಾ. 275 (ಕ್ರಿ.ಶ. 1117)

ಗುರುತಿಸಿದ್ದಾರೆ. ಅವರಿಬ್ಬರೂ ದರ್ಬಾರಿನಲ್ಲಿ ಕುಳಿತಿರುವ ಭವ್ಯದೃಶ್ಯದ ಕಲಾಕೃತಿ ಕೇಶವ ದೇವಾಲಯದ ಚಿತ್ತಾರದ ತೆರೆಫಲಕದ ಮೇಲಿದೆ.

ವಿಷ್ಣುವರ್ಧನ ದೀರ್ಘಕಾಲ ದಿಟ್ಟತನದಿಂದ ಆಳಿದ ಕಡುಗಲಿ. ಅವನ ಆಳ್ವಿಕೆ ಕ್ರಿ.ಶ. ೧೧೧೦ರಿಂದ ೧೧೪೨ರ ವರೆಗೆ: ಪ್ರಾಪ್ತವಯಸ್ಸು ಮುಟ್ಟಿದ ಮಗ ಬಲ್ಲಾಳ ಅವನಿಗೆ ರಾಜ್ಯಭಾರದಲ್ಲಿ ನೆರವಾಗಿದ್ದ. ತಂದೆಯು ಯೋಧಜೀವನದಲ್ಲಿ ಈ "ಕುಮಾರಬಲ್ಲಾಳದೇವನನವರತ ಮನೋರಥಾವ್ಯಾಪ್ತಿಯಿಂ ರಾಜ್ಯಗೆಯ್ಯುತ್ತಿ(ದ್ದ)." "ಶ್ರೀಮತ್ಕುಮಾರಬಲ್ಲಾಳದೇವನಗ್ರಾನುಜೆ ಹರಿಯಬ್ಬರಸಿ" ಎಂದೂ, ಆಕೆಯ ಗಂಡ ವಿಭುಸಿಂಗನೆಂದೂ ತಿಳಿದುಬಂದಿದೆ.[10] ಅಲ್ಲದೆ ವಿಷ್ಣುವರ್ಧನನ ದಂಡನಾಯಕ ಭರತೇಶನ ಹೆಂಡತಿ ಹರಿಯಲೆ ಎಂದೂ ಆಕೆಯ ತಂದೆ 'ಮಾರಾಯು'ನೆಂದೂ ಹೇಳಲಾಗಿದೆ.[11] ಕುಮಾರಬಲ್ಲಾಳನನ್ನು ವಿಷ್ಣುವರ್ಧನನ 'ಅಗ್ರತನೂಜ'ನೆಂದು ಕರೆದಿರುವುದರಿಂದ, ಅವನು ಶಾಂತಲೆಯ ಮಗನಾಗಿರಬೇಕೆಂಬ ಊಹೆಗೆ ಅವಕಾಶವಿದೆ. ವಿಷ್ಣುವರ್ಧನನ ಇನ್ನಿತರ ಗಂಡು ಮಕ್ಕಳು ಯಾರೆಂಬ ಬಗ್ಗೆ ಐತಿಹಾಸಿಕ ಮಾಹಿತಿಗಳಿಲ್ಲ: ವಿಷ್ಣುವರ್ಧನ ೧೧೩೩ರಲ್ಲಿ ಜಯಶೀಲನಾಗಿ ಯುದ್ಧಶಿಬಿರದಿಂದ ಬರುವಾಗ್ಗೆ ತನ್ನ ಹಿರಿಯರಸಿ ಲಕ್ಷ್ಮಿದೇವಿ ಗಂಡುಮಗು ಹೆತ್ತಳೆಂಬ ವಾರ್ತೆಯನ್ನು ಕೇಳಿ, ಮಗುವಿಗೆ ವೀರನಾರಸಿಂಹನೆಂದು ಹೆಸರಿಟ್ಟು ಅವನನ್ನು ಗದ್ದುಗೆಗೆ ಉತ್ತರಾಧಿಕಾರಿಯನ್ನಾಗಿ ಮಾಡಿದ್ದರಿಂದ, ಆವೇಳೆಗೆ ಕುಮಾರಬಲ್ಲಾಳ ತೀರಿಕೊಂಡಿದ್ದನೆಂಬುದು ದೃಢವಾಗುತ್ತದೆ. ಶಾಂತಲೆಯೂ ಅಷ್ಟು ಹೊತ್ತಿಗೆ ತೀರಿಕೊಂಡಿದ್ದಳು. ಹರಿಯಬ್ಬರಸಿ ಕುಮಾರ ಬಲ್ಲಾಳನ 'ಅಗ್ರಾನುಜೆ'ಯಾದ್ದರಿಂದ, ಭರತೇಶದಂಡನಾಯಕನನ್ನು ವಿವಾಹವಾದ ಹರಿಯಲೆ ಅವನ ತಂಗಿಯಾಗಿರಬೇಕು. ಆದ್ದರಿಂದಲೇ ಅವಳನ್ನು ಚಿಕ್ಕ ಹರಿಯಲೆ ಎಂದು ಕರೆದಿದೆ :

> " ಎಣಿಕೆಯ ಲೋಕದ ಗಣಿಕೆಯ
> ರೆಣೆಯಲ್ಲರು ನೋಡ ಚಿಕ್ಕಹರಿಯಲೆಗಾರುಂ
> ಗುಣದೊಳು ಸಾಸನದೇವಿಯ
> ರೆಣೆಯಪ್ಪರು ಭರತರಾಜನರ್ಧಾಂಗನೆಗಂ " ||[12]

ಶಾಂತಲ ವೈಷ್ಣವಧರ್ಮ ರಾಷ್ಟ್ರಧರ್ಮವಾಗುವಂತೆ ನೆರವಿತ್ತರೂ ಕೊನೆಯವರೆಗೂ ಜಿನಭಕ್ತಳಾಗಿಯೇ ಉಳಿದಳು. ಆಕೆ ಶೈವ, ವೈಷ್ಣವ, ಜೈನ,

---

[10] ಮೂಡಗೆರೆ ಶಾ. 22 (ಕ್ರಿ.ಶ. 1129)

[11] ಚಿಕ್ಕಮಗಳೂರು ಶಾ. 160

[12] ನಾಗಮಂಗಲ ಶಾ. 32

ಬೌದ್ಧಧರ್ಮ ರಕ್ಷಣೆಮಾಡಿದ 'ಚತುಸ್ಸಮಯಸಮುದ್ಧರ ಕಾರಣೆ.' ಅವಳ ಜಿನ ಧರ್ಮಶ್ರದ್ಧೆಯನ್ನು ಹಲವಾರು ಶಾಸನಗಳು ಸೂಚಿಸುತ್ತವೆ.[13] ಶ್ರವಣಬೆಳಗೊಳದಲ್ಲಿ ಆಕೆ ನಿರ್ಮಿಸಿದ ಬಸದಿಗೆ 'ಸವತಿಗಂಧವಾರಣ ಬಸ್ತಿ' ಎಂಬ ಹೆಸರಿದೆ. ಶಾಂತಿ ನಾಥನ ಹೆಸರು ಹೊತ್ತ ಆಕೆ ಈ ಬಸದಿಯನ್ನು ಅವನಿಗಾಗಿ ಕಟ್ಟಿಸಿದಳು.

ಶಾಂತಲ "ಸಕವರ್ಷ ೧೦೫೦ ನೂಱಜಿನೆಯ ವಿರೋಧಿಕೃತ್ಸಂವರದ ಚೈತ್ರ ಸುದ್ಧ ಪಂಚಮೀ ಸೋಮವಾರದಂದು ಸಿವಗಂಗೆಯ ತೀರ್ಥದಲು ಮುಡಿಪಿ ಸ್ವರ್ಗ್ಗತೆ ಯಾದಳು." ಅವಳ ಮರಣದಿಂದುಂಟಾದ ಶೋಕವನ್ನು ತಾಳಲಾರದೆ "ತಂದೆ ಮಾರಸಿಂಗಯ್ಯನುಮಿಂಬಿನ ಜನನಿ ಮಾಚಿಕಬ್ಬೆಯುಮಿನಿಬರುಮೊಡನೊಡನೆ ಮುಡುಪಿ ಸ್ವರ್ಗ್ಗತರಾದರು."[14]

ಶಾಂತಲ ತೀರಿಕೊಂಡ ಕೆಲವು ವರ್ಷಗಳ ಮೇಲೆ ವಿಷ್ಣುವರ್ಧನ ಲಕ್ಷ್ಮೀ ದೇವಿಯನ್ನು ವಿವಾಹವಾದ. ಈ ವಿವಾಹದಿಂದ ಜನಿಸಿದ ಮಗನೇ ನರಸಿಂಹ I. ಅದೇ ಸಮಯದಲ್ಲಿ ಅವನು ಲಕ್ಷ್ಮೀದೇವಿಯಲ್ಲದೆ, ಕೇತಳನಾಯಕ ಮತ್ತು ಜಕ್ಕಿಯಬ್ಬೆಯರ ಮಗಳು ಚಿಕ್ಕಶಾಂತಲೆಯನ್ನು ಮದುವೆಯಾದ. ಆದರೆ, ಈ ಕಿರಿಯ ಶಾಂತಲೆಯೂ ಅವಳಿಗೆ ಜನಿಸಿದ ಮಗಳು ಬೊಪ್ಪಲೆಯೂ ಕ್ರಿ.ಶ. ೧೧೩೫ರಲ್ಲಿ ಮೃತರಾದರು. ಅವರ ಸ್ಮರಣಾರ್ಥವಾಗಿ ಜಕ್ಕಿಯಬ್ಬೆ ಶಿವಾಲಯ ವನ್ನು ರಚಿಸಿ ದಾನದತ್ತಿಗಳನ್ನು ಕೊಟ್ಟಳು.[15] ಕಿರಿಯ ಶಾಂತಲೆ ರಾಜಕೀಯ ದಲ್ಲಾಗಲಿ, ಧಾರ್ಮಿಕ ವಿಷಯಗಳಲ್ಲಾಗಲಿ ವಿಷ್ಣುವರ್ಧನನಿಗೆ ಮಾರ್ಗದರ್ಶನ ಮಾಡುವಷ್ಟು ಚತುರೆಯಾಗಿರಲಿಲ್ಲ. ವಿಷ್ಣುವರ್ಧನನ ಅಳಿಯ ಭರತೇಶದಂಡ ನಾಯಕನಿಗೆ ಶಾಂತಲ ಎಂಬ ಮಗಳಿದ್ದಳು. ಅವಳನ್ನು "ಭರತ ಚಮೂಪತಿ ಸುತೆ ಸುಸ್ಥಿರೆ ಶಾನ್ತಲದೇವಿ ಭೂಚಿರಾಜಾಂಗನೆ"—ಎಂದು ಕರೆದಿದೆ.[16] ಭೂಚಿರಾಜ ಮತ್ತು ಶಾಂತಲೆಯರ ವಿಷಯವನ್ನು ಪ್ರಸ್ತಾಪಿಸುವ ಮತ್ತೊಂದು ಶಾಸನವಿದೆ.[17] ಭೂಚಿರಾಜ ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ಪೊನ್ನನಿಗೆ ಸಮಾನ ಪ್ರೌಢಕವಿಯೆಂದು ವರ್ಣಿಸಿದೆ. ಅವನು ಇಮ್ಮಡಿ ಬಲ್ಲಾಳನಿಗೆ (೧೧೭೩–೧೨೨೦) ಮಂತ್ರಿ; 'ಚತುರ್ವಿಧಪಾಂಡಿತ್ಯಮಂಡಿತಂ'; 'ವಾಚಕ ವಾಚಸ್ಪತಿ ಕವಿತಾಚಾರ್ಯ್ಯಂ ಶ್ರವ್ಯಕಾವ್ಯ ಪದ್ಯಪದಾರ್ಥಾಳೋಚನ ಚಕ್ಷು.' ಈತ ಯಾವ ಗ್ರಂಥ ಬರೆದನೋ ತಿಳಿಯದು. ಅವನ ಪತ್ನಿ ಶಾಂತಲ ಜಿನಭಕ್ತನೂ ಸಾಹಿತಿಯೂ ಮಂತ್ರಿಯೂ ಆಗಿದ್ದ ಅವನಿಗೆ ಅನುಗುಣವಾದ ಪಾತ್ರವನ್ನೇ ಅವನ ಜೀವಿತದಲ್ಲಿ ವಹಿಸಿರಬೇಕು.

---

13 ಉದಾಹರಣೆಗೆ: ಬೇಲೂರು ಶಾಸನಗಳು 9 ಮತ್ತು 124

14 ಶ್ರ.ಬೆಳಗೊಳ ಶಾ. 53

15 ಹಾಸನ ಶಾ. 89

16 ಶ್ರ.ಬೆಳಗೊಳ ಶಾ. 115

17 ಹಾಸನ ಶಾ. 119

ಈಗಿನ ತುಮಕೂರು ಜಿಲ್ಲೆಯ ಹುಲಿಯಾರು ಹೊಯ್ಸಳರ ಕಾಲದಲ್ಲಿ ಹುಲಿಯೇರು ವೃತ್ತಿಯಾಗಿತ್ತು. ಹುಲಿಯೇರು ವೃತ್ತಿಯ ಸಾಮಂತಚಿಟ್ಟನಿಗೆ ಶಾಂತಲ ಎಂಬ ಜಿನಭಕ್ತೆ ಪತ್ನಿಯಾಗಿದ್ದಳು. ಸ್ವಾಮಿನಿಷ್ಠನಾದ ಚಿಟ್ಟ ತನ್ನ ಮಗನಿಗೆ ಬಿಟ್ಟಿದೇವನೆಂದು ಹೆಸರಿಟ್ಟ. ಈ ಶಾಂತಲೆಯ ವರ್ಣನೆ ಇದು :

> " ತೆರೆನಳಿತೋಳಳಂಬುರುಹಾನನವೃದ್ಧತ ಕಂಬಕನ್ಧರಂ
> ಸುರಚಿರಸಪ್ರವಾಳವಧರಂ ಪಸುದ್ಯುತಿ ಮೌಕ್ತಿಕೋತ್ಕರಂ
> ಗುರುಕಚಭಾರನೀಳರತ್ನಂ ನಗೆವಾಕಣವಾಗೆ ಕೋಲ್ವಳೀ
> ನಿರುಪಮ ಕಾನ್ತೆ ಸಾನ್ತಲೆ ಸುಧಾಂಶುಕಳಾಶ್ರಿತ ದುಗ್ಧವಾರ್ಧಿಯಂ ॥[18]

ಗೇರುಸೊಪ್ಪೆ ಜೈನ ಅರಸುಮನೆತನದಲ್ಲಿನ ಮತ್ತೊಬ್ಬ ಶಾಂತಲ ಶಾಸನ ಸ್ಥಿರವಾಗಿದ್ದಾಳೆ. ಅವಳನ್ನು 'ಹೈವಣರಸಂಗೆ ಮನಃಪ್ರಿಯಾಂಗನೆಯು ಸಾಂತಲದೇವಿ' ಎಂದು ವರ್ಣಿಸಿದೆ :

> " ಅರಸಪ್ಪೊಡೆಯರ ತನೂಜೆ ವರಗುಣಜೊಮ್ಮಕ್ಕನಾಕೆಯಾತ್ಮಜೆ
> ಸಾಂತಕರಸಿಯು ಪರಮನ ಪದಮಂ ಸ್ಮರಿಯಿಸಿ ಸುರಲೋಕವೆಯ್ದಿ
> ಸುಖದಿಂದಿರ್ದಳು. ಅರ್ಹನ್ತನ ಪಾದಾಂಬುಜಮಂ ಸ್ಮರಿಯಿಸುತ್ತಂ
> ನಂಬಿ ಪದಮನಾಲಗೆಯೊಳಗುಚ್ಚರಿಸುತ್ತ ಸಾಂತಕರಸಿ ಶರೀರಮಂ
> ಪತ್ತೆಂಟು ದಿನದೊಳು ಸಂದಳು ಪರವತ್ಸರ ತಾರುಣದೊಳು."[19]

ಚನ್ನಗಿರಿ ತಾಲ್ಲೂಕಿನ ಸೂಳೆಕೆರೆಯ ನಿರ್ಮಾಣ ಸುಮಾರು ಹನ್ನೊಂದು ಅಥವಾ ಹನ್ನೆರಡನೆಯ ಶತಮಾನ; ಹೊಯ್ಸಳರ ಕಾಲ. ಅಲ್ಲಿನ ಸ್ವರ್ಗಾವತಿ, ಹೊಯ್ಸಳರ ದ್ವಾರಾವತಿಯಂತೆ, ವಿಕ್ರಮರಾಯನಿಗೆ ರಾಜಧಾನಿ. ವಿಕ್ರಮರಾಯನಿಗೆ ಮಕ್ಕಳಿಲ್ಲ ದಿರಲು ಶಾಂತವ್ವ (ಶಾಂತಲ) ಎಂಬಾಕೆಯನ್ನು ದತ್ತುಪುತ್ರಿಯಾಗಿ ಸ್ವೀಕರಿಸಿದ. ಈ ಶಾಂತವ್ವ ಯಕ್ಷನೊಬ್ಬನಲ್ಲಿ ಅನುರಕ್ತಳಾದುದನ್ನು ಕಂಡು ಅರಸ ಅವಳನ್ನು ಸೂಳೆಯೆಂದು ಶಪಿಸಿದ. ಆ ಕಾರಣ ಅವನ ನಗರ ಸ್ವರ್ಗಾವತಿ, ಯಕ್ಷನ ಪ್ರಭಾವದಿಂದ, ನೀರಲ್ಲಿ ಮುಳುಗಿ, ಆ ನೀರು ನಿಂತ ಸ್ಥಳ 'ಸೂಳೆ ಕೆರೆ' ಆಯಿತೆಂಬ ಐತಿಹ್ಯವಿದೆ.

ಹಿಂದೆ ಕೊಳತ್ತೂರು ಎಂದು ಪ್ರಸಿದ್ಧವಾಗಿದ್ದ ಚನ್ನರಾಯಪಟ್ಟಣದ ಈಶಾನ್ಯದಲ್ಲಿರುವ ಕೆರೆಯನ್ನು ಮಾಚಲದೇವಿ ಮತ್ತು ಶಾಂತಲದೇವಿ ಎಂಬ ನೃತ್ಯಗಾತಿಯರು ಕಟ್ಟಿಸಿದರು. ಕರ್ನಾಟಕ ಶಾಸನಗಳಲ್ಲಿ ಇನ್ನೂ ಹಲವಾರು ಶಾಂತಲೆಯರು ಸಿಗಬಹುದು.

---

[18] ಚಿಕ್ಕನಾಯ್ಕನಹಳ್ಳಿ ಶಾ. (ಕ್ರಿ.ಶ. 1169)

[19] *Mysore Archaeological Report, 1928* : ಶಾ. 110

ಎಸ್. ರಾಜಶೇಖರ್

ಭಾರತದಲ್ಲಿ ಪ್ರಶ್ನಾವಳಿಯ ಪ್ರಾಮುಖ್ಯ

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಪರಿಶೀಲನ ವಿಧಾನ (ಸೋಷಿಯಲ್ ಸರ್ವೇ ಮೆಥಡ್) ಬೆಳೆದಂತೆಲ್ಲ ಹೆಚ್ಚು ಉಪಯುಕ್ತವಾಗಿದ್ದು ಪ್ರಯೋಗದಲ್ಲಿರುವ ಸಾಧನಗಳಲ್ಲಿ ಪ್ರಶ್ನಾವಳಿಯೂ ಒಂದು. ಭೌಗೋಳಿಕವಾಗಿ ಚದರಿಹೋಗಿರುವ ಪ್ರದೇಶಗಳಿಂದ ಮತ್ತು ವ್ಯಕ್ತಿಗಳಿಂದ ಅಂಕಿ ಅಂಶಗಳನ್ನು ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸುವಲ್ಲಿ ಪ್ರಶ್ನಾವಳಿಯ ಪಾತ್ರ ಅತ್ಯಂತ ಮಹತ್ತರವಾದುದು.

ಒಂದು ರಾಷ್ಟ್ರದ ಹಲವು ಸಮಸ್ಯೆಗಳ ಪರಿಹಾರಕ್ಕೆ ಪ್ರಶ್ನಾವಳಿ ಸಾಧನವನ್ನು ಎಷ್ಟರಮಟ್ಟಿಗೆ ಬಳಸಲಾಗುತ್ತಿದೆ ಎನ್ನುವುದು, ಆ ರಾಷ್ಟ್ರದ ಪ್ರಗತಿಯನ್ನು ಸೂಚಿಸುತ್ತದೆ. ಕಾರಣ, ಪ್ರಶ್ನಾವಳಿಯ ಬಳಕೆ ರೂಢಿಗೆ ಬರಬೇಕಾದರೆ, ಸಾಕ್ಷರತೆಯ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯೂ ಜನತೆಗೆ ತಮ್ಮ ಸಮಸ್ಯೆಗಳ ಪರಿಹಾರಕ್ಕೆ ಶಾಂತಿಯುತ ವಿಚಾರ ವಿನಿಮಯ ಮಾರ್ಗದಲ್ಲಿ ಅಪಾರ ನಂಬಿಕೆಯೂ ಇರಬೇಕಲ್ಲದೆ, ಜನತೆಯಲ್ಲಿ ಪೌರಕರ್ತವ್ಯವೂ ಸಾಮಾಜಿಕ ಪ್ರಜ್ಞೆಯೂ ಆವಶ್ಯಕವಾಗಿರಬೇಕು. ಅಂತೆಯೇ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಈಚೀಚೆಗೆ ಬಳಕೆಗೆ ಬರುತ್ತಿರುವ ಸಾಧನ—ಪ್ರಶ್ನಾವಳಿ.

ಹಿಂದುಳಿದ ಮತ್ತು ಸಂಪ್ರದಾಯಬದ್ಧ ಸಮಾಜದ ಒಂದು ಲಕ್ಷಣವೆಂದರೆ ಸಾಮೂಹಿಕ ಅನಕ್ಷರತೆ. ಅಂತೆಯೇ, ಸಾಮೂಹಿಕ ಅನಕ್ಷರತೆ ಇರುವ ಭಾರತದಂಥ ರಾಷ್ಟ್ರದಲ್ಲಿ ಸಧ್ಯದಲ್ಲಿ ಪ್ರಶ್ನಾವಳಿಯ ಬಳಕೆ ಸಾಧ್ಯವೇ ಎನ್ನುವ ಪ್ರಶ್ನೆ ಸಹಜ. ಪ್ರಶ್ನಾವಳಿಯ ಪ್ರಯೋಗದಲ್ಲಿ ಅನಕ್ಷರತೆ ಒಂದು ದೊಡ್ಡ ತೊಡಕು ನಿಜ. ಆದರೆ, ಈ ತೊಡಕು ತಾತ್ಕಾಲಿಕವಾದುದು ಮತ್ತು ಕಾಲಸೀಮಿತವಾದುದು. ದೇಶದಲ್ಲಿ ಅಕ್ಷರಸ್ಥರ ಸಂಖ್ಯೆ ಕ್ರಮೇಣ ಹೆಚ್ಚುತ್ತಿರುವಂತೆ, ಕೆಲವು ಕ್ಷೇತ್ರಗಳಲ್ಲಿ ಮತ್ತು ಹಲವು ವಿಷಯಗಳ ಬಗೆಗೆ ಮಾಹಿತಿ ಸಂಗ್ರಹಿಸುವಲ್ಲಿ ಪ್ರಶ್ನಾವಳಿಯ ಬಳಕೆಯ ಸಾಧ್ಯತೆಯೂ ಹೆಚ್ಚುತ್ತಾ ಹೋಗುತ್ತದೆ. ಇದಕ್ಕೂ ಹೆಚ್ಚಿನದಾಗಿ ವಿಶಿಷ್ಟ ರೀತಿಯ ಹಲವು ಭಾರತೀಯ ಸಂಪ್ರದಾಯ ಮತ್ತು ಪರಿಸ್ಥಿತಿಗಳಿಂದಾಗಿ ಪ್ರಶ್ನಾವಳಿಯ ಬಳಕೆ ಅನಿವಾರ್ಯವೆನಿಸುತ್ತದೆ.

ಸಾಂಪ್ರದಾಯಿಕ ಪದ್ಧತಿಗಳು ಬೇಗ ಪರಿವರ್ತನೆಗೊಳ್ಳುವಂಥವಲ್ಲ. ಇಂದಿಗೂ ಬಹುತೇಕ ಭಾರತೀಯ ಮಹಿಳೆಯರು ನಾಚಿಕೆಯ ಪ್ರತೀಕಗಳೆಂದರೆ ತಪ್ಪಲ್ಲ. ಇದು ವಿದ್ಯಾವಂತರಲ್ಲದವರಲ್ಲಿ ಹೆಚ್ಚಾಗಿ ಕಂಡುಬಂದರೆ, ವಿದ್ಯಾವಂತರಲ್ಲೇನೂ ಕಡಿಮೆ ಇಲ್ಲ. ಮಹಿಳೆಯರು ಅಪರಿಚಿತ ವ್ಯಕ್ತಿಯೊಡನೆ ಸಂದರ್ಶನಕ್ಕೆ ಒಪ್ಪುವರೆಂದು ಹೇಳಲು ಬಾರದು. ಮಹಿಳೆಯರಿಗೆ ಸಂಬಂಧಪಟ್ಟ ಹಾಗೂ ಮಹಿಳೆಯರಿಂದ ಮಾಹಿತಿಯನ್ನು ಸಂಗ್ರಹಿಸಲೇಬೇಕಾದ ವಿಷಯಗಳ ಬಗೆಗೆ ಅಭಿಪ್ರಾಯಗಳನ್ನು ಸಂಗ್ರಹಿಸುವಲ್ಲಿ ಪ್ರಶ್ನಾವಳಿ ಬಹಳ ಫಲಕಾರಿ.

ಒಮ್ಮೆ ಮಹಿಳಾಸಂದರ್ಶಕರನ್ನು ನೇಮಿಸಿಕೊಂಡರೆ ಈ ಎಲ್ಲ ತೊಡಕಿಗೂ ಪರಿಹಾರವೆಂದೆನಿಸಬಹುದು. ಆದರೂ ದೂರ ಪ್ರದೇಶಗಳಿಂದ ಮಾಹಿತಿಯನ್ನು ಸಂಗ್ರಹಿಸಬೇಕಾದ ಸಂದರ್ಭದಲ್ಲಿ ಮತ್ತು ಪರಿಶೀಲನೆಯಲ್ಲಿ ಪಾಲ್ಗೊಳ್ಳುವ ಮಹಿಳೆಯರು ವಿದ್ಯಾವಂತರಾಗಿದ್ದಲ್ಲಿ, ಸಂದರ್ಶನಕ್ಕಿಂತ ಕಡಿಮೆ ಖರ್ಚಿನಲ್ಲಿ ನಡೆಸಬಹುದಾದ ಪ್ರಶ್ನಾವಳಿಯೇ ಒಂದು ರೀತಿಯಲ್ಲಿ ಸ್ವಾಗತಾರ್ಹ.

ವೈವಿಧ್ಯವೇ ಭಾರತದ ವೈಶಿಷ್ಟ್ಯ. ಇಲ್ಲಿ ವಿವಿಧ ಭಾಷೆಗಳಿವೆ. ಆದರೆ, ಪ್ರಶ್ನಾವಳಿ ಬಹಳಮಟ್ಟಿಗೆ ಇಂಗ್ಲಿಷ್ ಭಾಷೆಗೆ ಸೀಮಿತವಾಗಿದ್ದು, ಪ್ರಾದೇಶಿಕ ಭಾಷೆಗಳಲ್ಲಿ ಅದರ ಬಳಕೆ ಇಲ್ಲವೆಂದೇ ಹೇಳಬಹುದು.

ಪ್ರಾದೇಶಿಕ ಸಮಸ್ಯೆಗಳ ಬಗೆಗೆ ಅಭಿಪ್ರಾಯ ಮತ್ತು ಮಾಹಿತಿಯನ್ನು ಸಂಗ್ರಹಿಸಲು ಪ್ರಾದೇಶಿಕ ಭಾಷೆಗಳಲ್ಲಿ ರಚಿತವಾದ ಪ್ರಶ್ನಾವಳಿ ಬಹಳ ಪ್ರಯೋಜನಕಾರಿ. ಅದರಿಂದ ಪ್ರಾದೇಶಿಕ ಭಾಷೆ ಮಾತ್ರ ತಿಳಿದಿರುವ ಬಹಳ ಜನರ ಅಭಿಪ್ರಾಯಗಳನ್ನು ಸಹ ಪಡೆಯಲು ಅನುಕೂಲವಾಗುತ್ತದೆ. ರಾಷ್ಟ್ರಮಟ್ಟದ ಅಭಿಪ್ರಾಯ ಸಂಗ್ರಹಣೆ ಅಥವಾ ಸಮಸ್ಯೆಯ ಬಗೆಗೂ ಇದೇ ನೀತಿಯನ್ನು ಅನುಸರಿಸಬಹುದು. ಅಂದರೆ, ಆಯಾ ಪ್ರಾದೇಶಿಕ ಭಾಷೆಗಳಲ್ಲಿ ರಚಿಸಿದ ಪ್ರಶ್ನಾವಳಿಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಕ್ರೋಢೀಕರಿಸಲು ಸಾಧ್ಯವುಂಟು. ಈ ಕ್ರಮ ಎರಡು ಕಾರಣಗಳಿಂದ ಸ್ವಾಗತಾರ್ಹವೆನಿಸುತ್ತದೆ. ಇಡೀ ದೇಶದ ಜನ ಒಂದು ಭಾಷೆಯನ್ನು ಆಡಿ ಅರ್ಥಮಾಡಿಕೊಳ್ಳದಿದ್ದರೂ ಇಂಥ ವಿಷಯಗಳಲ್ಲಿ ಭಾಷೆ ಒಂದು ತೊಡಕಾಗುವುದನ್ನು ನಿವಾರಿಸಿ, ಎಲ್ಲ ಭಾಷಾಜನರೂ ಇಂಥ ಒಂದು ಜನಾಭಿಪ್ರಾಯ ಸಿದ್ಧಾಂತದಲ್ಲಿ ಪಾಲ್ಗೊಳ್ಳುವ ಅವಕಾಶ ಸಾಧ್ಯವಾಗುತ್ತದೆ. ಎರಡನೆಯದಾಗಿ, ಪ್ರಶ್ನೆಗಳು ನೇರವಾಗಿದ್ದು, ಬಹಳಮಟ್ಟಿಗೆ "ಹೌದು" ಅಥವಾ "ಇಲ್ಲ" ಎನ್ನುವ ಉತ್ತರವನ್ನು ನಿರೀಕ್ಷಿಸುವುದರಿಂದ, ರಾಷ್ಟ್ರಮಟ್ಟದಲ್ಲಿ ತಜ್ಞರ ಸಮಿತಿಯಿಂದ ಈ ಎಲ್ಲ ಉತ್ತರಗಳ ಕ್ರೋಢೀಕರಣ ಕಷ್ಟದ ಕೆಲಸವೇನಲ್ಲ.

ಪ್ರಾದೇಶಿಕ ಭಾಷೆಗಳಲ್ಲಿ ಹೆಚ್ಚುಹೆಚ್ಚಾಗಿ ಪ್ರಶ್ನಾವಳಿಯ ರಚನೆ ಮತ್ತು ಪ್ರಯೋಗ ನಡೆದಂತೆಲ್ಲ ಅದರ ವ್ಯಾಪ್ತಿ ಮತ್ತು ಪ್ರಯೋಜನ ಹೆಚ್ಚಬಹುದು.

ಭಾರತ ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವದ ಪ್ರಯೋಗಶಾಲೆ ಎನಿಸಿ

ಕೊಂಡಿರುವುದು ಜನಸಂಖ್ಯೆಯ ಬಾಹುಳ್ಯದ ದೃಷ್ಟಿಯಿಂದ ಮಾತ್ರವಲ್ಲದೆ ಭೂವಿಸ್ತಾರದ ದೃಷ್ಟಿಯಿಂದಲೂ ಹೌದು. ಮಾಹಿತಿಯ ಆಧಾರದ ಪರಿಶೀಲನೆಗೆ ಹೆಚ್ಚು ಬೆಲೆ ಇರುವ ಇಂದು ಜನಾಭಿಪ್ರಾಯಸಂಗ್ರಹಣೆಗೆ ವಿಶೇಷ ಮಹತ್ತ್ವವನ್ನು ಕೊಡಬೇಕಾಗುತ್ತದೆ. ಅಂತೆಯೇ ಯಾವುದೇ ಒಂದು ರಾಷ್ಟ್ರೀಯ ಸಮಸ್ಯೆಯ ಬಗೆಗೆ ಜನಾಭಿಪ್ರಾಯಸಂಗ್ರಹಣೆ ಅನಿವಾರ್ಯ. ಈ ದೆಸೆಯಲ್ಲಿ ಸಂದರ್ಶನ ಸಾಧನ ಕೆಲವೊಮ್ಮೆ, ಕಾಲ ಮತ್ತು ಹಣದ ದೃಷ್ಟಿಯಿಂದ, ಹೆಚ್ಚು ಸ್ವಾಗತಾರ್ಹ ವೆನಿಸುವುದಿಲ್ಲ. ಆದ್ದರಿಂದ ರಾಷ್ಟ್ರಮಟ್ಟದ ಹಲವು ಸಮಸ್ಯೆಗಳ ಬಗೆಗೆ ಅಕ್ಷರಸ್ಥ ಜನರಿಂದ ಅಭಿಪ್ರಾಯಸಂಗ್ರಹಣೆ ಮಾಡಲೇಬೇಕಾದ ಸಂದರ್ಭದಲ್ಲಿ ಪ್ರಶ್ನಾವಳಿ ಹೆಚ್ಚು ಫಲಕಾರಿಯಾಗಬಲ್ಲುದು.

ರಾಷ್ಟ್ರೀಯ ಸಮಸ್ಯೆ ಮತ್ತು ವಿಷಯಗಳ ಬಗೆಗೆ ಅಭಿಪ್ರಾಯಸಂಗ್ರಹಣೆ ಮಾಡಬೇಕಾದ ಪ್ರಸಂಗಗಳಲ್ಲಿ, ದೇಶದಲ್ಲಿ ಆಗಾಗ್ಗೆ ನಡೆಯುವ ರಾಷ್ಟ್ರಮಟ್ಟದ ಸಭೆ ಮತ್ತು ವಿಚಾರಗೋಷ್ಠಿಗಳು ಪ್ರಶ್ನಾವಳಿಯ ಪ್ರಯೋಗಕ್ಕೆ ಒಂದು ರೀತಿಯಲ್ಲಿ ಅಪೂರ್ವ ಅವಕಾಶವನ್ನು ಕಲ್ಪಿಸಿಕೊಡುತ್ತವೆ. ಮಾದರಿಯೋಪಾದಿಯಲ್ಲಿ (ಸ್ಯಾಂಪಲ್) ಆಯ್ದಂತೆ ದೇಶದ ಎಲ್ಲ ಭಾಗಗಳ ಪ್ರತಿನಿಧಿಗಳು ಪಾಲ್ಗೊಳ್ಳುವ ಇಂಥ ವಿಚಾರಗೋಷ್ಠಿ ಅಥವಾ ಸಭೆಗಳಲ್ಲಿ, ಸಂದರ್ಶನಸಾಧನಕ್ಕಿಂತ ಪ್ರಶ್ನಾವಳಿಯ ಆವಶ್ಯಕತೆಗೆ ಮುಖ್ಯ ಕಾರಣವೆಂದರೆ, ಪ್ರತಿನಿಧಿಗಳಿಗೆ ಒತ್ತಡದ ಕಾರ್ಯಕ್ರಮ ಗಳಿಂದಾಗಿ ಸಂದರ್ಶನವನ್ನು ಕೊಡುವ ವ್ಯವಧಾನವಿಲ್ಲದಿರುವುದರ ಜೊತೆಗೆ, ಕ್ಲುಪ್ತಕಾಲದಲ್ಲಿ ಎಲ್ಲ ಪ್ರತಿನಿಧಿಗಳ ಸಂದರ್ಶನದ ಅಸಾಧ್ಯತೆ. ಆದರೆ, ಸಭೆ ಅಥವಾ ಗೋಷ್ಠಿ ಮುಗಿದ ಅನಂತರ ತಮ್ಮ ತಮ್ಮ ಸ್ಥಳಗಳಿಗೆ ಹಿಂದಿರುಗಿ ಸಾವಕಾಶವಾಗಿ ಉತ್ತರಿಸಬಹುದಾದ ಪ್ರಶ್ನಾವಳಿಯೆ ಇಂಥ ಸಂದರ್ಭದಲ್ಲಿ ಉತ್ತಮ ಸಾಧನ ವೆನಿಸುತ್ತದೆ.

ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಪ್ರಶ್ನಾವಳಿಯ ಆವಶ್ಯಕತೆಯನ್ನು ಒತ್ತಿಹೇಳಬೇಕಿಲ್ಲ. ಸ್ಪರ್ಧೆ ಅಥವಾ ಪೈಪೋಟಿ ಪ್ರಗತಿಗೆ ಪ್ರೇರಕ ಶಕ್ತಿಯಾಗಿರು ವುದು ಮಾತ್ರವಲ್ಲದೆ, ಅನೇಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಅಸ್ತಿತ್ವವನ್ನು ನಿತ್ಯವೂ ಪ್ರಶ್ನಿಸುವ ಭೂತಸದೃಶ ಶಕ್ತಿಯೂ ಹೌದು. ಅಂತೆಯೇ ಒಂದು ನಿಯತಕಾಲಿಕ ಪತ್ರಿಕೆ ಅಥವಾ ಜನಬಳಕೆಯ ಯಾವುದೋ ಒಂದು ವಸ್ತುವಿನ ಬಗೆಗೆ ಬೇಡಿಕೆ ಇಳಿಮುಖವಾಗಿದ್ದರೆ ಅದಕ್ಕೆ ಕಾರಣಗಳೇನು, ಬಳಕೆದಾರರು ಏನು ಬದಲಾವಣೆಯನ್ನು ಬಯಸುತ್ತಾರೆ ಎನ್ನುವುದರ ಕಡೆಗೆ, ಪತ್ರಿಕೆಯನ್ನು ನಡೆಸುವ ಸಂಸ್ಥೆ ಅಥವಾ ಜನಬಳಕೆಯ ವಸ್ತುವನ್ನು ತಯಾರಿ ಸುವ ಸಂಸ್ಥೆ ಗಮನವಿಟ್ಟುಕೊಂಡಿರಬೇಕು. ತಮ್ಮ ವಸ್ತುವಿನ ಬೇಡಿಕೆಯ ಇಳಿಮುಖವನ್ನು ಗಮನಿಸುವಲ್ಲಿ ಮತ್ತು ಬಳಕೆದಾರರ ಬಯಕೆಗಳನ್ನು ತಿಳಿದು ಕೊಂಡು ಉದ್ದಿಮೆ ಲಾಭದಾಯಕವಾಗುವಂತೆ ಮಾಡುವಲ್ಲಿ ಪ್ರಶ್ನಾವಳಿ ಅತ್ಯಂತ

ಸಹಕಾರಿ. ಅಂತೆಯೇ ಈಗಾಗಲೇ ಈ ದೆಸೆಯಲ್ಲಿ ನಾನಾ ಪತ್ರಿಕಾ ಮತ್ತು ವಾಣಿಜ್ಯ ಸಂಸ್ಥೆಗಳು ಪ್ರಶ್ನಾವಳಿಯ ನೆರವನ್ನು ಪಡೆಯುತ್ತಿವೆ. ಉದ್ದಿಮೆಗಳು ಬೆಳೆದಂತೆಲ್ಲ, ಸ್ಪರ್ಧೆ ಹೆಚ್ಚಿದಂತೆಲ್ಲ ಪ್ರಶ್ನಾವಳಿಯ ಆವಶ್ಯಕತೆ ಅನಿವಾರ್ಯ ವೆನಿಸುತ್ತದೆ.

ರಾಷ್ಟ್ರದ ಅಭಿವೃದ್ಧಿಯೋಜನೆಗಳಲ್ಲಿಯೂ ಪ್ರಶ್ನಾವಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಭಾರತದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಪುನಶ್ಚೇತನ ಗೊಳಿಸುವ ದೆಸೆಯಲ್ಲಿ ತೊಡಗಿರುವ ಪಂಚವಾರ್ಷಿಕ ಯೋಜನೆ, ಸಮುದಾಯ ಅಭಿವೃದ್ಧಿಯೋಜನೆ, ಕುಟುಂಬಯೋಜನೆ ಇತ್ಯಾದಿ ಯೋಜನೆಗಳ ಸಾಧನೆ ಮತ್ತು ತೊಡಕುಗಳ ವಿಶ್ಲೇಷಣೆಯನ್ನು ನಾನಾ ಘಟ್ಟಗಳಲ್ಲಿ ಮಾಡಲು ಪ್ರಶ್ನಾವಳಿ ಸಹಕಾರಿ. ಈ ಯೋಜನೆಗಳ ಉದ್ದೇಶವನ್ನು ಜನ ಎಷ್ಟರಮಟ್ಟಿಗೆ ಅರ್ಥ ಮಾಡಿಕೊಂಡಿದ್ದಾರೆ, ಸಾಧಿಸಿರುವ ಪ್ರಗತಿ ಎಷ್ಟು ಎನ್ನುವುದನ್ನು ಸಂಖ್ಯಾ ರೂಪದಲ್ಲಿ ಅಳತೆಮಾಡುವ ಪ್ರಯತ್ನದಲ್ಲಿ ಪ್ರಶ್ನಾವಳಿಯನ್ನು ಈಗಾಗಲೆ ಉಪಯೋಗಿಸಲಾಗುತ್ತಿದೆ.

ಭಾರತದ ಸಧ್ಯದ ಪರಿಸ್ಥಿತಿಯಲ್ಲಿ ಪ್ರಶ್ನಾವಳಿಯ ಪ್ರಯೋಗ ಕೆಲವು ಕ್ಷೇತ್ರಗಳಿಗೆ ಸೀಮಿತವೆಂದು ಕಂಡುಬಂದರೂ ದೇಶದ ಪ್ರಗತಿಯೊಂದಿಗೆ ಪ್ರಶ್ನಾ ವಳಿಯ ಬಳಕೆಯೂ ಹೆಚ್ಚುವುದರಲ್ಲಿ ಸಂಶಯವಿಲ್ಲ. ಅನಕ್ಷರತೆಯ ಸಮಸ್ಯೆ ಕ್ರಮೇಣ ಕ್ಷೀಣವಾಗಿ, ಸಾಮಾಜಿಕ ಪರಿಶೀಲನಾ ಕ್ರಮದಲ್ಲಿ ಭರವಸೆ ಹೆಚ್ಚಿದಂತೆಲ್ಲ ಇಂಥ ಒಂದು ಸಾಧನ ಅನಿವಾರ್ಯವೆನಿಸುತ್ತದೆ. ಅಂತೆಯೇ ಜನಾಭಿಪ್ರಾಯದ ಕ್ರೋಡೀಕರಣದ ಮೂಲಕ ರಾಷ್ಟ್ರದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ನಿರೀಕ್ಷಿತ ಬದಲಾವಣೆಯನ್ನು ತರುವುದರಲ್ಲಿ ಪ್ರಶ್ನಾವಳಿ ಮುಂದಿನ ದಿನಗಳಲ್ಲಿ ಮಹತ್ತರ ಪಾತ್ರವಹಿಸಬಲ್ಲುದು.

ಎಸ್. ಗುರುರಾಜಾಚಾರ್

ಕರ್ನಾಟಕದ ಆಂತರಿಕ ವ್ಯಾಪಾರ : ಕ್ರಿ.ಶ. ೧೦೦೦–೧೩೦೦

ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ವರ್ತಕರು ಕಡಲಾಚೆಯ ದೇಶಗಳೊಡನೆ ವ್ಯಾಪಾರಸಂಪರ್ಕ ಹೊಂದಿದ್ದು, ವಿದೇಶೀಯ ವ್ಯಾಪಾರ ವಿನಿಮಯಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದರು.

ಆದರೂ ಭೌಗೋಳಿಕ ಕಾರಣದಿಂದಾಗಿ ಕನ್ನಡಿಗರ ಆಸಕ್ತಿ ಒಳನಾಡಿನ ವ್ಯಾಪಾರದಲ್ಲಿ ಹೆಚ್ಚು ಕೇಂದ್ರೀಕೃತವಾಗಿತ್ತೆಂದರೆ ತಪ್ಪಾಗಲಾರದು. ಆ ಕಾಲದ ಮೂಲಗಳು ಒದಗಿಸುವ ಮಾಹಿತಿಯ ಆಧಾರದ ಮೇಲೆ ಕರ್ನಾಟಕದ ಒಳದೇಶದ ವ್ಯಾಪಾರವನ್ನು ಹೀಗೆ ಸ್ಥೂಲವಾಗಿ ವಿವರಿಸಬಹುದು :

ಈಗಿನಂತೆಯೇ, ಒಂದೊಂದು ಊರಿನಲ್ಲಿಯೂ ಅಂಗಡಿಗಳಿರುತ್ತಿದ್ದುವು. ಉದಾಹರಣೆ: ವಸ್ತ್ರಗಳಂಗಡಿ, ಆಭರಣಗಳಂಗಡಿ, ಸುಗಂಧದ್ರವ್ಯಗಳಂಗಡಿ, ಬತ್ತದಂಗಡಿ, ಹತ್ತಿಯಂಗಡಿ—ಹೀಗೆ ಹಲವಾರು ಅಂಗಡಿಗಳನ್ನು ಶಾಸನಗಳು[1] ಹೆಸರಿಸುತ್ತವೆ. ಅಲ್ಲದೆ ಅಂಗಡಿಗಳ ಮೇಲೆ 'ಅಂಗಡಿದೆರೆ'[2]ಯೆಂಬ ಒಂದು ಬಗೆಯ ತೆರಿಗೆಯನ್ನು ಹಾಕುತ್ತಿದ್ದರೆಂಬ ಅಂಶ ಗಮನಾರ್ಹವಾಗಿದೆ.

ಅಂಗಡಿಗಳ ವ್ಯಾಪಾರಾದಿ ವ್ಯವಹಾರಗಳ ಮೇಲೆ ಹತೋಟಿ ಹೊಂದಿದ್ದ ಅಧಿಕಾರಿಗಳಿದ್ದರು ಎಂಬ ಅಂಶ ವೇದ್ಯವಾಗುತ್ತದೆ. ಚಾಲುಕ್ಯ ೩ನೆಯ ಸೋಮೇಶ್ವರನ 'ಅಭಿಲಷಿತಾರ್ಥ ಚಿಂತಾಮಣಿ'[3] ಎಂಬ ಗ್ರಂಥದಲ್ಲಿ ಬರುವ ಅಧಿಕಾರಿಗಳ ಪಟ್ಟಿಯಲ್ಲಿ 'ಅರ್ಘಾಧಿಕಾರಿ'ಗಳ, ಅಂದರೆ ಮಾರುಕಟ್ಟೆಯ ಬೆಲೆಗಳ ಮೇಲೆ ಹತೋಟಿಯಿರುವ ಅಧಿಕಾರಿಗಳ, ಉಲ್ಲೇಖವಿದೆ. ಅಲ್ಲದೆ ಮಂಗಳೂರಿನ

[1] EI. XIII, ಪು. 26 [ಕ್ರಿ.ಶ. 1204]; JBBRAS, X, ನಂ. VI [ಕ್ರಿ.ಶ. 1219]. ನಂ. VII [ಕ್ರಿ.ಶ. 1229] ಮುಂತಾದವು.

[2] EC. IV, ನಾಗಮಂಗಲ—38 [ಕ್ರಿ.ಶ. 1284]

[3] III. 1257. ಪು. 316

ಕ್ರಿ.ಶ. ೧೨೦೪ರ ಶಾಸನ[4] 'ಅಂಗಡಿಯ-ಅಧಿಕಾರಿ'ಯನ್ನು ಹೆಸರಿಸುತ್ತದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಬರುವ 'ವ್ಯಾಪಾರದ ವೀಕ್ಷಕ'ನನ್ನು ಇಲ್ಲಿ ಸ್ಮರಿಸಬಹುದು.

ಪೇಟೆಗಳಲ್ಲಿ ಮಾರುವ ಹಾಗೂ ಕೊಳ್ಳುವ ಪದಾರ್ಥಗಳನ್ನು ಹೆಸರಿಸಲು ಹೊರಟರೆ ಒಂದು ದೊಡ್ಡ ಪಟ್ಟಿಯೇ ಆದೀತು: ಹಲವು ಜಾತಿಯ ವಜ್ರ, ಮುತ್ತು, ಮಾಣಿಕ್ಯವೇ ಮೊದಲಾದ ಅನರ್ಘರತ್ನಗಳು; ಹತ್ತಿ, ಉಣ್ಣೆ ಮತ್ತು ರೇಷ್ಮೆಗಳಿಂದ ಮಾಡಿದ ವಿವಿಧ ಬಗೆಯ ವಸ್ತ್ರಾದಿಗಳು; ಅನೇಕ ಬಗೆಯ ಆಹಾರ ಧಾನ್ಯಗಳು, ಹೂವು-ಹಣ್ಣುಗಳು, ಸುಗಂಧದ್ರವ್ಯಗಳು, ಮಣ್ಣಿನ ಹಾಗೂ ಲೋಹದ ಪಾತ್ರೆ ಇತ್ಯಾದಿಗಳು—ಹೀಗೆ ನೂರಾರು ಪದಾರ್ಥಗಳನ್ನು ಹೆಸರಿಸಬಹುದು. ಒಟ್ಟಿನಲ್ಲಿ, ಪೇಟೆಗಳಲ್ಲಿ ಉಪಲಬ್ಧವಾಗಿದ್ದ ಪದಾರ್ಥಗಳ ಪಟ್ಟಿಯನ್ನು ನೋಡಿದರೆ, ಅಂದಿನ ಚುರುಕಾದ ವ್ಯಾಪಾರದ ಒಂದು ಚಿತ್ರ ನಮ್ಮ ಕಣ್ಮುಂದೆ ಬರದಿರಲಾರದು.

ಆ ಕಾಲದ ಶಾಸನಗಳಲ್ಲಿ ಹಾಗೂ ಸಾಹಿತ್ಯಕ ಕೃತಿಗಳಲ್ಲಿ ಕೆಲವು ಪಟ್ಟಣಗಳಲ್ಲಿನ ಪೇಟೆಗಳ ವರ್ಣನೆಗಳೂ ಬಂದಿವೆ. ಒಂದೆರಡು ನಿದರ್ಶನಗಳನ್ನು ಇಲ್ಲಿ ಕೊಡಬಹುದು.

ತೇರಿದಾಳ [ಬಿಜಾಪುರ ಜಿಲ್ಲೆ] ಪಟ್ಟಣದ ಪೇಟೆಯನ್ನು ಅಲ್ಲಿಯ ಕ್ರಿ.ಶ. ೧೧೭೫ರ ಒಂದು ಶಾಸನ[5] 'ಆ ಪೇಟೆಯ ಬೀದಿಗಳಲ್ಲಿ [ವಿಪಣಿಮಾರ್ಗ] ಅತಿ ಬೆಲೆಬಾಳುವ ರತ್ನಗಳ ರಾಶಿಗಳು, ವಿವಿಧ ಬಗೆಯ ನೂತನ ವಸ್ತ್ರಗಳು, ಬಹು ಧಾನ್ಯಗಳ ರಾಶಿಗಳು, ಇತ್ಯಾದಿಗಳು ಕಂಗೊಳಿಸುತ್ತಿದ್ದು, ಕುಬೇರನ [ಧನದ] ಐಶ್ವರ್ಯದೊಡನೆ ಸ್ಪರ್ಧಿಸುವಂತೆ ಕಾಣುತ್ತಿತ್ತು. ಅಂತಹ ಪೇಟೆ, ಅಲ್ಲಿಯ ವೈಶ್ಯಜನ ಸಮೂಹ, ಇವುಗಳೊಡನೆ ಕಂಗೊಳಿಸುತ್ತಿರುವ ಆ ಪಟ್ಟಣವನ್ನು ಹೊಗಳಲು ಬ್ರಹ್ಮದೇವನಿಗೂ ಕಷ್ಟವೇ ಸರಿ!' ಎಂದು ವರ್ಣಿಸುತ್ತದೆ.

ಹಾಗೆಯೆ ಇನ್ನೊಂದು ನಿದರ್ಶನವನ್ನು ನೋಡಬಹುದು. ಚಾಲುಕ್ಯ ೩ನೆಯ ಸೋಮೇಶ್ವರನಿಂದ ರಚಿತವಾಗಿರುವ, ಐತಿಹಾಸಿಕ-ಚಂಪೂಕಾವ್ಯವೆಂದು ಪ್ರಸಿದ್ಧವಾಗಿರುವ, 'ವಿಕ್ರಮಾಂಕಾಭ್ಯುದಯಮ್'[6] ಎಂಬ ಕೃತಿಯಲ್ಲಿ, ಇತಿಹಾಸಪ್ರಸಿದ್ಧವಾದ ಕಲ್ಯಾಣಪಟ್ಟಣದ ವರ್ಣನೆ ಬಂದಿದೆ. ಆ ಪಟ್ಟಣದ ಪೇಟೆಯ ವರ್ಣನೆಯನ್ನು [ವಿಪಣಿಸದನ-ವರ್ಣನಮ್] ಹೀಗೆ ಸಂಕ್ಷಿಪ್ತವಾಗಿ ಹೇಳಬಹುದು:

---

[4] SII. VII, ನಂ. 185
[5] KI. V, ನಂ. 21
[6] ಪು. 11–12

ಗಂಗೆಯ ಪ್ರವಾಹದಂತೆ ಬಹುಮಾರ್ಗಗಳಿಂದ ಕೂಡಿರುವ [ಗಂಗಾ ಪ್ರವಾಹೈರಿವ ಬಹುಮಾರ್ಗಾಃ] ಆ ಪೇಟೆಯಲ್ಲಿ, ರಸ್ತೆಗಳ ಇಕ್ಕೆಲಗಳಲ್ಲೂ ಒಂದೇ ರೀತಿಯಲ್ಲಿ ಕಟ್ಟಿರುವ ಮಹಡಿಯ ಕಟ್ಟಡಗಳು [ಉಭಯತೋಪಿ ಏಕಪರಿಪಾಟೀ ಪರಿಘಟಿತ ದ್ವಿಭೂವಿಕ ಸೌಧಪಂಕ್ತಿಭಿಃ]. ಅಲ್ಲಿ ಉಪಲಬ್ಧವಿರುವ ಪದಾರ್ಥಗಳಾದರೋ, ಒಂದೆಡೆಯಲ್ಲಿ ವಜ್ರ, ಮುತ್ತು, ನೀಲಮಣಿ, ಪದ್ಮರಾಗವೇ ಮೊದಲಾದ ಅನರ್ಘ ರತ್ನಗಳು; ಇನ್ನೊಂದೆಡೆಯಲ್ಲಿ ಶ್ರೀಗಂಧವೇ ಮೊದಲಾದ ಸುಗಂಧದ್ರವ್ಯಗಳು; ಮತ್ತೊಂದೆಡೆಯಲ್ಲಿ ಅತಿ ರಮ್ಯವರ್ಣಗಳಿಂದ ಕೂಡಿದ, ಬಹಳ ಬೆಲೆಬಾಳುವ ಹತ್ತಿಯ, ರೇಷ್ಮೆಯ ಹಾಗೂ ಉಣ್ಣೆಯ ಬಗೆಬಗೆಯ ವಸ್ತ್ರಗಳು. ಈ ವಸ್ತ್ರಗಳಾದರೋ ದೃಷ್ಟಿಗಗೋಚರವಾಗಿದ್ದು, ಕೇವಲ ಸ್ಪರ್ಶಗಮ್ಯವಾದಂತಹವು; ಅತಿ ಹಗುರವಾಗಿದ್ದರೂ ಅತಿ ಅಮೂಲ್ಯವಾದಂಥವು. ಮೇಲಾಗಿ, ಅವುಗಳ ಮೇಲೆ ಆನೆ, ಕುದುರೆ, ರಥ, ಪದಾತಿ, ಸ್ವಸ್ತಿಕಾದಿ ಚಿಹ್ನೆಗಳನ್ನು[7] ಕಾಣಬಹುದಾಗಿದ್ದಿತು—ಹೀಗೆ ಅವುಗಳ ವರ್ಣನೆ ಮುಂದುವರಿದಿದೆ. ಹೀಗೆ ಇನ್ನೂ ಅನೇಕ ಅಮೂಲ್ಯವಸ್ತುಗಳಿಂದ ಕೂಡಿದ ಆ ಕಲ್ಯಾಣನಗರದ ಪೇಟೆ ದೇವೇಂದ್ರನ ಅರಮನೆಯೋ [ವಾಸವಭವನೈರಿವ] ಎಂಬಂತೆ ಕಾಣಿಸುತ್ತಿದ್ದಿತು.

ಮೇಲಿನ ವರ್ಣನೆಗಳಲ್ಲಿ ಉತ್ಪ್ರೇಕ್ಷೆಯ ಅಂಶವಿರುವುದು ಸಹಜವೇ. ವರ್ಣನಕಾರರಿಬ್ಬರೂ ಕವಿಗಳೇ. ಆದರೂ ಈ ವರ್ಣನೆಗಳಲ್ಲಿ ನಿಜಸ್ಥಿತಿಯ ಪರಿಚಯವಾಗದಿರಲಾರದು.

ಇನ್ನೊಂದು ಗಮನಾರ್ಹವಾದ ಅಂಶವೆಂದರೆ, ಈಗಿನಂತೆಯೇ ಆಗಿನ ಅಂಗಡಿಗಳಿಗೆ ಹೆಸರುಗಳನ್ನಿಡುತ್ತಿದ್ದ ಪದ್ಧತಿ. ತರೀಕೆರೆಯ [ಈಗಿನ ಚಿಕ್ಕಮಗಳೂರು ಜಿಲ್ಲೆ] ಕ್ರಿ.ಶ. ೧೧೯೬ರ ಒಂದು ಶಾಸನ[8] ದ್ವಾರಸಮುದ್ರದ [ಈಗಿನ ಹಳೇಬೀಡಿನ] ಕೆಲವು ಅಂಗಡಿಗಳನ್ನು ಹೀಗೆ ಹೆಸರಿಸುತ್ತದೆ: ಗುಮ್ಮೇಶ್ವರದಂಗಡಿ, ಬಮ್ಮಲದೇವಿಯರಂಗಡಿ, ಕೇತಲದೇವಿಯರಂಗಡಿ, ಬೆಲಹೂರಂಗಡಿ, ಇತ್ಯಾದಿ. ಈ ಹೆಸರುಗಳೇ ಸೂಚಿಸುವಂತೆ, ಸಾಮಾನ್ಯವಾಗಿ ಕೆಲವು ದೇವರುಗಳ ಹೆಸರನ್ನು, ಇಲ್ಲವೆ ಆಳುವ ಮನೆತನಕ್ಕೆ ಸೇರಿದ ಹಲವು ಪ್ರಮುಖ ವ್ಯಕ್ತಿಗಳ ಹೆಸರನ್ನು, ಇಲ್ಲವೆ ಕೆಲವು ಪ್ರಸಿದ್ಧ ಊರುಗಳ ಹೆಸರನ್ನು, ಅಂಗಡಿಗಳಿಗೆ ಇಡುತ್ತಿದ್ದರೆಂದು ಕಾಣುತ್ತದೆ.

[7] [ಅಂತಹ ವಸ್ತ್ರಗಳ ವರ್ಣನೆಗೆ] ನೋಡಿ: ಮಿತಾಕ್ಷರ, II. 180 (ಭಾಷಾಂತರ), ಪು. 1207; ಹರಿಹರನ ಬಸವರಾಜದೇವರ ರಗಳೆ, ಪು. 49; ಗಿರಿಜಾಕಲ್ಯಾಣ, 1·71, ಪು. 15; ಅಭಿಲಷಿತಾರ್ಥ ಚಿಂತಾಮಣಿ III, 1070–74, ಪು. 295; Travels of Marco Polo, II, p. 391........ಇತ್ಯಾದಿ.

[8] EC. VI, ತರೀಕೆರೆ 45

ಪ್ರತಿನಿತ್ಯ ಬಳಕೆಯಲ್ಲಿದ್ದ ಅಂತಹ ಪೇಟೆಗಳೇ ಅಲ್ಲದೆ, ವಾರಕ್ಕೊಮ್ಮೆ ಗೊತ್ತಾದ ದಿನ ಸ್ಥಳಗಳಲ್ಲಿ ಸಂತೆಗಳು ನಡೆಯುತ್ತಿದ್ದುವು. ಉದಾಹರಣೆಗೆ: ಧಾರವಾಡ ಜಿಲ್ಲೆಯ ಸೂಂಡಿ[9]ಯಲ್ಲಿ ಪ್ರತಿ ಭಾನುವಾರ ಸಂತೆ ನೆರೆಯುತ್ತಿತ್ತೆಂದು ತಿಳಿದುಬರುತ್ತದೆ [ಸೂಂಡಿಯೊಳ್ ಆದಿತ್ಯವಾರದೊಳ್ ನೆರೆವಾ ಸಂಥೆಯು....]. ಹಾಗೆಯೆ ಅರಕಲಗೂಡು [ಹಾಸನ ಜಿಲ್ಲೆ] ತಾಲ್ಲೂಕಿನ ಹೆಬ್ಬಾಲೆ[10] ಎಂಬಲ್ಲಿಯೂ ನಂಜನಗೂಡು [ಮೈಸೂರು ಜಿಲ್ಲೆ] ತಾಲ್ಲೂಕಿನ ಮಣಲೆ[11] ಎಂಬ ಊರಿನಲ್ಲಿಯೂ ಪ್ರತಿ ಮಂಗಳವಾರವೂ ಸಂತೆಗಳು ನಡೆಯುತ್ತಿದ್ದಂತೆ ಶಾಸನಗಳು ತಿಳಿಸುತ್ತವೆ. ದಾವಣಗೆರೆ [ಚಿತ್ರದುರ್ಗ ಜಿಲ್ಲೆ] ತಾಲ್ಲೂಕಿನ ಕುಂದವಾಡ[12] ಎಂಬಲ್ಲಿ ಪ್ರತಿ ಬುಧವಾರವೂ, ಮಿರಜ್ ತಾಲ್ಲೂಕಿನ ಸೆಡಂಬಾಳ್[13] ಎಂಬಲ್ಲಿ ಪ್ರತಿ ಶುಕ್ರವಾರವೂ ಸಂತೆಗಳು ನಡೆಯುತ್ತಿದ್ದುವು.

ಸಂತೆಗಳು ಪದಾರ್ಥಗಳ ಮಾರಾಟ ಹಾಗೂ ವಿನಿಮಯಗಳಲ್ಲಿ ಪ್ರಮುಖ ಕೇಂದ್ರಗಳಂತಿದ್ದು, ಒಳದೇಶದ ವ್ಯಾಪಾರಾಭಿವೃದ್ಧಿಯಲ್ಲಿ ಒಂದು ಮುಖ್ಯ ಪಾತ್ರ ಹೊಂದಿದ್ದುವು. ಸ್ಥಳೀಯ ವರ್ತಕರೇ ಅಲ್ಲದೆ ಸಂಚಾರಿ ಮಾರಾಟಗಾರರೂ ಅಂತಹ ಸಂತೆಗಳಲ್ಲಿ ಭಾಗವಹಿಸುತ್ತಿದ್ದರು. ಹೀಗೆ, ಮಧ್ಯಯುಗದಲ್ಲಿ ಸಂತೆಗಳು "ಅಂತರ-ಸ್ಥಳೀಯ ವಾಣಿಜ್ಯ ಸಂಸ್ಥೆ"ಯ ಒಂದು ಪ್ರಮುಖ ರೂಪವಾಗಿ ಬೆಳೆದುಬಂದುವು.[14]

ಅಂತಹ ಸಂತೆಗಳನ್ನು ಆಳುವ ಅಧಿಕಾರಿಗಳು ಇಲ್ಲವೆ ಅವರ ಪ್ರೋತ್ಸಾಹಪಡೆದ ಇತರರು ನಡೆಸುತ್ತಿದ್ದರು. ದಾವಣಗೆರೆಯ ಕ್ರಿ.ಶ. ೧೨೧೮ರ ಒಂದು ಶಾಸನ[15]ದ ಪ್ರಕಾರ, ಹೊಯ್ಸಳ ೨ನೆಯ ಬಲ್ಲಾಳನ ರಾಣಿಯಾದ ಅಭಿನವ ಕೇತಲದೇವಿಯ ಆಜ್ಞೆಯ ಮೇರೆಗೆ, ಕುಂದವಾಡದ 'ಗೌಡು'ಗಳೂ 'ಸೆಟ್ಟಿ'ಗಳೂ ಸೇರಿ ಊರಿನಲ್ಲಿ ಪ್ರತಿ ಬುಧವಾರದಂದು ಸಂತೆ ನಡೆಯುವಂತೆ ಏರ್ಪಾಡುಮಾಡಿದರು. ವ್ಯಾಪಾರಾಭಿವೃದ್ಧಿಯಾಗಿ ದೇಶದ ಆರ್ಥಿಕ ಸಂಪತ್ತು ಹೆಚ್ಚಬೇಕೆಂಬ ಉದ್ದೇಶದಿಂದಲೇ ಪ್ರಾಯಶಃ ಆಳುವ ದೊರೆಗಳು ಅಂತಹ ಸಂತೆಗಳಿಗೆ ಅಗತ್ಯವಾದ ರಕ್ಷಣೆ ಮತ್ತು ಪ್ರೋತ್ಸಾಹಗಳನ್ನು ಕೊಡಲು ಕಾತರರಾಗಿದ್ದರು. ಇಲ್ಲಿ ಒಂದು ನಿದರ್ಶನವನ್ನು

[9] EI. XV, ಪು. 98 [ಕ್ರಿ.ಶ. 1075]

[10] EC. V, ಅರಕಲಗೂಡು 21 [ಕ್ರಿ.ಶ. ಸುಮಾರು 1274]

[11] MAR. 1936, ನಂ. 47 [ಕ್ರಿ.ಶ. 1278]

[12] EC. XI, ದಾವಣಗೆರೆ 105 [ಕ್ರಿ.ಶ. 1218]

[13] EI. XIX, ಪು. 38 [ಕ್ರಿ.ಶ. 1142]

[14] A. Appadorai. Economic Conditions in Southern India, ಪು. 417

[15] EC. XI, ದಾವಣಗೆರೆ. 105

ಕೊಡಬಹುದು. ಅರಕಲುಗೂಡಿನ ಕ್ರಿ.ಶ. ಸು. ೧೨೭೪ರ ಒಂದು ಶಾಸನ[16] ಹೊಯ್ಸಳ ೩ನೆಯ ನರಸಿಂಹನ ಆಜ್ಞೆಯನ್ನು ತಿಳಿಸುತ್ತದೆ: ಕೊಂಗುನಾಡಿನಲ್ಲಿರುವ ಸೆಬ್ಬಾಲೆ ಎಂಬ ಊರಿನಲ್ಲಿ ಪ್ರತಿ ಮಂಗಳವಾರ ನಡೆಯುವ ಸಂತೆಯಲ್ಲಿ ಯಾರಾದರೂ ಅಧಿಕಾರಿಗಳು ಸುಂಕ, ಸೋದಿಗೆ, ಆಯ, ದಾಯ ಇತ್ಯಾದಿಗಳನ್ನು ವಸೂಲು ಮಾಡಿದ್ದೇ ಆದರೆ ಅಂತಹವರನ್ನು ದೊರೆ ಶಿಕ್ಷಿಸುವನು, ಹುದ್ದೆಯಿಂದ ತೆಗೆದುಹಾಕುವನು—ಎಂದಿದೆ ಆ ಶಾಸನದಲ್ಲಿ. ಅಂದರೆ, ಆ ಸಂತೆಯವರು ಮೇಲೆ ಹೇಳಿದ [ಉಳಿದವರು ತೆರಬೇಕಾದ] ತೆರಿಗೆಗಳಿಂದ ಪರಿಹಾರವನ್ನು ಪಡೆದಿದ್ದರು ಎಂಬ ಅಂಶ ಸ್ಪಷ್ಟವಾಗುತ್ತದೆ. ಅಲ್ಲದೆ ಅಂಥ ಸಂತೆಗಳಿಂದ ಸರಕಾರಕ್ಕೆ ಆದಾಯವೂ ಇತ್ತು. 'ಸಂತೆಯಾಯ' ಎಂಬ ಒಂದು ಬಗೆಯ ತೆರಿಗೆಯನ್ನು ಶಾಸನಗಳು[17] ಹೆಸರಿಸುತ್ತವೆ.

ಅಂಥ ಸಂತೆಗಳ ಬಗ್ಗೆ ಪ್ರಮುಖವಾದ ಮತ್ತೊಂದು ಆರ್ಥಿಕ ಅಂಶವನ್ನು ಇಲ್ಲಿ ಗಮನಿಸಬಹುದು. ಸಾಮಾನ್ಯವಾಗಿ ಸಂತೆಗಳು ನಡೆಯುತ್ತಿದ್ದ ಗ್ರಾಮಗಳು ಬಹುಬೇಗ ದೊಡ್ಡ ಊರುಗಳಾಗಿ, ಪಟ್ಟಣಗಳಾಗಿ ಬೆಳೆಯುತ್ತಿದ್ದವು; ಮತ್ತು ಹಾಗೆ ಬೆಳೆದ ಪಟ್ಟಣಗಳು ಆಳುವ ಅಧಿಕಾರಿಗಳಿಂದ ಆದೇಶ ಅಥವಾ ಸನ್ನದನ್ನು ಪಡೆಯುತ್ತಿದ್ದುವು. ಉದಾಹರಣೆಗೆ ಧರ್ಮವೊಳಲು, ಸೂಂಡಿ, ಪುಲಿಗೆರೆ ಇತ್ಯಾದಿ ಪಟ್ಟಣಗಳ ನಿದರ್ಶನವನ್ನು ಕೊಡಬಹುದು. ಡಾ. ಜಿ. ಎಸ್. ದೀಕ್ಷಿತ್[18] ಅವರ ಪ್ರಕಾರ 'ಒಂದು ಪಟ್ಟಣವನ್ನು ಹಳ್ಳಿಯಿಂದ ಪ್ರತ್ಯೇಕವೆಂದು ಗುರುತಿಸಬಹುದಾಗಿದ್ದುದು ಒಂದು ಸಂತೆಯಿಂದ ಕೆಲವೊಮ್ಮೆ ಒಂದು ಸನ್ನದಿನಿಂದ.'

ಶಾಸನಗಳಲ್ಲಿ ಉಲ್ಲೇಖವಾಗಿರುವ ಒಂದೆರಡು ನಿದರ್ಶನಗಳನ್ನು ಇಲ್ಲಿ ಕೊಡಬಹುದು :

ಹೊಯ್ಸಳ ಮೂರನೆಯ ನರಸಿಂಹನ [ಕ್ರಿ.ಶ. ೧೨೫೪–೯೧] ಆಳ್ವಿಕೆಯ ಕಾಲದಲ್ಲಿ, ಮೂಗೂರು[19] [ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ] ಗ್ರಾಮದ 'ಪ್ರಭು'ಗಳು ಮತ್ತು 'ಗೌಡರು' ಸೇರಿ, ಆ ಸ್ಥಳದಲ್ಲಿ ಒಂದು ಸಂತೆಯನ್ನು ನಡೆಸುವಂತಾಗಿ, ಆ ಗ್ರಾಮವನ್ನು ಪಟ್ಟಣವನ್ನಾಗಿ ಪರಿವರ್ತಿಸಬೇಕೆಂದು ನಿಶ್ಚಯಿಸುತ್ತಾರೆ. ಅಲ್ಲದೆ, ಅವರು ಆ ಹೊಸ ಪಟ್ಟಣಕ್ಕೆ ಒಂದು ಸನ್ನದನ್ನು ಕೊಟ್ಟರೆಂದು ತಿಳಿದುಬರುತ್ತದೆ.

---

16 EC. V, ಅರಕಲಗೂಡು, 21

17 EI. XV, ಪು. 98 [ಕ್ರಿ.ಶ. 1075]; KI, V, ಸಂ. 46 [ಕ್ರಿ.ಶ. 1288] ಇತ್ಯಾದಿ.

18 G. S. Dikshit, *Local Self-Government in Mediaeval Karnataka*, ಪು. 140

19 MAR. 1912, ಪು. 45, ಪ್ಯಾರ 91

ಹಾಗೆಯೇ, ಹೊಯ್ಸಳ ಮೂರನೆಯ ಬಲ್ಲಾಳನ ಆಳ್ವಿಕೆಯ ಕಾಲದಲ್ಲಿ [ಕ್ರಿ.ಶ. ೧೨೯೨–೧೩೪೩] ಚಟ್ಟರಿ–ಬಲಸೆಟ್ಟಿ ಮತ್ತು ಮಸಣ–ಸೆಟ್ಟಿ ಎಂಬಿಬ್ಬರು ಮುಗುಳುನಹಳ್ಳಿ[20]ಯಲ್ಲಿ [ಚನ್ನಪಟ್ಟಣ ತಾಲೂಕು, ಬೆಂಗಳೂರು ಜಿಲ್ಲೆ] ಒಂದು ಸಂತೆ ನಡೆಯುವಂತೆ ಏರ್ಪಾಡುಮಾಡಿ, ಆ ಗ್ರಾಮವನ್ನು 'ನಾನಾ ದೇಶಿ–ಪಟ್ಟಣ' ವನ್ನಾಗಿ ಮಾಡಿದರೆಂದೂ, ಅವರಿಗೆ ಮಂತ್ರಿಯಾದ ಸೋಮರಸ ಒಂದು 'ಶಾಸನ' ವನ್ನು ಕೊಟ್ಟನೆಂದೂ ತಿಳಿದುಬರುತ್ತದೆ.

ಆಗಿನ ಕೆಲವು ಊರುಗಳ ಹೆಸರಿನಲ್ಲಿರುವ ಪೂರ್ವಪ್ರತ್ಯಯವಾದ ಪ್ರಿಫಿಕ್ಸ್ 'ಸಂತೆ'—ಉದಾ: ಸಂತೆಯ–ಬಾಗವಾಡಿ[21]—ಎಂಬ ಪದವನ್ನು ಗಮನಿಸಬಹುದು. ಅಂದರೆ, ಅಂತಹ ಪಟ್ಟಣಗಳು ಸಂತೆಗಳು ನಡೆಯುತ್ತಿದ್ದ ಕೇಂದ್ರಗಳೆಂದು ಪ್ರಸಿದ್ಧವಾಗಿದ್ದುವು ಎಂಬ ಅಂಶ ಸ್ಪಷ್ಟವಾಗುತ್ತದೆ. [ಈಗಿನ ಸಂತೆ–ಸರಗೂರು, ಸಂತೆ–ಬಿದನೂರು ಇತ್ಯಾದಿ ಹೆಸರುಗಳನ್ನು ಗಮನಿಸಬಹುದು.]

ಸಂತೆಗಳು ಸಹಸ್ರಾರು ವ್ಯಾಪಾರಿಗಳು ಹಾಗೂ ಗ್ರಾಹಕರುಗಳಿಂದ ಜನಭರಿತವಾಗಿ, 'ಗುಜು–ಗುಜು' ಶಬ್ದದಿಂದ ತುಂಬಿರುತ್ತಿದ್ದವು ಎಂಬ ಅಂಶ ಅಕ್ಕಮಹಾದೇವಿಯ[22] "ಸಂತೆಯೊಳೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ?" ಎಂಬ ವಚನದಿಂದ ಸ್ಪಷ್ಟವಾಗುತ್ತದೆ.

ಶಾಸನಗಳು[23] ಆ ಕಾಲದ ಕೆಲವು ಪ್ರಸಿದ್ಧ ವ್ಯಾಪಾರ ಕೇಂದ್ರಗಳನ್ನು ಹೆಸರಿಸುತ್ತವೆ. ಅವುಗಳಲ್ಲಿ ಕೆಲವು ಪ್ರಮುಖ ಪಟ್ಟಣಗಳು; ಇನ್ನು ಕೆಲವಂತೂ ರಾಜಧಾನಿಗಳೆನಿಸಿದ ಕಲ್ಯಾಣ, ಬೇಲೂರು, ದ್ವಾರಸಮುದ್ರ ಇತ್ಯಾದಿ ಇತಿಹಾಸ ಪ್ರಸಿದ್ಧ ನಗರಗಳು. ತೇರಿದಾಳ, ತಿಳಿವಳ್ಳಿ, ತುಪ್ಪಟ್ಟೂರು, ತುಂಬುಳ, ಗೊಬ್ಬೂರು, ಮದ್ದೂರು, ಆಲಂಪುರ, ಹುಯಿಲಗೋಳ—ಹೀಗೆ ಕೆಲವು ಪ್ರಮುಖ ವ್ಯಾಪಾರ ಕೇಂದ್ರಗಳನ್ನು ಮಾತ್ರ ಇಲ್ಲಿ ಹೆಸರಿಸಬಹುದಾಗಿದೆ.

ಮತ್ತೊಂದು ಗಮನಾರ್ಹವಾದ ಅಂಶವೆಂದರೆ, ಕೆಲವು ವ್ಯಾಪಾರ ಕೇಂದ್ರಗಳಾದ ಪಟ್ಟಣಗಳನ್ನು 'ಬಣಂಜುವಟ್ಟಣ'[ಕನ್ನಡ: ಬಣಂಜ—ಸಂಸ್ಕೃತ:

---

20 EC. IX, ಚನ್ನಪಟ್ಟಣ 73 [ಕ್ರಿ.ಶ. 1318]

21 IA. VII, ಪು. 304 [ಕ್ರಿ.ಶ. 1204]

22 ಉಡುತಡಿಯ ಮಹಾದೇವಿಯಕ್ಕನವರ ವಚನಗಳು, 55, ಪು. 19

23 KI. II, ನಂ. 8 [ಕ್ರಿ.ಶ. 1072];
SII. XV, ನಂ. 106 [ಕ್ರಿ.ಶ. 1166];
KI. V, ನಂ. 98 [ಕಿ.ಶ. 1181].
Kannada Inscriptions from Andhra Pradesh. ನಂ. 104 [ಕ್ರಿ.ಶ. 1182].
SII. XV, ನಂ. 164 [ಕ್ರಿ.ಶ. 1220]

ವಣಿಜ=ವರ್ತಕ] ವೆಂದು ಶಾಸನಗಳಲ್ಲಿ ಕರೆದಿರುವುದು. ತೇರಿದಾಳ[24] [ಬಿಜಾಪುರ ಜಿಲ್ಲೆ] ಪಟ್ಟಣ ಕೇವಲ 'ಬಣಂಜುವಟ್ಟಣ' ಅಷ್ಟೇ ಆಗಿರದೆ, 'ನಡವೆಯು-ಮನೆಯು' [?] ಆಗಿತ್ತೆಂದು ಶಾಸನಗಳು ತಿಳಿಸುತ್ತವೆ. ಹಾಗೆಯೆ ಧಾರವಾಡ ಜಿಲ್ಲೆಯ ಸಾತೆಯನಹಳ್ಳಿ ಮತ್ತು ಕೋಣವಟ್ಟಿಗಳನ್ನು[25] 'ಬಣಂಜುವಟ್ಟಣ' ಗಳೆಂದು ಕರೆಯಲಾಗಿದೆ. ಹೂಲಿಗೊಳ[26]ವನ್ನು [ಧಾರವಾಡ ಜಿಲ್ಲೆ] "ತೆಂಕಣ ಬಳಂಜದಾದಿ ಪಟ್ಟಣ" ಅಂದರೆ ದಕ್ಷಿಣದ ವರ್ತಕರ ಪ್ರಮುಖ [ಅಥವಾ ಮೂಲ] ಪಟ್ಟಣವೆಂದು ಕರೆಯುತ್ತದೆ, ಒಂದು ಶಾಸನ. ಕಂದಗಾಲೆ[27]ಯನ್ನು [ಬಿಜಾಪುರ ಜಿಲ್ಲೆ] ಒಂದು ಶಾಸನ ಕನ್ನಡ ೪೦೦೦ ವಿಭಾಗದ ಮಳಿಗೆಯ ಮನೆ [ದಾಸ್ತಾನು ಮಳಿಗೆಮನೆ—ವೇರ್‌ಹೌಸ್] ಎಂದು ಕರೆದಿದೆ.

ಮೇಲೆ ಹೇಳಿದ 'ಬಣಂಜುವಟ್ಟಣಗಳು' ತಮ್ಮವೇ ಆದ ಒಂದು ವಿಶೇಷ ವರ್ಗಕ್ಕೆ ಸೇರಿದ್ದು, ಆ ಪಟ್ಟಣಗಳ ಆಡಳಿತಾದಿ ವಿಚಾರಗಳಲ್ಲಿ ವರ್ತಕಶ್ರೇಣಿಗಳದೇ ಹೆಚ್ಚು ಪ್ರಾಧಾನ್ಯ ಇರುತ್ತಿತ್ತೆಂದು ತಿಳಿದುಬರುತ್ತದೆ. ಉದಾಹರಣೆಗೆ: ನವಿಲುಗುಂದ, ಹುಲುಗೂರು, ತೇರಿದಾಳ ಇತ್ಯಾದಿ ಪಟ್ಟಣಗಳು ಆ ವರ್ಗಕ್ಕೆ ಸೇರಿದ್ದುವೆಂದು ಡಾ. ಜಿ. ಎಸ್. ದೀಕ್ಷಿತ್[28] ಅಭಿಪ್ರಾಯಪಡುತ್ತಾರೆ. ಮಧ್ಯಭಾರತದ ಕಲಚೂರಿಗಳ ಶಾಸನಗಳಲ್ಲಿ[29] ಬರುವ "ವಣಿನ್ನಗರ" ಅಂದರೆ ಬಹುಭಾಗ ವರ್ತಕರಿಂದೇ ಕೂಡಿರುವ ನಗರಗಳನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ.

---

[24] KI. V, ನಂ. 98 [ಕ್ರಿ.ಶ. 1181]
IA. XIV, ಪು. 19 [ಕ್ರಿ.ಶ. 1182–83].

[25] KI. IV, ನಂ. 1 [ಕ್ರಿ.ಶ. 1204]

[26] SII. XV, ನಂ. 106 [ಕ್ರಿ.ಶ. 1166]

[27] ಅದೇ., ನಂ. 164 [ಕ್ರಿ.ಶ. 1220]

[28] G. S. Dikshit ; Local Self-Government in Mediaeval Karnataka, ಪು. 161

[29] ಅದೇ, ಪು. 161 [n. 6]

ಭಾರತದ ಆಂತರಿಕ ವ್ಯಾಪಾರ

ಸಾರ್ಥವಾಹ, ವೀರಬಣಂಜು, ಕೋಮಟಿ, ಬೇರಿ ಮುಂತಾದವರು ಕಾವಡಿ, ಕತ್ತೆ, ಎತ್ತು ಭಂಡಿಗಳ ಮೇಲೆ ಸಾಮಾನನ್ನು ಹೇರಿಕೊಂಡು ಭರತಖಂಡದಲ್ಲೆಲ್ಲ ಸುತ್ತಿ ವ್ಯಾಪಾರ ನಡಿಸುತ್ತಿದ್ದರು. ಉತ್ತರಾಪಥದಲ್ಲಿ ಪುರುಷಪುರ (ಪೆಷಾವರ್), ಗಾನ್ಧಾರ, ತಕ್ಷಶಿಲೆಯಿಂದ ಮಹಾಪಥ (ಗ್ರ್ಯಾಂಡ್ ಟ್ರಂಕ್ ರೋಡ್)ವನ್ನನುಸರಿಸಿ ಪೂರ್ವದಲ್ಲಿ ಕಾಮಾಖ್ಯ (ಆಸ್ಸಾಂ)ದ ವರೆಗೂ ಒಂದು ಮುಖ್ಯ ವ್ಯಾಪಾರಮಾರ್ಗ ವಿದ್ದಿತು. ಖೈಬರ್, ಬೋಲಾನ್ ಕಣಿವೆಗಳ ಮೂಲಕ ಪರ್ಷಿಯ ತುರ್ಕಿಸ್ತಾನ ಗಳಿಗೂ, ಕಾಶ್ಮೀರ ನೇಪಾಳ ಮೂಲಕ ಟಿಬೆಟ್ ಚೀಣ ದೇಶಗಳಿಗೂ ಪ್ರಯಾಸ ಕರವಾದ ಪರ್ವತಮಾರ್ಗಗಳಿದ್ದುವು. ದಕ್ಷಿಣಾಪಥದಲ್ಲಿ ಸಿನ್ಧು ಸೌವೀರಪ್ರಾಂತದಿಂದ ಪಶ್ಚಿಮತೀರದ ರೇವುಪಟ್ಟಣಗಳನ್ನು ಬಳಸಿಕೊಂಡು ಕನ್ಯಾಕುಮಾರಿ ವರೆಗೂ ಒಂದು ಮಾರ್ಗವೂ; ಕಾಶಿಯಿಂದ ಕೋಸಲ, ವಿನ್ಧ್ಯಪ್ರಾಂತ್ಯಗಳ ಮೂಲಕ ದಕ್ಷಿಣಕ್ಕೆ ನೇರವಾಗಿ ದೇವಗಿರಿ, ಕಲ್ಯಾಣ, ಬಾದಾಮಿ, ಗದಗು, ಹಂಪಿ, ಘನಗಿರಿ, ಬೆಂಗಳೂರು ಪಟ್ಟಣಗಳನ್ನು ಸುತ್ತಿಕೊಂಡು ಕಣಿವೆಯನ್ನು ದಾಟಿ ಶ್ರೀರಂಗ, ಮಧುರೆ, ರಾಮೇಶ್ವರದ ವರೆಗೂ ಹೋಗುವ ಒಂದು ಮಾರ್ಗವೂ; ದಕ್ಷಿಣ ಕೋಸಲ ದಿಂದ ಪೂರ್ವಕ್ಕೆ ತಿರುಗಿ ಕಳಿಂಗ, ಕೊಲ್ಲೇರು, ನಾಗಾರ್ಜುನಕೊಂಡ, (ಶ್ರೀಶೈಲ), ಕಾಳಹಸ್ತಿ, ಮೈಲಾಪುರ, ಮಹಾಬಲಿಪುರ, ಕಂಚಿ, ಕಾವೇರಿಪಟ್ಟಣ, ನಾಗ ಪಟ್ಟಣಗಳ ಮೂಲಕ ರಾಮೇಶ್ವರಕ್ಕೆ ಹೋಗುವ ಒಂದು ಮಾರ್ಗವೂ, ಪಶ್ಚಿಮ ತೀರದ ಮಂಗಳೂರು ಬಾರಕೂರುಗಳಿಂದ ಹೊನ್ನಾವರ, ಹಳೇಬೀಡು, ಬೇಲೂರು ಬಳಸಿ ನಂಗಿಲಿಘಟ್ಟವನ್ನು ದಾಟಿ ಪೂರ್ವತೀರದಲ್ಲಿ ಕಂಚಿ, ಪುದುಚೇರಿ (ಪಾಂಡೀಚೆರಿ) ವರೆಗೂ ಮತ್ತೊಂದು ಮುಖ್ಯ ವ್ಯಾಪಾರಮಾರ್ಗವೂ ಇದ್ದುವು.

ವ್ಯಾಪಾರಶ್ರೇಣಿ (ಟ್ರೇಡ್ ಗಿಲ್ಡ್)ಗಳಿಗೆ ನಗರಗಳಲ್ಲಿ ಪಟ್ಟಣಸ್ವಾಮಿಯೂ ಶ್ರೇಷ್ಠಿಯೂ ಮುಖ್ಯಾಧಿಕಾರಿಗಳಾಗಿದ್ದರು. ವರ್ತಕರ ಸಭೆಗೆ ಮಹಾನಾಡು, ಮಣಿಮಂಗಲ ಎಂಬ ಹೆಸರಿದ್ದುವು. ಕರ್ಣಾಟಕದಲ್ಲಿ ಐವತ್ತಾರು ದೇಶದ ಅಯ್ಯಾವಳೆ (ಐಹೊಳೆ) ಚಾಲಮೂಲ ವೀರಬಣಂಜುಗಳೆಂಬುವರು ಪ್ರಸಿದ್ಧ ರಾಗಿದ್ದರು. ಚಾಳುಕ್ಯ ಮತ್ತು ಹೊಯ್ಸಳ ಶಾಸನಗಳಲ್ಲಿ ಇವರ ಪ್ರಶಂಸೆಯು ಅಧಿಕವಾಗಿ ಕಂಡುಬರುವುದು.[1]

—ಡಾ. ಎಸ್. ಶ್ರೀಕಂಠಶಾಸ್ತ್ರೀ

---

[1] ಭಾರತೀಯ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾನಿಲಯ, ಪು. ೨೧೯–೨೨೦

ಡಾ. ಕೆ. ಎಚ್. ಚೆಲುವರಾಜು

ವಿಶ್ವಸಂಸ್ಥೆ : ಉಗಮ, ತತ್ತ್ವ, ಕಲಾಪ

"ನಮ್ಮ ಜೀವಿತಕಾಲದಲ್ಲಿ ಎರಡುಸಲ ಮಾನವನಿಗೆ ಅನುಭವಿಸಲು ಅಸಾಧ್ಯವಾದ ಸಂಕಟವನ್ನುಂಟುಮಾಡಿರುವ ಯುದ್ಧದ ವಿಪತ್ತಿನಿಂದ ಮುಂದಿನ ಜನಾಂಗಗಳನ್ನು ರಕ್ಷಿಸುವುದಕ್ಕೂ

"ಮಾನವನ ಮೂಲಭೂತ ಹಕ್ಕುಗಳಲ್ಲಿಯೂ ಮಾನವನ ಆತ್ಮಗೌರವ ಮತ್ತು ಮೌಲ್ಯದಲ್ಲಿಯೂ ಗಂಡಸಿನ ಮತ್ತು ಹೆಂಗಸಿನ, ದೊಡ್ಡ ಅಥವಾ ಸಣ್ಣ ರಾಷ್ಟ್ರಗಳ ಸಮಾನ ಹಕ್ಕುಗಳಲ್ಲಿಯೂ ನಂಬಿಕೆಯನ್ನು ಪುನಃ ಉಂಟುಮಾಡುವುದಕ್ಕೂ

"ಕೌಲುಗಳಿಂದಲೂ ಅಂತರರಾಷ್ಟ್ರೀಯ ಕಾನೂನುಗಳಿಂದಲೂ ಉದ್ಭವಿಸಬಹುದಾದ ಕರಾರುಗಳನ್ನು ಗೌರವಿಸುವುದಕ್ಕೂ ನ್ಯಾಯಪಾಲನೆಗೂ ಆವಶ್ಯಕವಾದ ವಾತಾವರಣವನ್ನು ಸ್ಥಾಪಿಸುವುದಕ್ಕೂ

"ಹೆಚ್ಚು ಸ್ವಾತಂತ್ರ್ಯದಲ್ಲಿ ಸಾಮಾಜಿಕ ಪ್ರಗತಿ ಮತ್ತು ಉತ್ತಮ ಜೀವನದ ಮಟ್ಟಗಳನ್ನು ಮುಂದುವರಿಸುವುದಕ್ಕೂ ನಿರ್ಧರಿಸಿರುವ, ಮತ್ತು ಈ ಉದ್ದಿಶ್ಯಗಳಿಗಾಗಿ. . .

"ವಿಶ್ವಸಂಸ್ಥೆಯ ಜನರಾದ ನಾವು ಈ ಧ್ಯೇಯಗಳನ್ನು ಸಾಧಿಸುವುದಕ್ಕಾಗಿ ನಮ್ಮ ಎಲ್ಲಾ ಪ್ರಯತ್ನಗಳನ್ನೂ ಒಟ್ಟುಗೂಡಿಸಲು ನಿರ್ಧರಿಸಿದ್ದೇವೆ"[1] ಎಂಬ ಪ್ರತಿಜ್ಞೆಯೊಡನೆ ೧೯೪೫ರ ಅಕ್ಟೋಬರ್ ೨೪ರಂದು ಅಮೆರಿಕ ಸಂಯುಕ್ತ ಸಂಸ್ಥಾನದ ಸ್ಯಾನ್‌ಫ್ರಾನ್ಸಿಸ್ಕೊ ನಗರದಲ್ಲಿ ವಿಶ್ವಸಂಸ್ಥೆ ಜನ್ಮತಾಳಿತು. ಈ ಸಂಸ್ಥೆಗೆ ೧೯೭೦ರ ಅಕ್ಟೋಬರ್ ೨೪ರಂದು ೨೫ ವರ್ಷಗಳು ತುಂಬಿ ವಿಜೃಂಭಣೆಯಿಂದ ಅದರ ಬೆಳ್ಳಿಯ ಹಬ್ಬವನ್ನು ಆಚರಿಸಲಾಯಿತು. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ವಿಶ್ವಸಂಸ್ಥೆ ವಿಶಾಲವಾಗಿ ಬೆಳೆದಿದೆ; ಅಂತರರಾಷ್ಟ್ರೀಯ ಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರಿದೆ. ಈ ಕಾಲು ಶತಮಾನದಲ್ಲಿ ಸಂಸ್ಥೆ

[1] *Charter of the United Nations, Preamble*

ಅನೇಕ ಸಮಸ್ಯೆಗಳನ್ನು ಎದುರಿಸಿ ವಿಶ್ವಶಾಂತಿಯನ್ನು ಸ್ಥಾಪಿಸಲು ಪ್ರಯತ್ನ ಪಟ್ಟಿದೆ; ರಾಷ್ಟ್ರಗಳ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗಿದೆ; ಮಾನವನ ಪ್ರಗತಿಗೂ ಲೋಕಕಲ್ಯಾಣಕ್ಕೂ ಸಹಾಯಕ ವಾಗಿದೆ. ವಿಶ್ವಸಂಸ್ಥೆಯ ಸ್ಥಾಪನೆ, ಧ್ಯೇಯಗಳು, ತತ್ವಗಳು, ಮುಖ್ಯ ಅಂಗಗಳ ರಚನೆ ಮತ್ತು ಕರ್ತವ್ಯಗಳನ್ನು ಈ ಪ್ರಬಂಧವಲ್ಲಿ ಸ್ಥೂಲವಾಗಿ ವಿಚಾರಮಾಡ ಲಾಗಿದೆ.

ಸ್ಥಾಪನೆ

ದ್ವಿತೀಯ ಮಹಾಯುದ್ಧ ನಡೆಯುತ್ತಿದ್ದ ಕಾಲದಲ್ಲೇ ಮುಂದಿನ ಪೀಳಿಗೆಯನ್ನು ಯುದ್ಧದ ಭೀತಿಯಿಂದ ದೂರಮಾಡಿ ಶಾಶ್ವತವಾದ ಶಾಂತಿಯನ್ನು ಸ್ಥಾಪಿಸಲು ಒಂದು ಸಂಸ್ಥೆಯ ಅವಶ್ಯಕತೆಯ ಯೋಚನೆ ಯುದ್ಧಮಾಡುತ್ತಿದ್ದ ಕೆಲವು ರಾಷ್ಟ್ರಗಳಲ್ಲಿ ಮೂಡಿಬಂತು. ೧೯೪೧ರ ಆಗಸ್ಟ್ ೧೪ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನದ ಅಧ್ಯಕ್ಷ ರೂಸ್‌ವೆಲ್ಟ್ ಮತ್ತು ಬ್ರಿಟನಿನ ಪ್ರಧಾನ ಮಂತ್ರಿ ಚರ್ಚಿಲರು "ಅಟ್ಲಾಂಟಿಕ್ ಪ್ರಣಾಳಿಕೆಯಲ್ಲಿ" ನಾಲ್ಕು ಸ್ವಾತಂತ್ರ್ಯಗಳ (ವಾಕ್ ಸ್ವಾತಂತ್ರ್ಯ, ಪ್ರಜಾಸ್ವಾತಂತ್ರ್ಯ, ಅನ್ನಭೀತಿಯಿಂದ ಮತ್ತು ಭೀತಿಯಿಂದ ವಿಮೋಚನಾ ಸ್ವಾತಂತ್ರ್ಯ) ವಿಚಾರವನ್ನಿತ್ತಿ, ಯುದ್ಧಭಯದಿಂದ ಮಾನವಕೋಟಿ ಯನ್ನು ದೂರಮಾಡಲು ವಿಶ್ವಸಂಸ್ಥೆಯ ಅವಶ್ಯಕತೆಯನ್ನು ಯೋಜಿಸಿದರು.[2] ದ್ವಿತೀಯ ಮಹಾಯುದ್ಧದಲ್ಲಿ ಜರ್ಮನಿ ಮತ್ತು ಜಪಾನ್ ದೇಶಗಳ ವಿರುದ್ಧವಾಗಿ ಯುದ್ಧಮಾಡುತ್ತಿದ್ದ ೨೬ ರಾಷ್ಟ್ರಗಳು "ಅಟ್ಲಾಂಟಿಕ್ ಪ್ರಣಾಳಿಕೆಯ" ಘೋಷಣೆಯ ಆಧಾರದ ಮೇಲೆ ಸಂಯುಕ್ತರಾಷ್ಟ್ರಗಳ ಘೋಷಣೆಯನ್ನು ೧೯೪೨ರ ಜನವರಿ ೧ರಂದು ಪ್ರಕಟಿಸಿದರು. ಈ ರಾಷ್ಟ್ರಗಳು ಸಂಯುಕ್ತ ರಾಷ್ಟ್ರ ಗಳೆಂದು (ದಿ ಯುನೈಟೆಡ್ ನೇಷನ್ಸ್) ಕರೆದುಕೊಂಡುವು. ಈ ಹೆಸರನ್ನು ಕೊಟ್ಟವರು ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟ್. ಈ ಹೆಸರಿನಲ್ಲೇ ಯುದ್ಧಮುಗಿದ ಅನಂತರ ವಿಶ್ವಶಾಂತಿ ಸ್ಥಾಪಿಸಲು ಅಮೆರಿಕ, ಬ್ರಿಟನ್, ರಷ್ಯ ಮತ್ತು ಚೀನ ದೇಶಗಳು ಮತ್ತೆ ೧೯೪೩ರ ಅಕ್ಟೋಬರ್ ೩೦ರಂದು "ಮಾಸ್ಕೋ" ಘೋಷಣೆಯ ಮೂಲಕ ವಿಶ್ವಸಂಸ್ಥೆಯ ಸ್ಥಾಪನೆಗೆ ಒಪ್ಪಿದುವು. ೧೯೪೪ರ ಆಗಸ್ಟಿನಿಂದ ಸೆಪ್ಟಂಬರ್ ವರೆಗೂ ನಡೆದ "ಡಂಬಾರ್ಟನ್ ಓಕ್ಸ್" ಸಮ್ಮೇಳನದಲ್ಲಿ, ಸ್ಥಾಪಿಸಬಹುದಾದ ವಿಶ್ವಸಂಸ್ಥೆಯ ರಚನೆ, ರೂಪ ಮತ್ತು ಅಂಗಗಳ ವಿಚಾರವಾಗಿ ದೀರ್ಘ ಚರ್ಚೆಮಾಡಿ ತೀರ್ಮಾನಕ್ಕೆ ಬಂದರು. ಪುನಃ ೧೯೪೫ರ ಫೆಬ್ರುವರಿ ತಿಂಗಳಲ್ಲಿ ನಡೆದ "ಯಾಲ್ಟಾ" ಸಮ್ಮೇಳನದಲ್ಲೂ ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಸೋವಿಯತ್ ದೇಶಗಳು

[2] Cheever and Haviland, *Organising for Peace*, New York- Houghton Mifflin Company, 1954, p. 59

ಸಮಾಲೋಚನೆ ನಡೆಸಿದುವು. ಕೊನೆಯದಾಗಿ ಸ್ಯಾನ್‌ಫ್ರಾನ್ಸಿಸ್ಕೊ ನಗರದಲ್ಲಿ ಮತ್ತೆ ಚರ್ಚೆಯಾಗಿ, ೧೯೪೫ರ ಅಕ್ಟೋಬರ್ ೨೪ರಂದು ೫೧ ರಾಷ್ಟ್ರಗಳು ವಿಶ್ವಸಂಸ್ಥೆಯ ಸನ್ನದನ್ನು[3] ಒಪ್ಪಿ ಸಹಿ ಹಾಕಿದಾಗ ಈ ಸಂಸ್ಥೆಯ ಉದಯವಾಯಿತು. ಇದರ ಸಂಸ್ಥಾಪಕ ರಾಷ್ಟ್ರಗಳಲ್ಲಿ ಭಾರತವೂ ಒಂದು. ಅಮೆರಿಕ ಸಂಯುಕ್ತಸಂಸ್ಥಾನದ ನ್ಯೂಯಾರ್ಕ್ ನಗರದ ಭಾಗವಾದ "ಲೇಕ್ ಸಕ್ಸೆಸ್"ನಲ್ಲಿ ಈ ಸಂಸ್ಥೆಯು ಕೇಂದ್ರವಿದೆ.

ಧ್ಯೇಯಗಳು ಮತ್ತು ಉದ್ದೇಶಗಳು

ವಿಶ್ವಸಂಸ್ಥೆಯ ಮುಖ್ಯ ಧ್ಯೇಯ ಮತ್ತು ಉದ್ದೇಶಗಳಿವು:[4]

೧ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು; ಮತ್ತು ಶಾಂತಿಭಂಗಕ್ಕೆ ಅವಕಾಶ ಕೊಡುವ ಅಂತರರಾಷ್ಟ್ರೀಯ ಮನಸ್ತಾಪಗಳನ್ನು ಅಥವಾ ಪರಿಸ್ಥಿತಿಗಳನ್ನು ಚರ್ಚಿಸುವುದು ಮತ್ತು ತೀರ್ಮಾನಿಸುವುದು;

೨ ವಿಶ್ವರಾಷ್ಟ್ರಗಳಲ್ಲಿ ಸ್ನೇಹಪೂರಿತ ಸಂಬಂಧಗಳನ್ನು ಅಭಿವೃದ್ಧಿ ಮಾಡುವುದಕ್ಕೂ ವಿಶ್ವಶಾಂತಿಯನ್ನು ಬಲಪಡಿಸುವುದಕ್ಕೂ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದು;

೩. ಜನಾಂಗ, ಲಿಂಗ, ಭಾಷೆ ಅಥವಾ ಮತವ್ಯತ್ಯಾಸಗಳಿಲ್ಲದೆ ಮಾನವನ ಹಕ್ಕುಬಾಧ್ಯತೆಗಳಿಗೂ ಮೂಲಭೂತ ಸ್ವಾತಂತ್ರ್ಯಗಳಿಗೂ ಪ್ರೋತ್ಸಾಹ ನೀಡುವುದು ಮತ್ತು ಅವುಗಳ ಬೆಳವಣಿಗೆಗಾಗಿ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು;

೪ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಅಂತರರಾಷ್ಟ್ರೀಯ ಸಹಕಾರವನ್ನು ಬೆಳೆಸುವುದು;

೫ ಈ ಸಾರ್ವತ್ರಿಕ ಧ್ಯೇಯಗಳ ಮತ್ತು ಉದ್ದಿಶ್ಯಗಳ ಸಾಧನೆಗಾಗಿ ರಾಷ್ಟ್ರಗಳ ಕಾರ್ಯಗಳನ್ನು ಏಕೀಕರಿಸುವ ಕೇಂದ್ರವಾಗಿರುವುದು.

ಮೂಲಭೂತ ತತ್ತ್ವಗಳು

ವಿಶ್ವಸಂಸ್ಥೆಯೂ ಇದರ ಸದಸ್ಯರಾಷ್ಟ್ರಗಳೂ ಈ ಸನ್ನದಿನ ಕೆಲವು ಮೂಲಭೂತ ತತ್ತ್ವಗಳನ್ನು[5] ಅನುಸರಿಸಿ ಕೆಲಸಮಾಡಬೇಕಾಗಿದೆ. ಕೆಳಕಂಡ ಮೂಲಭೂತ ತತ್ತ್ವಗಳ ಆಧಾರದ ಮೇಲೆ ವಿಶ್ವಸಂಸ್ಥೆ ರಚನೆಯಾಗಿದೆ:

೧ ವಿಶ್ವಸಂಸ್ಥೆಯ ಎಲ್ಲ ಸದಸ್ಯರಾಷ್ಟ್ರಗಳಿಗೂ ಸಮಾನ ಹಕ್ಕುಬಾಧ್ಯತೆಗಳಿವೆ;

---

[3] *Ibid.*, p. 63

[4] *Charter of the United Nations*, Article 1

[5] *Ibid.*, Article 2

೨ ಎಲ್ಲ ಸದಸ್ಯರಾಷ್ಟ್ರಗಳೂ ವಿಶ್ವಸಂಸ್ಥೆಯ ಸನ್ನದಿನ ಪ್ರಕಾರ ಒಪ್ಪಿಕೊಂಡಿರುವ ಷರತ್ತುಗಳನ್ನು ಪ್ರಾಮಾಣಿಕತೆಯಿಂದ ನೆರವೇರಿಸತಕ್ಕದ್ದು ;

೩ ಅಂತರರಾಷ್ಟ್ರೀಯ ಶಾಂತಿ, ಭದ್ರತೆ ಮತ್ತು ನ್ಯಾಯಕ್ಕೆ ಅಪಾಯವಿಲ್ಲದ ರೀತಿಯಲ್ಲಿ ಅಂತರರಾಷ್ಟ್ರೀಯ ಮನಸ್ತಾಪಗಳನ್ನೆಲ್ಲ ಶಾಂತ ಮಾರ್ಗದಲ್ಲಿ ತೀರ್ಮಾನಿಸಿಕೊಳ್ಳತಕ್ಕದ್ದು ;

೪ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಯಾವ ರಾಷ್ಟ್ರದ ಗೌರವ ಮತ್ತು ರಾಜಕೀಯ ಸ್ವಾತಂತ್ರ್ಯದ ವಿರೋಧವಾಗಿಯಾಗಲಿ ಬೆದರಿಕೆ ಅಥವಾ ಬಲ ಪ್ರಯೋಗ ಮಾಡದಿರತಕ್ಕದ್ದು ; ಮತ್ತು ವಿಶ್ವಸಂಸ್ಥೆಯ ಧ್ಯೇಯ ಉದ್ದೇಶಗಳಿಗೆ ವಿರೋಧವಾಗಿ ಯಾವ ರೀತಿಯಿಂದಲೂ ವರ್ತಿಸದಿರತಕ್ಕದ್ದು ;

೫ ವಿಶ್ವಸಂಸ್ಥೆಯ ಸದಸ್ಯರಾಷ್ಟ್ರಗಳೂ ಸದಸ್ಯತ್ವವನ್ನು ಪಡೆಯದ ರಾಷ್ಟ್ರಗಳೂ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ರಕ್ಷಣೆಗೆ ಈ ಸನ್ನದಿನ ತತ್ತ್ವಗಳಿಗನುಸಾರವಾಗಿ ನಡೆದುಕೊಳ್ಳತಕ್ಕದ್ದು ;

೬ ಸಂಸ್ಥೆಯ ಸನ್ನದಿನಂತೆ ಅದು ಕೈಕೊಂಡ ಯಾವ ಕಾರ್ಯಗಳಲ್ಲಿಯೇ ಆಗಲಿ ಎಲ್ಲ ಸದಸ್ಯರಾಷ್ಟ್ರಗಳೂ ಸಹಾಯಮಾಡತಕ್ಕದ್ದು ;

೭ ವಿಶ್ವಸಂಸ್ಥೆಯ ಸದಸ್ಯರಾಷ್ಟ್ರಗಳು ಯಾವುದೇ ರಾಷ್ಟ್ರದ ಒಳಾಡಳಿತಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಪ್ರವೇಶಿಸಕೂಡದು ಮತ್ತು ಅಂಥ ವಿಷಯಗಳನ್ನು ವಿಶ್ವಸಂಸ್ಥೆಯ ತೀರ್ಮಾನಕ್ಕೆ ಒಪ್ಪಿಸುವಂತೆ ಸದಸ್ಯರನ್ನು ಕೇಳಕೂಡದು.

ವಿಶ್ವಸಂಸ್ಥೆಯ ಸದಸ್ಯತ್ವ

೧೯೪೫ರಲ್ಲಿ ೫೧ ಸದಸ್ಯರುಗಳಿಂದ ಪ್ರಾರಂಭವಾದ ವಿಶ್ವಸಂಸ್ಥೆಯಲ್ಲಿ ಈಗ ೧೨೭ ಸದಸ್ಯರಾಷ್ಟ್ರಗಳಿವೆ. ಸಂಸ್ಥೆಯ ಸನ್ನದನ್ನು ಮತ್ತು ಅದರ ತತ್ತ್ವಗಳನ್ನು ಒಪ್ಪುವ ಮತ್ತು ಸಂಸ್ಥೆಯ ಅಭಿಪ್ರಾಯದಲ್ಲಿ ಅವುಗಳನ್ನು ಆಚರಣೆಗೆ ತರಲು ಶಕ್ತಿ ಮತ್ತು ಮನಸ್ಸಿರುವ ಎಲ್ಲ ಶಾಂತಿಪ್ರಿಯ ರಾಷ್ಟ್ರಗಳು ವಿಶ್ವಸಂಸ್ಥೆಗೆ ಸದಸ್ಯರಾಗಬಹುದು.[6] ಸಂಸ್ಥೆಯ ಭದ್ರತಾ ಸಮಿತಿಯ ಶಿಫಾರಸಿನ ಮೇಲೆ ಮಹಾಸಭೆ ಹೊಸ ರಾಷ್ಟ್ರಗಳನ್ನು ಈ ಸಂಸ್ಥೆಗೆ ಸೇರಿಸಬಹುದು. ಆದರೆ ಭದ್ರತಾ ಸಮಿತಿಯಲ್ಲಿರುವ ಐದು ಖಾಯಂ ರಾಷ್ಟ್ರಗಳಲ್ಲಿ ಈ ಬಗ್ಗೆ ಒಮ್ಮತವಿರಬೇಕು. ಯಾವುದಾದರೊಂದು ಖಾಯಂ ರಾಷ್ಟ್ರಕ್ಕೆ ಒಪ್ಪಿಗೆ ಇಲ್ಲದಿದ್ದಲ್ಲಿ ಆ ರಾಷ್ಟ್ರ ನಿಷೇಧಾಧಿಕಾರ (ವಿಟೊ) ಚಲಾಯಿಸಬಹುದು. ಈ ಐದು ಬಲಿಷ್ಠರಾಷ್ಟ್ರಗಳ ರಾಜಕೀಯ ಪ್ರಭಾವದಿಂದ ಕೆಲವು ರಾಷ್ಟ್ರಗಳು ವಿಶ್ವಸಂಸ್ಥೆಯ ಸದಸ್ಯರಾಗಲು ಕಷ್ಟವಾಗಿದೆ. ಕೆಂಪುಚೀನ ವಿಶ್ವಸಂಸ್ಥೆಗೆ ಸೇರಲು ಆಗಿಲ್ಲ. ಅದೇ ರೀತಿ ದ್ವಿತೀಯ ಮಹಾಯುದ್ಧ ಮುಗಿದು

---

[6] *Ibid.*, Article 3

೨೫ ವರ್ಷಗಳಾದರೂ ಉತ್ತರ ಕೊರಿಯ, ದಕ್ಷಿಣ ಕೊರಿಯ, ಉತ್ತರ ವಿಯೆಟ್‌ನಾಂ, ದಕ್ಷಿಣ ವಿಯೆಟ್‌ನಾಂ, ಪಶ್ಚಿಮ ಜರ್ಮನಿ ಮತ್ತು ಪೂರ್ವ ಜರ್ಮನಿಗಳು ಈ ಸಂಸ್ಥೆಗೆ ಸೇರಲು ಆಗಿಲ್ಲ. ಬಲಿಷ್ಠರಾಷ್ಟ್ರಗಳ ರಾಜಕೀಯ ಕಲಹ ಮತ್ತು ಮನಸ್ತಾಪಗಳಿಂದ ಇದು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದ ಈ ಸಂಸ್ಥೆ ನಿಜವಾದ "ವಿಶ್ವಸಂಸ್ಥೆ"ಯಾಗಲು ಸಾಧ್ಯವಾಗುತ್ತಿಲ್ಲ. ರಾಜಕೀಯ ಚಟುವಟಿಕೆಗಳಿಂದ ವಿಶ್ವಶಾಂತಿ ಮತ್ತು ಭದ್ರತೆಗೆ ಧಕ್ಕೆ ಬರುವುದಲ್ಲದೆ, ವಿಶ್ವಸಂಸ್ಥೆ ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುವ ಪರಿಸ್ಥಿತಿ ಬಂದೊದಗಿದೆ.

ಮುಖ್ಯ ಅಂಗಗಳು

ವಿಶ್ವಸಂಸ್ಥೆಯ ಧ್ಯೇಯ ಮತ್ತು ಉದ್ದೇಶಗಳನ್ನು ಸಾಧಿಸಲು ಆರು ಮುಖ್ಯ ಅಂಗಗಳಿವೆ: ಮಹಾಸಭೆ, ಭದ್ರತಾ ಸಮಿತಿ, ಆರ್ಥಿಕ ಮತ್ತು ಸಾಮಾಜಿಕ ಸಮಿತಿ, ನ್ಯಾಸಸಮಿತಿ, ಅಂತರರಾಷ್ಟ್ರೀಯ ನ್ಯಾಯಸ್ಥಾನ ಮತ್ತು ಕಾರ್ಯಾಲಯ (ಸೆಕ್ರೆಟೇರಿಯಟ್).

ಮಹಾಸಭೆ[7]

ವಿಶ್ವಸಂಸ್ಥೆಯ ಸದಸ್ಯರಾಷ್ಟ್ರಗಳಿಗೆಲ್ಲ ಮಹಾಸಭೆಯಲ್ಲಿ ಪ್ರಾತಿನಿಧ್ಯವಿದೆ. ಈ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಪ್ರತಿ ರಾಷ್ಟ್ರವೂ ಹಲವು ಸದಸ್ಯರನ್ನೊಳಗೊಂಡ ಒಂದು ನಿಯೋಗವನ್ನು ಕಳುಹಿಸಬಹುದು. ಪ್ರತಿ ಸದಸ್ಯ ರಾಷ್ಟ್ರಕ್ಕೂ ಒಂದು ಮತಚಲಾಯಿಸುವ ಅಧಿಕಾರವಿದೆ. ಮಹಾಸಭೆಯನ್ನು ವಿಶ್ವಸಂಸ್ಥೆಯ ಪಾರ್ಲಿಮೆಂಟ್ ಎಂದು ಭಾವಿಸಬಹುದು.

ವಿಶ್ವಸಂಸ್ಥೆಯ ಧ್ಯೇಯಕ್ಕೆ ಮತ್ತು ಉದ್ದಿಶ್ಯಗಳಿಗೆ ಒಳಪಟ್ಟ ಯಾವ ಪ್ರಶ್ನೆಯನ್ನಾಗಲಿ,ವಿಷಯಗಳನ್ನಾಗಲಿ, ಸಂಸ್ಥೆಯ ಯಾವುದೇ ಅಂಗದ ಅಧಿಕಾರ ಮತ್ತು ಕರ್ತವ್ಯಗಳಿಗೆ ಸಂಬಂಧಪಟ್ಟ ವಿಷಯಗಳನ್ನಾಗಲಿ ಮಹಾಸಭೆ ಚರ್ಚಿಸಬಹುದು. ಭದ್ರತಾ ಸಮಿತಿಯ ಶಿಫಾರಿಸಿನ ಮೇಲೆ ಹೊಸ ಸದಸ್ಯರನ್ನು ಈ ಸಂಸ್ಥೆಗೆ ಸೇರಿಸಬಹುದು. ವಿಶ್ವಶಾಂತಿ, ನಿಶ್ಶಸ್ತ್ರೀಕರಣ, ಮಾನವನ ಹಕ್ಕುಗಳು ಮತ್ತು ಅಂತರರಾಷ್ಟ್ರೀಯ ಕಾನೂನುಗಳ ವಿಚಾರಗಳನ್ನು ಚರ್ಚಿಸಿ ತೀರ್ಮಾನಿಸುವ ಅಧಿಕಾರವಿದೆ. ಸಂಸ್ಥೆಯ ಆಡಳಿತ ಮತ್ತು ಹಣಕಾಸಿನ ವಿಚಾರಗಳಲ್ಲಿ ಇದಕ್ಕೆ ಪೂರ್ಣ ಅಧಿಕಾರವಿದೆ. ಸಂಸ್ಥೆಯ ಅಂಗಗಳಾದ ಭದ್ರತಾ ಸಮಿತಿಯ ಹಂಗಾಮಿ ಸದಸ್ಯರುಗಳನ್ನು, ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಸದಸ್ಯರುಗಳನ್ನು, ನ್ಯಾಸ ಸಮಿತಿಯ ಕೆಲವು ಸದಸ್ಯರುಗಳನ್ನು, ಅಂತರರಾಷ್ಟ್ರೀಯ ನ್ಯಾಯ

7 *Ibid.*, Chapter IV

ಸ್ಥಾನದ ನ್ಯಾಯಾಧೀಶರನ್ನು ಮತ್ತು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯನ್ನು ಮಹಾಸಭೆ ಚುನಾಯಿಸುವುದು. ವಿಶ್ವಸಂಸ್ಥೆಯ ಸನ್ನದಿನ ಬದಲಾವಣೆ ಮಾಡುವುದರಲ್ಲೂ ಇದು ಭಾಗವಹಿಸುವುದು. ವಿಶ್ವಸಂಸ್ಥೆಯ ಎಲ್ಲ ಅಂಗಗಳೂ ಮಹಾಸಭೆಯ ಅಧೀನಕ್ಕೆ ಒಳಪಟ್ಟು ಕೆಲಸಮಾಡಬೇಕಾಗಿದೆ. ಮಹಾಸಭೆಯೊಂದಿಗೆ ಸಹಕರಿಸಲೂ ಅದಕ್ಕೆ ಸಲಹೆ ನೀಡಲೂ ಅನೇಕ ಸಮಿತಿಗಳನ್ನು ಸ್ಥಾಪಿಸಲಾಗಿದೆ.

ಮಹಾಸಭೆ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಬಹಳ ಪ್ರಾಮುಖ್ಯ ಪಡೆದಿದೆ. ಈ ಸಭೆ ೧೨೭ ಸದಸ್ಯರಾಷ್ಟ್ರಗಳಿಂದ ಕೂಡಿದ ದೊಡ್ಡ ಸಭೆ. ಎರಡನೆಯ ಮಹಾಯುದ್ಧವಾದ ಅನಂತರ ಸ್ವತಂತ್ರವಾದ ಆಫ್ರಿಕ ಮತ್ತು ಏಷ್ಯಗಳ ಅನೇಕ ರಾಷ್ಟ್ರಗಳು ಈ ಸಭೆಯ ಸದಸ್ಯರಾಷ್ಟ್ರಗಳಾಗಿವೆ. ಹೊಸದಾಗಿ ಸ್ವತಂತ್ರವಾದ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳದೇ ಈ ಸಭೆಯಲ್ಲಿ ಬಹುಸಂಖ್ಯೆ. ಈ ರಾಷ್ಟ್ರಗಳ ಸಹಕಾರವಿಲ್ಲದೆ ಯಾವುದೇ ನಿರ್ಣಯವೂ ಸಾಧ್ಯವಿಲ್ಲ. ಬಲಿಷ್ಠ ಮತ್ತು ಶ್ರೀಮಂತ ರಾಷ್ಟ್ರಗಳ ಬಲ ಕಡಿಮೆಯಿಲ್ಲದಿದ್ದರೂ, ನವೋದಿತ ಸ್ವತಂತ್ರ ಮತ್ತು ಅಭಿವೃದ್ಧಿಯಾಗುತ್ತಿರುವ ರಾಷ್ಟ್ರಗಳ ಪ್ರಭಾವ ಈ ಮಹಾಸಭೆಯಲ್ಲಿ ಬೆಳೆಯುತ್ತಿದೆ. ಈ ರಾಷ್ಟ್ರಗಳು ಮಹಾಸಭೆಯ ಕಾರ್ಯಕಲಾಪಗಳಲ್ಲಿ ಪ್ರಮುಖಪಾತ್ರ ವಹಿಸಬೇಕಾಗಿದೆ.

ಭದ್ರತಾ ಸಮಿತಿ[8]

ಇದು ವಿಶ್ವಸಂಸ್ಥೆಯ ಬಹು ಮುಖ್ಯವಾದ ಸಮಿತಿ. ಈ ಸಮಿತಿಯಲ್ಲಿ ೧೫ ಸದಸ್ಯರಿದ್ದಾರೆ. ೫ ಖಾಯಂ ಸದಸ್ಯ ರಾಷ್ಟ್ರಗಳಿವೆ (ಅಮೆರಿಕ ಸಂಯುಕ್ತಸಂಸ್ಥಾನ, ಬ್ರಿಟನ್, ರಷ್ಯ, ಫ್ರಾನ್ಸ್ ಮತ್ತು ಚೀನ). ೧೦ ಹಂಗಾಮಿ ಸದಸ್ಯ ರಾಷ್ಟ್ರಗಳು ಮಹಾಸಭೆಯಿಂದ ಎರಡು ವರ್ಷಗಳ ಅವಧಿಗೆ ಚುನಾಯಿಸಲ್ಪಡುತ್ತವೆ. ಪ್ರತಿ ಸದಸ್ಯ ರಾಷ್ಟ್ರಕ್ಕೂ ಒಂದು ಮತ ಚಲಾಯಿಸುವ ಅಧಿಕಾರವಿದೆ. ಖಾಯಂ ಸದಸ್ಯ ರಾಷ್ಟ್ರಗಳಿಗೆ ನಿಷೇಧಾಧಿಕಾರವಿದೆ.

ಈ ಸಮಿತಿಗೆ ವಿಶ್ವಶಾಂತಿ ಮತ್ತು ಭದ್ರತೆಗಳ ವಿಚಾರಗಳಲ್ಲಿ ಪೂರ್ಣ ಅಧಿಕಾರವುಂಟು. ವಿಶ್ವಶಾಂತಿ ಮತ್ತು ಭದ್ರತೆಗಳನ್ನು ಕಾಪಾಡುವ ಹೊಣೆಗಾರಿಕೆ ಈ ಸಮಿತಿಗೆ ಸೇರಿದ್ದು. ಯಾವಾಗಲಾದರೂ ವಿಶ್ವಶಾಂತಿಗೆ ಭಂಗ ಬಂದಾಗ, ಅಂಥ ಪರಿಸ್ಥಿತಿ ಉದ್ಭವಿಸಿದಾಗ ಅಥವಾ ದಾಳಿಗಳಾದಾಗ ಈ ಸಮಿತಿ ಶೀಘ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇಂಥ ಮನಸ್ತಾಪ ಅಥವಾ ಕಲಹಗಳನ್ನು ಶಾಂತರೀತಿಯಿಂದ ತೀರ್ಮಾನಿಸಲು ಮತ್ತು ಕೊನೆಗಾಣಿಸಲು ಪ್ರಯತ್ನಿಸಬೇಕು.

[8] *Ibid.*, Chapters V–VIII

ಶಾಂತರೀತಿಯಲ್ಲಿ ಈ ಅಪಾಯ ಸಂಭವಗಳನ್ನು ಅಥವಾ ಪರಿಸ್ಥಿತಿಗಳನ್ನು ತಡೆಗಟ್ಟಲಾಗದಿದ್ದರೆ, ವಿಶ್ವಶಾಂತಿಗೋಸ್ಕರ ಸಮಿತಿ ಬಲವನ್ನು (ವಾಯು, ಜಲ ಮತ್ತು ಭೂಸೈನ್ಯಗಳಿಂದ) ಪ್ರಯೋಗಿಸುವ ಅಧಿಕಾರವೂ ಇದೆ. ಇಂಥ ಯುದ್ಧಕಾರ್ಯ ನಿರ್ವಹಣೆಯಲ್ಲಿ ಎಲ್ಲ ಸದಸ್ಯ ರಾಷ್ಟ್ರಗಳೂ ಸಹಕರಿಸಬೇಕು. ಸಮಿತಿಗೆ ಈ ವಿಷಯಗಳಲ್ಲಿ ಸಲಹೆ ಮಾಡಲು ಖಾಯಂ ರಾಷ್ಟ್ರಗಳ ಸೇನಾ ಸಿಬ್ಬಂದಿ ಸಮಿತಿ (ಮಿಲಿಟರಿ ಸ್ಟಾಫ್ ಕಮಿಟಿ) ಇದೆ.

ಭದ್ರತಾ ಸಮಿತಿಯನ್ನು ವಿಶ್ವಸಂಸ್ಥೆಯ ಮಂತ್ರಿಸಂಪುಟವೆಂದು ಪರಿಗಣಿಸಬಹುದು. ಈ ಸಮಿತಿಯಲ್ಲಿ ಖಾಯಂ ರಾಷ್ಟ್ರಗಳ ಪ್ರಭಾವ ಬಹಳವಾಗಿದೆ. ಇವು ಅಭಿವೃದ್ಧಿಹೊಂದಿರುವ ಶ್ರೀಮಂತ ಮತ್ತು ಬಲಿಷ್ಠ ರಾಷ್ಟ್ರಗಳು. ಇವುಗಳಿಗೆ ಸಮಿತಿಯ ಕಲಾಪಗಳ ವಿಚಾರಗಳಲ್ಲಿ ನಿಷೇಧಾಧಿಕಾರ ಇರುವುದರಿಂದ ಇವು ಇನ್ನೂ ಪ್ರಬಲವಾಗಲು ಅವಕಾಶವಿದೆ. ಈ ಬಲಿಷ್ಠರಾಷ್ಟ್ರಗಳು ತಮ್ಮ ರಾಜಕೀಯ ಪ್ರಭಾವವನ್ನು ಈ ಸಮಿತಿಯ ಕಾರ್ಯಕಲಾಪಗಳ ಮೇಲೆ ಬೀರಿ, ಸ್ವಾರ್ಥಕ್ಕೋಸ್ಕರ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಸ್ಥಿತಿ ಬಂದೊದಗಿದೆ. ಈ ಸಂಸ್ಥೆ ದಕ್ಷತೆಯಿಂದ, ಕರ್ತವ್ಯ ದೃಷ್ಟಿಯಿಂದ ಕೆಲಸ ಮಾಡದಿದ್ದರೆ ಅದಕ್ಕೆ ಈ ಬಲಿಷ್ಠ ರಾಷ್ಟ್ರಗಳೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ವಿಶ್ವಸಂಸ್ಥೆಯ ಯಶಸ್ಸು ಮತ್ತು ಭವಿಷ್ಯ ಖಾಯಂ ಸದಸ್ಯರಾಷ್ಟ್ರಗಳ ಕೈಯಲ್ಲಿವೆ. ಈ ರಾಷ್ಟ್ರಗಳು ಸ್ವಾರ್ಥವನ್ನು ಬಿಟ್ಟುಕೊಟ್ಟು ವಿಶ್ವಶಾಂತಿ ಮತ್ತು ಭದ್ರತೆಗಳಲ್ಲಿ ಹೆಚ್ಚು ಆಸಕ್ತಿ ತೋರಿಸಿದಲ್ಲಿ ಈ ಸಮಿತಿಯಿಂದ ಬಹಳ ಪ್ರಯೋಜನವಾಗಬಹುದು.

ಆರ್ಥಿಕ ಮತ್ತು ಸಾಮಾಜಿಕ ಸಮಿತಿ[9]

ವಿಶ್ವದ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಮಾನವನ ಪ್ರಗತಿಯಾದರೆ ವಿಶ್ವಶಾಂತಿಗೆ ಸಹಾಯವಾಗುವುದೆಂದು ನಂಬಿ ಇವುಗಳ ಸಾಧನೆಗೆ ಪ್ರತ್ಯೇಕ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯನ್ನು ವಿಶ್ವಸಂಸ್ಥೆಯ ಮುಖ್ಯ ಅಂಗವಾಗಿ ಸ್ಥಾಪಿಸಲಾಗಿದೆ. ಈ ಸಮಿತಿಯ ೨೭ ಸದಸ್ಯರು ಮಹಾಸಭೆಯಿಂದ ಮೂರು ವರ್ಷಗಳ ಅವಧಿಗೆ ಚುನಾಯಿತರಾಗುತ್ತಾರೆ. ಅಂತರರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರೋಗ್ಯ ಅಭಿವೃದ್ಧಿಗೆ; ಮಾನವನ ಹಕ್ಕುಗಳ ಹಾಗೂ ಮೂಲಭೂತ ಸ್ವಾತಂತ್ರ್ಯಗಳ ಬೆಳವಣಿಗೆ ಉದ್ಧಾರಗಳಿಗೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಸಮಿತಿಯ ಕರ್ತವ್ಯ. ಇವುಗಳಿಗಾಗಿ ಬೇಕಾದ ಸಂಶೋಧನೆ ಮತ್ತು ವಿಚಾರಗೋಷ್ಠಿಗಳನ್ನು ನಡೆಸುವ ಮತ್ತು ಮೇಲ್ಕಂಡ ಸಮಸ್ಯೆಗಳ ಪರಿಶೀಲನೆಗೆ ತಕ್ಕ ಆಯೋಗಗಳನ್ನು ಸ್ಥಾಪಿಸುವ ಅಧಿಕಾರವಿದೆ. ಈ

---

[9] *Ibid.*, Chapter X

ಎಲ್ಲ ಪರಿಶೀಲನೆ ಮತ್ತು ಸಂಶೋಧನೆಗಳನ್ನು ವಿಚಾರಮಾಡಿ ಸೂಕ್ತ ಸಲಹೆ ನೀಡುವ ಅಧಿಕಾರವೂ ಇದೆ. ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ಅಂತರರಾಷ್ಟ್ರೀಯ ಸಹಕಾರವನ್ನು ಗಳಿಸುವ ಕಾರ್ಯ ಈ ಸಮಿತಿಗೆ ಸೇರಿದ್ದು. ವಿಶ್ವಸಂಸ್ಥೆಯ ಸಹಾಯಕ ಮತ್ತು ವಿಶೇಷ ಸಂಸ್ಥೆಗಳು ಸಮಿತಿಯ ಆಶ್ರಯದಲ್ಲಿ ಮತ್ತು ಇದರ ಆವರಣದಲ್ಲಿ ಸೇವೆಮಾಡುತ್ತ ಇವೆ. ಈ ಸಂಸ್ಥೆಗಳ ಕಾರ್ಯನಿರ್ವಹಣೆ ಮತ್ತು ಸುಸಂಘಟನೆಯ ಹೊಣೆ ಇದಕ್ಕೆ ಸೇರಿದೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಇದು ನಾನಾ ಕ್ಷೇತ್ರಗಳಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಕಾರ್ಯಮಾಡಿ ಅಂತರರಾಷ್ಟ್ರೀಯ ಸಹಕಾರವನ್ನು ಬೆಳೆಸಿದೆ ಮತ್ತು ವಿಶ್ವದ ಪ್ರಗತಿಗೆ ತಕ್ಕ ಸೇವೆ ಮಾಡಿದೆ.

ನ್ಯಾಸ ಸಮಿತಿ[10]

ಸಾಮ್ರಾಜ್ಯರಾಷ್ಟ್ರಗಳ ವಸಾಹತು ನೀತಿಗೆ ಸಿಕ್ಕಿ ನರಳುತ್ತಿದ್ದ, ಪರಾಧೀನವಿದ್ದ ಮತ್ತು ಸ್ವಯಮಾಡಳಿತ ನಡಸಲು ಇನ್ನೂ ಸಾಧ್ಯವಿಲ್ಲದ ಪ್ರದೇಶಗಳ ಅಭಿವೃದ್ಧಿ ಮತ್ತು ಬೆಳೆವಣಿಗೆಗೋಸ್ಕರ ಒಂದು ಅಂತರರಾಷ್ಟ್ರೀಯ ನ್ಯಾಸ ವ್ಯವಸ್ಥೆಯನ್ನು ವಿಶ್ವಸಂಸ್ಥೆ ಸ್ಥಾಪಿಸಿದೆ. ಈ ಪ್ರದೇಶಗಳ ಅಭಿವೃದ್ಧಿ ಮತ್ತು ಬೆಳೆವಣಿಗೆಯನ್ನು ಕೆಲವು ರಾಷ್ಟ್ರಗಳಿಗೆ ವಹಿಸಲಾಗಿದೆ. ಈ ರಾಷ್ಟ್ರಗಳು ನ್ಯಾಸ ಸಮಿತಿಯ ಆಶ್ರಯದಲ್ಲಿ ಕೆಲಸ ಮಾಡಬೇಕಾಗಿದೆ. ಭದ್ರತಾಸಮಿತಿಯ ಸದಸ್ಯ ರಾಷ್ಟ್ರಗಳು ಮತ್ತು ಮಹಾ ಸಭೆಯಿಂದ ಚುನಾಯಿತವಾದ ಕೆಲವು ರಾಷ್ಟ್ರಗಳಿಗೆ ಸಮಿತಿಯ ಸದಸ್ಯತ್ವವಿರುತ್ತದೆ. ಅಂತರರಾಷ್ಟ್ರೀಯ ನ್ಯಾಸ ಪದ್ಧತಿಯ ಮೇಲ್ವಿಚಾರಣೆ ಈ ಸಮಿತಿಗೆ ಸೇರಿದ್ದು. ಈ ಪ್ರದೇಶಗಳ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ವಿದ್ಯಾಭ್ಯಾಸ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನುಂಟುಮಾಡಿ ಇವು ಸ್ವರಾಜ್ಯಕ್ಕೆ ಅರ್ಹವನ್ನಾಗಿ ಮಾಡುವ ಜವಾಬ್ದಾರಿ ಈ ಸಮಿತಿಗೆ ಸೇರಿದ್ದು. ಆಡಳಿತ ನಡೆಸುವ ಅಧಿಕಾರಗಳಿಂದ ಬರುವ ವರದಿಗಳನ್ನು ಪರಿಶೀಲಿಸುವುದು, ಈ ಪ್ರದೇಶಗಳಿಂದ ಬಂದ ವರದಿಗಳನ್ನು ಪರಿಶೀಲಿಸುವುದು. ಅವುಗಳ ಮನವಿಗಳನ್ನು ಅಂಗೀಕರಿಸಿ ಸಮಾಲೋಚನೆ ನಡೆಸುವುದು, ಈ ಪ್ರದೇಶಗಳ ವಿಚಾರವಾಗಿ ಪ್ರಶ್ನಾವಳಿಯ ಮೂಲಕ ಅಂಕಿಅಂಶಗಳನ್ನು ತಯಾರಿಸುವುದು ಮತ್ತು ಈ ಪ್ರದೇಶಗಳಿಂದ ಬರುವ ಅರ್ಜಿಗಳನ್ನು ಸ್ವೀಕರಿಸಿ ತೀರ್ಮಾನಿಸುವುದು—ಇವು ಸಮಿತಿಯ ಕರ್ತವ್ಯಗಳು. ಇವಕ್ಕಾಗಿ ಅಗತ್ಯವಾದರೆ ನಿಯೋಗಗಳನ್ನು ಈ ಪ್ರದೇಶಗಳಿಗೆ ಕಳುಹಿಸುವ ಮತ್ತು ಮಾತುಕತೆಗಳನ್ನು ನಡೆಸುವ ಅಧಿಕಾರ ಸಮಿತಿಗೆ ಇದೆ. ಈ ಹಿಂದುಳಿದ ಪ್ರದೇಶಗಳ ಪ್ರಗತಿಗೆ ಬೇಕಾದ ಯಾವ ಕಾರ್ಯಕ್ರಮಗಳನ್ನೇ

[10] *Ibid.*, Chapter XIII

ಆಗಲಿ ತೆಗೆದುಕೊಳ್ಳುವ ಅಧಿಕಾರವನ್ನು ಸಮಿತಿಗೆ ಕೊಡಲಾಗಿದೆ. ಕಳೆದ ೨೫ ವರ್ಷಗಳಲ್ಲಿ ಸಮಿತಿಯ ಆಶ್ರಯದಲ್ಲಿ ಅನೇಕ ಹಿಂದುಳಿದ ಪ್ರದೇಶಗಳು ಪ್ರಗತಿಹೊಂದಿ ಸ್ವತಂತ್ರ ರಾಷ್ಟ್ರಗಳಾಗಿವೆ ಮತ್ತು ಇನ್ನೂ ಕೆಲವು ಪ್ರದೇಶಗಳು ಸ್ವತಂತ್ರವಾಗುವ ದೆಶೆಯಲ್ಲಿವೆ.

ಅಂತರರಾಷ್ಟ್ರೀಯ ನ್ಯಾಯಸ್ಥಾನ[11]

ಇದು ವಿಶ್ವಸಂಸ್ಥೆಯ ನ್ಯಾಯಾಂಗ ಸಂಸ್ಥೆ. ವಿಶ್ವಸಂಸ್ಥೆಯ ಸದಸ್ಯರಾಷ್ಟ್ರಗಳೆಲ್ಲವೂ ಇದಕ್ಕೆ ಒಳಪಟ್ಟಿವೆ. ಇದರ ೧೫ ನ್ಯಾಯಾಧೀಶರು ಮಹಾಸಭೆಯಿಂದ ಚುನಾಯಿತರಾಗುತ್ತಾರೆ. ಅಂತರರಾಷ್ಟ್ರೀಯ ಕೌಲುಗಳು ಅಥವಾ ಕರಾರುಗಳ ವಿಚಾರಗಳಲ್ಲಿ ಮತ್ತು ಅಂತರರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ ಮತ್ತು ಅವುಗಳ ಪರಿಪಾಲನೆಗಳ ವಿಚಾರಗಳಲ್ಲಿ ಉಂಟಾಗುವ ಸಮಸ್ಯೆಗಳನ್ನೂ ರಾಷ್ಟ್ರಗಳ ಸಂಬಂಧಗಳಲ್ಲಿ ಉದ್ಭವಿಸುವ ಮನಸ್ತಾಪಗಳನ್ನೂ ಜಗಳಗಳನ್ನೂ ನ್ಯಾಯಸ್ಥಾನದ ತೀರ್ಪಿಗೆ ಬಿಡಬಹುದು. ಇದರ ತೀರ್ಪುಗಳನ್ನು ಎಲ್ಲಾ ಸದಸ್ಯ ರಾಷ್ಟ್ರಗಳೂ ಅಂಗೀಕರಿಸಿ, ಅದರಂತೆ ನಡೆದುಕೊಳ್ಳಬೇಕು. ವಿಶ್ವಸಂಸ್ಥೆಯ ಮಹಾಸಭೆ, ಭದ್ರತಾಸಮಿತಿ ಮತ್ತು ಇತರ ಅಂಗಗಳು ಸನ್ನದಿನ ಅಥವಾ ಅಂತರರಾಷ್ಟ್ರೀಯ ಕಾನೂನುಗಳ ವಿಷಯಗಳಲ್ಲಿ ಈ ನ್ಯಾಯಸ್ಥಾನದ ಸಲಹೆ ಪಡೆಯಬಹುದು. ಕಳೆದ ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಇದರ ಕಾರ್ಯಕಲಾಪಗಳನ್ನು ಕೂಲಂಕಷವಾಗಿ ನೋಡಿದಲ್ಲಿ ಅನೇಕ ಲೋಪದೋಷಗಳು ಕಂಡುಬಂದಿರುತ್ತವೆ. ಬಹುಸಂಖ್ಯಾತ ರಾಷ್ಟ್ರಗಳು ಈ ನ್ಯಾಯಾಸ್ಥಾನವನ್ನು ಕಲಹ ಮತ್ತು ಮನಸ್ತಾಪಗಳ ಪರಿಹಾರಕ್ಕಾಗಿ ಉಪಯೋಗಿಸಿಕೊಂಡಿಲ್ಲ. ಅನೇಕ ರಾಷ್ಟ್ರಗಳು ಕೆಲವು ಷರತ್ತುಗಳ ಮೇಲೆ ಈ ನ್ಯಾಯಸ್ಥಾನಕ್ಕೆ ಸೇರಿ ಇದರ ಬೆಳವಣಿಗೆಗೆ ಅಡ್ಡಿ ತಂದಿವೆ. ಅದಕ್ಕೂ ಹೆಚ್ಚಾಗಿ ನ್ಯಾಯಸ್ಥಾನದ ತೀರ್ಪುಗಳನ್ನು ಪರಿಪೂರ್ಣವಾಗಿ ಒಪ್ಪಿಕೊಂಡಿಲ್ಲ ಮತ್ತು ಅವುಗಳಿಗೆ ತೋರಿಸಬೇಕಾದ ಗೌರವವನ್ನು ಕೊಟ್ಟಿಲ್ಲ. ಈ ಕಾರಣಗಳಿಂದ ಈ ನ್ಯಾಯಸ್ಥಾನದ ಪಾತ್ರ ಕುಗ್ಗಿದೆ ಎಂದರೆ ತಪ್ಪೇನೂ ಇಲ್ಲ.

ಮಹಾ ಕಾರ್ಯದರ್ಶಿ ಮತ್ತು ಕಾರ್ಯಾಲಯ[12]

ವಿಶ್ವಸಂಸ್ಥೆಯ ಕಾರ್ಯನಿರ್ವಹಣೆಗೋಸ್ಕರ ಮತ್ತು ಆಡಳಿತ ಉಸ್ತುವಾರಿಗೋಸ್ಕರ ಒಬ್ಬ ಮಹಾಕಾರ್ಯದರ್ಶಿಯೂ ಕಾರ್ಯಾಲಯವೂ ಉಂಟು. ಮಹಾಕಾರ್ಯದರ್ಶಿ ಭದ್ರತಾಸಮಿತಿಯ ಶಿಫಾರಿಸಿನ ಮೇಲೆ ಮಹಾಸಭೆಯಿಂದ

---

[11] *Ibid.*, Chapter XIV
[12] *Ibid.*, Chapter XV

ಚುನಾಯಿತನಾಗುತ್ತಾನೆ. ಇವನಿಗೆ ಸಹಾಯಕರಾಗಿ ಅನೇಕ ಕಾರ್ಯದರ್ಶಿಗಳೂ ತಜ್ಞರೂ ಸಲಹೆಗಾರರೂ ಅಂತರರಾಷ್ಟ್ರೀಯ ಸೇವಾದಳವೂ ಉಂಟು.

ಮಹಾ ಕಾರ್ಯದರ್ಶಿಯೇ ವಿಶ್ವಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ವಿಶ್ವಶಾಂತಿ ಮತ್ತು ಭದ್ರತೆಗೆ, ಈತನ ಅಭಿಪ್ರಾಯದಲ್ಲಿ, ಧಕ್ಕೆ ಅಥವಾ ಅಪಾಯ ಉಂಟಾಗುವ ಸನ್ನಿವೇಶಗಳನ್ನು ಜಾಗ್ರತೆ ಭದ್ರತಾಸಮಿತಿಯ ಗಮನಕ್ಕೆ ತರುವುದು ಮತ್ತು ಅದರ ತೀರ್ಮಾನದಂತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದು ಮಹಾ ಕಾರ್ಯದರ್ಶಿಯ ಮುಖ್ಯ ಕರ್ತವ್ಯ. ವಿಶ್ವಸಂಸ್ಥೆಯ ಮಹಾಸಭೆ, ಭದ್ರತಾ ಸಮಿತಿ, ಆರ್ಥಿಕ ಮತ್ತು ಸಾಮಾಜಿಕಸಮಿತಿ ಮತ್ತು ನ್ಯಾಸಸಮಿತಿಗಳ ಸಮ್ಮೇಳನಗಳಲ್ಲಿ ಮತ್ತು ಅಧಿವೇಶನಗಳಲ್ಲಿ ಭಾಗವಹಿಸುವುದು, ಅವಕ್ಕೆ ಎಲ್ಲ ಸಹಕಾರ ನೀಡುವುದು ಮತ್ತು ಅವುಗಳ ತೀರ್ಮಾನಗಳನ್ನು ಕಾರ್ಯಗತ ಮಾಡುವುದು ಇವನ ಕರ್ತವ್ಯ. ವಿಶ್ವಸಂಸ್ಥೆಯ ಕಾರ್ಯನಿರ್ವಹಣೆ ಮತ್ತು ಆಡಳಿತದ ವಾರ್ಷಿಕ ವರದಿಯನ್ನು ಈತ ಮಹಾಸಭೆಗೆ ಪ್ರತಿವರ್ಷವೂ ಒಪ್ಪಿಸ ಬೇಕು. ಹಿಂದಿನ ಮಹಾ ಕಾರ್ಯದರ್ಶಿಗಳಾಗಿದ್ದ ಟ್ರಿಗ್ವೆ ಲಿ, ಹ್ಯಾಮರ್‌ಷೀಲ್ಡ್ ಮತ್ತು ಈಗಿನ ಮಹಾ ಕಾರ್ಯದರ್ಶಿ ಉ ಥಾಂಟ್ ಇವರು ವಿಶ್ವಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ಮಹತ್ತ್ವದ ಪಾತ್ರವಹಿಸಿ ಈ ಸ್ಥಾನಕ್ಕೆ ಗೌರವವನ್ನೂ ಹಿರಿಮೆಯನ್ನೂ ತಂದಿದ್ದಾರೆ. ಮಹಾ ಕಾರ್ಯದರ್ಶಿಯ ಸ್ಥಾನ, ಕಾರ್ಯ ಪರಿಪಾಲನೆ ಮತ್ತು ಪ್ರಾಮುಖ್ಯಗಳು ಈ ಸ್ಥಾನಕ್ಕೆ ಬರುವ ವ್ಯಕ್ತಿಗಳ ಮೇಲೆ ನಿಂತಿವೆಯೆಂದರೆ ತಪ್ಪಾಗಲಾರದು. ಮಹಾ ಕಾರ್ಯದರ್ಶಿ ಬಲಿಷ್ಠರಾಷ್ಟ್ರಗಳ ರಾಜಕೀಯ ಪ್ರಭಾವಕ್ಕೆ ಒಳಗಾಗದೆ ದಕ್ಷತೆಯಿಂದಲೂ ನಿಷ್ಪಕ್ಷಪಾತವಾಗಿಯೂ ಸೇವೆಮಾಡಿದಲ್ಲಿ ಸಂಸ್ಥೆಯ ಹೆಚ್ಚಿನ ಪ್ರಗತಿ ಸಾಧ್ಯ.

ಸಹಾಯಕ ಮತ್ತು ವಿಶೇಷ ಸಂಸ್ಥೆಗಳು

ವಿಶ್ವಸಂಸ್ಥೆಯ ಮೇಲ್ಕಂಡ ಅಂಗಗಳಿಗೆ ಸರಿಸಮಾನವಾದ ಮತ್ತು ಇನ್ನೂ ಉಪಯುಕ್ತವಾದ ಸಂಸ್ಥೆಗಳೆಂದರೆ ಸಹಾಯಕ ಮತ್ತು ವಿಶೇಷ ಸಂಸ್ಥೆಗಳು. ಈ ಸಂಸ್ಥೆಗಳು ವಿಶ್ವಸಂಸ್ಥೆಯ ಧ್ಯೇಯಸಾಧನೆಯಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಇವುಗಳಲ್ಲಿ ಮುಖ್ಯವಾದವು ಇವು: ಅಂತರರಾಷ್ಟ್ರೀಯ ಶಿಕ್ಷಣ, ವಿಜ್ಞಾನ ಮತ್ತು ಸಂಸ್ಕೃತಿ ಸಂಸ್ಥೆ (ಯುನೆಸ್ಕೊ) ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯು. ಎಚ್. ಓ.), ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐ.ಎಲ್.ಓ.), ಅಂತರರಾಷ್ಟ್ರೀಯ ಅಭಿವೃದ್ಧಿ ಮತ್ತು ಬೆಳೆವಣಿಗೆಯ ಬ್ಯಾಂಕ್ (ಐ.ಬಿ.ಆರ್.ಡಿ.), ಅಂತರರಾಷ್ಟ್ರೀಯ ಸಿವಿಲ್ ಏವಿಯೇಷನ್ ಸಂಸ್ಥೆ (ಐ.ಸಿ.ಎ.ಓ.), ಅಂತರರಾಷ್ಟ್ರೀಯ ಅಂಚೆ ಸಂಸ್ಥೆ (ಯೂ.ಪಿ.ಯೂ.) ವಿಶ್ವ ಹವಾಗುಣ ಸಂಸ್ಥೆ (ಡಬ್ಲ್ಯು.ಎಂ.ಓ.), ಅಂತರರಾಷ್ಟ್ರೀಯ ವ್ಯಾಪಾರ ಸಂಸ್ಥೆ (ಐ.ಟಿ.ಓ.), ಅಂತರರಾಷ್ಟ್ರೀಯ ಹಣ ನಿಧಿ (ಐ.ಎಂ.ಎಫ್.)

ಅಂತರರಾಷ್ಟ್ರೀಯ ಪರಮಾಣುಶಕ್ತಿ ಸಂಸ್ಥೆ(ಐ.ಎ.ಇ.ಎ.) ಮತ್ತು ಅಂತರರಾಷ್ಟ್ರೀಯ ಆಹಾರ ಮತ್ತು ಕೃಷಿ ಸಂಸ್ಥೆ (ಎಫ್.ಎ.ಓ.) ಈ ವಿವಿಧ ವಿಶೇಷ ಸಂಸ್ಥೆಗಳು ರಾಷ್ಟ್ರಗಳ ವಿವಿಧ ಕ್ಷೇತ್ರಗಳಲ್ಲಿ (ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ, ಸಾಂಸ್ಕೃತಿಕ, ಆರೋಗ್ಯ, ವಾಣಿಜ್ಯ, ಅಭಿವೃದ್ಧಿ ಮತ್ತು ಬೆಳವಣಿಗೆ, ಕೃಷಿ ಮತ್ತು ಆಹಾರ) ಹೆಚ್ಚು ಸಹಾಯಕವಾಗಿವೆ.[13] ಈ ಸಂಸ್ಥೆಗಳು ವಿವಿಧ ಕ್ಷೇತ್ರಗಳಲ್ಲಿ ಅಂತರರಾಷ್ಟ್ರೀಯ ಸಹಕಾರಕ್ಕೆ ಪ್ರೋತ್ಸಾಹ ನೀಡಿ ಮಾನವನ ಪ್ರಗತಿಗಾಗಿ ವಿಶ್ವದ ಐಕ್ಯವನ್ನು ಸಾಧಿಸುತ್ತ ಇವೆ. ಇವುಗಳ ಸಾಧನೆಗಳೇ ವಿಶ್ವಸಂಸ್ಥೆಗೆ ಹೆಚ್ಚು ಪ್ರಾಮುಖ್ಯ ತಂದಿವೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಯುದ್ಧಗಳು ನಿಂತ ಮಾತ್ರಕ್ಕೆ ವಿಶ್ವಶಾಂತಿ ಮತ್ತು ಲೋಕಕಲ್ಯಾಣ ಸಾಧ್ಯವಾಗುವುದಿಲ್ಲ. ಮಾನವನ ಮತ್ತು ರಾಷ್ಟ್ರಗಳ ಸರ್ವತೋಮುಖವಾದ ಪ್ರಗತಿಯಾದಲ್ಲಿ ಮಾತ್ರ ಇವು ಸಾಧ್ಯ. ಈ ನಂಬಿಕೆಯ ಮೇಲೆ ಈ ವಿಶೇಷ ಸಂಸ್ಥೆಗಳು ಸ್ಥಾಪಿತವಾಗಿ ಸೇವೆ ಸಲ್ಲಿಸುತ್ತಿವೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಈ ಸಹಾಯಕ ಮತ್ತು ವಿಶೇಷ ಸಂಸ್ಥೆಗಳು ನಾನಾ ಕ್ಷೇತ್ರಗಳಲ್ಲಿ ಎಷ್ಟೋ ಪ್ರಗತಿಯನ್ನು ಸಾಧಿಸಿದ್ದರೂ ಸಾಕಾದಷ್ಟು ಅಂತರರಾಷ್ಟ್ರೀಯ ಸಹಕಾರ ಪೂರ್ಣವಾಗಿ ಸಿಗುತ್ತಿಲ್ಲ. ಈ ವಿಶೇಷ ಸಂಸ್ಥೆಗಳಿಗೆ ವಿಶ್ವರಾಷ್ಟ್ರಗಳ ಹೆಚ್ಚಿನ ಸಹಾಯ ಮತ್ತು ಸಹಕಾರ ಸಿಕ್ಕಿದಲ್ಲಿ ಇವು ಇನ್ನೂ ಹೆಚ್ಚು ಸೇವೆಮಾಡಲು ಸಾಧ್ಯ.

---

[13] Gregg and Barkun, *The United Nations System and its Functions*, New York : Van Nostrand Reinhold, 1968

ವಿಶ್ವಸಂಸ್ಥೆಯ ಜನನವಾದದ್ದು ಯುದ್ಧದ ಫಲಶ್ರುತಿಯಾಗಿ. ಇದು ಯುದ್ಧ ನಿರತರ ಒಂದು ಪಕ್ಷ ಇನ್ನೊಂದು ಪಕ್ಷದ ಮೇಲೆ ಸಾಧಿಸಿದ ವಿಜಯವನ್ನು ಊರ್ಜಿತಗೊಳಿಸಲು ಕೈಕೊಂಡ ಪ್ರಯತ್ನ. ಸಂಸ್ಥೆಯ ದೌರ್ಬಲ್ಯಕ್ಕೆ ಇದೇ ಮುಖ್ಯ ಕಾರಣ. ಮೊದಲನೆಯದಾಗಿ, ಯಾವ ಶಕ್ತರಾಷ್ಟ್ರಗಳ ಸಂಯೋಗಕ್ಕೇ ಆಗಲಿ ಶಾಶ್ವತವಾಗಿ ತನ್ನ ಮೇಲೆ ಅಧಿಕಾರ ನಡಸಲು ವಿಶ್ವ ಸಮ್ಮತಿ ನೀಡುವುದು—ಈ ರಾಷ್ಟ್ರಗಳು ತಮ್ಮ ಸಹಯೋಗವನ್ನು ಸ್ಥಿರೀಕರಿಸುವಂಥ ಪರಿಸ್ಥಿತಿಯಿದ್ದಾಗ ಕೂಡ—ಸಾಧ್ಯವಿರಲಿಲ್ಲ. ಎರಡನೆಯದಾಗಿ, ಯುದ್ಧದಲ್ಲಿ ಸೋತವರನ್ನು ವಿಶ್ವ ಕುಟುಂಬದ ಸದಸ್ಯರಾಗಲು ಎಂದಾದರೊಂದು ದಿನ ಅರ್ಹರೆಂದು ಪರಿಗಣಿಸುವುದು ಅನಿವಾರ್ಯವಾಗಿತ್ತು. ಆದರೆ ಯಾವ ವ್ಯವಸ್ಥೆಯನ್ನು ಸ್ಥಿರೀಕರಿಸಲಾಗುತ್ತಿತ್ತೋ ಅದರ ಅಸ್ತಿಭಾರಕ್ಕೇ ಇದರಿಂದ ಅಪಾಯ ಒದಗುವುದಂತೂ ಖಂಡಿತವಾಗಿತ್ತು. ಸೋತ ಅಕ್ಷರಾಷ್ಟ್ರಗಳ ಪೈಕಿ ಇಟಲಿ ಆಸ್ಟ್ರಿಯಗಳನ್ನು ಪುರಸ್ಕರಿಸುವುದು ಹೆಚ್ಚು ಕಡಿಮೆ ಸುಸೂತ್ರವಾಯಿತು. ಜಪಾನಿನ ವಿಚಾರದಲ್ಲಿ ಸೋವಿಯತ್ ಒಕ್ಕೂಟ ಮತ್ತು ಅಮೆರಿಕ ಸಂಯುಕ್ತಸಂಸ್ಥಾನಗಳ ನಡುವೆ ವಿರಸ ಮೂಡಿತು. ಇವನ್ನು ಪರಿಹರಿಸಲಾಗಲಿಲ್ಲ. ಕಾರ್ಯತಃ ಏಕಮುಖವೆನಿಸಬಹುದಾದ ಶಾಂತಿಕೌಲಿಗೆ ಸಹಿ ಬಿತ್ತು. ಜರ್ಮನಿಗೆ ಮತ್ತೆ ಅಂತರರಾಷ್ಟ್ರೀಯ ಬಂಧುತ್ವವನ್ನು ಸೇರುವ ಹಕ್ಕು ದೊರಕಿಸಿಕೊಡುವ ಕಾರ್ಯ ಸಾಧಿಸುವುದಾಗಲಿಲ್ಲ.........ವಿಜಯೀ ಬೃಹದ್ರಾಷ್ಟ್ರಗಳ ಇಚ್ಛೆಯನ್ನು ವಿಶ್ವದ ಮೇಲೆ ಹೇರುವ ಪ್ರಯತ್ನದಿಂದಾಗಿ ಇವುಗಳ ನಡುವಣ ಘರ್ಷಣೆ ಇನ್ನೂ ಉತ್ಕಟವಾಗಿದೆ.[1]

—ಹೆಕ್ಟರ್ ಅಭಯವರ್ಧನ್

[1] United Nations, The Problem: *Seminar*, New Delhi, No. 31, March 1962, p. 11

ಶಾಂತ

ಕಾನೂನು ಮತ್ತು ಮತಿವಿಕಲತೆ

'ಭಾರತೀಯ ದಂಡಸಂಹಿತೆ'ಯಲ್ಲಿ 'ಅಪರಾಧ' (ಕ್ರೈಂ) ಎಂಬ ಪದದ ಅರ್ಥ ವಿವರಣೆ ಕಂಡುಬರುವುದಿಲ್ಲ. ಯಾವುದಾದರೊಂದು ಕೃತ್ಯಮಾಡಿದಾಗ ಅಥವಾ ಕರ್ತವ್ಯಲೋಪವಾದಾಗ (ಮಾಡಬೇಕಾದ ಕರ್ತವ್ಯವನ್ನು ಮಾಡದೆ ಬಿಟ್ಟಾಗ) ಸಮಾಜಕ್ಕೆ ಘಾತವೊದಗಿದರೆ ಅಂಥ ಕೃತ್ಯವೇ 'ಅಪರಾಧ' ಎಂಬುದು ದಂಡಸಂಹಿತೆಯ ೨ನೆಯ ಅಧ್ಯಾಯದಿಂದ ನಮಗೆ ಗೊತ್ತಾಗುತ್ತದೆ. ಆದರೆ ಸಮಾಜಕ್ಕೆ ಹಾನಿಕಾರಕವಾದ ಎಲ್ಲ ಕೃತ್ಯಗಳನ್ನೂ 'ಅಪರಾಧ'ದ ಸಾಲಿಗೆ ಸೇರಿಸಲಸಾಧ್ಯ. ಸಂಹಿತೆಯಲ್ಲಿ ನಮೂದಿಸಿದ ವಿಧಿಗಳ ಮೇರೆಗೆ ದಂಡಾರ್ಹ ಕೃತ್ಯಗಳನ್ನು ಮಾತ್ರ 'ಅಪರಾಧ'ವೆಂದು ಪರಿಗಣಿಸಬಹುದು. ಯಾವುದಾದ ರೊಂದು ಕೃತ್ಯ ಎಸಗಿದರೆ ಅಥವಾ ಯಾವುದಾದರೊಂದು ಕರ್ತವ್ಯಲೋಪ ವಾದಾಗ, ಅಂಥ ಕೃತ್ಯ ದಂಡಸಂಹಿತೆಯ ವಿಧಿಗಳಿಗನುಸಾರವಾಗಿ ಶಿಕ್ಷೆಗೆ ಅರ್ಹವಾದರೆ ಮಾತ್ರ ಅದನ್ನು 'ಅಪರಾಧ' ಎನ್ನಬಹುದು.

ಇಂಗ್ಲಿಷ್ ಅಪರಾಧ ನ್ಯಾಯದ ಪ್ರಕಾರ 'ಅಪರಾಧ'ವೆಂದು ಪರಿಗಣಿಸ ಬೇಕಾದರೆ ಅಂಥ ಕೃತ್ಯದೊಂದಿಗೆ ಅಪರಾಧಿಯ ಮನಸ್ಸು ವಿಲೀನವಾಗಿರಬೇಕು ಅಥವಾ ಸಮ್ಮಿಳಿತವಾಗಿರಬೇಕು; ಅಂದರೆ ಹಾನಿಕಾರಕವಾದ ಕೃತ್ಯಕ್ಕೆ ಉದ್ದೇಶ ಯುಕ್ತವಾದ ಮನಸ್ಸು (ಮೇನ್ಸ್ ರೀ) ಹೊಂದಿಕೊಂಡಿರಬೇಕು. ಅಪರಾಧಮಾಡುವ ತಪ್ಪುಉದ್ದೇಶ ಇಲ್ಲದಿದ್ದರೆ ಅದು ಶಿಕ್ಷೆಗೆ ಯೋಗ್ಯವಾದ ಅಪರಾಧವೆನಿಸುವುದಿಲ್ಲ. ಭಾರತೀಯ ನ್ಯಾಯಸಂಹಿತೆ 'ಅಪರಾಧ'ವನ್ನು ಅಷ್ಟೊಂದು ವಿಶಾಲ ನೋಟದಿಂದ ಪರಿಗಣಿಸುವುದಿಲ್ಲ.

ಮಾನವರ ಕೆಲವು ತರದ ವರ್ತನೆಗಳು ಅತ್ಯಂತ ಬೇಜವಾಬ್ದಾರಿಯಿಂದ ಕೂಡಿರುತ್ತವೆ ಎಂದು ಅಪರಾಧ ನ್ಯಾಯದಲ್ಲಿ ನಿರೂಪಿಸುವುದು ಮಾತ್ರವಲ್ಲದೆ ನಮ್ಮ ನಿತ್ಯ ಆಚರಣೆಯಲ್ಲೂ ಕಂಡುಬರುತ್ತದೆ. ಆಳವಾಗಿ ನೋಡಿದರೆ ಅಂಥ ಕೃತ್ಯಗಳನ್ನು 'ತಪ್ಪು ನಡೆವಳಿ' ಎಂದು ಕರೆಯಲು ಸಾಧ್ಯವಿಲ್ಲದ ಕಾರಣ ಅವು ದಂಡನೀಯ ಕಾರ್ಯವೆನಿಸುವುದಿಲ್ಲ. ತಪ್ಪೆನಿಸುವ ಕೃತ್ಯವನ್ನು ಆಪಾದಿತ ಎಂಥ ವಾತಾ

ಸರಣದಲ್ಲಿ, ಎಂಥ ಪರಿಸ್ಥಿತಿಯಲ್ಲಿ, ಯಾವ ಮನಃಸ್ಥಿತಿಯಲ್ಲಿ ಮಾಡಿದನೆಂದು ಪರಿಶೀಲಿಸುವಾಗ ಹಲವಾರು ಬಾರಿ ಅದು ನ್ಯಾಯಸಮ್ಮತವಾದ ರೀತಿಯಲ್ಲೇ ಮಾಡಿದುದಾಗಿ ತೋರಿ ಕಾನೂನಿನ ರಕ್ಷಣೆ ಪಡೆಯುತ್ತದೆ. ಕೆಲವೊಮ್ಮೆ ಯಾವ ಉದ್ದೇಶವಾಗಲೀ ಕಾರಣವಾಗಲೀ ಇಲ್ಲದೆ, ಕೆಲವೊಮ್ಮೆ ಬೇಜವಾಬ್ದಾರಿಯಿಂದ ಒಂದು ಕೃತ್ಯ ಅಥವಾ ಕೃತ್ಯಗಳನ್ನು ಒಬ್ಬ ಮಾಡಿದಾಗ ಅಥವಾ ಕರ್ತವ್ಯಲೋಪ ವಾದಾಗ ಅಂಥವನನ್ನು ಅಪರಾಧಿ ಎಂದು ಆರೋಪಿಸಿದರೂ ಸಂಹಿತೆಯ ೮೪ನೆಯ ಕಲಂ ಆತನಿಗೆ ರಕ್ಷಣೆ ನೀಡುತ್ತದೆ. ಮತಿವಿಕಲತೆ, ಉನ್ಮಾದ, ಹುಚ್ಚು ಅಥವಾ ಬುದ್ಧಿಭ್ರಮಣೆಯೆಂಬ ಎಲ್ಲ ಪದಗಳೂ ಒಂದೇ ಅರ್ಥವೀಯುವ ಹಾಗೂ ೮೪ನೆಯ ಕಲಮಿನ ರಕ್ಷಣೆಗೊಳಪಟ್ಟ ಮನುಷ್ಯನ ವಿಚಿತ್ರ ವರ್ತನೆ, ಇಂಥ ಮಾನವ ಒಂದು ರೀತಿಯ ಮನೋರೋಗಿಯಾಗಿರುತ್ತಾನೆ. ಇಂಥವನ ಮನಸ್ಸು ಅಸಾಮಾನ್ಯವಾಗಿದ್ದು ಅಂದರೆ ಅಸಹಜವಾಗಿದ್ದು ಈತ ತನ್ನ ಯಾವ ಕೃತ್ಯ (ಆಕ್ಟ್) ತಪ್ಪು (ರಾಂಗ್) ಹಾಗೂ ಯಾವ ಕೃತ್ಯ ಸರಿ (ರೈಟ್) ಎಂಬ ಆಲೋಚನಾಶಕ್ತಿ ಯನ್ನೇ ಕಳೆದುಕೊಂಡ ದುರ್ಬಲ ವ್ಯಕ್ತಿಯಾಗಿರುತ್ತಾನೆ. ತನ್ನ ಕೃತ್ಯಗಳ ಫಲಿತಾಂಶ ಸಮಾಜಕ್ಕೆ ಅಥವಾ ಇನ್ನೊಬ್ಬ ವ್ಯಕ್ತಿಗೆ ಹಾನಿಕಾರಕವಾಗಿದೆ ಎಂದು ಕೂಡ ತಿಳಿಯದಷ್ಟು ಉನ್ಮಾದಿಯೀತ; ಒಂದುವೇಳೆ ಸರಿ–ತಪ್ಪುಗಳ ವಿವೇಚನಾಶಕ್ತಿ ಯಿದ್ದರೂ ತನ್ನ ವಿಪರೀತ ಮನಃಪ್ರವೃತ್ತಿಯಿಂದಾಗಿ ಉಕ್ಕಿಬರುವ ಹಾನಿಕಾರಕ ಒತ್ತಡವನ್ನು ಹತ್ತಿಕ್ಕಲು ಆತ ಅಸಮರ್ಥನಾಗಿ ಅಂಥ ದುಷ್ಟಕೃತ್ಯವನ್ನೆಸಗಿರ ಬಹುದು. ಮನಃಪರಿಸ್ಥಿತಿಯ ಕೈಗೂಸಾದ ಇಂಥವನನ್ನು ೮೪ನೆಯ ಕಲಂ ದಂಡನೆ ಯಿಂದ ವಿನಾಯಿತಿಗೊಳಿಸಿರುವುದು ಯೋಗ್ಯವಾಗಿದೆ.

ಮೇಲೆ ಹೇಳಿದಂಥ ಮತಿವಿಕಲರ ಅಪರಾಧವನ್ನು ಮನ್ನಿಸಿ ಅಂಥವರನ್ನು ಶಿಕ್ಷೆಯಿಂದ ವಿನಾಯಿತಿಗೊಳಿಸುವುದನ್ನು ಇಂಗ್ಲಿಷ್ ಮತ್ತು ಅಮೆರಿಕನ್ ದಂಡ ಶಾಸನವಲ್ಲೂ ಕಾಣಬಹುದು. 'ಮೆಕ್ ನಾಟನ್ ನಿಯಮಗಳು' (ಮೆಕ್ ನಾಟನ್ ರೂಲ್ಸ್) ಇದಕ್ಕೆ ಬುನಾದಿ. ಭಾರತದ ದಂಡಸಂಹಿತೆಯ ೮೪ನೆಯ ಕಲಂ ಈ ನಿಯಮಗಳ ಸಾರಸತ್ತ್ವವಾಗಿದೆ. ಆಪಾದಿತ ಮತಿವಿಕಲನಾಗಿದ್ದರೆ ಅಂಥವನ ಅಪರಾಧವನ್ನು ದಂಡಸಂಹಿತೆ ಸಂಪೂರ್ಣ ಮನ್ನಿಸಿ ಶಿಕ್ಷೆಗೆ ಯೋಗ್ಯವಲ್ಲವೆಂದು ರಕ್ಷಣೆಯನ್ನೀಯುವುದು 'ಮೆಕ್ ನಾಟನ್ ನಿಯಮ'ಗಳ ಆಧಾರದ ಮೇಲೆ.

ಮತಿವೈಕಲ್ಯ ಪದದ ಅರ್ಥ ಮತ್ತು ನ್ಯಾಯಾಲಯದ ಕರ್ತವ್ಯ

ನಮ್ಮ ದಂಡಸಂಹಿತೆಯ ೮೪ನೆಯ ಕಲಂ ಮತಿವೈಕಲ್ಯದ ಬಗ್ಗೆ ಈ ರೀತಿ ಹೇಳು ತ್ತದೆ: "ಮನಸ್ಸಿನ ಅಸ್ವಸ್ಥತೆಯ (ಅನ್‌ಸೌಂಡ್‌ನೆಸ್ ಆಫ್ ಮೈಂಡ್) ಕಾರಣ ದಿಂದಾಗಿ ಯಾವಾತನಿಗೆ ತಾನು ಒಂದು ಕ್ರಿಯೆ ಮಾಡುವಾಗ ಆ ಕ್ರಿಯೆ ತಪ್ಪು ಅಥವಾ ಕಾನೂನಿಗೆ ವಿರೋಧ ಎಂಬ ಅದರ ಸ್ವಭಾವವನ್ನು ತಿಳಿಯುವ ಸಾಮರ್ಥ್ಯ

ಪಿಲ್ಲವೋ ಅಂಥವನು ಮಾಡಿದ ಯಾವ ಕ್ರಿಯೆಯೂ ತಪ್ಪು ನಡೆವಳಿ ಅಥವಾ ಅಪಚಾರ ಎಂದೆನಿಸುವುದಿಲ್ಲ" (ಭಾರತೀಯ ದಂಡಸಂಹಿತೆ, ಕಲಂ ೮೪).

ಕಾನೂನಿನಲ್ಲಿ ಉನ್ಮಾದ ಅಥವಾ ಮತಿವೈಕಲ್ಯ ಎಂದು ಎಲ್ಲಿಯೂ ಹೇಳಿಲ್ಲ; ಮನಸ್ಸಿನ ನ್ಯೂನತೆ ಅಥವಾ ಚಿತ್ತದ ಅಸ್ವಾಸ್ಥ್ಯ ಎಂಬ ಪದ ಉಪಯೋಗಿಸಲ್ಪಟ್ಟಿದೆ. ಒಂದು ಕ್ರಿಯೆಯನ್ನು ಮಾಡುವಾಗ ಆತನಿಗೆ ಗ್ರಹಣಶಕ್ತಿಯು ಕೊರತೆ ಇರಬೇಕು, ಆ ಕೊರತೆಯಿಂದಾಗಿ ತಾನೆಸಗುವ ಕೃತ್ಯದ ಸ್ವಭಾವದ ಅರಿವಿಲ್ಲದಿರಬೇಕು ಮತ್ತು ಅಂಥ ಕೃತ್ಯ ಅನ್ಯಾಯವಾದ್ದು **ಅಥವಾ** (ಅಥವಾ ಎಂಬುದು ಇಲ್ಲಿ ಮುಖ್ಯ) ಕಾನೂನುಬಾಹಿರವಾದ್ದೆಂದು ಆತನಿಗೆ ಅರಿವಿರಬಾರದು. ನೆನಪಿಡಬೇಕಾದ ಇನ್ನೊಂದು ವಿಚಾರವೆಂದರೆ ಅಂಥವನಿಗೆ ತಾನು ಮಾಡಿದ ಕೃತ್ಯ ಅನ್ಯಾಯವಾದ್ದೆಂದು ಮಾತ್ರ ತಿಳಿದು ಅದು ಕಾನೂನಿಗೆ ವಿರೋಧವಾದ್ದೆಂದು ತಿಳಿದಿರದಿದ್ದರೂ ಆತನಿಗೆ ೮೪ನೆಯ ಕಲಂ ಆಶ್ರಯಕೊಡುವುದಿಲ್ಲ; ಮಾತ್ರವಲ್ಲ, ಆ ಕ್ರಿಯೆ ಕಾನೂನಿಗೆ ವಿರೋಧವಾದುದೆಂದು ಮಾತ್ರ ತಿಳಿದು ಅದು ಅನ್ಯಾಯದ್ದು ಎಂದು ತಿಳಿದಿರದಿದ್ದರೂ ಅಂಥವನು ಶಿಕ್ಷೆಗೆ ಯೋಗ್ಯನೇ. ಆದ್ದರಿಂದ ಈ ಎರಡರಲ್ಲಿ ಒಂದರ ಅರಿವಿದ್ದರೆ ಸಾಕು; ಆತನಿಗೆ ಗ್ರಹಣಶಕ್ತಿ ಇತ್ತೆಂದು ರುಜುಪಡಿಸಿ ಕಾಯಿದೆಯ ಪ್ರಕಾರ ಕ್ರಮ ಕೈಗೊಳ್ಳುವುದು ಸಾಧ್ಯ. ಆಪಾದಿತ ಅಪಚಾರ ಎಸಗಿದಾಗ ಮತಿವೈಕಲ್ಯಕ್ಕೊಳಗಾಗಿದ್ದನೇ ಎಂದು ತಿಳಿಯಬೇಕಿದ್ದರೆ ಆಪಾದಿತನ ಪೂರ್ವ ಹಾಗೂ ಅನಂತರದ ಗುಣ, ಸ್ವಭಾವ, ಆತನ ಪೂರ್ವ ಇತಿಹಾಸ, ಕುಟುಂಬ ಚರಿತ್ರೆ ಇತ್ಯಾದಿಗಳ ಬಗ್ಗೆ ನ್ಯಾಯಾಲಯ ವಿವರವಾಗಿ ತಿಳಿಯುವುದು ಉತ್ತಮ. ಅಪರಾಧದ ಮೊದಲು, ಅಪರಾಧದ ಅನಂತರ ಹಾಗೂ ಅಪರಾಧ ಮಾಡುವಾಗ ಆಪಾದಿತನ ಮನಃಸ್ಥಿತಿಯನ್ನು ಪರೀಕ್ಷಿಸಬೇಕಾದ್ದು ಬಹು ಮುಖ್ಯ ವಿಚಾರ. ಅಪರಾಧದ ಮೊದಲು ಆತನ ಮನಃಸ್ಥಿತಿ ಹೇಗಿದ್ದಿರಬಹುದು ಎಂಬುದನ್ನು ತಿಳಿಯಬೇಕಾದರೆ ಆತನ ಅಪರಾಧ ಪೂರ್ವಕಾಲದ ಇತಿಹಾಸ ಏನಾದರೂ ಉದ್ದೇಶವಿದ್ದರೆ ಅದರ ಕಾರಣ, ಅಥವಾ ಉದ್ದೇಶವಿತ್ತೋ ಇಲ್ಲವೋ ಎಂಬ ವಿಚಾರ, ಅಪರಾಧವೆಸಗಿದ ಕೂಡಲೇ ಆತನ ವರ್ತನೆ, ಅಪರಾಧ ಕೃತ್ಯಕ್ಕೆ ಮಾಡಿದ ತಯಾರಿ, ಪೂರ್ವಹಂಚಿಕೆ ಹಾಗೂ ಪೂರ್ವವ್ಯವಸ್ಥೆ ಇವುಗಳನ್ನೆಲ್ಲ ಆಲೋಚಿಸಬೇಕಾಗುವುದು. ಅಪರಾಧ ಕೃತ್ಯ ಮಾಡಿದ ಅನಂತರದ ಆತನ ವರ್ತನೆ, ಸ್ವಭಾವ, ನಡೆವಳಿ ಹಾಗೂ ಗುಣನಡತೆ ಇತ್ಯಾದಿ ವಿಮರ್ಶಿಸಿದರೆ ಅದರಿಂದಲೂ ಆಪಾದಿತನ ಮನಃಸ್ಥಿತಿ ತಿಳಿಯಬಹುದು. ಅಪರಾಧದ ಸ್ವಭಾವ, ಅದನ್ನು ಮಾಡಿದ ರೀತಿ, ಮಾಡುವಾಗಿನ ಆಪಾದಿತನ ಸ್ವಭಾವ ಇವನ್ನು ಪರಿಶೀಲಿಸಿದರೆ ಆಪಾದಿತನ ಸಂಪೂರ್ಣ ಮನಃಸ್ಥಿತಿಯು ಸ್ವಭಾವಪರಿಚಯವಾಗುವುದಕ್ಕೆ ಸಂಶಯವಿಲ್ಲ. ಈ ವಿಚಾರಗಳನ್ನು ನ್ಯಾಯಾಲಯ ಮುಖ್ಯವಾಗಿ ಗಮನಿಸಬೇಕು.

ಕಾಯಿದೆಯಲ್ಲಿ ಹೊಣೆಗಾರಿಕೆ

ಟೇಲರನ 'ವೈದ್ಯಕೀಯ ನ್ಯಾಯಸೂತ್ರ ಮತ್ತು ಆಚರಣೆ'ಯ ಪ್ರಕಾರ ಮತಿ ವಿಕಲನ ಹೊಣೆಗಾರಿಕೆಯನ್ನು ಎರಡು ಪಂಗಡವಾಗಿ ವಿಂಗಡಿಸಲಾಗಿದೆ:

I ಪೌರ ಹೊಣೆಗಾರಿಕೆ ಮತ್ತು II ದಂಡಾರ್ಹ ಹೊಣೆಗಾರಿಕೆ.

ಟೇಲರನ ಪ್ರಕಾರ ಪೌರ ಹೊಣೆಗಾರಿಕೆಯನ್ನು ಕೆಳಗೆ ಹೇಳಿದಂತೆ ಬೇರೆ ಬೇರೆ ದೃಷ್ಟಿಯಿಂದ ವೀಕ್ಷಿಸಬಹುದು:

I 1 ಮತಿವೈಕಲ್ಯ, ವಿವಾಹ, ಮನಸ್ಸಿನ ಕುಂದು ಅಥವಾ ಕೊರತೆ

ಇಂಗ್ಲಿಷ್ ಕಾಯಿದೆಯ ಪ್ರಕಾರ ವಿವಾಹವೆಂಬುದು ಒಂದು ಸಾಮಾನ್ಯ ಕರಾರಿಗಿಂತ ಸ್ವಲ್ಪ ಮೇಲ್ಪಟ್ಟದ್ದು. ಏಕೆಂದರೆ ಸಾಮಾನ್ಯ ಕರಾರಿಗೂ ವಿವಾಹ ಕರಾರಿಗೂ ಸ್ಥಾನಮಾನದಲ್ಲಿ ತುಸು ಅಂತರವಿದೆ. ಭಾರತದಲ್ಲಿ ವಿವಾಹ ಒಂದು ಧಾರ್ಮಿಕ ಸ್ಥಾನವನ್ನೂ ಅತ್ಯಂತ ಗೌರವ ಮನ್ನಣೆಯನ್ನೂ ಪಡೆದು ಇಂಗ್ಲಿಷ್ ಪದ್ಧತಿಯ ಕರಾರಿನ ವಿವಾಹದ ರೀತಿನೀತಿಗಳಿಗೆ ಭಿನ್ನವಾಗಿದೆ. ಅಲ್ಲಿಯ ಕೆಲವು ಕಾಯಿದೆಗಳಿಗೂ ನಮ್ಮ ಕಾಯಿದೆಗಳಿಗೂ ಅಜಗಜಾಂತರವಿದ್ದರೂ ಕೆಲವು ವಿಚಾರಗಳಲ್ಲಿ ಬಹಳ ಸಾಮ್ಯತೆ ಇದೆ.

ಕರಾರಿನ ಒಪ್ಪಂದಕ್ಕೆ ಅಗತ್ಯವಾಗಿ ಬೇಕಾದ ಘಟಕಗಳಲ್ಲಿ ನಿರುಪಾಧಿಕ ಸಮ್ಮತಿ (ಫ್ರೀ ವಿಲ್) ಒಂದು. ಆದರೆ ಇಂಥ ಅಗತ್ಯಸಮ್ಮತಿಯನ್ನು ಕೊಡಲು ಮತಿವಿಕಲನಾದವನು ಅಸಮರ್ಥನಾದ ಕಾರಣ ಅಂಥ ಕರಾರು ಕಾನೂನು ಪ್ರಕಾರ ಮಾನ್ಯವಲ್ಲ. ಆದಕಾರಣ ಅಂಥ ಕರಾರು ಕಾನೂನಿನಲ್ಲಿ ನಿರರ್ಥಕ ಹಾಗೂ ಶೂನ್ಯ (ನಲ್ ಅಂಡ್ ವಾಯ್ಡ್). ಕಾಯಿದೆಗೆ ಅನುಗುಣವಾಗಿ ಅಂಥ ವಿವಾಹವನ್ನು ರದ್ದುಮಾಡಲಾಗುತ್ತದೆ. ಆದರೆ ವಿವಾಹ ಕರಾರಿಗೊಳಗಾದ ಮಾನವ ಮತಿವಿಕಲನಾಗಿದ್ದನೆಂದು ರುಜುವಾತು ಮಾಡಬೇಕು. ಮನದ ದುರ್ಬಲತೆ, ತಾತ್ಕಾಲಿಕ ಭ್ರಾಂತಿ ಮುಂತಾದವು ವಿವಾಹವಿಚ್ಛೇದನಕ್ಕೆ ಕಾರಣವಾಗಲಾರವು. ಮತಿವಿಕಲರು ಸಮ್ಮತಿ ಕೊಡಲು ಅಸಮರ್ಥರು ಹಾಗೂ ವಿವಾಹದ ಉದ್ದೇಶವಾದ ಪ್ರಾಕೃತಿಕ ಗುರಿಯನ್ನು ಸಾಧಿಸಲು ಅಸಮರ್ಥರು ಎಂಬುದೇ ಮುಖ್ಯ ಕಾರಣ. ಆದ್ದರಿಂದ ಉನ್ನತಮಟ್ಟದ ಮತಿವೈಕಲ್ಯ ಮಾತ್ರ ವಿವಾಹವಿಚ್ಛೇದನಕ್ಕೆ ಹೇತುವಾಗುವುದು. ವಿವಾಹವಿಚ್ಛೇದನದ ಅರ್ಜಿಗೆ ಮಾನ್ಯತೆ ಸಿಗಬೇಕಾದರೆ ಎರಡು ಮುಖ್ಯ ಪುರಾವೆಗಳ ರುಜುವಾತಾಗಬೇಕು. ವೈದ್ಯಕೀಯ ಚಿಕಿತ್ಸೆಯಿಂದ ಮತಿವಿಕಲತೆಯನ್ನು ಗುಣಪಡಿಸುವುದು ಅಸಾಧ್ಯವಾಗಿರಬೇಕು. ಅರ್ಜಿ ಕೊಡುವ ದಿನಕ್ಕೆ ಐದು ವರ್ಷಗಳ ಹಿಂದಿನಿಂದ ಎಡೆಬಿಡದೆ ಚಿಕಿತ್ಸೆ ನಡೆಯುತ್ತಿದ್ದೂ ಇದು ಗುಣವಾಗದಂತಿರಬೇಕು.

ಭಾರತೀಯ ಕಾಯಿದೆಯಲ್ಲಿ ಮೇಲೆ ಹೇಳಿದ ಇಂಗ್ಲಿಷ್ ಕಾನೂನಿಗಿಂತ ಸ್ವಲ್ಪ ವ್ಯತ್ಯಾಸವಿದೆ. ನಮ್ಮ ನ್ಯಾಯಾಲಯಗಳು ವಿವಾಹವಿಯೋಗ ಅಥವಾ ನ್ಯಾಯಾಜ್ಞೆಯ ಪ್ರಕಾರ ಪ್ರತ್ಯೇಕ ವಾಸ (ಜುಡಿಷಿಯಲ್ ಸೆಪರೇಷನ್) ಮತ್ತು ವಿವಾಹವಿಚ್ಛೇದನಕ್ಕೆ ಆಜ್ಞೆ ಕೊಡುವಾಗ ಬಹಳ ಜಾಗರೂಕತೆ ವಹಿಸುತ್ತವೆ. ೧೯೫೫ರ ಹಿಂದೂ ವಿವಾಹಕಾಯಿದೆಯ ೧೦(೧) ಮತ್ತು ೧೩(೧)ನೆಯ ಕಲಂಗಳು ಅಸ್ವಸ್ಥ ಮನದ ವಿವಾಹಿತರ ಬಗ್ಗೆ ತಿಳಿಸುತ್ತವೆ. ವಿವಾಹ ವಿಯೋಗ ಮತ್ತು ವಿವಾಹ ವಿಚ್ಛೇದನಕ್ಕೆ ಪತಿಯೂ ಪತ್ನಿಯೂ ಅರ್ಜಿ ಸಲ್ಲಿಸಬಹುದು. ಅರ್ಜಿ ಕೊಡುವಾತ ಅಥವಾ ಕೊಡುವಾಕೆ ಅರ್ಜಿದಾರನಾ(ಳಾ)ದರೆ ಯಾರ ಮೇಲೆ ಅರ್ಜಿ ಕೊಟ್ಟಿದೆಯೋ ಆತ(ಕೆ) ಪ್ರತಿವಾದಿ ಕಲಂ ೧೦ (೧)ರ ಪ್ರಕಾರ ಅಸ್ವಸ್ಥಮನದ ಕಾರಣಕ್ಕಾಗಿ ವಿವಾಹವಿಯೋಗದ ಆಜ್ಞೆ ಕೋರಿದರೆ ಅರ್ಜಿದಾರ ಅಥವಾ ಅರ್ಜಿ ದಾರಿಣಿ ಅರ್ಜಿಯ ತಾರೀಕಿನ ದಿನದವರೆಗೆ ಎರಡು ವರ್ಷಗಳಿಂದ ಪ್ರತಿವಾದಿ **ಎಡೆಬಿಡದೆ** ಅಸ್ವಸ್ಥಮನದಿಂದ ಬಳಲುತ್ತಿದ್ದನೆಂ(ಳೆಂ)ದು ರುಜುವಾತುಪಡಿಸುವುದು ಅಗತ್ಯ. ೧೩ (೧)ರ ಪ್ರಕಾರ ವಿವಾಹ ವಿಚ್ಛೇದನಕ್ಕೆ ಅರ್ಜಿಸಲ್ಲಿಸಿದಾಗ ಪ್ರತಿವಾದಿ ಅರ್ಜಿ ತಾರೀಕಿನ ದಿನದ ತನಕ ಎಡೆಬಿಡದೆ ಮೂರು ವರ್ಷಗಳಿಂದ, ಚಿಕಿತ್ಸೆಯಿಂದ **ಗುಣಪಡಿಸಲಾಗದಂಥ** ಮನೋವ್ಯಾಧಿಯಿಂದ ಬಳಲುತ್ತಿದ್ದಿರಬೇಕು. ಕಲಂ ೧೦ (೧)ರ ಪ್ರಕಾರ 'ಎಡೆಬಿಡದೆ ಎರಡು ವರ್ಷದಿಂದ' ಎಂಬುದು ಪ್ರಮುಖವಾದರೆ ಕಲಂ ೧೩(೧)ರ ಪ್ರಕಾರ 'ಚಿಕಿತ್ಸೆಯಿಂದ ಗುಣಪಡಿಸಲಾರದಂಥ' ಹಾಗೂ 'ಮೂರು ವರ್ಷ' ಎಂಬುದು ಮುಖ್ಯವಾದ ವಿಷಯ. ಕಲಂ ೧೧ರ ಪ್ರಕಾರ ವಿವಾಹದ ಸಮಯದಲ್ಲಿ ವರ ಅಥವಾ ವಧು ಅಸ್ವಸ್ಥ ಮನದವರಾಗಿದ್ದರೆ ಅಂಥ ವಿವಾಹ ಶೂನ್ಯವೆನಿಸುತ್ತದೆ. ವಿವಾಹ ಕಾಲದಲ್ಲಿ ವರ ಅಥವಾ ವಧು ಹೆಡ್ಡ ಅಥವಾ ಹುಚ್ಚನಾ(ಳಾ)ಗಿದ್ದರೆ ೧೨ನೆಯ ಕಲಂ ಪ್ರಕಾರ ಅಂಥ ವಿವಾಹವನ್ನು ನ್ಯಾಯಾಲಯದ ತೀರ್ಪಿನ ಮೂಲಕ ರದ್ದುಗೊಳಿಸಬಹುದು.

೧೯೫೬ರ 'ಹಿಂದೂ ದತ್ತು ಸ್ವೀಕಾರ, ಜೀವನಾಂಶ ಮತ್ತು ಪೋಷಣೆ ಕಾಯಿದೆ'ಯ (ಹಿಂದೂ ಅಡಾಪ್ಷನ್ಸ್ ಅಂಡ್ ಮೇಂಟೆನೆನ್ಸ್ ಆಕ್ಟ್) ೫–೮ನೆಯ ಕಲಂಗಳಲ್ಲಿ ದತ್ತುಸ್ವೀಕಾರ ನ್ಯಾಯಬದ್ಧವಾಗಿರಬೇಕಾದರೆ ಯಾವ ಅರ್ಹತೆಯಿರಬೇಕೆಂದು ಸೂಚಿಸುವಾಗ ದತ್ತು ಸ್ವೀಕರಿಸುವವನು(ಳು) ಹುಚ್ಚ ಮತ್ತು ಪೆದ್ದನಾ(ಳಾ)ಗಿರಬಾರದು ಎಂಬುದಕ್ಕೂ ಪ್ರಾಮುಖ್ಯವಿದೆ. ಸ್ವಲ್ಪಮಟ್ಟಿಗೆ ತಿಳಿವಳಿಕೆಯ ಜ್ಞಾನವಿರುವಾಗ ದತ್ತು ಸ್ವೀಕರಿಸಿದರೆ ಅದು ಶೂನ್ಯವಾಗಲಾರದು. ಗ್ರಹಣಶಕ್ತಿ ಇತ್ತೆಂದು ರುಜುವಾತುಪಡಿಸುವ ಭಾರ ದತ್ತುಸ್ವೀಕರಣೆ ನ್ಯಾಯಬದ್ಧವಾಗಿದೆ ಎನ್ನುವವರ ಮೇಲಿದೆ. ಒಬ್ಬಾತ ಮತಿವಿಕಲನೆಂದು ತೀರ್ಮಾನಿಸಿ ನ್ಯಾಯಾಲಯ ಆತನ ದೇಹ ಹಾಗೂ ಸ್ವತ್ತಿನ ರಕ್ಷಣೆಗಾಗಿ ರಕ್ಷಕನ(ಳ) ನೇಮಕವಾಡಿದ್ದರೂ ಆ ಒಂದೇ ಕಾರಣಕ್ಕಾಗಿ ಆತನ ದತ್ತುಸ್ವೀಕರಣೆ ಶೂನ್ಯವೆನಿಸಲಾರದು. ಪತಿ

ಮತಿವಿಕಲನಾಗಿದ್ದರೆ ಆತನ ಜೀವಿತಕಾಲದಲ್ಲಿ ದತ್ತು ಸ್ವೀಕರಿಸುವ ಅರ್ಹತೆಯಿಲ್ಲ. ಏಕೆಂದರೆ ಕಾನೂನು ಪ್ರಕಾರ ಪತಿ ಮರಣಿಸಿಲ್ಲ. ಆದ ಕಾರಣ ಪತ್ನಿ ದತ್ತು ಸ್ವೀಕರಣೆ ಮಾಡಿದಲ್ಲಿ ಪತಿ ತನ್ನ ಅರಿವಿನ ಶಕ್ತಿಪಡೆದಾಗ ದತ್ತು ಸ್ವೀಕರಿಸುವ ಹಕ್ಕಿನಿಂದ ವಂಚಿತನಾಗಬಹುದೆಂಬುದೇ ಮುಖ್ಯ ಕಾರಣ. ಪತಿ ದತ್ತು ಸ್ವೀಕರಿಸುವಾಗ ಪತ್ನಿಯ ಸಮ್ಮತಿ ಆವಶ್ಯಕ, ಆದರೆ ನ್ಯಾಯಾಲಯ ಆಕೆಯನ್ನು ಮತಿವಿಕಲೆಯೆಂದು ಗಣಿಸಿದ್ದರೆ ಆಕೆಯ ಸಮ್ಮತಿ ಅನಗತ್ಯ.

ಹಿಂದೂ ಕಾಯಿದೆಯ ಪ್ರಕಾರ ಆಸ್ತಿಯಲ್ಲಿ ಹಕ್ಕುಳ್ಳ ಹುಚ್ಚರು ಹಾಗೂ ಪೆದ್ದರು ಪಾಲು ಕೇಳಲು ಅನರ್ಹರು. ಆದರೆ ಅಂಥವರು ಗುಣಪಡಿಸದ ಮನೋವ್ಯಾಧಿಗೆ ಈಡಾದವರಾಗಿರಬೇಕು. ಪಾಲು ಕೇಳುವ ಹಕ್ಕಿನಿಂದ ಚ್ಯುತರಾದರೂ ಪೋಷಣೆಯ ಹಕ್ಕಿಗೆ ಅಂಥವರೂ ಬಾಧ್ಯರೇ. ಪಾಲಾದ ಅನಂತರ ಕುಟುಂಬದಲ್ಲಿ ಜನಿಸಿದ ಮಕ್ಕಳಿಗೆ ಪಾಲಿನಲ್ಲಿ ಯಾವ ಹಕ್ಕಿರುವುದೋ ಅದೇ ಹಕ್ಕು ಚಿಕಿತ್ಸೆಯಿಂದ ಗುಣವಾದ ಹುಚ್ಚ ಅಥವಾ ಹೆಡ್ಡನಿಗೂ ಇರುತ್ತದೆ.

I 2 ಉಯಿಲಿನ ವಿಧಾಯಕ ಶಕ್ತಿ, ಗ್ರಹಣಶಕ್ತಿ

ಉಯಿಲು ಬರೆದಾತ ತನ್ನ ಆತ್ಮೀಯರಿಗೆ ಅಥವಾ ನಿಕಟಬಂಧುಗಳಿಗೆ ಅಥವಾ ನಿಜವಾದ ಹಕ್ಕುದಾರರಿಗೆ ಸ್ವತ್ತುಗಳನ್ನು ಸಹಜವಾಗಿ ವಿನಿಯೋಗ ಮಾಡಿದಲ್ಲಿ ಯಾವೊಂದು ಸಂಶಯಕ್ಕೂ ಆಸ್ಪದವಿರುವುದಿಲ್ಲ. ಒಬ್ಬ ತಂದೆ ಸಾಯುವಾಗ ಆತನ ಹೆಂಡತಿಮಕ್ಕಳಿಗೆ ಸ್ವತ್ತುಗಳನ್ನು ವಿನಿಯೋಗಿಸಿದರೆ ಅದರಲ್ಲಿ ಅಸಹಜವಾದುದೇನೂ ಇಲ್ಲ. ಆದರೆ ಹೆಂಡತಿಮಕ್ಕಳಿರುವಾಗ (ಅದೂ ಹಕ್ಕುಳ್ಳವರಾಗಿರುವಾಗ) ದೂರದ ಸಂಬಂಧಿಗೆ ಅಥವಾ ಇನ್ನಿತರ ಕಾರ್ಯಕಲಾಪಗಳಿಗಾಗಿ ಎಲ್ಲ ಸ್ವತ್ತುಗಳ ವ್ಯವಸ್ಥೆ ಮಾಡಿದಲ್ಲಿ ಆಗ 'ಈ ಅಸಹಜತೆಗೆ ಕಾರಣವೇನು?' ಎಂಬ ಸಂಶಯಾತ್ಮಕ ಪ್ರಶ್ನೆ ಬಂದೇ ಬರುತ್ತದೆ. ಉಯಿಲು ಬರೆದಾತ ಯಾವುದಾದರೊಂದು ಅಸಹಜ ರೀತಿಯಲ್ಲಿ ತನ್ನ ಸ್ವತ್ತುಗಳನ್ನು ವಿನಿಯೋಗಿಸಿದಲ್ಲಿ ಆಗ ಆತನ ನೆಂಟರಿಷ್ಟರು ಅಥವಾ ಬಂಧುಬಳಗ, ಅಂಥ ಮೃತ್ಯುಪತ್ರವನ್ನು ಅಲ್ಲಗಳೆಯುವುದಕ್ಕಾಗಿ, ಬರೆದಾತ ಮರಣಶಯ್ಯೆಯಲ್ಲಿದ್ದ ಕಾರಣ ಭ್ರಾಂತಿಯಿಂದ ಅಥವಾ ಮನೋವೈಕಲ್ಯದಿಂದ ತನ್ನ ಗ್ರಹಣಶಕ್ತಿಯನ್ನೇ ಕಳೆದುಕೊಂಡಿದ್ದನೆಂದೂ ಅಂಥವನ ಉಯಿಲಿಗೆ ಕಾನೂನು ಪ್ರಕಾರ ಮನ್ನಣೆ ಕೊಡಬೇಕಾಗಿಲ್ಲವೆಂದೂ ವಾದಿಸಬಹುದು. ಯಾವಾತನೇ ಇರಲಿ, ಉಯಿಲು ಬರೆಯುವಾಗ ಆತನ ಮನಸ್ಸು ಸ್ತಿಮಿತದಲ್ಲಿದ್ದು ಸ್ವತ್ತನ್ನು ವಿನಿಯೋಗಿಸುವಂಥ ಜ್ಞಾನಶಕ್ತಿ ಅಥವಾ ಆಲೋಚನಾ ಶಕ್ತಿ ಒಬ್ಬ ನಿರೋಗಿಯಾದ (ಮಾನಸಿಕವಾಗಿ) ಸಾಮಾನ್ಯ ಜ್ಞಾನಿಗೆ ಇರುವ ಮಟ್ಟದಲ್ಲಿರಬೇಕಾಗಿರುವುದು ಬಹು ಮುಖ್ಯವಾದ ವಿಷಯವಾಗಿದೆ. ಉಯಿಲು ಬರೆಯುವಾಗ ಬರೆದಾತನ ಮನಃಸ್ಥಿತಿ ಹೇಗಿತ್ತು, ಬರೆಯುವಾಗ ಆತನಿಗೆ ತನ್ನ

ಸ್ವತ್ತಿನ ಸ್ಥಿತಿಗತಿಯ ಅರಿವಿತ್ತೆ, ತನ್ನ ಆಸ್ತಿಯ (ಚಿರ ಮತ್ತು ಚರಸ್ವತ್ತು) ಸ್ವರೂಪ ಹಾಗೂ ಮೌಲ್ಯ, ಆದಾಯಸಂದಾಯ, ಸಾಲಮೂಲಗಳ ತಿಳಿವಳಿಕೆ ಹಾಗೂ ತನ್ನನ್ನೇ ಆಧಾರವೆಂದು ನಂಬಿ ಬದುಕಿರುವ ಅವಲಂಬಿಗಳ ಯುಕ್ತವಾದ ಹಕ್ಕುಗಳ ಭದ್ರತೆಯ ಗ್ರಹಣಶಕ್ತಿ ಇತ್ಯಾದಿ ಹೇಗಿದ್ದುವು ಎಂಬುದೇ ಗಮನೀಯ ವಿಷಯಗಳು. ಉಯಿಲು ಬರೆದಾತ ಬೇರೆ ಬೇರೆ ವಾತಾವರಣಗಳಲ್ಲಿ ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಹೇಗಿದ್ದ, ಹೇಗೆ ವರ್ತಿಸಿದ್ದ, ಮಾನಸಿಕ ಸ್ವಾಸ್ಥ್ಯವಿತ್ತೇ ಎಂಬ ಬಗ್ಗೆ ತಜ್ಞರ ಅಭಿಪ್ರಾಯ, ಸಾಕ್ಷಿ, ಪುರಾವೆಗಳ ರುಜುವಾತು ಅನಗತ್ಯ. ನ್ಯಾಯ ಶಾಸ್ತ್ರದಲ್ಲಿ ಇದಕ್ಕೆ ಇಲ್ಲದ ಬೆಲೆಯನ್ನು ವೈದ್ಯಕೀಯಶಾಸ್ತ್ರ ಇತ್ತು ಪುರಸ್ಕರಿಸುತ್ತದೆ. ಉಯಿಲು ಬರೆಯುವಂಥ ಅಧಿಕಾರ ಕೇವಲ ಆತನ ಚಿತ್ತಸ್ವಾಸ್ಥ್ಯ ಅಥವಾ ಮನೋವೈಕಲ್ಯವನ್ನೇ ಹೊಂದಿಕೊಂಡಿಲ್ಲ. ಏಕೆಂದರೆ ಅಂಥ ಮನೋವಿಕಾರಿಗಳೂ ಕೆಲವು ಸಮಯ ಬುದ್ಧಿವಂತರಾಗಿಯೇ ಅಂದರೆ ಸಾಮಾನ್ಯ ತಿಳಿವಳಿಕೆ ಇರುವಂಥ ಮಾನವರಂತೆಯೇ ವರ್ತಿಸುವ ನಿದರ್ಶನ ಎಷ್ಟೋ ಇವೆ. ಕಾಯಿದೆಯ ದೃಷ್ಟಿಯಲ್ಲಿ ಆತ ಉಯಿಲು ಬರೆಯುವಾಗ ಆತನ ಚಿತ್ತಸ್ವಾಸ್ಥ್ಯ ಸ್ಥಿರವಾಗಿತ್ತೇ, ಆತ ಸಮರ್ಥ ಮನದವನಾಗಿದ್ದನೇ ಅಥವಾ ಅಸಮರ್ಥನಾಗಿದ್ದನೇ ಎನ್ನುವ ರುಜುವಾತೇ ಅತ್ಯಗತ್ಯ. ಉಯಿಲು ಬರೆಯುವ ಮುನ್ನ ಅಥವಾ ಬರೆದ ಅನಂತರದ ಆತನ ಚಿತ್ತಸ್ವಾಸ್ಥ್ಯದ ಬಗ್ಗೆ ಕಾಯಿದೆ ವಿಚಾರಿಸುವುದಿಲ್ಲ.

ಇಲ್ಲಿ ದೈಹಿಕ ಕಾಹಿಲೆ ಅಥವಾ ದೈಹಿಕ ಅಸಮರ್ಥತೆ ತೊಡಕಾಗಿ ನಿಲ್ಲುವುದಿಲ್ಲ; ಕುಂಟನೇ ಇರಲಿ, ಕುರುಡನೇ ಇರಲಿ, ಉಯಿಲು ಬರೆಯುವಂಥ ಅಧಿಕಾರದಿಂದ ಚ್ಯುತನಲ್ಲ; ಆದರೆ ಯಾವೊಂದು ತರದ ದೈಹಿಕ ಕಾಹಿಲೆಯೇ ಆಗಿರಲಿ—ಅಂಥ ಕಾಹಿಲೆ ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಮನದ ಮೇಲೆ ಏನಾದರೂ ಪ್ರಭಾವ ಬೀರಿದರೆ ಮಾತ್ರ ತೊಂದರೆ. ಉಯಿಲಿಗೆ ಸಾಕ್ಷಿ ಅತ್ಯಗತ್ಯ. ಹಾಗೆ ಸಾಕ್ಷಿ ಹಾಕುವವರು ತಾವು ಸಾಕ್ಷಿಯೆಂದು ರುಜುಮಾಡುವಾಗ ಉಯಿಲು ಬರೆದಾತನ ಮನಃಸ್ಥಿತಿಯ ಬಗ್ಗೆ ಅಂದರೆ ಸ್ವತ್ತಿನ ವಿನಿಯೋಗದ ಸಾಮರ್ಥ್ಯದ ಬಗ್ಗೆ (ಬರೆದಾತನಿಗೆ ಆಲೋಚನಾಶಕ್ತಿ ಸಹಜ ರೀತಿಯಲ್ಲಿತ್ತೆಂಬ ಬಗ್ಗೆ) ಸಾಕ್ಷಿ ಹಾಕುತ್ತಿರುವುದಾಗಿ ನೆನೆಪಿಡಬೇಕಾದ್ದು ಬಹಳ ಮುಖ್ಯ ವಿಚಾರ.

ಲೇಖನ, ವಾಚನ ಮತ್ತು ವಾಕ್‌ಶಕ್ತಿಗಳು ಮೂರೂ ಅಥವಾ ಒಂದು ಅಥವಾ ಎರಡು ಶಕ್ತಿಗಳ ನಾಶದಿಂದ ಯಾವಾತ ಉಯಿಲು ಬರೆಯುವಾಗ ಬಳಲುತ್ತಿದ್ದನೋ ಅಂಥ ಉಯಿಲೂ ಕೆಲವೊಮ್ಮೆ ಸಂಶಯಕ್ಕೆ ಆಸ್ಪದ ಕೊಡುತ್ತದೆ. ಅಂಥವನಿಗೆ ಗ್ರಹಣಶಕ್ತಿ ಹಾಗೂ ಚಿತ್ತಸ್ವಾಸ್ಥ್ಯವಿದ್ದು ಉಯಿಲಿನ ಮೂಲಕ ಸ್ವತ್ತು ವಿನಿಯೋಗಿಸುವಂಥ ಮನೋಧರ್ಮದವನಿರಬಹುದು. ಆದರೂ ಆತ ತನ್ನ ಮನಸ್ಸಿನಾಕಾಂಕ್ಷೆಯನ್ನೂ, ಅಭಿಪ್ರಾಯವನ್ನೂ ಇನ್ನೊಬ್ಬನಿಗೆ ತಿಳಿಯಪಡಿಸಲು ಅಸಮರ್ಥನಾಗಿರಬಹುದು.

ಕಾಯಿದೆಯ ದೃಷ್ಟಿಯಿಂದ ಗಮನಾರ್ಹವಾದ ವಿಷಯವೆಂದರೆ :

೧ ಉಯಿಲು ಬರೆದಾತನ ಇಚ್ಛೆ ಅಥವಾ ಬಯಕೆ ಅಸಹಜವಾಗಿದೆಯೇ, ಸಂಶಯಾಸ್ಪದವಾಗಿದೆಯೇ ಅಥವಾ ಅದರಲ್ಲಿ ದ್ವಂದ್ವಾರ್ಥಕ್ಕೆ ಆಸ್ಪದವಿದೆಯೇ ?

೨ ಉಯಿಲಿನ ವಾಚಕಗಳು ವಿರಳವಾಗಿದ್ದು, ಯೋಗ್ಯವಾದ ಅಭಿಪ್ರಾಯ, ಅರ್ಥದಿಂದ ಕೂಡಿವೆಯೇ?

೩ ಅಥವಾ ಆತ ಮೇಲೆ ಹೇಳಿದಂಥ ಯಾವುದಾದರೂ ರೋಗಕ್ಕೆ ಬಲಿಯಾಗಿದ್ದನೆ, ಇತ್ಯಾದಿ.

ಆದ್ದರಿಂದ ಉಯಿಲಿನ ವಾಚಕಗಳು ಸರಳ ಹಾಗೂ ವಿರಳವಾಗಿದ್ದು, ತಿರುಳಿದ್ದು, ದ್ವಂದ್ವಾರ್ಥಕ್ಕೆ ಎಡೆಕೊಡದೆ ಯಾವೊಂದೂ ಮನೋವಿಕಾರದ ಅಥವಾ ಅಸಹಜತೆಯ ಛಾಯೆಯಿಲ್ಲದಿದ್ದರೆ ಯಾವ ತರದ ಅನುಮಾನಕ್ಕೂ ಆಸ್ಪದವಿಲ್ಲ.

ಭ್ರಮೆಗಳಿಗೆ (ಡೆಲ್ಯೂಷನ್ಸ್) ಒಳಗಾದವರು ಕೂಡ ಉಯಿಲು ಬರೆಯಲು ಅರ್ಹರು. ಆದರೆ ಬರೆಯುವಾಗ ಸ್ಥಿರಚಿತ್ತದವರಾಗಿದ್ದರೆಂದು ರುಜುಪಡಿಸಲು ಸಮರ್ಥರಾಗಿರಬೇಕು.

ಅನೇಕ ತರದ ಮನೋವಿಕಾರಗಳುಳ್ಳವರೂ (ಎಕ್ಸೆಂಟ್ರಿಸಿಟಿ) ಇದ್ದಾರೆ. ಅಂಥವರಲ್ಲಿ ಮಕ್ಕಳಿಲ್ಲದ ಹೆಂಗಸರು ಅಂದರೆ ಬಂಜೆಯರೂ ಸೇರಿರುತ್ತಾರೆ. ಅಂಥವರು ನಾಯಿ, ಬೆಕ್ಕು ಅಥವಾ ಇತರ ಯಾವುದೇ ತರದ ಪ್ರಾಣಿಯನ್ನು ಸಾಕುವುದರಲ್ಲಿ ಮಗ್ನರಾಗಿ ಮಕ್ಕಳ ಲಾಲನೆಪಾಲನೆಯ ಕೊರಗನ್ನು ಮರೆಯುತ್ತಾರೆ. ಆದರೆ ಅದಕ್ಕೂ ಒಂದು ಮಿತಿಯೆಂಬ ಅಳತೆಗೋಲಿದೆ. ಮನೆ ತುಂಬ ಬೆಕ್ಕು ಅಥವಾ ನಾಯಿಗಳನ್ನು ಸಾಕಿ, ಅವುಗಳನ್ನು ಮಾನವರಿಗೆ ಸಮಾನವಾಗಿ ತಿಳಿದು ತಮ್ಮ ತಟ್ಟೆಯಲ್ಲೇ ಉಣಬಡಿಸುವುದು, ಕುರ್ಚಿಯಲ್ಲಿ ಕೂರಿಸಿಕೊಳ್ಳುವುದು ಇತ್ಯಾದಿಯಾಗಿ ಮಾಡಿದರೆ ಅಂಥವರನ್ನೂ ಮನೋವಿಕಲರ ಸಾಲಿಗೆ ಸೇರಿಸಬಹುದು. ಆದರೆ ಕೇವಲ ಮುದ್ದಿಗಾಗಿ ಒಂದೆರಡು ಮರಿಗಳನ್ನು ಸಾಕಿದೊಡನೆ ಅಥವಾ ಅವುಗಳನ್ನು ಹಸುಗೂಸಿನಂತೆ ಪಾಲಿಸಿದ ಮಾತ್ರಕ್ಕೆ ಮತಿವಿಕಲರೆನ್ನಲಸಾಧ್ಯ. ಚಿತ್ತಸ್ವಾಸ್ಥ್ಯವಿದ್ದು, ಸ್ವತ್ತುಗಳ ಮೇಲ್ವಿಚಾರಣೆ, ವ್ಯವಹಾರ ಕ್ರಮ, ಅತಿಥಿ ಅಭ್ಯಾಗತರ ಆದರ ವಿಚಾರಣೆ ಇತ್ಯಾದಿ ಸುವ್ಯವಸ್ಥಿತವಾಗಿದ್ದಲ್ಲಿ ಅಂಥವರನ್ನು 'ವಿಕಾರಿ'ಗಳೆಂದು ಪರಿಗಣಿಸಲಸಾಧ್ಯ. ಆದರೆ ವಿಕಾರಗುಣದಿಂದಾಗಿ ತನ್ನ ಎಲ್ಲ ಸ್ವತ್ತನ್ನೂ ಕೇವಲ ನಾಯಿ ಅಥವಾ ಬೆಕ್ಕುಗಳ ಸಾಕಣೆ ಬಗ್ಗೆ ಉಯಿಲಿನ ಮುಖಾಂತರ ವಿನಿಯೋಗಿಸಿದಲ್ಲಿ ಅಂಥವರ ಉಯಿಲು ರದ್ದಾಗಲು ಯೋಗ್ಯವಾಗಿದೆ.

ಉಯಿಲಿನ ರದ್ದಿಗೆ ಅನುಚಿತ ಪ್ರಭಾವ ಇಲ್ಲವೇ ವರ್ಚಸ್ಸೂ (ಅನ್‌ಡ್ಯೂ ಇನ್ಫ್ಲುಯೆನ್ಸ್) ಕಾರಣವಾಗಬಹುದು. ಅಳತೆ ಇಲ್ಲದ ಪ್ರಭಾವ ರುಜುವಾತಾದರೆ

ಆಗ ಉಯಿಲು ನಿರರ್ಥಕವಾಗುವುದು. ಯಾವ ರೀತಿಯ ಪ್ರಬಲ ವ್ಯಕ್ತಿಯೇ ಇರಲಿ ದುರ್ಬಲರಿಂದ ತನಗೆ ಬೇಕಾದಂತೆ ತನ್ನ ಶಕ್ತಿ ಅಥವಾ ಪ್ರಭಾವದ ಮುಖಾಂತರ ಬರೆಸಿಕೊಳ್ಳಲು ಸಮರ್ಥರು. (ಇಲ್ಲಿ ಪ್ರಬಲ ಎಂದರೆ ದೈಹಿಕ ವಾಗಿಯಾಗಲೀ ಮಾನಸಿಕವಾಗಿಯಾಗಲೀ ಎಂಬರ್ಥ.)

ಕೆಲವೊಮ್ಮೆ ಆತ್ಯಹತ್ಯೆಗೂ ಉಯಿಲಿಗೂ ನುಧ್ಯೆ ಇರುವ ಅಂತರಕ್ಕೆ ತಮಗೆ ಬೇಕಾದಂಥ ಅನುಕೂಲ ಅರ್ಥವನ್ನು ಕಲ್ಪಿಸಿ, ಉಯಿಲು ಮನೋ ವೈಕಲ್ಯದಿಂದ ಮಾಡಿದ ಕಾರಣ ರದ್ದಾಗತಕ್ಕದ್ದೆಂದು ವಾದಿಸಬಹುದು. ಉದಾ : ಒಬ್ಬಾತ ಉಯಿಲು ಬರೆದ ನಾಲ್ಕೈದು ದಿನಗಳಲ್ಲೇ ಆತ್ಮಹತ್ಯ ಮಾಡಿಕೊಂಡರೆ— ಅಂಥವನು ಆತ್ಮಹತ್ಯ ಮಾಡಿಕೊಳ್ಳುವ ಕಾರಣವೇನೂ ಇಲ್ಲ; ಮನೋವೈಕಲ್ಯ ದಿಂದಲೇ ಆತ ಆತ್ಮಹತ್ಯ ಮಾಡಿಕೊಂಡಿದ್ದಾನೆ; ಆದಕಾರಣ ಅಂಥವನ ಉಯಿಲು ಅಸಿಂಧು ಎನ್ನಲು ಅಸಾಧ್ಯ. ಕಾರಣವಿಲ್ಲದೆ ಆತ್ಮಹತ್ಯೆ ಮಾಡಿಕೊಂಡನೆಂದ ಮಾತ್ರಕ್ಕೆ ಆತ ಮತಿವಿಕಲ ಎನಿಸುವುದಿಲ್ಲ. ಮನೋವಿಕಾರ ರುಜುವಾತಾದರೆ ಮಾತ್ರ, ಅದೂ ಉಯಿಲು ಬರೆಯುವಾಗ ಆತ ಮನೋವಿಕಾರಕ್ಕೊಳಗಾಗಿದ್ದ ನೆಂದು ರುಜುವಾತಾದರೆ ಅಂಥ ಉಯಿಲು ನಿರರ್ಥಕವಾಗುವುದು.

ಅತಿರೇಕದ ಉಯಿಲು (ವಿಲ್ಸ್ ಇನ್ ಎಕ್ಸ್ಟ್ರೀಮ್ಸ್) ಇನ್ನೊಂದು ವಿಧ. ಮೃತ್ಯುಶಯ್ಯೆಯಲ್ಲಿದ್ದರೂ ಒಬ್ಬನ ಚಿತ್ತಸ್ವಾಸ್ಥ್ಯದ ಬಗ್ಗೆ ಯಾವ ಸಂಶಯವೂ ಇಲ್ಲ ದಿರಬಹುದು. ಆದರೂ ಅಂಥವನು ಮೃತ್ಯುನಿರೀಕ್ಷಣೆಯ ಕೊನೆಯ ಹಂತದಲ್ಲಿರು ವಾಗ ಅಂದರೆ ಮೃತ್ಯುಭೀತಾವಸ್ಥೆಯಲ್ಲಿರುವಾಗ (ಅಂದರೆ ತಾನು ಸಾಯು ತ್ತೇನೆಂಬ ಅರಿವು ಬಂದಾಗ) ಮಾಡಿದಂಥ ಉಯಿಲು ಸಂಶಯಾಸ್ಪದವಾಗಿದೆ. ಕಾರಣ ಊಹಿಸಲು ಸರಳ. ಅಂಥವನ ಚಿತ್ತ ದುರ್ಬಲವಾಗಿದ್ದು, ಬುದ್ಧಿ ಕ್ಷೀಣವಾಗಿ, ಪ್ರಜ್ಞಾಶಕ್ತಿ ಕ್ಷಯಿಸಿರುವುದು. ಸ್ವತ್ತನ್ನು ಸದ್ವಿನಿಯೋಗ ಮಾಡು ವಂಥ ಸಾಮರ್ಥ್ಯ ಆತನ ಮನಕ್ಕೆ ಇಲ್ಲ. ಕಾಲರಾಕ್ಕೆ ಒಳಗಾಗಿ ಜ್ವರದಿಂದ ಬಳಲಿ ಬೆಂಡಾದ ರೋಗಿಯೊಬ್ಬಳ ದುರ್ಬಲ ಮನದ ಉಯಿಲು ನಿರರ್ಥಕವೆಂದು ತೀರ್ಮಾನಿಸಲ್ಪಟ್ಟ ದೃಷ್ಟಾಂತವೂ ಇದನ್ನು ಸಮರ್ಥಿಸುತ್ತದೆ.

ಆದಕಾರಣ ಯಾವಾತ ಮರಣಶಾಸನದ ಆಧಾರದ ಮೇಲೆ ತನ್ನ ಹಕ್ಕನ್ನು ಸ್ಥಾಪಿಸಲು ಪ್ರಯತ್ನಿಸುತ್ತಾನೋ ಅಂಥವನು ಆ ಮರಣಶಾಸನ ನ್ಯಾಯವಾದದ್ದು, ಮರಣಶಾಸನ ಬರೆದಾಗ ಬರೆದಾತನಿಗೆ ಚಿತ್ತಸ್ವಾಸ್ಥ್ಯ ಇತ್ತು, ಗ್ರಹಣಶಕ್ತಿ ಚೆನ್ನಾಗಿತ್ತು ಹಾಗೂ, ಸ್ವತ್ತನ್ನು ವಿನಿಯೋಗಿಸುವಂಥ ಮನಸ್ಸಿನ ಸಾಮರ್ಥ್ಯ ಇತ್ತೆಂಬುದನ್ನು ಸ್ಥಿರಪಡಿಸಬೇಕಾಗುತ್ತದೆ. ಉಯಿಲನ್ನು ಬರೆಯಲು ಬೇಕಾದಂಥ ಎಲ್ಲ ಅನುಭವಗಳನ್ನು ತನ್ನ ವಕೀಲನಿಗೆ ಕೊಟ್ಟ ಅನಂತರ ಮರಣಶಾಸನ ಬರೆದಾಗ ತನ್ನ ರೋಗದ ಕಾರಣದಿಂದಾಗಿ ಬರೆದುದನ್ನು ತಿಳಿಯಲು ಶಾಸನ ಕರ್ತ ಅಸಮರ್ಥನಾಗಿದ್ದರೂ ಅಂಥ ಮರಣಶಾಸನವೂ ಸಿಂಧುವಾಗಬಹುದು.

ಆದರೆ ಅನುಭವ ಕೊಡುವಾಗ ಆತನ ಗ್ರಹಣಶಕ್ತಿ ಸ್ಥಿರವಾಗಿತ್ತು ಮಾತ್ರವಲ್ಲದೆ ತಾನು ಅನುಭವ ಕೊಟ್ಟ ಪ್ರಕಾರವೇ ಅದರಲ್ಲಿ ಬರೆದಿದೆ ಎಂಬ ನಂಬಿಕೆಯೂ ಆತನಿಗಿರಬೇಕು.

ಭಾರತೀಯ ಕಾನೂನಿನಲ್ಲೂ ಚಿತ್ತಅಸ್ವಾಸ್ಥ್ಯ ಮತ್ತು ಉಯಿಲಿನ ವಿಧಾಯಕ ಶಕ್ತಿಗಳ ಬಗ್ಗೆ ಮೇಲೆ ಹೇಳಿದ ಅಭಿಪ್ರಾಯಗಳೇ ಕಂಡುಬರುತ್ತವೆ. ೯೦ ವರ್ಷದವನ ಉಯಿಲಿನ ಬಗ್ಗೆ ವಿವಾದವೆದ್ದಾಗ ಕೇವಲ ಮುದಿಪ್ರಾಯ ವ್ಯುತಿಪತ್ರವನ್ನು ಅಲ್ಲಗಳೆಯಲು ಕಾರಣವಾಗಲಾರದು; ವೈದ್ಯತಜ್ಞರ ಸಾಕ್ಷಿ ಇರದಿದ್ದ ಕಾರಣ ಅಂಥವನ ಗ್ರಹಣಶಕ್ತಿ ಕುಂದಿತ್ತು ಎನ್ನಲಸಾಧ್ಯ—ಎಂದು ನ್ಯಾಯಾಲಯ ನುಡಿಯಿತು.[1]

ಕುಡಿತ ಇಲ್ಲವೇ ಮನಸ್ಸನ್ನು ದುರ್ಬಲಗೊಳಿಸುವಂಥ ಕಾಹಿಲೆಯಿಂದ ನರಳುತ್ತಿದ್ದು ಗ್ರಹಣಶಕ್ತಿ ಕುಂದಿದರೆ ಅಂಥವರು ಉಯಿಲು ಬರೆಯಲು ಅನರ್ಹರು. ಜನ್ಮಾರಭ್ಯ ಮೂಕನಾಗಿ, ಕುರುಡನಾಗಿ ಮತ್ತು ಕಿವುಡನಾಗಿ (ಮೂರೂ ಒಟ್ಟಿಗಿದ್ದರೆ) ಅಂಥವನಿಗೆ ತಿಳಿವಳಿಕೆಯ ಶಕ್ತಿ ಇರುವುದಿಲ್ಲ. ಏಕೆಂದರೆ ಮನಸ್ಸು ಆಲೋಚನೆಗಳನ್ನು ಸ್ವೀಕರಿಸಿ ತಿಳಿವಳಿಕೆಯುಂಟುಮಾಡಲು ಈ ಇಂದ್ರಿಯ ಸಂವೇದನೆ ಅತ್ಯಗತ್ಯ. ಆದುದರಿಂದ ಅಂಥವನು ಉಯಿಲು ಬರೆಯಲು ಅನರ್ಹ.

I 3 ಮತಿವಿಕಲನ ಸಾಕ್ಷಿಯೋಗ್ಯತೆ

ಮತಿವಿಕಲರಲ್ಲೂ ವೈವಿಧ್ಯವಿರುತ್ತದೆ. ಹಲವು ತೆರದ ಭ್ರಮಿತರಿರುತ್ತಾರೆ. ಮನಸ್ಸಿನ ಕುಂದುಕೊರತೆಯಲ್ಲೂ ಹೆಚ್ಚುಕಡಿಮೆ ಎಂಬ ತಾರತಮ್ಯವಿದೆ. ಎಲ್ಲ ಸಂದರ್ಭಗಳಲ್ಲೂ ಉನ್ಮಾದಿಗಳು ಮನೋರೋಗಿಗಳಾಗಿಯೇ ಇರುವುದಿಲ್ಲ. ತಿಳಿವಳಿಕೆ ಇದ್ದ ಹಾಗೂ ಚಿತ್ತಸ್ವಾಸ್ಥ್ಯವಿದ್ದ ಒಬ್ಬ ಸಾಮಾನ್ಯ ಮಾನವನಿಗೆ ಯಾವ ರೀತಿ ಜ್ಞಾಪಕಶಕ್ತಿ, ಆಲೋಚನಾಶಕ್ತಿ ಹಾಗೂ ಪರಿಶೀಲನಾಶಕ್ತಿ ಇರುತ್ತದೋ ಹಾಗೇ ಕೆಲವು ತೆರದ ಮತಿವಿಕಲರೂ ತ್ರಿವಿಧ ಸಮರ್ಥರಾಗಿರುತ್ತಾರೆ. ಉದಾ: 'ಹಿಲ್' ಮೊಕದ್ದಮೆಯಲ್ಲಿ ಡಾನೆಲಿ ಎಂಬ ಮತಿವಿಕಲ ಕೊಲೆಯಾದವನ ಕೋಣೆಯಲ್ಲೇ ಬಂಧಿತನಾಗಿದ್ದ. ಅಂದರೆ ಆ ಕೋಣೆಯಲ್ಲಿ ಈತ, ಆಪಾದಿತ, ಕೊಲೆಮಾಡಲ್ಪಟ್ಟವ —ಮೂವರೂ ಇದ್ದರು. ಆಪಾದಿತನ ಹೊರತಾಗಿ ಕೊಲೆಯನ್ನು ಕಣ್ಣಿನಿಂದ ನೋಡಿದವನೆಂದರೆ ಡಾನೆಲಿ ಮಾತ್ರ. ಆಪಾದಿತ ಕೊಲೆಯಾದವನನ್ನು ಹೇಗೆ ಕೀಳಾಗಿ ನೋಡುತ್ತಿದ್ದ, ಎಂದು ಮುಂತಾದ ವಿಚಾರಗಳನ್ನೂ ಆಪಾದಿತ ಹೇಗೆ ಆತನನ್ನು ಹೊಡೆದು ಗುದ್ದಿ ಕೊಂದ ಎಂಬುದನ್ನೂ ಡಾನೆಲಿ ಬಣ್ಣಿಸಲು ಸಮರ್ಥನಾದ ಕಾರಣ ಆ ಸಾಕ್ಷ್ಯದ ಮೇರೆಗೆ ಆಪಾದಿತನನ್ನು ಶಿಕ್ಷಿಸಲಾಯಿತು.

---

[1] A.J.R., 1962; Pat. 481 at 483

ಪ್ರಶ್ನೆಗಳನ್ನು ಹಾಕಿ ಡಾನೆಲಿಯ ಚಿತ್ತಸ್ವಾಸ್ಥ್ಯದ ಬಗ್ಗೆ ಛರಪಸೆ ಮೂಡಿದ ಅನಂತರ ನ್ಯಾಯದರ್ಶಿ (ಜೂರಿ) ಸಭಾಸದರು ಆತನಿಗೆ ಸತ್ಯ ಹಾಗೂ ಸುಳ್ಳಿನ ಭೇದಭಾವ, ಪ್ರತಿಜ್ಞೆಯ ಬೆಲೆ, ಗ್ರಹಣಶಕ್ತಿ ಮುಂತಾದವು ಸ್ವಸ್ಥಚಿತ್ತದ ಸಾಮಾನ್ಯ ಮಾನವನ ಮಟ್ಟದಲ್ಲೇ ಇವೆಯೆಂದು ನಿರ್ಧರಿಸಿದ ಅನಂತರ ಆತನ ಸಾಕ್ಷಿಯನ್ನು ಸ್ವೀಕರಿಸಿದರು. ಈ ವ್ಯಾಜ್ಯ ಮೇಲಿನ ನ್ಯಾಯಾಲಯಕ್ಕೆ ಹೋದರೂ, ಅದು ಕೆಳಗಿನ ನ್ಯಾಯಾಲಯ ಸಾಕ್ಷ್ಯಸ್ವೀಕರಣೆ ಬಗ್ಗೆ ತಪ್ಪು ಮಾಡಲಿಲ್ಲ, ಕೆಳಗಿನ ತೀರ್ಪು ನ್ಯಾಯಬದ್ಧವಾಗಿದೆ ಎಂದೇ ಪುಷ್ಟೀಕರಿಸಿತು. ಮನದ ಕುಂದುಕೊರತೆ ಅಥವಾ ನ್ಯೂನತೆಯಿಂದ ಅಥವಾ ಅಸಹಜತೆಯಿಂದ ಬಳಲುವ ಮನೋರೋಗಿಯ ಸಾಕ್ಷಿಯನ್ನು ಮೇಲೆ ಹೇಳಿದ ರೀತಿಯಲ್ಲಿ ಪರೀಕ್ಷಿಸಿ ಸ್ವೀಕರಿಸಬಹುದು (ಯೋಗ್ಯವೆಂದು ಕಂಡಲ್ಲಿ ಮಾತ್ರ) ಎಂದು ನ್ಯಾಯಾಲಯಗಳು ತೀರ್ಪಿತ್ತಿವೆ. ಆದರೆ ಮತಿಹೀನ ಅಥವಾ ಹೆಡ್ಡನ (ಇಡಿಯಟ್) ಸಾಕ್ಷಿಗೆ ಯಾವ ಬೆಲೆಯೂ ಇಲ್ಲ; ಏಕೆಂದರೆ ಕಾನೂನು ಅಂಥವನನ್ನು ಮಾನವನೆಂದೇ ಪರಿಗಣಿಸುವುದಿಲ್ಲ. ಅಂಥವನಿಗೆ ಜನನಾರಾಭ್ಯ ಮನಸ್ಸೇ ಇಲ್ಲವೆಂದು ಕಾಯಿದೆ ತಿಳಿಯುವುದು. ಆತ ಎಂದೆಂದೂ ಹಾಲುಹಸುಳೆಯಾಗಿಯೇ ಉಳಿಯುತ್ತಾನೆ—ಕಾಯಿದೆಯ ದೃಷ್ಟಿಯಲ್ಲಿ.

'ಭಾರತೀಯ ರುಜುವಾತು ಕಾಯಿದೆ' (ಇಂಡಿಯನ್ ಎವಿಡೆನ್ಸ್ ಆಕ್ಟ್) ೧೧೮ನೆಯ ಕಲಮಿನಲ್ಲಿ ಮೇಲೆ ಹೇಳಿದ ಅಭಿಪ್ರಾಯಗಳನ್ನೇ ಮಂಡಿಸುತ್ತದೆ. ಹುಚ್ಚರು ಹಾಗೂ ಕುಡುಕರು ತಮ್ಮ ಬುದ್ಧಿ ಸ್ವಸ್ಥವಿದ್ದಾಗ ಕೊಟ್ಟ ಹೇಳಿಕೆ ಅಥವಾ ಪುರಾವೆ ಅಥವಾ ಸಾಕ್ಷಿಗೆ ಇತರ ಸಾಮಾನ್ಯ ತಿಳಿವಳಿಕೆಯುಳ್ಳ ಜನರ ಸಾಕ್ಷ್ಯದಷ್ಟೇ ಬೆಲೆ ಇದೆ ಎನ್ನುತ್ತದೆ. ಆದರೆ ಅವರು ತಮಗೆ ಹಾಕಲಾದ ಪ್ರಶ್ನೆಯ ಅರ್ಥವನ್ನು ತಿಳಿಯುವಂಥವರಾಗಿದ್ದು ಬುದ್ಧಿಪೂರ್ವಕವಾಗಿ ಉತ್ತರ ಕೊಡುವ ಸಾಮರ್ಥ್ಯ ಉಳ್ಳವರಾಗಿರಬೇಕು.

ಹುಚ್ಚನಾದರೂ ಆತನಿಗೆ ತಿಳಿವಳಿಕೆಯ ಶಕ್ತಿ ಇರುತ್ತದೆ. ಆದರೆ ಕಾಯಿಲೆ, ಚಿಂತೆ ಅಥವಾ ಅಪಘಾತದಿಂದಾಗಿ ತನ್ನ ಆಲೋಚನಾಶಕ್ತಿಯನ್ನು ಕಳೆದುಕೊಂಡಿರುತ್ತಾನೆ. ಅರಿವಿನ ಶಕ್ತಿಯನ್ನು ಕಳೆದುಕೊಂಡಿದ್ದಾಗ ಮಾತ್ರ ಆತ ತನ್ನ ಅರ್ಹತೆಯನ್ನು ಕಳೆದುಕೊಳ್ಳುತ್ತಾನೆಯೇ ಹೊರತು ಪುನಃ ಅರಿವಿನ ಶಕ್ತಿ ಬಂದಾಗ ಮತ್ತೆ ತನ್ನ ಅರ್ಹತೆಯನ್ನೂ ಪಡೆಯುತ್ತಾನೆ. ಈ ಕಾಯಿದೆಯ ೧೧೮ನೆಯ ಕಲಮಿನ ಪ್ರಕಾರ 'ಪ್ರಶ್ನೆಗಳ ಅರ್ಥವನ್ನು ತಿಳಿದುಕೊಂಡು ಸಮರ್ಥ ಉತ್ತರವನ್ನು ನೀಡಲಾರದಷ್ಟು ಹುಚ್ಚನಾಗಿದ್ದರೆ ಮಾತ್ರ ಅಂಥವನಿಗೆ ಸಾಕ್ಷಿ ಹೇಳುವ ಯೋಗ್ಯತೆ ಇರುವುದಿಲ್ಲ; ಇಲ್ಲದಿದ್ದರೆ ಅಂಥವನೂ ಸಾಕ್ಷಿ ಹೇಳಲು ಯೋಗ್ಯನೇ.'

I 4 ಮತಿವಿಕಲತೆ ಮತ್ತು ಕರಾರು

ಸಾಮಾನ್ಯ ಕರಾರುಗಳಲ್ಲಿ ಮತಿವಿಕಲನ ಹೊಣೆ ಎಷ್ಟು ಎಂಬುದು ಇನ್ನೊಂದು ವಿಚಾರ. ಕರಾರಿನ ವೇಳೆಯಲ್ಲಿ ಮತಿವಿಕಲನ ವರ್ತನೆಯಲ್ಲಿ ಲವಲೇಶವೂ ಅಸಹಜತೆ ಕಂಡುಬಾರದಿದ್ದಲ್ಲಿ ಹಾಗೂ ಕರಾರಿಗೆ ಸೇರಿದ ಆ ಇನ್ನೊಂದು ವ್ಯಕ್ತಿಗೆ ಈತನ ವರ್ತನೆಯಲ್ಲಿ ಏನೊಂದೂ ಸಂಶಯ ಬಾರದಿದ್ದರೆ ಆಗ ಆತ ಅಂಥ ಕರಾರಿಗೆ ಸಮ್ಮತಿ ಕೊಟ್ಟ ವೇಳೆಯಲ್ಲಿ ಚಿತ್ತಸ್ವಾಸ್ಥ್ಯದಿಂದಲೇ ವರ್ತಿಸಿದನೆಂದೂ ಸಮ್ಮತಿ ಕೊಡುವಂಥ ತಿಳಿವಳಿಕೆಯುಳ್ಳವನಾಗಿದ್ದನೆಂದೂ ತಿಳಿಯಬೇಕಾಗುವುದು. ಆದಕಾರಣ ಅಂಥ ಕರಾರಿನ ಒಪ್ಪಂದಕ್ಕೆ ಅವನು ಬದ್ಧ ಹಾಗೂ ಜವಾಬ್ದಾರ ಎಂದು ಕಾಯಿದೆ ಸೂಚಿಸುತ್ತದೆ. ಉದಾ: ಒಂದು ಪಾಲುದಾರಿಕೆಯಲ್ಲಿ ಒಬ್ಬ ಪಾಲುದಾರ ಮತಿವಿಕಲನಾಗಿದ್ದರೆ ಅಷ್ಟುಮಾತ್ರಕ್ಕೆ ಆ ಸಂಸ್ಥೆ ತನ್ನಿಂದ ತಾನೇ ಮುರಿದು ಹೋಗುವುದಿಲ್ಲ. ಒಂದು ವೇಳೆ ಆ ಸಂಸ್ಥೆಯ ಕರಾರಿನಲ್ಲಿ ಅಂಥ ನಿಯಮವಿದ್ದರೆ (ಪಾಲುದಾರಿಕೆ ಕೂಡಲೇ ಮುರಿಯುವುದು ಎಂದು ಅಥವಾ ಮತಿವಿಕಲ ಲಾಭನಷ್ಟಗಳಿಗೆ ಹೊಣೆಯಲ್ಲವೆಂದು ಇದ್ದರೆ) ಮಾತ್ರ ಆ ಪಾಲುದಾರಿಕೆ ನಾಶವಾಗುವುದು. ಹಾಗೆ ಬರೆಯಲಾದ ನಿಯಮವಿಲ್ಲದಿದ್ದರೆ ಮತಿವಿಕಲ ಪಾಲುದಾರನೂ ಎಲ್ಲಾ ಲಾಭನಷ್ಟಗಳ ಪಾಲಿಗೂ ಹಕ್ಕುಭಾದ್ಯತೆಯುಳ್ಳವನೇ. ಆತ ಪಾಲುದಾರಿಕೆಯಿಂದ ವಿಮುಕ್ತಿ ಪಡೆಯಲಾರ.

ಕರಾರಿಗೆ ಸೇರಿದವರು ಸ್ವಸ್ಥಮನಸದವರಾಗಿರಬೇಕೆಂದು ಭಾರತೀಯ ಕರಾರು ಕಾಯಿದೆಯ ೧೧ನೆಯ ಕಲಮು ಹೇಳುತ್ತದೆ. ಸ್ವಸ್ಥಮನಸವೆಂದರೇನೆಂಬುದನ್ನು ೧೨ನೆಯ ವಿಧಿ ಮಂಡಿಸುತ್ತದೆ. 'ಕರಾರಿಗೆ ಸೇರಿದಾಗ ಆತನಿಗೆ ತಿಳಿವಳಿಕೆಯ ಶಕ್ತಿಯಿದ್ದು, ತನ್ನ ಹಕ್ಕಿನ ಮೇಲೆ ಅದು ಬೀರುವ ಪ್ರಭಾವದ ಬಗ್ಗೆ ನಿಶ್ಚಯಿಸುವ ಸಾಮರ್ಥ್ಯ ಇದ್ದರೆ ಅಂಥವನಿಗೆ ಕರಾರಿಗೆ ಸೇರುವಂಥ ಸ್ವಸ್ಥಚಿತ್ತವಿದೆ' ಎಂದು ಅದು ಹೇಳುತ್ತದೆ.

'ಹೆಚ್ಚಾಗಿ ಅಸ್ವಸ್ಥ ಚಿತ್ತವಿದ್ದು, ಕೆಲವೊಮ್ಮೆ ಸ್ವಸ್ಥಚಿತ್ತವಿದ್ದರೆ, ಅಂಥವನು ಚಿತ್ತಸ್ವಾಸ್ಥ್ಯವಿದ್ದಾಗ ಕರಾರು ಮಾಡಬಹುದು.

'ಹೆಚ್ಚಾಗಿ ಸ್ವಸ್ಥಚಿತ್ತವಿದ್ದು ಕೆಲವೊಮ್ಮೆ ಅಸ್ವಸ್ಥಚಿತ್ತವಿದ್ದರೆ ಅಂಥವನು ಅಸ್ವಸ್ಥಚಿತ್ತವಿದ್ದಾಗ ಕರಾರು ಮಾಡಬಾರದು' ಎಂದು ೧೨ನೆಯ ವಿಧಿ ಸಾರುತ್ತದೆ.

ಕಮಲಾರಾಮನ ಮೊಕದ್ದಮೆಯಲ್ಲಿ[2] ಹುಚ್ಚನೊಬ್ಬ ಮಾಡಿದ ಕರಾರು ನಿರರ್ಥಕವೆಂಬುದು ನಿರ್ಣಯವಾಯಿತು. ಕುಡಿತದ ಅಮಲು ಏರಿದಾಗ ಮಾಡಿದ ಕರಾರು ನಿರರ್ಥಕ. ಮನದ ದುರ್ಬಲತೆ ಅಥವಾ ಪಾರ್ಶ್ವಮನೋರೋಗ ಕರಾರಿನ ರದ್ದಿಗೆ ಕಾರಣವಾಗಲಾರದು. ಮತಿವಿಕಲತೆಯ ರಕ್ಷಣೆ ದೊರೆಯು

---

[2] Kamala Ram Vs. Kaura Khan, 41 P.R., 1992.

ಬೇಕಾದರೆ ಕರಾರಿನ ಒಪ್ಪಂದ ತಿಳಿಯುದಷ್ಟು ಚಿತ್ತಅಸ್ಪಷ್ಟವಾಗಿತ್ತು ಮತ್ತು ಫಲಿತಾಂಶ ತಿಳಿಯುದಷ್ಟು ಚಿತ್ತದೌರ್ಬಲ್ಯವಿತ್ತು ಎಂದು ರುಜುವಾತಾಗಬೇಕು. ಒಪ್ಪಂದಕ್ಕೆ ಸೇರಿದ ಒಬ್ಬ ಮತಿವಿಕಲನಾಗಿದ್ದನೆಂದು ರುಜುವಾತಾದರೆ ಸಾಕು; ಮತ್ತೊಬ್ಬನಿಗೆ ಈತನ ಮತಿವೈಕಲ್ಯದ ಬಗ್ಗೆ ಅರಿವು ಇತ್ತೋ ಇಲ್ಲವೋ ಎಂಬುದು ಅನಾವಶ್ಯಕ. ಏಕೆಂದರೆ ಅಂಥ ಒಪ್ಪಂದ ಶೂನ್ಯವೆನಿಸುತ್ತದೆ.

ಮೇಲೆ ಹೇಳಿದ ಇಂಗ್ಲಿಷ್ ಕಾಯಿದೆಗೂ ಭಾರತೀಯ ಕಾಯಿದೆಗೂ ವಿಶೇಷ ವ್ಯತ್ಯಾಸ ತೋರಿಬರುವುದಿಲ್ಲ.

I 5 ಮತಿವಿಕಲತೆ ಮತ್ತು ದಂಡನೀಯ ಖಾಸಗಿ ತಕ್ಸೀರು (ಟಾರ್ಟ್ಸ್)

ಸಾರ್ವಜನಿಕ ಹಕ್ಕಿನ ಚ್ಯುತಿ ಅಥವಾ ಲೋಕಸ್ಥಗಿತವಾದ ಹಕ್ಕಿನ ಚ್ಯುತಿ ಉಂಟಾದಾಗ ದಂಡಯೋಗ್ಯವಾದ ಅನ್ಯಾಯವಾಗುತ್ತದೆ ಎಂದು ಸರ್ ಹ್ಯೂ ಫ್ರೇಸರ್ ತನ್ನ 'ದಂಡನೀಯ ಖಾಸಗಿ ತಕ್ಸೀರು ನ್ಯಾಯ' (ಲಾ ಆಫ್ ಟಾರ್ಟ್ಸ್) ಪುಸ್ತಕದಲ್ಲಿ ಹೇಳಿರುತ್ತಾರೆ. ಇಂಗ್ಲಿಷರ 'ಖಾಸಗಿ ತಕ್ಸೀರು ಕಾಯಿದೆ'ಯಲ್ಲಿ ಮತಿವಿಕಲನ ಜವಾಬ್ದಾರಿ ಎಷ್ಟರಮಟ್ಟಿಗಿದೆ ಎಂಬುದು ಖಚಿತವಾಗಿ ಕಾಣು ವುದಿಲ್ಲ. ಆದಕಾರಣವೇ ಮಾರ್ಕ್‌ಬಿ ಈ ರೀತಿ ತನ್ನ ಅಭಿಪ್ರಾಯ ಹೇಳಿರು ತ್ತಾರೆ: 'ಪೌರ ಪ್ರಕ್ರಿಯೆಯಲ್ಲಿ (ಸಿವಿಲ್ ಪ್ರೊಸೀಜರ್) ಅಂಥ ಮತಿವಿಕಲನ ಜವಾಬ್ದಾರಿಯನ್ನು ಅವನು ಮಾಡಿದಂಥ ಕ್ರಿಯೆ ಮತ್ತು ಕ್ರಿಯಾಲೋಪದಿಂದಾಗಿ ಉಂಟಾದ ಒಪ್ಪಂದ ಅಥವಾ ಮಾಡಿದಂಥ ಕರಾರಿನ ಹೊಣೆಗಾರಿಕೆಯ ಬಗ್ಗೆ ತೋರಿದ ಮೌನ ಆಶ್ಚರ್ಯಕರವಾಗಿದೆ.' ಕುಕ್ ತಮ್ಮ 'ಕಾಯಿದೆ ದೃಷ್ಟಿ ಯಿಂದ ಉನ್ಮಾದಿಯ ಹೊಣೆಗಾರಿಕೆ' (ಇನ್ಸ್ಯಾನಿಟಿ ಇನ್ ರಿಲೇಷನ್ ಟು ಲೀಗಲ್ ರೆಸ್ಪಾನ್ಸಿಬಿಲಿಟಿ) ಎಂಬ ಪುಸ್ತಕದಲ್ಲಿ ಈ ವಿಚಾರವನ್ನು ವಿಮರ್ಶಿ ಸಿರುತ್ತಾರೆ.

ಇಂಗ್ಲಿಷ್ ಮೊಕದ್ದಮೆಯೊಂದರಲ್ಲಿ (ಮಾರಿಸ್ ವಿರುದ್ಧ ಮಾರ್ಸ್ಡಿನ್ ೧೯೫೨ (೧) ಟಿ. ಎಲ್. ಆರ್. ೯೪೭) ವಿವರಗಳು ಹೀಗಿವೆ: ಪ್ರತಿವಾದಿ ಹುಚ್ಚರ ಆಸ್ಪತ್ರೆಯಿಂದ ಹೊರಬಂದ ಕೆಲವೇ ಸಮಯದಲ್ಲಿ ವಾದಿಯನ್ನು ಎದುರಿಸಿ ಆತನ ದೇಹಕ್ಕೆ ಚೆನ್ನಾಗಿ ನೋವನ್ನುಂಟುಮಾಡಿದ. ಅಪರಾಧ ತನಿಖೆಯ ಕಾಲದಲ್ಲಿ ದಂಡನೀಯ ಹೊಣೆಗಾರಿಕೆಗೆ ಜವಾಬ್ದಾರನಾಗಲು ಆತ ಬಹಳ ಉನ್ಮತ್ತನಾಗಿದ್ದ ನೆಂದು ತಿಳಿದುಬಂದುದರಿಂದ ನ್ಯಾಯಾಧಿಪತಿ ಆತನನ್ನು ಕೆಲ ಸಮಯ ತಡೆ ಹಿಡಿದರು. ಆದಕಾರಣ ವಾದಿ ಪ್ರತಿವಾದಿಯ ಮೇಲೆ ದಂಡಾರ್ಹವಾದ ತಕ್ಸೀರಿನ ಬಗ್ಗೆ ಕ್ರಮ ಕೈಗೊಂಡ. ಪ್ರತಿವಾದಿ ಉನ್ಮತ್ತನಾಗಿದ್ದರೂ ಆತನ ಕೃತ್ಯ ಐಚ್ಛಿಕವಾಗಿದ್ದು ಆತನಿಗೆ ತನ್ನ ಕೃತ್ಯದ ಬಗ್ಗೆ ಅರಿವಿತ್ತು. ಆದರೂ ಮನೋ ರೋಗದಿಂದಾಗಿ ಆತನಿಗೆ ಆ ಕೃತ್ಯ ತಪ್ಪು ಎಂದು ತಿಳಿದಿರಲಿಲ್ಲ. ಮೆಕ್ ನಾಟನ್

ನಿಯಮಗಳ ಮೇಲೆ ಇದನ್ನು ಆಧರಿಸಿ ವಾದ ಮಾಡಲಾಯಿತಾದರೂ ಪ್ರತಿವಾದಿ ವಾದಿಗೆ ನಷ್ಟಕೊಡಲು ಬದ್ಧನೆಂದು ನ್ಯಾಯಾಲಯ ತೀರ್ಮಾನಿಸಿತು. ಭಾರತದಲ್ಲಿ ಈ ವಿಚಾರವಾದ ಮೊಕದ್ದಮೆ ಇಷ್ಟರ ತನಕ ಗಮನಕ್ಕೆ ಬಂದಿಲ್ಲ. ಸ್ಕೋಚ್ ಕಾಯಿದೆಯ ಪ್ರಕಾರ ಇಂಥವರಿಗೆ ಸಂಪೂರ್ಣ ರಕ್ಷಣೆ ಸಿಗುತ್ತದೆ. ಆದರೆ ದ್ವೇಷದಿಂದ ಇಂಥ ಕೃತ್ಯಮಾಡಿದುದೆಂದು ರುಜುವಾತಾದರೆ ಮಾತ್ರ ರಕ್ಷಣೆ ಸಿಗುವುದಿಲ್ಲ. ಆಕ್ರಮಣ ಅಥವಾ ದಾಳಿಮಾಡಿದ ಸಂದರ್ಭಗಳಲ್ಲಿ ಕೆನಡ ಹಾಗೂ ನ್ಯೂ ಜೀಲೆಂಡ್ ಕಾಯಿದೆಯ ಪ್ರಕಾರ ಉನ್ಮಾದಿ ತನ್ನ ಹೊಣೆಯಿಂದ ವಿಮುಕ್ತನಾಗಲಾರ. ಉನ್ಮಾದಿ ಕೋವಿಯಿಂದ ವಾದಿಗೆ ಗುಂಡಿಕ್ಕಿ ನೋವು ಮಾಡಿದಾಗ ಉನ್ಮಾದಿ ಅದಕ್ಕೆ ಜವಾಬ್ದಾರನೆಂದೇ ನ್ಯೂ ಜೀಲೆಂಡಿನ ನ್ಯಾಯಾಲಯ ತೀರ್ಪಿತ್ತಿತು. ಆದರೆ ಸರ್ ಫ್ರೆಡ್ರಿಕ್ ಪೋಲಕ್ ಇದನ್ನು ಬಹಳ ಖಂಡಿಸಿ 'ಭ್ರಾಂತಿಮನದ ರೋಗಿ ತನ್ನ ಜ್ವರವೇರಿದಾಗ ಆ ತಾಪದ ಅಮಲಿನಲ್ಲಿ ನಿಂದನೀಯ ಹಾಗೂ ಅಪಮಾನಯುಕ್ತವಾದ ಮಾತುಗಳನ್ನು ನುಡಿದರೆ ಈ ತೀರ್ಪಿನ ಪ್ರಕಾರ ಆತನೂ ಜವಾಬ್ದಾರನಾಗುತ್ತಾನೆಯೇ?' ಎಂದು ಕೇಳಿರುತ್ತಾರೆ. ದಂಡನೀಯ ಕಾನೂನು ಪ್ರಕಾರ ಜವಾಬ್ದಾರನಾದವನು ಇಲ್ಲಿ ದಂಡಾರ್ಹವಾದ ತಕ್ಸೀರಿನ ಪರಿಮಿತಿಯೊಳಗೆ ಬಂದೇ ಬರುತ್ತಾನೆ. ವಿಲ್ಕಿನ್ಸನ್ ವಿರುದ್ಧ ಡೌನ್‌ಟನ್ (ಇಂಗ್ಲಿಷ್) ಮೊಕದ್ದಮೆಯಲ್ಲಿ ಪ್ರತಿವಾದಿ ಉನ್ಮಾದಿ, ವಾದಿಯ ಪತಿ ಅಪಘಾತಕ್ಕೆ ಈಡಾಗಿ ಆಸ್ಪತ್ರೆಯಲ್ಲಿ ಕಠಿಣಾವಸ್ಥೆಯಲ್ಲಿದ್ದಾನೆಂದು ತುಂಟತನದಿಂದ ಆಕೆಗೆ ತಿಳಿಸಿದಾಗ ವಾದಿಯ ಮಿದುಳಿಗೆ ಆಘಾತವಾಗಿ ತತ್ಪರಿಣಾಮವಾಗಿ ಆಕೆ ಕಾಹಿಲೆಯಿಂದ ಮಲಗಿದಳು. ಪ್ರತಿವಾದಿ ನಷ್ಟ ಕೊಡಲು ಬಾಧ್ಯನೆಂದು ತೀರ್ಮಾನಿಸಲಾಯಿತು.

ಇವೆಲ್ಲ ಉನ್ಮಾದಿಯ ಪೌರೀಯ ಹೊಣೆಗಾರಿಕೆಯ ವಿಚಾರವಾಯಿತು. ಇನ್ನು ಉನ್ಮಾದಿಯ ಅಪರಾಧ ಹೊಣೆಗಾರಿಕೆಯನ್ನು ಪರಿಶೀಲಿಸುವ.

II ಅಪರಾಧ ಹೊಣೆಗಾರಿಕೆ (ಕ್ರಿಮಿನಲ್ ರೆಸ್ಪಾನ್ಸಿಬಿಲಿಟಿ)

ಮೆಕ್ ನಾಟನ್ ನಿಯಮಗಳಲ್ಲಿ ಅಪರಾಧದ ಹೊಣೆಗಾರಿಕೆಯ ವಿಚಾರವಾಗಿ ವ್ಯಾಪಕವಾದ ವಿವೇಚನೆಯಿದೆ. ನಮ್ಮ ಕಾಯಿದೆಯ ಅಡಿಗಲ್ಲೇ 'ಮೆಕ್ ನಾಟನ್' ನಿಯಮಗಳಾದ ಕಾರಣ ಮೊದಲು ಇಂಗ್ಲಿಷ್ ಕಾಯಿದೆಯನ್ನು ಪರಿಶೀಲಿಸಿ ಅನಂತರ ನಮ್ಮ ಕಾಯಿದೆ ಕುರಿತು ವಿಚಾರಿಸಬಹುದು. ಯಾವುದೇ ಒಂದು ಕೃತ್ಯದ ಸ್ವರೂಪವನ್ನು ತಿಳಿಯುವುದೆಂದಾಗ ಅದನ್ನು ಮಾಡಿದ ವ್ಯಕ್ತಿಯ ಮನಸ್ಸಿನಲ್ಲಿ ಆ ಕೃತ್ಯದ ಸ್ವರೂಪ ಮತ್ತು ಫಲಿತಾಂಶಗಳ ಬಗ್ಗೆ ಮೂಡುವ ಭಾವನೆಗಳನ್ನು ಕುರಿತು ಹೇಳಿದುದಾಗಿ ಪರಿಗಣಿಸಬೇಕೆಂದು ನ್ಯಾಯಾಧಿಪತಿಗಳ ಉತ್ತರದಿಂದ ಹಾಗೂ '೧೮೭೯ರ ಇಂಗ್ಲಿಷ್ ಕರಡುಸಂಹಿತೆ'ಯ

(ಇಂಗ್ಲಿಷ್ ಡ್ರಾಫ್ಟ್ ಕೋಡ್ ಆಫ್ ೧೮೭೯) ನಿಯಮಗಳಿಂದ ಕಂಡುಬರುತ್ತದೆ. ಉದಾ: ಒಬ್ಬ ತಿಳಿಗೇಡಿ ಅಥವಾ ಹೆಡ್ಡನಿಗೆ ಆಲೋಚನಾಶಕ್ತಿಯೇ ಇಲ್ಲದ್ದರಿಂದ ತನ್ನ ತಿಳಿಗೇಡಿತನದಿಂದ ತನ್ನ ಕೃತ್ಯದ ಫಲಿತಾಂಶ ಅಥವಾ ಅದರ ಸ್ವರೂಪ ತಿಳಿದಿರಲಾರದು. ಕೋವಿಯ ಉಪಯೋಗ ಆತನಿಗೆ ಒಂದು ಆಟಿಕೆಯಂತೆ. ಅದೊಂದು ಹಾನಿಕಾರಕವಲ್ಲದ ಪಟಾಕಿ ಎಂದು ಆತನ ತಿಳಿವಳಿಕೆಯಿರಲೂ ಬಹುದು; ಅಥವಾ ವಾನರನನ್ನು ಕೊಲ್ಲಲು ಉಪಯೋಗಿಸುವ ಕೋವಿಯಿಂದ ವಾನರನಂತೆ ಮಾನವನನ್ನೂ ಕೊಂದರೆ ತಪ್ಪೇನು ಎಂಬ ಮುಗ್ಧಭಾವನೆಯೂ ಇರಬಹುದು. ಇಂಥ ಮನೋವಿಕಾರಿಗಳೆಲ್ಲಾ ಕಾನೂನಿನ ಶಿಕ್ಷೆಗೆ ಯೋಗ್ಯರಲ್ಲ ಎನ್ನುವುದೇ ತಾತ್ಪರ್ಯ. ಸರ್ ಜೇಮ್ಸ್ ಸ್ಟೀಫನರು ಮತಿಹೀನರ ಬಗ್ಗೆ ಬಹಳ ಸೊಗಸಾದ ಉದಾಹರಣೆ ಕೊಟ್ಟಿದ್ದಾರೆ: 'ಒಬ್ಬ ಮತಿಗೇಡಿ ಮಲಗಿ ನಿದ್ರಿಸುತ್ತಿದ್ದಾತನೊಬ್ಬನ ತಲೆ ಕಡಿದು ಅಡಗಿಸಿಟ್ಟ. ಆತ ಎಚ್ಚರವಾದಾಗ ತನ್ನ ತಲೆಗಾಗಿ ಆತ ಹುಡುಕಾಡಿ ಅನುಭವಿಸುವ ಪರಿಪಾಟಲನ್ನು ನೋಡಿ ಆನಂದಿಸಬೇಕೆಂಬ ಉದ್ದೇಶದಿಂದ ಆತ ಹೀಗೆ ಮಾಡಿದ.' ಇಲ್ಲಿ ನಿದ್ರಿಸಿದಾತನಿಗೆ ತನ್ನ ತಲೆಯ ಹಕ್ಕಿದೆ ಹಾಗೂ ಆತನ ತಲೆ ಕಡಿದ ಕಾರಣ ಆತ ಎಚ್ಚರಗೊಳ್ಳುವಾಗ ಆತ ಎದುರಿಗಿದ್ದರೆ ತನ್ನ ಕೈಗೆ ಬೇಡಿ ಹಾಕಿಸಿಯಾನು ಎಂಬ ಭಯವೂ ಇದ್ದ ಕಾರಣ ಆತ ಕಾರ್ಯವಾದ ಕೂಡಲೇ ಅಡಗುತ್ತಾನೆ. ಆದರೂ ಆತನಿಗೆ ತನ್ನ ಚೆಲ್ಲಾಟ ಸಾಧಿಸದು, ಕಾರಣ ತಲೆ ಕಡಿದ ಅನಂತರ ಆತ ಎಚ್ಚರಗೊಳ್ಳಲಾರ—ಎಂಬ ತಿಳಿವಳಿಕೆಯೇ ಇತ್ತಿಲ್ಲ. ಇಲ್ಲಿ ಅಂಥವನಿಗೆ ತನ್ನ ಕಾರ್ಯ ತಪ್ಪು ಎಂಬ ಅರಿವಿದ್ದರೂ ಆತನಿಗೆ ಅದರ ಸ್ವಭಾವ ಅಥವಾ ಉಗ್ರಸ್ವರೂಪದ ಬಗ್ಗೆ ವಿವೇಚನೆ ಇಲ್ಲದ ಕಾರಣ ಆತನನ್ನು ದಂಡಿಸುವುದು ಸರಿಯಲ್ಲ. ಲಾರ್ಡ್ಸ್ ಸಭೆ ನ್ಯಾಯಾಧಿಪತಿಗಳಿಗೆ ಹಾಕಿದ ಪ್ರಶ್ನೆಗಳಿಗೆ ಉತ್ತರರೂಪವಾಗಿ ಬಂದ ೧೮೭೯ರ ಕರಡುಸಂಹಿತೆ ಇಂಥವರ ಬಗ್ಗೆ ಕಾನೂನನ್ನು ವಿಶದೀಕರಿಸುತ್ತದೆ. ಲಾರ್ಡ್ಸ್ ಸಭೆ ಕೇಳಿದಂಥ ಕೆಲವು ಪ್ರಶ್ನೆಗಳಿಗೆ ನ್ಯಾಯಾಧಿಪತಿಗಳು ಮೆಕ್ ನಾಟನ್ ಮೊಕದ್ದಮೆಯಲ್ಲಿ ಕೊಟ್ಟ ಉತ್ತರಗಳ ಸಾರಾಂಶ ಹೀಗಿದೆ.

1 ಪ್ರತಿಯೊಬ್ಬ ಮಾನವನೂ ಸ್ಥಿರಚಿತ್ತದವನಾಗಿದ್ದು ತನ್ನ ಎಲ್ಲ ಕೃತ್ಯಗಳ ಹೊಣೆತನದ ಬಗ್ಗೆ ಆತನಿಗೆ ವಿವೇಚನಾಶಕ್ತಿಯಿದ್ದು ಎಲ್ಲ ಅಪರಾಧಕ್ಕೂ ಆತ ಜವಾಬ್ದಾರನಾಗುತ್ತಾನೆ ಎಂಬುದು ಕಾನೂನು. ಆದರೆ ಅಂಥವನು ಇದಕ್ಕೆ ತದ್ವಿರುದ್ಧವಾಗಿದ್ದಾನೆ ಅಥವಾ ಉನ್ಮಾದಿಯಾಗಿದ್ದಾನೆಂದು ನ್ಯಾಯದರ್ಶಿಗಳಿಗೆ (ಜೂರಿ) ಮನವರಿಕೆ ಮಾಡಿಕೊಡಲು ಸಮರ್ಥನಾದರೆ ಅಂಥ ಆಪಾದಿತ ದಂಡನೆಗೆ ಬಾಧ್ಯನಲ್ಲ.

2 ಮತಿವಿಕಲತೆಯ ರಕ್ಷಣೆ ಸಿಗಬೇಕಾದರೆ ಆಪಾದಿತ ಕೃತ್ಯಮಾಡುವಾಗ ಮನೋವಿಕಾರದಿಂದ ಬಳಲುತ್ತಿದ್ದನೆಂಬುದು ರುಜುವಾತಾಗಬೇಕು ಹಾಗೂ ಅಂಥ

ಸ್ಥಿತಿಯಲ್ಲಿ ಆತನಿಗೆ ತನ್ನ ಕೃತ್ಯದ ಸ್ವರೂಪ, ಫಲಿತಾಂಶಗಳ ಅರಿವಿನ ಕೊರತೆ ಇರಬೇಕು. ಒಂದು ಪಕ್ಷ ಆತನಿಗೆ ಕೃತ್ಯದ ಸ್ವರೂಪ ಹಾಗೂ ಪ್ರಕೃತಿಯ ಅರಿವಿದ್ದರೂ ಅದು ಅನೀತಿಯುದೆಂಬ ತಿಳಿವಿರಬಾರದು.

3 ಆಪಾದಿತನಿಗೆ ತನ್ನದು ಮಾಡಬಾರದಂಥ ಕೃತ್ಯ ಹಾಗೂ ನ್ಯಾಯ ಬಾಹಿರವಾದದ್ದು ಎಂಬ ಆಲೋಚನಾ ಶಕ್ತಿಯಿದ್ದರೆ ಆತನಿಗೆ ತನ್ನ ತಪ್ಪಿನ ವಿವೇಚನಾಶಕ್ತಿಯಿತ್ತು ಎಂದು ಪರಿಗಣಿಸಿ ಶಿಕ್ಷಿಸಬೇಕು ಎಂಬುದೇ ನ್ಯಾಯಾಧಿಪತಿಗಳ ಅಭಿಪ್ರಾಯ.

4 ಯಾವುದೋ ಮಾಯೆ ಅಥವಾ ಕಲ್ಪನೆಗೀಡಾಗಿ ಭ್ರಮಿತಮನದಿಂದ ಒಂದು ಅಪರಾಧವೆಸಗಿದರೆ ಆತ ಕಲ್ಪಿಸಿದಂಥ ಸ್ಥಿತಿಯೇ ನಿಜವಾಗಿದ್ದು ಅಂಥ ಪರಿಸ್ಥಿತಿಯಲ್ಲಿದ್ದಾಗ ಆ ಕಾರ್ಯ ಎಸಗಿದ್ದಿದ್ದರೆ ಆತ ಎಷ್ಟು ಜವಾಬ್ದಾರನೋ, ಅಷ್ಟೇ ಭ್ರಮಿತ ಮನದಿಂದ ಎಸಗಿದ ಅಪರಾಧಕ್ಕೂ ಜವಾಬ್ದಾರನೆಂದು ತಿಳಿಯ ತಕ್ಕದ್ದು. ಸರಕಾರದ ಆಜ್ಞೆಯ ಪ್ರಕಾರ ನ್ಯಾಯವಾಗಿ ತಾನು ಒಬ್ಬನನ್ನು ಕೊಲ್ಲುವುದಾಗಿ ತಿಳಿದ ಆಪಾದಿತನ ಉದಾಹರಣೆ ಇದಕ್ಕೆ ನಿದರ್ಶನ. ಸ್ಕಾಟ್ಲೆಂಡಿನ ಒಂದು ಉದಾಹರಣೆ ಇಂತಿದೆ: ಆಪಾದಿತ ತಾನು ಒಂದು ಕ್ರೂರಮೃಗದೊಡನೆ ಹೋರಾಡುತ್ತಲಿದ್ದೇನೆ ಎಂದು ಕನವರಿಸಿ ತನ್ನ ಮಗುವನ್ನೇ ಕೊಂದ. ಇನ್ನೊಬ್ಬ ಆಪಾದಿತ ತಾನೊಬ್ಬ ರಾಜನ ಮಗನೆಂಬ ಭ್ರಮೆಯಿಂದ ಜನರಿಂದ ಹಣ ಶೇಖರಿಸಿದಾಗ ಆತನನ್ನು ಶಿಕ್ಷಿಸಲಾಯಿತು. ಇಲ್ಲಿ ಆತನ ಮನೋವೈಕಲ್ಯ ಆತನನ್ನು ಬಿಡುಗಡೆಮಾಡಲು ಸಹಾಯಕವಾಗಲಿಲ್ಲ; ಏಕೆಂದರೆ ತಾನೊಬ್ಬ ರಾಜಕುಮಾರ ಎಂಬ ಭ್ರಾಂತಿ ಮಾತ್ರ ಆತನಿಗಿತ್ತೇ ಹೊರತು ಹಣ ಶೇಖರಿಸುವ ಹಕ್ಕು ಆತನಿಗಿತ್ತೆಂಬ ಭ್ರಮೆ ಆಪಾದಿತನಿಗಿರಲಿಲ್ಲವಾದ ಕಾರಣ ದಂಡನೆಗೆ ಬದ್ಧನೆಂದು ತಿಳಿಯಲಾಯಿತು. ೧೮೪೩ರ ತನಕ ಮತಿವಿಕಲತೆಯ ಬಗ್ಗೆ ಬಿರುಸಾದ ಚರ್ಚೆ ನಡೆದು, 'ಮೆಕ್ ನಾಟನ್ ನಿಯಮಗಳಲ್ಲಿ' ಅದು ಪರ್ಯವಸಾನವಾಯಿತು. ಮತಿವಿಕಲರ ಹೊಣೆಯ ಬಗ್ಗೆ ಕಾಯಿದೆ ನಿರ್ದಿಷ್ಟವಾದ ನಿಯಮಗಳನ್ನು ಮಂಡಿಸಿತು.

ಹಿಂದೆ ಹೇಳಿದ ಮೊಕದ್ದಮೆಯಲ್ಲಿ ಆಪಾದಿತ ತನ್ನ ಮಗುವನ್ನು ನಿದ್ರಾಭಂಗವಾದುದಕ್ಕಾಗಿ ಸಿಟ್ಟಿನಿಂದ ಕೊಂದ ಅನಂತರ ತನ್ನ ತಪ್ಪನ್ನು ತಾನೇ ಒಪ್ಪಿಕೊಂಡ. ಆದಕಾರಣ ಆತ ಮತಿವಿಕಲನಾಗಿದ್ದು, ಆತನದು ಉದ್ದೇಶರಹಿತವಾದ ಕ್ರಿಯೆಯಾದರೂ ಆತ ಅಪರಾಧಿಯೇ. ಸತ್ಯವನ್ನು ಮರೆಮಾಚಲಿಲ್ಲ ಎಂಬ ದೃಷ್ಟಿಯಿಂದ ಕೊಲೆಗಡುಕರನ್ನು ಕ್ಷಮಿಸಿದರೆ ಸಮಾಜದಲ್ಲಿ ಜೀವಿಸುವುದು ಅಸಾಧ್ಯವಾದೀತು. ಕೇವಲ ಉದ್ದೇಶರಹಿತವಾಗಿದೆ ಎಂಬ ಮಾತ್ರಕ್ಕೆ ಆಪಾದಿತ ಕೊಲೆಗೆ ಬಾಧ್ಯನಲ್ಲ ಎಂದಾಗುವುದಿಲ್ಲ (ಆರ್ ವಿರುದ್ಧ ಹೇನ್ಸ್). ಮರೆಮಾಚದಿರುವ ಗುಣ, ಉದ್ದೇಶರಹಿತವಾದ ಕ್ರಿಯೆ—ಇವು ಮಾತ್ರ

ಒಬ್ಬನನ್ನು ತನ್ನ ಅಪರಾಧದಿಂದ ವಿಮುಕ್ತಿಗೊಳಿಸಲಾರವು, ಇವು ಮಾತ್ರ ಒಬ್ಬನನ್ನು ಮತಿವಿಕಲನನ್ನಾಗಿ ಅಥವಾ ಬುದ್ಧಿವಂತನನ್ನಾಗಿ ಮಾಡಲಾರವು.[3]

ನಾವು ಗಮನಿಸಬೇಕಾದ ಇನ್ನೊಂದು ಮುಖ್ಯ ವಿಚಾರವೆಂದರೆ ಆಪಾದಿತ ಅಪರಾಧವನ್ನು ಎಸಗುವ ಮೊದಲು ಮತಿವಿಕಲನಾಗಿರಬಹುದು, ಹಾಗೂ ಜೈಲಿನಲ್ಲಿದ್ದಾಗ ಮತ್ತೊಮ್ಮೆ ಮತಿವೈಕಲ್ಯಕ್ಕೆ ಈಡಾಗಿರಬಹುದು. ಆದರೂ ೮೪ನೆಯ ಕಲಮಿನ ಪ್ರಕಾರ ಆತ ಮತಿವಿಕಲ ಎನಿಸಲಾರ.[4] ಒಬ್ಬ ತನ್ನ ಸರಕಾರಿ ಹುದ್ದೆಯಲ್ಲಿ ಇದ್ದು ತನ್ನ ಕರ್ತವ್ಯ ಪರಿಪಾಲಿಸಿಕೊಂಡು ಹೋದ ಮಾತ್ರಕ್ಕೆ ಆತ ಸ್ಥಿರಚಿತ್ತದವನೆಂದು ಹೇಳಲೂ ಅಸಾಧ್ಯ. ಅಂಥವನು ಮತಿವಿಕಲನಾಗಿದ್ದರೂ ಕೆಲಸದಲ್ಲಿದ್ದಾನೆಂಬಕಾರಣದಿಂದ ಆತನಿಗೆ ತನ್ನ ಕೃತ್ಯ ಕಾನೂನಿಗೆ ಬಾಹಿರ ವಾದದ್ದೆಂದು ಅರಿವಾಗದಿರಬಹುದು.[5]

ಭಾರತೀಯ ದಂಡಸಂಹಿತೆಯ ೮೪ನೆಯ ಕಲಂ

ಭಾರತೀಯ ದಂಡಸಂಹಿತೆಯ ೮೪ನೆಯ ಕಲಂ ಪ್ರಕಾರ "ಅಸ್ವಸ್ಥಮನದ ಕಾರಣದಿಂದಾಗಿ ಯಾವಾತನಿಗೆ ತಾನು ಒಂದು ಕೃತ್ಯ ಮಾಡುವಾಗ ಅದು ಅನ್ಯಾಯ ವಾದದ್ದು ಅಥವಾ ಕಾನೂನಿಗೆ ವಿರೋಧವಾದ ಕ್ರಿಯೆ ಎಂದು ಅದರ ಸ್ವಭಾವ ತಿಳಿಯುವ ಸಾಮರ್ಥ್ಯವಿಲ್ಲವೋ ಅಂಥವನು ಮಾಡಿದ ಯಾವ ಕ್ರಿಯೆಯೂ ತಪ್ಪು ನಡೆವಳಿ (ಆಫೆನ್ಸ್) ಎಂದೆನಿಸುವುದಿಲ್ಲ.[6] ಇದರ ಅಡಿಗಲ್ಲು 'ಮೆಕ್ ನಾಟನ್ ನಿಯಮಗಳು.' ಆದರಾರಣ ಒಂದು ಕೃತ್ಯವನ್ನು ಮಾಡುವಾಗ ಆ ಸಮಯದಲ್ಲಿ ಆತ ತನ್ನ ಪ್ರಕೃತಿ, ಸ್ವರೂಪ ಮತ್ತು ಫಲಿತಾಂಶಗಳ ಬಗ್ಗೆ ತಿಳಿಯಲು ತನ್ನ ಮನದ ಕೊರತೆಯಿಂದಾಗಿ ಅಸಮರ್ಥನಾಗಿರಬೇಕು. ಇದು ಅಗತ್ಯವಾದ ಒಂದು ಘಟಕ. ಅಂಥ ಕೃತ್ಯ ತಪ್ಪಿನಿಂದಾಗಲಿ, ಸತ್ಯಸಂಗತಿಯನ್ನು ತಿಳಿಯದೆ ಮುಗ್ಧ ಭಾವದಿಂದಾಗಲಿ ಮಾಡಿದ್ದಿರಬಹುದು. ಎರಡನೆಯದಾಗಿ ಆತ ತನ್ನ ಅಂಥ ಕೃತ್ಯ ಅನ್ಯಾಯದ್ದು ಅಥವಾ ಕಾನೂನಿಗೆ ವಿರೋಧವಾದದ್ದು ಎಂದು ಕೂಡ ತಿಳಿಯಲಸ ಮರ್ಥನಿರಬೇಕು. ಒಂದು ವೇಳೆ ಆತನಿಗೆ ತನ್ನ ಕೃತ್ಯ ತಪ್ಪೆಂದು ತಿಳಿದಿದ್ದರೆ ಸಾಕು, ಅದು ಕಾನೂನುಬಾಹಿರವಾದದ್ದು ಎಂದು ತಿಳಿದಿರದಿದ್ದರೂ ಆತ ಕ್ಷಮೆಗೆ ಅಪಾತ್ರ; ಮಾತ್ರವಲ್ಲ ಆತನಿಗೆ ತನ್ನ ಕೃತ್ಯ ಕಾನೂನುಬಾಹಿರವಾದದ್ದು ಎಂದು

---

[3] *A.I.R., 1952, Mad, 174, Govindaswamy*

[4] *A.I.R., 1932, Lab, 260*

[5] *A.I.R.*, 1939, Mad, 107, G. Joseph

[6] Nothing is an offence which is done by a person who, at the time of doing it, by reason of unsoundness of mind, is incapable of knowing the nature of the act, or that he is doing what is either wrong or contrary to law.

ತಿಳಿದಿದ್ದರೆ ಸಾಕು, ತಪ್ಪಲ್ಲ ಎಂದು ತಿಳಿದಿದ್ದರೂ ಶಿಕ್ಷೆಗೆ ಪಾತ್ರನೇ. ಆದುದರಿಂದ ಈ ಎರಡರಲ್ಲಿ ಒಂದರ ಬಗ್ಗೆ ಆತನಿಗೆ ತಿಳಿವಳಿಕೆಯಿದ್ದರೆ ಸಾಕು, ಉಳಿದವು ಕಲಮಿನ ಪ್ರಕಾರ ಅಂಥವನಿಗೆ ಕ್ಷಮೆ ಸಿಕ್ಕದು. ಉದಾಹರಣೆ: ಲಕ್ಷ್ಮಣ ದಾಗುವಿನ ಮೊಕದ್ದಮೆ.[7] ಆಪಾದಿತ ಜ್ವರಪೀಡಿತನಾಗಿ ನರಳುತ್ತಿದ್ದು, ಮಲಗಿದ್ದಾಗ ತನ್ನ ಇಬ್ಬರು ಮಕ್ಕಳು ಅತ್ತು ರಂಪಾಟ ಮಾಡಿದ ಕಾರಣ ಅವನಿಗೆ ತೊಂದರೆಯಾಗಿ ಸಿಟ್ಟೇರಿತು. ಆ ಸಿಟ್ಟಿನಲ್ಲಿ ಮಕ್ಕಳನ್ನು ಗದರಿಸಿ ಕೊಂದೇ ಬಿಟ್ಟ. ಕೊಲೆಗಾಗಿ ಆತನನ್ನು ಬಂಧಿಸಿದಾಗ ಕೊಲೆಮಾಡಿದ ಆಪಾದನೆಯನ್ನು ಆತ ಒಪ್ಪಿಕೊಂಡ ಆದರೆ ಕೊಲೆಮಾಡಿದಾಗ ಜ್ವರಪೀಡಿತನಾಗಿದ್ದ ತನ್ನ ಮನಃಸ್ಥಿತಿ ಸಹಜವಾಗಿತ್ತಿಲ್ಲ, ತಾನು ಆ ಕಾಲದಲ್ಲಿ ಭ್ರಮಿತನಾಗಿದ್ದ—ಎಂದು ವಾದಿಸಿದರೂ ನ್ಯಾಯಾಲಯ ಅದನ್ನು ಸ್ವೀಕರಿಸಲಿಲ್ಲ. ಕಾರಣ—ಕೊಲೆಮಾಡುವಾಗ ಆತನ ಮನಸ್ಸು ಜ್ವರ ದಿಂದಾಗಿ ಭ್ರಾಂತವಾಗಿತ್ತು ಎಂಬುದನ್ನು ಸಿದ್ಧಮಾಡದ ಕಾರಣ ಆಪಾದಿತನಿಗೆ ಕಾಯಿದೆಯನ್ವಯ ಶಿಕ್ಷೆ ಕೊಡಲಾಯಿತು.

ಆಪಾದಿತ ನಡುರಾತ್ರಿ ಥಕ್ಕನೆ ನಿದ್ರೆಯಿಂದ ಎಚ್ಚರಗೊಂಡಾಗ ಒಂದು ದೊಡ್ಡ ನಾಗರಹಾವನ್ನು ಕಂಡಂತೆ ಭ್ರಮಿಸಿದ. "ಯಾರದು?" ಎಂದು ಎರಡು ಸಲ ಪ್ರಶ್ನಿಸಿದರೂ ಉತ್ತರ ಬಾರದೆ ಅದು ತನ್ನನ್ನು ಸಮೀಪಿಸಿದಂತೆ ತೋರಿದಾಗ ಅದನ್ನು ಒಂದು ಕೈಕೊಡಲಿಯಿಂದ ಕೊಂದ. ಆದರೆ ಎಚ್ಚರ ಗೊಂಡಾಗ ತನ್ನ ಮಡದಿ ಕೊಲೆಯಾದದ್ದು ತಿಳಿದುಬಂತು. ಆತನ ತಪ್ಪು ಅಪರಾಧ ಎನಿಸಲಿಲ್ಲ. ಇನ್ನೊಬ್ಬಾತ ತನ್ನ ತಾಯಿಯನ್ನು ಕೊಂದ. ಯಾವ ಕಾರಣವೂ ಇಲ್ಲದೆ ಮಲತಂದೆಯನ್ನು ಗಾಯಗೊಳಿಸಿದ. ಕಾನೂನು ಕರೆದಾಗ ತಾನು ಮೂರ್ಛಾರೋಗಿ ಎಂದು ನೆಪಹೂಡಿದ. ಆದರೆ ಆಗ ಆತ ತನ್ನ ರೋಗ ದಿಂದ ಗುಣಮುಖನಾಗುತ್ತಲಿದ್ದ ಕಾರಣ ರೋಗ ಆತನಿಗೆ ಸಹಾಯಕವಾಗಲಿಲ್ಲ. ಬಾಣಂತಿಯ ಉನ್ಮಾದಕ್ಕೆ ಪಾಪ್ಪತ್ತಿ ಅಮ್ಮಾಳ ವ್ಯಾಜ್ಯ ಉದಾಹರಣೆ. ನಿದ್ರಾ ಸಂಚಾರ ರೋಗದ ನೆಪ ರುಜುವಾತಾಗಿದ್ದರೆ ಆಕೆ ಹೇಗೆ ಕ್ಷಮಾರ್ಹಳಾಗಿದ್ದಳು ಎಂಬುದನ್ನು ಮುಂದೆ ಪರಿಶೀಲಿಸಲಾಗುತ್ತದೆ.

ದುಷ್ಟಶಕ್ತಿಗಳ ಪ್ರಭಾವಕ್ಕೆ ಒಳಗಾಗಿ ಕೊಲೆ ಮಾಡಿದುದಾಗಿ, ಹಾಗೆ ಮಾಡದಿದ್ದಲ್ಲಿ ಎಲ್ಲಿ ತನ್ನ ಕೊಲೆ ನಡೆಯುವುದೋ ಎಂದು ಭೀತಳಾಗಿದ್ದುದಾಗಿ ಆಪಾದಿತೆ ನೀಡಿದ ವಾದವನ್ನು ನ್ಯಾಯಾಲಯ ತಿರಸ್ಕರಿಸಿ ಆಕೆ ಅಪರಾಧಿ ಎಂದಿತು.

ಮನಸ್ಸಿನ ಅಸ್ವೈಚ್ಛಿಕ ಒತ್ತಡದ ಬಗ್ಗೆ 'ರಾಜಗೋಪಾಲ' ಮೊಕದ್ದಮೆ ಯಿಂದ[8] ತಿಳಿಯಬಹುದು. ಇದು ಇಂಗ್ಲಿಷ್ ಕಾಯಿದೆಯಲ್ಲಿ ಕಂಡುಬರುವ

---

[7] *I.L.R. (1886) 10 Bom*, 512

[8] A.J.R. 1952, Mad. 289

ದಿಲ್ಲ. ೧೮೪೩ರಲ್ಲಿ ಮಂಡಿಸಿದ ಮೆಕ್‌ನಾಟನ್ ನಿಯಮಗಳಿಂದಾಗಿ ನ್ಯಾಯಾಧಿಪತಿಗಳಿಗೆ ಅವುಗಳನ್ನು ಮೀರಿ ನಡೆಯಲು ಸಾಧ್ಯವಿರಲಿಲ್ಲ. ಮನೋವೈಕಲ್ಯದ ನೆಪವನ್ನು ದಂಡನೀಯ ವ್ಯಾಜ್ಯಗಳಲ್ಲಿ ಎಷ್ಟರಮಟ್ಟಿಗೆ ಸ್ವೀಕರಿಸಬಹುದೆಂಬ ವಿಚಾರದಲ್ಲಿ ಭಾರತೀಯ ಕಾನೂನು ಇಂಗ್ಲಿಷ್ ಕಾನೂನಿಗೆ ಸರಿಸಮಾನವಾಗಿದೆ.

ಆದರೆ ಸಂಯುಕ್ತಸಂಸ್ಥಾನದಲ್ಲಿ ಅಲ್ಲಿಯ ಅತ್ಯುಚ್ಚ ನ್ಯಾಯಾಲಯ (ಸುಪ್ರೀಮ್ ಕೋರ್ಟ್) ಹಾಗೂ ಕೆಲವು ರಾಜ್ಯಗಳ ನ್ಯಾಯಾಲಯಗಳು ಅನೈಚ್ಛಿಕ ಒತ್ತಡವನ್ನು (ಇರ್ರೆಸಿಸ್ಟಿಬಲ್ ಇಂಪಲ್ಸ್) ಯೋಗ್ಯ ನೆಪ ಎಂದು ಸ್ವೀಕರಿಸಿ ಶಿಕ್ಷೆಯಿಂದ ವಿನಾಯಿತಿ ಕೊಡುತ್ತವೆ. ಅಂಥ ಆಪಾದಿತನಿಗೆ ತನ್ನ ಕೃತ್ಯ ಕಾನೂನಿಗೆ ವಿರೋಧವಾದದ್ದು ಎಂಬ ಗ್ರಹಣಶಕ್ತಿಯಿದ್ದರೂ ವಿನಾಯಿತಿಯನ್ನು ನೀಡುತ್ತವೆ. ಆದರೆ ಇಂಗ್ಲೆಂಡಿನಲ್ಲಿ ಕೆಲವು ನ್ಯಾಯಾಧೀಶರ ತೀರ್ಪುಗಳು ಹಾಗೂ ಸರ್ ಜೇಮ್ಸ್ ಸ್ಟೀಫನ್ ಹೇಳಿದ ಪ್ರಕಾರ ಅಂಥ ಮನದ ಆವೇಗ ಅಥವಾ ಒತ್ತಡ ನಿಜವಾಗಿ ಐಚ್ಛಿಕವಾಗಿರದಿದ್ದರೆ ಮಾತ್ರ ವಿನಾಯಿತಿ ಕೊಡಬೇಕೆನ್ನುತ್ತವೆ. ಮನವನ್ನು ಹಿಡಿತದಲ್ಲಿ ಇಟ್ಟುಕೊಳ್ಳುವಂತಹ ಶಕ್ತಿಯ ಕೊರತೆ ತನ್ನದೇ ತಪ್ಪಿನ ಫಲಿತಾಂಶವಾಗಿರಬಾರದು, ಎಂದು ಸರ್ ಜೇಮ್ಸ್ ಸ್ಟೀಫನ್ ಹೇಳಿದ್ದಾರೆ. ಮನದ ಅನೈಚ್ಛಿಕ ಒತ್ತಡಕ್ಕೆ (ಹದ್ದಿನಲ್ಲಿಡಲು ಅಸಾಧ್ಯವಾದರೂ) ಭಾರತದ ಕಾನೂನಿನಲ್ಲಿ ಯಾವ ರೀತಿಯ ಮನ್ನಣೆ ಅಥವಾ ವಿನಾಯಿತಿಯಿಲ್ಲ.

ಮತ್ತೊಂದು ಮುಖ್ಯ ಘಟಕವೆಂದರೆ, ಆಪಾದಿತನಿಗೆ ತಾನು ಮಾಡುವುದು ತಪ್ಪು ಅಥವಾ ಕಾನೂನಿಗೆ ವಿರೋಧವಾದುದೆಂಬುದು ತಿಳಿದಿರಬಾರದು ; ಆತನಿಗೆ ಎರಡರಲ್ಲಿ ಒಂದರ ತಿಳಿವಳಿಕೆಯಿದ್ದರೆ ಆತ ಕ್ಷಮಾಯೋಗ್ಯನಲ್ಲ. ಜೋಟಿಲಾಲನ ಮೊಕದ್ದಮೆ[9] ಇದನ್ನು ವಿವರವಾಗಿ ತಿಳಿಸುತ್ತದೆ. ಆಪಾದಿತ ತನ್ನ ಪತ್ನಿ ಹಾಗೂ ಮಗುವನ್ನು ಕೊಂದುದಕ್ಕಾಗಿ ಕೆಳಗಿನ ನ್ಯಾಯಾಲಯ ಆತನನ್ನು 'ಅಪರಾಧಿ' ಎಂದು ತೀರ್ಮಾನವಿತ್ತಿತು. ಆದರೆ ಮೇಲಿನ ನ್ಯಾಯಾಲಯಕ್ಕೆ ಅಪೀಲು ಹೋದಾಗ ನ್ಯಾಯಾಧೀಶರು ಆಪಾದಿತನಿಗೆ ತನ್ನ ಕಾರ್ಯ ತಪ್ಪು ಎಂಬುದು ಸರಿಯಾಗಿ ತಿಳಿದಿರಲಿಲ್ಲವಾದುದರಿಂದ ಆತನ ತಪ್ಪು ೮೪ನೆಯ ಕಲಮಿನ ಪ್ರಕಾರ ಕ್ಷಮಾಯೋಗ್ಯವಾಗಿದೆಯೆಂದು ತೀರ್ಪಿತ್ತಿತು.

ಆಪಾದಿತ ಭ್ರಾಂತಿಮನದಿಂದ ತನ್ನ ಪತ್ನಿಯನ್ನು ಏನೊಂದೂ ಉದ್ದೇಶವಿಲ್ಲದೆ ಕೊಲೆ ಮಾಡಿದ ಕಾರಣ ಆತ ದಂಡನೀಯ ಕೃತ್ಯಕ್ಕೆ ಹೊಣೆಯಲ್ಲ ಎಂದು 'ದಿಲ್‌ಗಾಜಿ' ಮೊಕದ್ದಮೆಯ[10] ತೀರ್ಪಿನ ಹುರುಳು. 'ಕಾಜಿ ಬಾಜ್ಲುರ್'[11]

---

[9] A.J.R. 1959, Madh. Pra. 203

[10] I.L.R. (1907), 34 Cal. 686

[11] Kazi Bazlur's Case (1929), 33 Cal. W. N. 136

ಮೊಕದ್ದಮೆಯಲ್ಲಿ ಆಪಾದಿತ ಚಿತ್ತಗಾಂಗಿನ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿದ್ದ ಸರ್ ಡೇವಿಸ್ ಎಂಬವನ ಕೊಲೆಗಾಗಿ ಬಂಧಿತನಾಗಿದ್ದ. ಆತ ಶಿಕ್ಷಾರ್ಹನೆಂದು ನ್ಯಾಯಾಲಯ ತೀರ್ಪಿತ್ತಿತು. ಆತ ಕೊಲೆಮಾಡುವಾಗ ತನ್ನ ಆ ಕೃತ್ಯದ ಫಲಿತಾಂಶ ತಿಳಿಯದಷ್ಟು ಭ್ರಾಂತನಾಗಿರಲಿಲ್ಲವೆಂದು ರುಜುವಾತಾದ ಕಾರಣ ಅಳನೆಯ ಕಲಮಿನ ರಕ್ಷಣೆ ಆತನಿಗೆ ಸಿಕ್ಕದೆಂದು ಶಿಕ್ಷೆ ಖಾಯಂ ಮಾಡಲಾಯಿತು.

ಅನೇಕರಿಗೆ ಅನೇಕ ಚಟಗಳಿರುತ್ತವೆ. ಕೆಲವರಿಗೆ ತಾವು ಕಂಡ ವಸ್ತು ಏನೇ ಇರಲಿ, ಅದರಿಂದ ಮನ ಆಕರ್ಷಿತವಾದರೆ ಸರಿ, ಅದು ತಮಗೆ ಸಿಕ್ಕಲೇ ಬೇಕು. ಅದು ಯಾರಿಗೇ ಸೇರಿರಲಿ, ಹೇಳದೆ ಕೇಳದೆ, ತಮ್ಮ ವಸ್ತುವಾಗಿದ್ದರೆ ಹೇಗೆ ಧೈರ್ಯದಿಂದ ಉಪಯೋಗಿಸಬಹುದೋ ಹಾಗೇ ಇತರರದನ್ನೂ ಉಪಯೋಗಿಸ ಬಹುದೆಂಬ ಮನೋವಿಕಲತೆಯಿಂದ ಕೂಡಿದವರಾಗಿರುತ್ತಾರೆ. ಚೌರ್ಯೋನ್ಮಾದ (ಕ್ಲೆಪ್ಟೋಮೇನಿಯ) ಇವುಗಳಲ್ಲಿ ಒಂದು. ಅಂಥವರು ಅಂಗಡಿಗೆ ಹೋದರೆ ಅಲ್ಲಿಂದ, ಸ್ನೇಹಿತರಲ್ಲಿ ಹೋದರೆ ಅಲ್ಲಿಂದ, ತಮಗೆ ಬೇಕೆನಿಸಿದ ವಸ್ತುವನ್ನು ತೆಗೆದುಕೊಂಡು ಹೋಗಿಯೇ ಬಿಡುತ್ತಾರೆ. ಇನ್ನು ಕೆಲವರು ನಿದ್ರೆಯಲ್ಲಿ ಮರ ಹತ್ತುವುದು, ನಡೆಯು ವುದು, ಇತ್ಯಾದಿ ಕ್ರಿಯೆಗಳನ್ನು ನಡೆಸಿದರೂ ಎಚ್ಚರಗೊಂಡಾಗ ಅವರಿಗೆ ಇವುಗಳ ತಿಳಿವೇ ಇರುವುದಿಲ್ಲ. ಇದಕ್ಕೆ ಉದಾಹರಣೆ ಪಾಪ್ಪತ್ತಿ ಅಮ್ಮಾಳ್ ಮೊಕದ್ದಮೆ.[12] ಆಪಾದಿತಳು ಹೆರಿಗೆಯಾದೊಡನೆ ಮನೋವಿಕಾರಕ್ಕೊಳಗಾಗಿ ತಾನು ತನ್ನ ಮಗುವಿ ನೊಂದಿಗೆ ಬಾವಿಗೆ ಹಾರಿದಳು. ಆಸುಪಾಸಿನವರು ಅವಳನ್ನು ರಕ್ಷಿಸಿದರು, ಆದರೆ ಮಗು ಸತ್ತಿತ್ತು. ಆತ್ಮಹತ್ಯಾ ಪ್ರಯತ್ನಕ್ಕಾಗಿ ಮತ್ತು ಮಗುವಿನ ಕೊಲೆಗಾಗಿ ಅವಳನ್ನು ಬಂಧಿಸಲಾಯಿತು. ಇಲ್ಲಿ ನಿದ್ರಾಸಂಚಾರ (ಸೋಮ್ನಾಂಬ್ಯುಲಿಸಂ) ಅಥವಾ ಗಂಧರ್ವರೋಗದಿಂದಾಗಿ ಅಂಥ ಅಚಾತುರ್ಯವಾಯಿತೆಂಬ ಆಪಾದಿತಳ ರಕ್ಷಾಯಾಚಕ ನೆಪವನ್ನು ಅಲ್ಲಗಳೆದು ಆಕೆಗೆ ಜೀವಾವಧಿ ಗಡಿಪಾರು ಶಿಕ್ಷೆ ವಿಧಿಸ ಲಾಯಿತು. ಇಲ್ಲಿ ಆಪಾದಿತಳು ಆ ಕೃತ್ಯಮಾಡುವಾಗ ಅಂಥ ಮನೋರೋಗ ದಿಂದ ನರಳುತ್ತಿದ್ದಳೆಂಬುದನ್ನು ತಜ್ಞವೈದ್ಯರ ಸಾಕ್ಷಿಯೊಡನೆ ರುಜುವಾತುಪಡಿಸದ ಕಾರಣ ಆಕೆಯನ್ನು ಶಿಕ್ಷಿಸಲಾಯಿತು ಎಂಬುದು ನಿಜಕ್ಕೂ ಶೋಚನೀಯವಾದ ಸಂಗತಿ.

ಅಜನೆಯ ಕಲಂ

'ಅಮಲಿನ ಕಾರಣದಿಂದಾಗಿ ಯಾವಾತ ಒಂದು ಕ್ರಿಯೆ ಮಾಡುವಾಗ ತನ್ನ ಅಂಥ ಕ್ರಿಯೆ ಅನ್ಯಾಯವಾದದ್ದು ಅಥವಾ ಕಾನೂನುಬಾಹಿರವಾದದ್ದು ಎಂದು ಅದರ ಸ್ವರೂಪವನ್ನು ತಿಳಿಯುವ ಸಾಮರ್ಥ್ಯವಿಲ್ಲವೋ ಅಂಥವನು ಮಾಡಿದ

[12] M.L.J. 125 (1959)

ಯಾವ ಕ್ರಿಯೆಯೂ ತಪ್ಪು ನಡೆವಳಿ ಎಂದೆನಿಸುವುದಿಲ್ಲ; ಆದರೆ ಅಂಥ ಅಮಲಿನ ಉತ್ಪತ್ತಿಗೆ ಕಾರಣವಾದ ಪದಾರ್ಥವನ್ನು ಇನ್ನೊಬ್ಬ ಆತನಿಗೆ ತಿಳಿಯದೆಯೇ ಅಥವಾ ಆತನ ಇಚ್ಛೆಗೆ ವಿರೋಧವಾಗಿ ಕೊಟ್ಟಿರಬೇಕು[13] ಎಂದು ಆಜನೆಯ ಕಲಂ ಹೇಳುತ್ತದೆ. ಆದಕಾರಣ ಕುಡಿತದ ಅಮಲಿನಿಂದಾಗಿ ಉನ್ಮಾದಿತನಾದರೆ ಅಂಥವನ ಅಪರಾಧ ಆಜನೆಯ ಕಲಮಿನನ್ವಯ ಕ್ಷಮಾಪಾತ್ರವಾಗಬೇಕಾದರೆ ಅಂಥ ಅಮಲು ಸ್ವಇಚ್ಛೆಯ ಕುಡಿತದ ಫಲವಾಗಿ ಉಂಟಾದುದಾಗಿರಬಾರದು. ಬಿಯಾರ್ಡನ ಕೇಸಿನಲ್ಲಿ[14] ಇದರ ವಿವರಣೆಯಿದೆ. ಇಲ್ಲಿ ಆಪಾದಿತ ೧೩ ವರ್ಷದ ಹುಡುಗಿಯನ್ನು ಬಲಾತ್ಕರಿಸಿ, ಮಾನಭಂಗಮಾಡುವಾಗ ತನ್ನ ಒಂದು ಕೈಯಿಂದ ಆಕೆಯ ಬಾಯನ್ನು ಮುಚ್ಚಿ ಮತ್ತೊಂದು ಕೈಯಿಂದ ಗಂಟಲನ್ನು ಭದ್ರವಾಗಿ ಹಿಡಿದ (ಬೊಬ್ಬಿಟ್ಟು ಗಲಾಟೆಮಾಡುವುದನ್ನು ತಡೆಯುವುದಕ್ಕಾಗಿ) ಕಾರಣ ದಿಂದಾಗಿ ಆಕೆಯ ಶ್ವಾಸೋಚ್ಛ್ವಾಸ ಬಂದಾಗಿ ಮೃತಪಟ್ಟಳು. ಆಪಾದಿತನನ್ನು ಬಂಧಿಸಿದಾಗ ನ್ಯಾಯಾಲಯದಲ್ಲಿ ಆತ ಕುಡಿತದ ಅಮಲಿನ ನೆಪವನ್ನು ಹೇಳಿ ತನ್ನ ತಿಳಿವಳಿಕೆಯ ಶಕ್ತಿ ನಶಿಸಿತ್ತು ಎಂದಾಗ ಆ ನೆಪವನ್ನು ಸ್ವೀಕರಿಸದೆ ಆತನನ್ನು ಕೊಲೆಗಾಗಿ ಶಿಕ್ಷಿಸಲಾಯಿತು. ತನ್ನ ಸ್ವಇಚ್ಛೆಯಿಂದ ಕುಡಿದು ಮತ್ತಾದ ಕಾರಣ ಅಂಥ ಮಾದಕತೆ ಸ್ವಕ್ರಿಯೆಯ ಫಲ. ಆದಕಾರಣ ಅಂಥ ಕ್ರಿಯೆಗಳೆಲ್ಲ ಅಪರಾಧ ಎನಿಸುತ್ತವೆ. ಆಜನೆಯ ಕಲಮಿನ ಎರಡು ಮುಖ್ಯ ಘಟಕಗಳೆಂದರೆ :

ಮಾದಕತೆಯ ಪ್ರಭಾವದಿಂದ ಉನ್ಮಾದಿಯಾಗಿ ಒಂದು ಕ್ರಿಯೆಯನ್ನು ಅಂಥ ಉನ್ಮಾದಾವಸ್ಥೆಯಲ್ಲಿ ಎಸಗಿದರೆ ಅಂಥವನು ತನ್ನ ಕ್ರಿಯಾಫಲವನ್ನು ಅರಿಯಲಾರದಷ್ಟು ಮತಿವಿಹೀನನಾಗಿರಬೇಕು. ಎರಡನೆಯದಾಗಿ ಅಂಥವನು ತನ್ನ ಆ ಕ್ರಿಯೆ ಅನ್ಯಾಯದ್ದು ಅಥವಾ ನ್ಯಾಯಕ್ಕೆ ವಿರೋಧವಾದದ್ದು ಎಂದು ತಿಳಿಯಲಾರದಷ್ಟು ಅಮಲಿನಿಂದ ಪ್ರಭಾವಿತನಾಗಿರಬೇಕು. ಇವೆರಡು ಇದ್ದರೆ ಸಾಲದು, ಅಂಥ ಕುಡಿತ ಆತನ ಇಚ್ಛೆಗೆ ವಿರೋಧವಾಗಿ ಅಥವಾ ಬಲಾತ್ಕಾರ ಕೈಗೊಳಪಟ್ಟು ಆತನಿಗೆ ತಿಳಿಯದೆ ಮಾಡಿದಂಥ ಕಾರ್ಯವಾಗಿರಬೇಕು. ಆಗ ಮಾತ್ರ ಆತ ಅಪರಾಧ ಎಸಗಿದರೂ ಆತನಿಗೆ ಆಜನೆಯ ಕಲಂ ರಕ್ಷಣೆಯ ಅಭಯ ಹಸ್ತವನ್ನು ನೀಡುತ್ತದೆ. ಸ್ವಇಚ್ಛೆಯ ಮಿತಿಮೀರಿದ ಕುಡಿತದ ಪರಿಣಾಮ

---

[13] Nothing is an offence which is done by a person who, at the time of doing it, is, by reason of intoxication, incapable of knowing the nature of the act, or that he is doing what is either wrong, or contrary to law; provided that the thing which intoxicated him was administered to him without his knowledge or against his will.

[14] *Director of Public Prosecutions Vs Beard, 1920, AC 479*

ದಿಂದಾಗಿ ಮನಸ್ಸು ದುರ್ಬಲಗೊಂಡು, ಅರಿವಿನ ಶಕ್ತಿ ಕ್ಷಯಿಸಿ ಕ್ರಮೇಣ ಮನಸ್ಸು ಅತಿರೇಕದ ಭ್ರಾಂತಿಗೆ ಬಲಿಯಾದರೆ ಅಂಥ ಮನೋವಿಕಾರದಿಂದ ಮಾಡಿದಂಥ ಅಪರಾಧ ಅಆನೆಯ ಕಲಮಿನನ್ವಯ ವಿನಾಯಿತಿಗೆ ಅರ್ಹವಾಗುತ್ತದೆ.

ಮತಿವಿಕಲತೆಯ ಲಕ್ಷಣ

'ಮತಿವಿಕಲತೆ' ಎಂಬ ಪದದ ಲಕ್ಷಣಗಳನ್ನು ಕಾಯಿದೆಯಲ್ಲಾಗಲಿ ವೈದ್ಯಕೀಯ ಸಾಹಿತ್ಯದಲ್ಲಾಗಲಿ ಎಲ್ಲೂ ಸರಿಯಾಗಿ ವಿವರಿಸಿದ್ದು ಕಂಡುಬರುವುದಿಲ್ಲ. ಮಾನವ ನಲ್ಲಿ ಇರುವ ಆಲೋಚನಾಶಕ್ತಿ ಅಥವಾ ವಿವೇಚನಾಶಕ್ತಿಯೇ ಮುಖ್ಯ. ಇವು ಗಳಿಂದಾಗಿ ಮಾನವ ಪ್ರಾಣಿಗಳಿಗಿಂತ ಉತ್ತಮನೆನಿಸಿ ಮಾನವ ಎನಿಸಿಕೊಳ್ಳು ತ್ತಾನೆ. ಆಲೋಚನಾಶಕ್ತಿಯ ಕೇಂದ್ರಸ್ಥಾನ ಮಿದುಳು ಮತ್ತು ನರಮಂಡಲ. ಇವು ತನ್ನ ಸಹಜಸ್ಥಿತಿಯಲ್ಲಿದ್ದು ಮನಸ್ಸಿನ ಕಾರ್ಯಕಲಾಪಗಳಾದ ಅನುಭವ ಹಾಗೂ ಗ್ರಹಣಶಕ್ತಿಯ ಕೆಲಸ ಯಾವಾತನಲ್ಲಿ ಸಹಜವಾಗಿ ನಡೆಯುತ್ತದೋ ಅಂಥ ಮಾನವ ಸ್ವಸ್ಥಮನದವನೆಂದು ಕಾಯಿದೆ ಪರಿಗಣಿಸುತ್ತದೆ. ಮನಸ್ಸಿನ ಕಲಾಪ ಗಳು ಸಹಜವಾಗಿ ಯಾವ ರೀತಿಯಲ್ಲಿ ಕೆಲಸ ಮಾಡಬೇಕೋ ಆ ರೀತಿಯಲ್ಲಿ ಕೆಲಸ ಮಾಡಲಸಮರ್ಥವಾದರೆ ಅದಕ್ಕೆ ಕಾರಣ ಮನದ ಯಾವುದೋ ಕುಂದುಕೊರತೆ ಅಥವಾ ನ್ಯೂನತೆಯಾಗಿರಬೇಕು. ಮನದ ಏನೊಂದೂ ಕಾರ್ಯಕಲಾಪ ನಡೆಯದೆ ಅಸಹಜವಾಗಿದ್ದು ಮನೋರೋಗಕ್ಕೆ ಬಲಿಯಾಗಿರಲೂ ಬಹುದು.

ವೈದ್ಯಶಾಸ್ತ್ರದ ಪ್ರಕಾರ ಹಲವು ತರದ ಉನ್ಮಾದಿಗಳನ್ನೂ ಮನೋರೋಗಿ ಗಳೆಂದು ಹೇಳುವುದಾದರೂ ಎಲ್ಲ ತರದ ಮನೋರೋಗಿಗಳನ್ನೂ ಮತಿವಿಕಲರೆಂದು ಅಆನೆಯ ಮತ್ತು ಅಙನೆಯ ಕಲಮುಗಳು ಪುರಸ್ಕರಿಸುವುದಿಲ್ಲ. ಮನದ ಕುಂದು ಕೊರತೆ ಮತ್ತು ಇತಿಮಿತಿಗಳನ್ನು ವೈದ್ಯ ಮತ್ತು ಮನೋರೋಗಚಿಕಿತ್ಸಕ ವಿಮರ್ಶಿಸುವ ಅಗತ್ಯವಿಲ್ಲ. ಏಕೆಂದರೆ ಅವರಿಗೆ ಅಗತ್ಯವಾದುದು ಮನೋ ರೋಗದ ಕಾರಣ ಮತ್ತು ಚಿಹ್ನೆಗಳು. ಕಾಯಿದೆಗೆ ಬೇಕಾದುದು ಮನೋ ರೋಗದ ಸ್ಥಿತಿಗತಿ.

ವೈದ್ಯಕೀಯ ಹಾಗೂ ಕಾನೂನು ದೃಷ್ಟಿಯಲ್ಲಿ ಉನ್ಮಾದ

ಹುಚ್ಚು ಅಥವಾ ಸಂಪೂರ್ಣ ಮತಿವೈಕಲ್ಯ, ಅಪೂರ್ಣ ಮತಿವೈಕಲ್ಯ, ನೈತಿಕ ಮತಿವೈಕಲ್ಯ, ಉದ್ವೇಗೋನ್ಮಾದ, ದಹನೋನ್ಮಾದ (ಪೈರೋಮೇನಿಯ), ಚೌರ್ಯೋನ್ಮಾದ, ನಿದ್ರಾಸಂಚಾರ, ವಿಷಣ್ಣತೆ (ಮೆಲಾಂಕಾಲಿಯ) ಇತ್ಯಾದಿ ಹಲವು ತರದ ಮನೋರೋಗಗಳ ವಿವರಗಳನ್ನು ವೈದ್ಯಕೀಯ ಸಾಹಿತ್ಯ ತಿಳಿಸುತ್ತದೆ. ಜನ್ಮತಃ ಮೂಢ ಅಥವಾ ಹೆಡ್ಡರಾಗಿರುವವರೂ ಸಮಾಜದಲ್ಲಿ ಕಾಣದಿರುವುದಿಲ್ಲ. ಇಂಥ ಮತಿವಿಕಲರು ತಪ್ಪು ಮಾಡಿದಲ್ಲಿ ಅದು ಅಪರಾಧ

ಎನಿಸುವುದಿಲ್ಲ. ಕಾರಣ ಅವರು ತಮ್ಮ ಅಸಹಜ ಮನದಿಂದಾಗಿ ಮಾನವರೆನಿಸುವುದಿಲ್ಲ.

ಕೆಲವೊಮ್ಮೆ ಮಿದುಳಿಗೆ ಆದ ಆಘಾತದಿಂದಾಗಿ ಮನಸ್ಸು ಅಸಹಜ ಸ್ಥಿತಿಯನ್ನು ಪಡೆದು ಮನೋವಿಕಾರಗಳು ಉಂಟಾಗುವ ಸಂಭವವಿದೆ. ಇಂಥ ಮನೋವಿಕಾರ ಉಂಟಾದಾಗ ಮಾನವನ ಮನಸ್ಸು ತನ್ನ ಸಹಜತೆಯನ್ನು ಸಂಪೂರ್ಣವಾಗಿ ಕಳೆದುಕೊಂಡು ಆತ ವಿಪರೀತವಾದ ವರ್ತನೆಯುಳ್ಳವನಾಗುತ್ತಾನೆ. ಸಾಮಾನ್ಯ ಮಾಂಸಪೇಶಿ ಪಾರ್ಶ್ವವಾಯು, ಉನ್ಮಾದ-ವಿಷಣ್ಣ ಮನೋವಿಕ್ಷಿಪ್ತಿ (ಮೇನಿಯಾಕ್-ಡಿಪ್ರೆಸಿವ್ ಸೈಕೋಸಿಸ್), ಮುಪ್ಪಿನ ಮನೋವಿಕ್ಷಿಪ್ತಿ (ಸಿನೈಲ್ ಸೈಕೋಸಿಸ್), ಪ್ರಲಾಪ ಸಕಂಪ (ಡೆಲಿರಿಯಾ ಟ್ರೆಮೆನ್ಸ್), ಭಯಂಕರ ಭ್ರಾಂತಿ ಇತ್ಯಾದಿ ಮನೋವಿಕಾರಗಳಿಗೊಳಗಾದವರು ತಮ್ಮ ಸಹಜಸ್ವಭಾವವನ್ನೇ ಕಳೆದುಕೊಂಡಿರುತ್ತಾರೆ. ಮತಿವಿಕಲತೆ ತುಸು ದಾರಿ ತಪ್ಪಿದ ಪ್ರವೃತ್ತಿ ಎಂದರೆ ಸರಿಯಲ್ಲ. ಅದು ಹದ್ದು ಮೀರಿ ಕ್ರಮತಪ್ಪಿದ ಮನಃಪ್ರವೃತ್ತಿ.

ಹುಚ್ಚಿಗೆ ಅನೇಕ ಕಾರಣಗಳಿವೆ. ಅದು ಹುಟ್ಟಿನಿಂದಲೇ ಬಂದಿರಲೂ ಸಾಕು, ವಂಶಪರಂಪರೆಯಿಂದ ಬಂದಿರಲೂಬಹುದು. ದೈಹಿಕ ನೋವು, ಥಕ್ಕನೆ ಮನಸ್ಸಿಗಾದ ದಿಗಿಲು, ಎಡೆಬಿಡದ ಕಿರುಕುಳ, ಅತಿಯಾದ ದಣಿವು, ಕುಡಿತ, ದುಷ್ಟಚಟಗಳು ಮುಂತಾದವು ಮಿದುಳಿನ ಮೇಲೆ ಪ್ರಭಾವ ಬೀರಿ ಮಾನವನ ಮನವನ್ನು ಮಲಿನಗೊಳಿಸುತ್ತವೆ. ಕ್ಷಿಪ್ರಸನ್ನಿ (ಅಪೊಪ್ಲೆಕ್ಸಿ), ಪಕ್ಷವಾತ, ಅಪಸ್ಮಾರ ಮುಂತಾದವು ಮಿದುಳನ್ನು ಕೆಡಿಸುತ್ತವೆ. ಹೆರಿಗೆ ಹಾಗೂ ಅದರಿಂದುಂಟಾದ ಉನ್ಮಾದ (ಹಿಸ್ಟೀರಿಯ), ಜಠರ ಮೂತ್ರಕೋಶ ಮತ್ತು ಯಕೃತ್ತಿನ ರೋಗಗಳು, ಪರಂಗಿ ರೋಗ—ಇವು ಕೂಡ ಮಿದುಳಿನ ರೋಗದ ಹುಟ್ಟಿಗೆ ಕಾರಣವಾಗುತ್ತವೆ. ಇಂಥವರು ಶಿಶು ಅಥವಾ ಕ್ರೂರಮೃಗಸಮಾನರು. ಮತಿವಿಕಲತೆಯ ಶಾಬ್ದಿಕ ವಿವರಣೆ ದಂಡನೀಯ ನ್ಯಾಯಾಲಯಗಳಿಗೆ ಅನಾವಶ್ಯಕ, ರೋಗದ ಗುರುತು ಮತ್ತು ಪ್ರಗತಿ ಮಾತ್ರ ಆವಶ್ಯಕ.

ನೈತಿಕ ಮತಿವೈಕಲ್ಯ

ನೈತಿಕ ಮತಿವೈಕಲ್ಯಗಳಿಗೆ ಕಾನೂನು ವಿನಾಯಿತಿ ನೀಡುವುದಿಲ್ಲ. 'ಆಲೋಚನಾ ಶಕ್ತಿ ಸ್ವಾಭಾವಿಕವಾಗಿದ್ದು ಕೇವಲ ಸಹಿಸಲಾರದ ಮನಸ್ಸಿನ ಒತ್ತಡ ಅಥವಾ ನೈತಿಕ ಮತಿವಿಕಲತೆ, ವಿನಾಯಿತಿಗೆ ನೆಪವಾಗಲಾರದು'[15] ಇಂಥವರ ಮನಸ್ಸು ಸ್ಥಿರವಾಗಿದ್ದು ಆರೋಗ್ಯಕರವಾಗಿರುತ್ತದೆ. ನೈತಿಕ ಸಾಮರ್ಥ್ಯದ ಕೊರತೆ ಮಾತ್ರ ಇಂಥವರಲ್ಲಿ ಕಂಡುಬರುತ್ತದೆ. ಕೆಲವೊಮ್ಮೆ ಹುಚ್ಚರು ಕೂಡ ಉದ್ದೇಶಪೂರ್ವಕ

[15] *Halsbury, Vol. 9, Sec. 513*

ವಾಗಿ ಚಾತುರ್ಯದಿಂದ ಅಪರಾಧ ಮಾಡುತ್ತಾರೆ. ಹುಚ್ಚರಲ್ಲಿ ಎರಡು ಬಗೆ: ಒಂದು ಬಗೆಯವರಿಗೆ ಕಾನೂನಿನ ಭಯ ಏನೂ ಮಾಡಲಾರದು, ಕಾನೂನು ಅವರ ಮೇಲೆ ಯಾವ ರೀತಿಯ ಪ್ರಭಾವವನ್ನೂ ಬೀರಲಾರದು, ಆದ್ದರಿಂದ ಅಂಥವರನ್ನು ಶಿಕ್ಷಿಸಿದರೆ ದೌರ್ಜನ್ಯವೆಸಗಿದಂತೆ. ಇನ್ನೊಂದು ಬಗೆಯವರಿಗೆ ಕಾನೂನಿನ ಭಯವಿರುತ್ತದೆ. 'ತಮ್ಮ ಬಳಿಯಲ್ಲೀ ಪೋಲೀಸಿನವನಿದ್ದರೆ ಅವರು ಎಂದಿಗೂ ಕೃತ್ಯವೆಸಗಲಾರರು.' ಇಂತಹವರು ದಂಡನ್ಯಾಯದ ಮೇರೆಗೆ ಶಿಕ್ಷೆಗೆ ಅರ್ಹರು. 'ನರಹತ್ಯೆಯ ಪ್ರೇರಣೆಯನ್ನು ಹತ್ತಿಕ್ಕಿ ಮನದ ತುಂಟಶಕ್ತಿಯನ್ನು ಅದುಮುವ ಸಾಮರ್ಥ್ಯ ಇದ್ದವರು ಸ್ವಸ್ಥಚಿತ್ತದವರೆನಿಸುವರು. ಅಂಥವರಿಗೆ ತಮ್ಮ ಸ್ವಸ್ಥ ಅಥವಾ ಅಸ್ವಸ್ಥ ಚಿತ್ತವನ್ನು ಹದ್ದಿನಲ್ಲಿಡಲು ಶಕ್ತಿಯಿದೆ' ಎಂದು ನ್ಯಾಯಮೂರ್ತಿ ಲಾರ್ಡ್ ಬ್ರ್ಯಾಮ್‌ವೆಲ್ ಹೇಳಿದ್ದಾನೆ.[16]

ತಜ್ಞರ ಸಾಕ್ಷಿ

ಅಳನೆಯ ವಿಧಿಯ ಪ್ರಕಾರ ಅಪರಾಧಿಗೆ ರಕ್ಷಣೆ ಸಿಗುತ್ತದೆಯೋ, ಆತ ದಂಡನೆಗೆ ಯೋಗ್ಯನೋ ಅಯೋಗ್ಯನೋ—ಎಂಬುದಕ್ಕೆ ಆತನ ಇತಿಹಾಸ ಹಾಗೂ ಕುಟುಂಬ ಚರಿತ್ರೆ ಕುರಿತು ವೈದ್ಯರ ಸಾಕ್ಷಿ ಅಥವಾ ಆ ಬಗ್ಗೆ ವೈದ್ಯರ ಸಲಹೆ ಅನಗತ್ಯ. ಅದರ ಬಗ್ಗೆ ಅಭಿಪ್ರಾಯ ಕೊಡಲು ಸಮರ್ಥವಾಗಿರುವುದು ನ್ಯಾಯಾಲಯ ಮಾತ್ರ. ಆಪಾದಿತನ ಸ್ವಭಾವ, ಗುಣ, ನಡತೆಗಳ ಬಗ್ಗೆ ವೈದ್ಯ ಪರೀಕ್ಷಿಸಿ ನ್ಯಾಯಾಲಯಕ್ಕೆ ತನ್ನ ಸಲಹೆ ಕೊಟ್ಟು ಸಹಕರಿಸಬೇಕೇ ವಿನಾ ಆಪಾದಿತ ಮತಿವಿಕಲನಾದ ಕಾರಣ ನಿರಪರಾಧಿ ಎಂದು ನಿರ್ಣಯಿಸುವ ಅಧಿಕಾರ ಆತನಿಗಿಲ್ಲ. ಆಪಾದಿತನನ್ನು ಪರೀಕ್ಷಿಸಲು ಕೇಳಿಕೊಂಡಾಗ ವೈದ್ಯ ಆತನ ಮನಃಸ್ಥಿತಿಯನ್ನು ಪರೀಕ್ಷಿಸಿ, ನ್ಯೂನತೆಯನ್ನು ಪರಾಮರ್ಶಿಸಿ ಮನದ ಆ ಕೊರತೆಯಿಂದಾಗಿ ತಪ್ಪು ಕಾರ್ಯ ಮಾಡಲು ಸಾಧ್ಯವೇ, ಅಂಥ ಕಾರ್ಯ ಎಸಗಿದಾಗ ಆಪಾದಿತ ಸರಿ–ತಪ್ಪುಗಳ ತಾರತಮ್ಯ ತಿಳಿಯಲಶಕ್ತನಾಗಿದ್ದನೇ, ತಾನು ಮಾಡಿದ ಕಾರ್ಯ ಅನ್ಯಾಯದ್ದು ಹಾಗೂ ಕಾನೂನುವಿರೋಧವಾದದ್ದು ಎಂಬ ಗ್ರಹಣಶಕ್ತಿ ಇತ್ತೇ ಇತ್ಯಾದಿ ವಿಚಾರಯುಕ್ತ ಸಲಹೆಕೊಡಬೇಕು. ಆಪಾದಿತನ ಆಲೋಚನಾಶಕ್ತಿ, ಗ್ರಹಣಶಕ್ತಿ, ನಿರ್ಣಯಶಕ್ತಿ ಹೇಗಿತ್ತೆಂಬುದೇ ತಿಳಿಯಬೇಕಾದ ಮುಖ್ಯ ವಿಚಾರವಾದರೆ ಕಂಡು ಬಂದಂಥ ನ್ಯೂನತೆ ಮನದ ಕುಂದುಕೊರತೆ ಅಥವಾ ಮನೋರೋಗ ಶಾಶ್ವತವಾದುದೋ ಹಂಗಾಮಿಯಾದುದೋ ಎಂದು ತಿಳಿಯಬೇಕಾದುದು ಮುಖ್ಯ.

ಪಾಪ್ಪತ್ತಿ ಅಮ್ಮಾಳ ಮೊಕದ್ದಮೆಯಲ್ಲಿ ತಜ್ಞವೈದ್ಯರ ಸಾಕ್ಷಿಯ ಕೊರತೆಯಿಂದಾಗಿ ಆಪಾದಿತಳ ನಿದ್ರಾಸಂಚಾರ ರೋಗವನ್ನು ರುಜುವಾತುಪಡಿಸಲಾಗದೆ

---

[16] Reg. Vs Humphreys

ಆಕೆಗೆ ಶಿಕ್ಷೆಯಾಯಿತು. ವಿಷಣ್ಣಮನ, ಅಸಾಮಾನ್ಯ ಹಾಗೂ ಅಸಹಜ ನಡೆವಳಿ ಮುಂತಾದವು ಮನೋರೋಗದ ಕುರುಹು ಎನ್ನಲಾಗದು.[17] ಇವೆಲ್ಲಾ ವೈದ್ಯ ಶಾಸ್ತ್ರದ ಪ್ರಕಾರ ಮನೋವೈಕಲ್ಯವೆನಿಸಿದರೂ ಕಾನೂನಿನ ದೃಷ್ಟಿಯಿಂದ ಹಾಗಾಗುವುದಿಲ್ಲ. ಅರೆಹುಚ್ಚು ಅಥವಾ ಮನದ ಕಳವಳ ಮುಂತಾದವು ಕಾನೂನಿನ ಪ್ರಕಾರ ಮತಿವಿಕಲತೆಯೆನಿಸುವುದಿಲ್ಲ. ಇದು ಅತಿರೇಕಕ್ಕೆ ಮುಟ್ಟಿ ಚಿಕಿತ್ಸೆಯಿಂದ ಗುಣಪಡಿಸಲಸಾಧ್ಯ ಎನಿಸಿದಾಗ ಕಾನೂನಿನ ದೃಷ್ಟಿಯಿಂದ ಮತಿವೈಕಲ್ಯ ಎನಿಸುತ್ತದೆ.[18] ವೈದ್ಯಕೀಯಶಾಸ್ತ್ರ ಪ್ರಕಾರ (ಹಿಂದೆ ಪರಿಶೀಲಿಸಿದಂತೆ) ಅನೇಕ ತರದ ಉನ್ಮಾದ ಮತ್ತು ಮನೋವೈಕಲ್ಯಗಳಿದ್ದರೂ ಕಾನೂನು ದೃಷ್ಟಿಯಲ್ಲಿ ಇರುವವು ಎರಡೇ—ಶಿಕ್ಷಾರ್ಹ ಹಾಗೂ ಶಿಕ್ಷಾನರ್ಹ. ಕಾನೂನಿನ ಪ್ರಕಾರದ ಮತಿವಿಕಲತೆ ವೈದ್ಯಕೀಯ ಮತಿವಿಕಲತೆಗಳನ್ನೂ ಆವರಿಸಿರುತ್ತದೆ. ಆದರೆ ವೈದ್ಯಕೀಯವಾಗಿ ಮನೋರೋಗ ಅಥವಾ ವೈಕಲ್ಯ ಕಾನೂನಿನ ಮತಿವೈಕಲ್ಯವನ್ನು ಆವರಿಸಿರಬೇಕೆಂದೇ ಇಲ್ಲ.

ಆಪಾದಿತ ತನ್ನ ಭ್ರಾಂತಿಯಿಂದಾಗಿ ತನ್ನ ಪತ್ನಿಯ ಚರಿತದ ಬಗ್ಗೆ ಸಂಶಯ ತಳೆದು ಆಕೆಯ ಮೇಲೆ ನೈಟ್ರಿಕ್ ಆಮ್ಲವನ್ನು ಎರಚಿ ಆಕೆಯ ಕೊಲೆಮಾಡಿದ. ಇಲ್ಲಿ ಆಪಾದಿತನಿಗೆ ಸರಿ ತಪ್ಪುಗಳ ವಿವೇಚನಾಸಾಮರ್ಥ್ಯವಿತ್ತೆಂದು ವೈದ್ಯರು ಸಾಕ್ಷಿ ಇತ್ತ ಕಾರಣ ೩೦೨ನೆಯ ಕಲಂ ಪ್ರಕಾರ ಆತನನ್ನು ಅಪರಾಧಿ ಎಂದು ನಿರ್ಣಯಿಸಲಾಯಿತು. ಇನ್ನೊಂದು ಉದಾಹರಣೆಯಿದೆ—ಪಾಪದಿಂದ ವಿಮೋಚನೆ ಕೊಡಲು ಹಾಗೂ ನೇರವಾಗಿ ಸ್ವರ್ಗಕ್ಕೆ ಕಳುಹಿಸುವ ಸದ್ಭಾವನೆಯಿಂದ ಆಪಾದಿತ ಒಂದು ಮಗುವನ್ನು ಕೊಲೆಗೈದಾಗ ಆಪಾದಿತನಿಗೆ ತನ್ನ ಕೃತ್ಯ ಅನೈತಿಕವಾದದ್ದು ಎಂಬ ಯೋಚನೆ ಕೂಡ ಇರಲಿಲ್ಲವೆಂದು ಸಾಧಿಸಲಾಯಿತು.

ಮತಿವಿಕಲತೆಯ ರುಜುವಾತು

ಯಾವಾತ ತನ್ನ ಸಂಪೂರ್ಣ ತಿಳಿವಳಿಕೆಯ ಶಕ್ತಿ ಮತ್ತು ಸ್ಮರಣಶಕ್ತಿ ಕಳೆದು ಕೊಂಡು ತಾನು ಮಾಡುವ ಕ್ರಿಯೆಯ ಫಲವನ್ನು ತಿಳಿಯಲಶಕ್ತನಾಗಿ ಒಂದು ಹಸುಳೆ ಅಥವಾ ಕ್ರೂರಮೃಗಕ್ಕಿಂತ ಹೆಚ್ಚಿನ ಜ್ಞಾನಶಕ್ತಿ ಇಲ್ಲದವನಾಗಿರುತ್ತಾನೋ ಅಂಥವನು ಕಾನೂನು ಪ್ರಕಾರ ಶಿಕ್ಷೆಯಿಂದ ಕ್ಷಮಾಯೋಗ್ಯ[19] ರುಜುವಾತಿನ ಭಾರದ ಬಗ್ಗೆ ಹೇಳುವುದಾದರೆ, ಆಪಾದಿತನ ರುಜುವಾತಿನ ಹೊರೆಗೂ ಫಿರ್ಯಾದಿಯ (ಪ್ರಾಸಿಕ್ಯೂಷನ್) ರುಜುವಾತಿನ ಭಾರಕ್ಕೂ ತಾರತಮ್ಯವಿದೆ. ಮೊದಲೇ ಹೇಳಿದಂತೆ "ಮೆಕ್ ನಾಟನ್ ನಿಯಮಗಳು" ಮಂಡಿಸಿದಂತೆ

[17] *Koli Jeram's Case, A.J.R.* 1955, San. 105

[18] *Baswant' Case,* 1948 NAG 711

[19] **Arnold's Case, 15 St. Tr. 764**

‘ತಪ್ಪು ಮತ್ತು ಸರಿ’ ಎಂಬ ಪರೀಕ್ಷೆಯೇ ೮೪ನೆಯ ಕಲಂ ಪುರಸ್ಕರಿಸುವ ನಿಯಮ.

ಮತಿವಿಕಲತೆಯನ್ನು ರುಜುವಾತುಪಡಿಸುವ ಭಾರ ಆಪಾದಿತನದು, ಆತ ತಪ್ಪಿತಸ್ಥನೆಂದು ಪುರಾವೆ ಸಹಿತ ತಪ್ಪನ್ನು ರುಜುವಾತುಪಡಿಸುವ ಭಾರ ಫಿರ್ಯಾದಿಯದು. ಆಪಾದಿತ ತನ್ನ ಮನೋವಿಕಾರವನ್ನು ಪುರಾವೆ ಸಹಿತ ರುಜುವಾತು ಮಾಡಬೇಕು. ಪುರಾವೆಯನ್ನು ಕೊಟ್ಟು ತಪ್ಪನ್ನು ದೃಢಪಡಿಸಿ ಖಾತರಿಗೊಳಿಸುವ ರುಜುವಾತಿನ ಭಾರ ಫಿರ್ಯಾದಿಯ ಮೇಲಿದೆ. ಆಪಾದಿತ ಉದ್ದೇಶಸಾಧನೆಯಿಂದ ಮನಃಪೂರ್ವಕವಾಗಿ ತಪ್ಪು ಮಾಡಿದ್ದಾನೆ ಎಂದು ಫಿರ್ಯಾದಿ ರುಜುವಾತು ಮಾಡಬೇಕು. ಇದರಲ್ಲಿ ಒಂದನ್ನೊಂದು ಹೊಂದಿಕೊಂಡಿರುವ ಎರಡು ಮುಖ್ಯ ಅಂಶಗಳಿವೆ : ಫಿರ್ಯಾದಿ ಆಪಾದಿತನ ತಪ್ಪನ್ನು ತುಸುವಾದರೂ ಸಂಶಯಕ್ಕೆ ಆಸ್ಪದ ಕೊಡದಂತೆ ಪುರಾವೆ ಮೂಲಕ ರುಜುವಾತು ಮಾಡುವಂಥದು ಒಂದಾದರೆ, ಆಪಾದಿತ ತನ್ನ ಮತಿವಿಕಲತೆಯ ಪ್ರತಿವಾದವನ್ನು ರುಜುವಾತು ಮಾಡಿ ಕ್ಷಮೆ ಪಡೆಯುವಂಥದು ಎರಡನೆಯದು. ಉದಾ : ಜೋಟಿಲಾಲನ ವ್ಯಾಜ್ಯ.

ರುಜುವಾತಿನ ವಿಚಾರಕ್ಕೆ ‘ಭಾರತೀಯ ಪುರಾವೆ ಕಾಯಿದೆ’ಯ (ಇಂಡಿಯನ್ ಎವಿಡೆನ್ಸ್ ಆಕ್ಟ್) ೧೦೫ನೆಯ ಕಲಂ ಅನ್ವಯಿಸುತ್ತದೆ. ಇದರ ಪ್ರಕಾರ ಸಂಶಯಾಸ್ಪದವಾದ ಕಾರಣಕ್ಕೆ ಎಡೆಕೊಡದೆ ‘ಪುರಾವೆಯ ಮುಖಾಂತರ ನಿರ್ದಿಷ್ಟವಾಗಿ ಆಪಾದಿತನ ಅಪರಾಧ ರುಜುವಾತಾಗಬೇಕೆಂಬುದು ಅತಿಮುಖ್ಯ. ಆದಕಾರಣ ೧೦೫ನೆಯ ಕಲಂ ಪ್ರಕಾರ ಫಿರ್ಯಾದಿ ಆಪಾದಿತನ ಅಪರಾಧವನ್ನು ಸ್ವಲ್ಪವೂ ಸಂಶಯ ಉಳಿಯದಂತೆ ರುಜುವಾತು ಪಡಿಸುವ ಭಾರವಿದೆ; ಆಪಾದಿತನಿಗೆ ಈ ಪುರಾವೆಯನ್ನು ಸುಳ್ಳೆಂದು ದೃಢೀಕರಿಸುವ ಮತ್ತು ತನ್ನ ಪುರಾವೆಯ ಬಲದಿಂದ ತಾನು ನಿರಪರಾಧಿ ಎಂದು ರುಜುವಾತುಪಡಿಸುವ ಭಾರವೂ ಇದೆ. ೧೦೫ನೆಯ ವಿಧಿಯನ್ವಯ ಮೂರು ಘಟಕಗಳು ಮುಖ್ಯ—ಮೊದಲನೆಯದಾಗಿ ಫಿರ್ಯಾದಿಯ ಮೊಕದ್ದಮೆ ಆಪಾದಿತ ವಿನಾಯಿತಿಗೆ ಹೊರತಾಗಿರುವನೆಂಬ ಊಹೆಯ ಮೇಲೆ ಫಿರ್ಯಾದಿ ಮೊಕದ್ದಮೆಯನ್ನು ನಿರ್ಧರಿಸುವುದು; ಎರಡನೆಯದಾಗಿ ಅಂಥ ಊಹೆಯನ್ನು ನಿರಾಕರಿಸುವುದು; ಮೂರನೆಯದಾಗಿ ನಿರಾಕರಿಸಲು ಸಾಕಷ್ಟು ಸಂಗತಿಗಳಿದ್ದರೆ ಪುರಾವೆಯ ಮುಖಾಂತರ ಅವನ್ನು ರುಜುವಾತುಪಡಿಸುವುದು. ಅಪರಾಧಿ ಹಾಗೆ ರುಜುವಾತಿನಿಂದ ಊಹೆಯನ್ನು ನಿರಾಕರಿಸಿದರೆ ೧೦೫ನೆಯ ಕಲಮಿನ ಪ್ರಕಾರ ಆತ ತನ್ನ ಭಾರವನ್ನು ಕಳಚಿಕೊಂಡಿರುತ್ತಾನೆ. ಸಂಶಯಕ್ಕೆ ಆಸ್ಪದ ಕೊಡದ ರೀತಿಯಲ್ಲಿ ತಾನು ಮತಿವಿಕಲನಾಗಿದ್ದೆ ಅಥವಾ ತನಗೆ ಗ್ರಹಣ ಶಕ್ತಿಯ ನ್ಯೂನತೆಯಿತ್ತು ಎಂಬುದನ್ನು ಆಪಾದಿತ ರುಜುವಾತು ಮಾಡಬೇಕಿಲ್ಲ. ಮೇಲೆ ಹೇಳಿದ ಊಹೆಯನ್ನು ಸುಳ್ಳುಮಾಡಿ ರುಜುವಾತಿನ ಮೂಲಕ ಪರಿಸ್ಥಿತಿ ಆ ಊಹೆಗೆ ವಿರೋಧವಾಗಿದೆ ಎಂಬುದನ್ನು ಸಂಶಯಕ್ಕೆ ಆಸ್ಪದಕೊಡದ ರೀತಿಯಲ್ಲಿ

ದೃಢೀಕರಿಸಬೇಕು.[20] 'ಕೋಲಿ ಜೇರಾಮ್' ಮೊಕದ್ದಮೆಯಲ್ಲಿ[21] ಆಪಾದಿತ ಮತಿವಿಕಲತೆಯ ಆಸರೆ ತೆಗೆದುಕೊಳ್ಳದಿದ್ದರೂ ಆ ಬಗ್ಗೆ ಸಂಶಯ ಬಂದರೆ ನ್ಯಾಯಾಧೀಶರು ಸ್ವತ ಏವ ಸಾಕ್ಷಿಗಳಿಗೆ ಆ ವಿಚಾರವಾಗಿ ಪ್ರಶ್ನೆಹಾಕಿ, ಆಪಾದಿತ ಅಪರಾಧವೆಸಗುವಾಗ ಮತಿವಿಕಲನಾಗಿದ್ದನೆಂದು ದೃಢವಾಗಿ ತಿಳಿದುಬಂದಲ್ಲಿ ಅಪರಾಧಕ್ಕೆ ಆತ ಎಷ್ಟರಮಟ್ಟಿಗೆ ಹೊಣೆ ಎಂದು ನಿರ್ಧರಿಸುವಲ್ಲಿ ಅದು ಗಮನಿಸಬೇಕಾದ ವಿಚಾರವೆಂದು ಕಾಣಬರುತ್ತದೆ.

ದಂಡಪ್ರಕ್ರಿಯಾ ಸಂಹಿತೆಯ (ದಿ ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್) ೩೪ನೆಯ ಪ್ರಕರಣದ ೪೬೪ನೆಯ ಕಲಮಿನಿಂದ ೪೭೫ನೆಯ ಕಲಮಿನವರೆಗೆ ಮತಿವಿಕಲರ ವಿಚಾರ ಇದೆ. ಈ ಮೊದಲೇ ತಿಳಿಸಿದಂತೆ ವೈದ್ಯತಜ್ಞರ ಸಾಕ್ಷಿಯನ್ನು ಯಾವಾಗ ಹೇಗೆ ಸಹಾಯಕ್ಕೆ ತೆಗೆಯಬಹುದೆಂಬ ವಿಚಾರವನ್ನು ೪೬೪ನೆಯ ಕಲಂ ಮಂಡಿಸುತ್ತದೆ. ಇದರ ಪ್ರಕಾರ ವಿಚಾರಣೆಯ ಸಮಯ ಅಪರಾಧಿಯ ಮನಸ್ಸು ಹೇಗಿತ್ತು ಎಂಬುದೇ ಮುಖ್ಯವೇ ಹೊರತು ಅಪರಾಧ ಎಸಗುವಾಗ ಹೇಗಿತ್ತು ಎಂಬುದು ಅನಗತ್ಯ.[22] ಏಕೆಂದರೆ ೪೬೪ ಮತ್ತು ೪೬೫ನೆಯ ಕಲಂಗಳ ಪ್ರಕಾರ ನ್ಯಾಯಾಧೀಶರಿಗೆ ಮೊಕದ್ದಮೆ ವಿಚಾರಣೆಗೆ ಬಂದಾಗ ಆಪಾದಿತ ಮತಿವಿಕಲನಾಗಿದ್ದರೆ ಮಾತ್ರ ವ್ಯಾಜ್ಯವನ್ನು ಹಾಕುವ ಅಧಿಕಾರ ಇರುತ್ತದೆ. ಅಪರಾಧ ಎಸಗಿದಾಗ ಆತ ಮತಿವಿಕಲನಾಗಿದ್ದನೇ ಎಂಬುದು ಇಲ್ಲಿ ಗೌಣ. ಏಕೆಂದರೆ ಅಂಥ ವಿಚಾರ ವಿಚಾರಣೆಗೆ ತೊಡಗಿದ ಅನಂತರ ರುಜುವಾತಾಗಬೇಕಾದ ವಿಷಯವಾಗಿದೆ. ಅಂಥ ಮತಿವಿಕಲನನ್ನು ಜಾಮೀನಿನ ಮೇಲೆ ಯಾವಾಗ ಬಿಡಬಹುದು ಎಂಬುದನ್ನು ೪೬೬ನೆಯ ಕಲಮೂ, ಹೇಗೆ ಆತನನ್ನು ಭದ್ರವಾದ ರಕ್ಷಣೆಯಲ್ಲಿಡಬೇಕು ಎಂಬುದನ್ನು ೪೭೧ನೆಯ ಕಲಮೂ ಅಂಥವನು ಪುನಃ ಗುಣಮುಖವಾದಾಗ ಹೇಗೆ ವಿಚಾರಣೆ ಮಾಡಬೇಕು ಮುಂತಾದ ವಿಚಾರಗಳನ್ನು ೪೭೫ರ ವರೆಗಿನ ಮುಂದಿನ ಕಲಂಗಳೂ ತಿಳಿಸುತ್ತವೆ.

ಹೀಗೆ ನಾವು ಕಾನೂನನ್ನು ಪರಿಶೀಲಿಸಿದರೆ 'ಕಾನೂನಿಗೆ ಕಣ್ಣಿಲ್ಲ, ಕರುಣೆಯಿಲ್ಲ' ಎಂಬೆಲ್ಲ ಮಾತು ಸುಳ್ಳು ಎಂದು ಕಾಣುತ್ತದೆ. ಹಾಗೆ ಸ್ವಲ್ಪಮಟ್ಟಿಗೆ ಕಾನೂನು ಕಠಿಣವಾಗಿಲ್ಲದಿದ್ದರೆ ಸಮಾಜದಲ್ಲಿ ಭದ್ರತೆಯೇ ಇರುತ್ತಿರಲಿಲ್ಲ. ಸಮಾಜದ ದಿನನಿತ್ಯದ ವ್ಯವಹಾರ, ರೀತಿನೀತಿಗಳು, ಕಾರ್ಯಕಲಾಪಗಳು ಸುವ್ಯವಸ್ಥಿತವಾಗಿ ನಡೆಯಬೇಕಾದರೆ ಮತ್ತು ಮಾನವನಿಗೆ ಜೀವ ಹಾಗೂ ಸ್ವತ್ತಿನ ರಕ್ಷಣೆ ಸಿಗಬೇಕಾದರೆ ಕಾನೂನಿನ ಕಾಠಿಣ್ಯದ ಅರಿವಾಗದಿದ್ದರೆ ಸಾಧ್ಯವಾಗದು.

[20] A.J.R. 1941 All. 402 F. B. relied on Kamala Singh Vs State

[21] State Vs. Koli Jeram Duda, A.J.R. 1959 San. 105

[22] State of Mysore Vs Seetharam (1962), 1 Mys. L. J. 520

ಅಪರಾಧ ನ್ಯಾಯದ ಉಗಮ

ಅನಾಗರಿಕ ಸಮಾಜದಲ್ಲಿ ಅಪರಾಧ ನ್ಯಾಯವೇ ಇರಲಿಲ್ಲ. ಮನುಷ್ಯನಿಗೆ ಯಾವಾಗಲೂ ಯಾರಿಂದಲಾದರೂ ಜೀವಭಯ, ಆಸ್ತಿನಷ್ಟದ ಭಯ ಇದ್ದೇ ಇದ್ದುವು. ಆಕ್ರಮಣಕ್ಕೊಳಗಾದವನು ಸೋಲೊಪ್ಪಬೇಕು, ಇಲ್ಲವೇ ಎದುರಾಳಿಯನ್ನು ನಿಗ್ರಹಿಸಬೇಕು. 'ಹಲ್ಲಿಗೆ ಹಲ್ಲು, ಕಣ್ಣಿಗೆ ಕಣ್ಣು, ಜೀವಕ್ಕೆ ಜೀವ'—ಇದು ಅಪರಾಧ ನ್ಯಾಯದ ಮೂಲ. ಕಾಲ ಸಂದಂತೆ, ಘಾಸಿಗೊಂಡ ವ್ಯಕ್ತಿ ತನ್ನ ಶತ್ರುವನ್ನು ಕೊಲ್ಲುವ ಬದಲು ಪರಿಹಾರ ಪಡೆಯಲೊಪ್ಪಿದ. ಸಾಮಾನ್ಯ ಅಪರಾಧಗಳ ಇತ್ಯರ್ಥಕ್ಕಾಗಿ ಆಯಾ ಅಪರಾಧಗಳ ತೀವ್ರತೆಗಳಿಗನುಗುಣವಾದ ಪರಿಹಾರಗಳ ಪಟ್ಟಿಯೊಂದು ಜಾರಿಗೆ ಬಂತು. ಈ ವ್ಯವಸ್ಥೆಯಿಂದ ಪುರಾತನ ಅಪರಾಧನ್ಯಾಯ ಜನಿಸಿತು. ಬಹಳ ಕಾಲ ಈ ಸೂತ್ರಗಳನ್ನು ಅನ್ವಯಿಸುತ್ತಿದ್ದವರು ಸ್ವಯಂ ಕಕ್ಷಿಗಳೇ. ಆದರೆ ಕ್ರಮೇಣ ಈ ಕಾರ್ಯಭಾರವನ್ನು ಸಂಸ್ಥಾನ (ಸ್ಟೇಟ್) ನಿರ್ವಹಿಸಲಾರಂಭಿಸಿತು.

ಭಾರತದಲ್ಲಿ ಅಪರಾಧ ನ್ಯಾಯತತ್ತ್ವದ (ಜೂರಿಸ್ಪ್ರುಡೆನ್ಸ್) ಬೀಜಾವಾಪನೆಯಾದದ್ದು ಮನುವಿನ ಕಾಲದಲ್ಲಿ. ದುಂಡಾವರ್ತಿ, ಚೌರ್ಯ, ದರೋಡೆ, ಸುಳ್ಳುಸಾಕ್ಷ್ಯ, ಮಿಥ್ಯಾಪವಾದ, ವಿಶ್ವಾಸಘಾತಕ ಅಪರಾಧ, ಮೋಸ, ವ್ಯಭಿಚಾರ, ಅಕ್ರಮ ಸಂಭೋಗ—ಇವನ್ನೆಲ್ಲ ಮನು ಉಲ್ಲೇಖಿಸಿದ್ದಾನೆ. ದೊರೆ ತನ್ನ ಪ್ರಜೆಗಳನ್ನು ರಕ್ಷಿಸುತ್ತಿದ್ದ. ಪ್ರತಿಯಾಗಿ ಪ್ರಜೆಗಳು ಅವನಿಗೆ ವಿಧೇಯರಾಗಿದ್ದು ಕಂದಾಯ ಕೊಡುತ್ತಿದ್ದರು. ಅಪರಾಧಿಯೊಬ್ಬನಿಗೆ ವಿಧಿಸಿದ ದಂಡ ದೊರೆಯ ಬೊಕ್ಕಸಕ್ಕೆ ಹೋಗುತ್ತಿತ್ತು. ಘಾಸಿ ಅನುಭವಿಸಿದ ವ್ಯಕ್ತಿಗೆ ಅದನ್ನು ಕೊಡುತ್ತಿರಲಿಲ್ಲ.

ಪಾಶ್ಚಾತ್ಯ ನ್ಯಾಯತತ್ತ್ವದಲ್ಲಿ ಅಪರಾಧದ ನಿಜವಾದ ಕಲ್ಪನೆ ಉದ್ಭವವಾದದ್ದು ರೋಮನ್ ನ್ಯಾಯದಿಂದ. ಆಧುನಿಕ ಯುಗದಲ್ಲಿ ಅಪರಾಧಗಳ ಸಂಖ್ಯೆ ಅತ್ಯಧಿಕವಾಗಿ ವರ್ಧಿಸಿದೆ. ಇದರಿಂದ ಅಪರಾಧ ನ್ಯಾಯದ ಪರಿಕಲ್ಪನೆಯಲ್ಲೇ ಕ್ರಾಂತಿಯುಂಟಾಗಿದೆ. ವ್ಯಕ್ತಿಗಳ ಮೇಲೆ ನಾನಾ ಬಗೆಯ ಕರ್ತವ್ಯಗಳನ್ನೂ ಹೊಣೆಗಳನ್ನೂ ನಿರ್ಬಂಧಗಳನ್ನೂ ವಿಧಿಸುವ ಹಲವಾರು ಶಾಸನಗಳನ್ನು ಜಾರಿಗೆ ತರಲಾಗಿದೆ.[1]

—ರತನ್‌ಲಾಲ್ ಮತ್ತು ಧೀರಜ್‌ಲಾಲ್

---

[1] Ratanlal Ranchhoddas and Dhirajlal Keshavlal Thakore: *The Indian Penal code* (1967), The Bombay Law Reporter (Private) Ltd., p. XLIX

ಹನುಮಪ್ಪ

ಕೇನ್ಸರ ವಿಚಾರಧಾರೆಯಲ್ಲಿ ಅನುಭೋಗ ಪ್ರವೃತ್ತಿಯ ಪಾತ್ರ[1]

೧೯೨೯ರಲ್ಲಿ ವಿಶ್ವದಾದ್ಯಂತ ಆವರಿಸಿದ ಆರ್ಥಿಕ ಮುಗ್ಗಟ್ಟು ಅನೇಕ ಮಂದಿ ಅರ್ಥಶಾಸ್ತ್ರಜ್ಞರನ್ನು ಪೇಚಿಗೆ ತೊಡಗಿಸಿತು. ಇದು ನಿರುದ್ಯೋಗ, ನಿರುತ್ಸಾಹ ಹಾಗೂ ನಿರಾಶೆಗಳ ಬಹುಮುಖ ಪರಿಣಾಮಗಳಿಗೆ ಎಡೆ ನೀಡಿತು. ಈ ಭೀಕರ ಸಮಸ್ಯೆಗೆ ಪರಿಹಾರವನ್ನು ಹುಡುಕಲು ಹೊರಟ ಅನೇಕ ಖ್ಯಾತ ಅರ್ಥಶಾಸ್ತ್ರಜ್ಞರಲ್ಲಿ ಜಾನ್ ಮೇನಾರ್ಡ್ ಕೇನ್ಸ್ ಒಬ್ಬರು. ಕೇನ್ಸರ ಅನೇಕ ವರ್ಷಗಳ ಅಧ್ಯಯನದ ಫಲವಾಗಿ "ಉದ್ಯೋಗ, ಬಡ್ಡಿ ಮತ್ತು ಹಣ—ಇವುಗಳ ಸಾಮಾನ್ಯ ಸಿದ್ಧಾಂತ" (ದಿ ಜನರಲ್ ಥಿಯೊರಿ ಆಫ್ ಎಂಪ್ಲಾಯ್‌ಮೆಂಟ್, ಇಂಟರೆಸ್ಟ್ ಅಂಡ್ ಮನಿ) ಎಂಬ ಗ್ರಂಥ ಹೊರಬಂದಿತು. ಇದು ಅರ್ಥಶಾಸ್ತ್ರದ ಇತಿಹಾಸದಲ್ಲೇ ಒಂದು ನವಯುಗವನ್ನು ಸೃಷ್ಟಿಸಿದ ಗ್ರಂಥವೆನ್ನಬಹುದು. ಏಕೆಂದರೆ ಇದರಲ್ಲಿ ಆರ್ಥಿಕ ಸಮಸ್ಯೆಗಳನ್ನು ವಿನೂತನ ರೀತಿಯಲ್ಲಿ ವಿಶ್ಲೇಷಿಸಲಾಗಿತ್ತು. ಇದನ್ನು ಸಮಷ್ಟಿ ಅರ್ಥಶಾಸ್ತ್ರ (ಮ್ಯಾಕ್ರೊ ಎಕೊನಾಮಿಕ್ಸ್) ಎಂದೂ ಹೇಳಲಾಗುತ್ತದೆ. ಇದುವರೆಗೂ ನಂಬಿಕೊಂಡಿದ್ದ ಅಭಿಜಾತ ಆರ್ಥಿಕ ತತ್ತ್ವಗಳ ಬುನಾದಿಯನ್ನೇ ಇದು ಅಲುಗಿಸಿತು. ಸರಬರಾಯಿ ಸ್ವಯಂ ತನ್ನ ಬೇಡಿಕೆಯನ್ನು ಸೃಷ್ಟಿಸಿಕೊಳ್ಳಬಲ್ಲದು ಎಂಬ ಸೇಯ ಮಾರುಕಟ್ಟೆಗಳ ಸರಳ ಸಿದ್ಧಾಂತದಿಂದ ಹಿಡಿದು, ನೈಜ ಬೇಡಿಕೆ ಹಾಗೂ ನೈಜ ಸರಬರಾಯಿ ಸಂಧಿಸುವ ಬಿಂದುವಿನಲ್ಲಿ ಸಮತೋಲ ಇರುವುದೆಂಬ ಪಿಗೂ ಸಿದ್ಧಾಂತದ ವರೆಗೂ ಪ್ರತಿಯೊಂದು ಅಭಿಜಾತ ತತ್ತ್ವದ ತರ್ಕಬದ್ಧತೆಯನ್ನೂ ಪ್ರಶ್ನಿಸಲಾಯಿತು. ಇದಕ್ಕೆಲ್ಲ ಕಾರಣವೆಂದರೆ ೧೯೨೯ರ ಮುಗ್ಗಟ್ಟಿನ ಸಮಯದಲ್ಲಿ ಈ ಅಭಿಜಾತ ತತ್ತ್ವಗಳು ಯಾವುದೇ ಪರಿಹಾರವನ್ನು ಒದಗಿಸುವಲ್ಲಿ ನಿರುಪಯುಕ್ತ

---

[1] " . . . . the consumption function is properly considered a Keynesian invention, for it lies at the heart of Keynes' theoretical system" — *Ackley*

ವಾದದ್ದು ಹಾಗೂ ಅವು ಕೇವಲ ತಾತ್ವಿಕ ಮಟ್ಟದಲ್ಲಿ ಚಿಂತಕರ ಸೊತ್ತಾಗಿ, ನಿಜ ಜೀವನದಲ್ಲಿ ಆಚರಣೆಗೆ ತರುವಲ್ಲಿಯಾಗಲಿ, ವಿವಿಧ ಆರ್ಥಿಕ ಘಟಕಗಳಿಗೆ ಇರುವ ಸಂಬಂಧಗಳನ್ನು ಸ್ಪಷ್ಟವಾಗಿ ಹಾಗೂ ನಿಖರವಾಗಿ ವಿವರಿಸುವಲ್ಲಿಯಾಗಲಿ ಅಪ್ರಯೋಜಕವಾದದ್ದು[2]. ಆದರೆ ಕೇನ್ಸ್ ತನ್ನ ಗ್ರಂಥದಲ್ಲಿ ಒಂದು ಅರ್ಥ ವ್ಯವಸ್ಥೆಯಲ್ಲಿಯ ಅನೇಕ ಘಟಕಗಳಿಗೆ ಇರುವ ಆರ್ಥಿಕ ಸಂಬಂಧವನ್ನು ಆದಷ್ಟು ಸ್ಪಷ್ಟಪಡಿಸಿದ.


ಸಾಮಾನ್ಯವಾಗಿ ಒಂದು ಅರ್ಥವ್ಯವಸ್ಥೆಯಲ್ಲಿಯ ದಿನನಿತ್ಯದ ಚಟುವಟಿಕೆಗಳು ಅಸಂಖ್ಯಾತ ಆರ್ಥಿಕ ಘಟಕಗಳ ದೃಢ ಸಂಬಂಧಗಳ ಫಲವಾಗಿ ನಡೆಯುತ್ತಿರುತ್ತವೆ. ಆದರೆ ಕೇನ್ಸನ ಪ್ರಕಾರ ಈ ಚಟುವಟಿಕೆಗಳಿಗೆ ಮೂರು ಪ್ರಧಾನ ಘಟಕಗಳು ಆಧಾರವಾಗಿವೆ. ಅವು ಯಾವುವೆಂದರೆ : ಅನುಭೋಗ ಪ್ರವೃತ್ತಿ, ಬಂಡವಾಳದ ಅಂಚಿನ ಸಾಮರ್ಥ್ಯ (ಮಾರ್ಜಿನಲ್ ಎಫಿಷಿಯೆನ್ಸಿ ಆಫ್ ಕ್ಯಾಪಿಟಲ್) ಹಾಗೂ ಹಣದ ದ್ರವತ್ವದ ಆದ್ಯತೆ (ಲಿಕ್ವಿಡಿಟಿ ಪ್ರಿಫರೆನ್ಸ್). ಅವರ ಪ್ರಕಾರ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿರುವ ಪರಿಕಲ್ಪನೆಯೆಂದರೆ ಅನುಭೋಗ ಪ್ರವೃತ್ತಿಯದು ಎನ್ನಬಹುದಾಗಿದೆ. ಏಕೆಂದರೆ ಸಕಲ ಆರ್ಥಿಕ ಚಟುವಟಿಕೆಗೂ ಅನುಭೋಗ ಪ್ರವೃತ್ತಿ ಆಧಾರವಾಗಿದೆ ಮತ್ತು ಒಂದು ಅರ್ಥವ್ಯವಸ್ಥೆಯಲ್ಲಿ ಬೇಡಿಕೆಯ ಹಾಗೂ ಉದ್ಯೋಗ ಮಟ್ಟಗಳನ್ನು ನಿಷ್ಕರ್ಷಿಸುವಲ್ಲಿ ಅನುಭೋಗ ಪ್ರವೃತ್ತಿ ಪ್ರಮುಖ ಪಾತ್ರವಹಿಸುತ್ತದೆ.

ವರಮಾನ ಪಡೆಯುವ ವ್ಯಕ್ತಿ ಅದನ್ನು ಅನುಭೋಗಿಸಲು ಇಚ್ಛಿಸಬಹುದು ಅಥವಾ ಉಳಿತಾಯಮಾಡಲು ನಿರ್ಧರಿಸಬಹುದು. ಆದರೆ ಅನುಭೋಗಕ್ಕಾಗಿ ವೆಚ್ಚವಾಗುವ ವರಮಾನದ ಪ್ರಮಾಣ, ಅವನು ಪಡೆದಿರುವ ವರಮಾನದ ಮೊತ್ತಕ್ಕೆ ನೇರ ಸಂಬಂಧ ಹೊಂದಿರುತ್ತದೆ. ಇದಕ್ಕಿಂತ ಮುಖ್ಯವಾದ ಭಾವನೆಯೆಂದರೆ ಅಂಚಿನ ಅನುಭೋಗ ಪ್ರವೃತ್ತಿ (ಮಾರ್ಜಿನಲ್ ಪ್ರೊಪೆನ್ಸಿಟಿ ಟು ಕನ್ಸ್ಯೂಮ್—MPC) ವರಮಾನದಲ್ಲಿ ಒಂದು ಘಟಕದಷ್ಟು ಏರಿಕೆಯಾದಾಗ ಸಂಭವಿಸುವ ಹೆಚ್ಚುವರಿ ಅನುಭೋಗವನ್ನು ಅಂಚಿನ ಅನುಭೋಗ ಪ್ರವೃತ್ತಿ ಎನ್ನಬಹುದು. ವರಮಾನ ಏರಿದಂತೆಲ್ಲ ಅನುಭೋಗ ಹೇಗೆ ಏರುತ್ತದೆ ಎಂಬುದನ್ನು ಮುಂದಿನ ಪುಟದಲ್ಲಿ ಕೊಟ್ಟಿರುವ ಚಿತ್ರದಲ್ಲಿ ತೋರಿಸಿದೆ.

ಆ ಚಿತ್ರದಲ್ಲಿ ವರಮಾನ ೧೦೦ರಿಂದ ೧೧೦ಕ್ಕೆ ಏರಿದಾಗ ಅನುಭೋಗ ೯೦ರಿಂದ ೯೫ರಷ್ಟು ಏರುತ್ತದೆ. ಈ ಎರಡರ ಮಧ್ಯೆ ಆಗುವ ಏರಿಕೆಯ ಸಂಬಂಧವನ್ನು ಅಂಚಿನ ಅನುಭೋಗ ಪ್ರವೃತ್ತಿ ತೋರಿಸುತ್ತದೆ. ಮೇಲೆ ಕೊಟ್ಟಿರುವ ಉದಾಹರಣೆಯಲ್ಲಿ ಅಂಚಿನ ಅನುಭೋಗ ಪ್ರವೃತ್ತಿ ೫/೧೦=.೫

[2] ಉದಾಹರಣೆಗೆ ಅಭಿಜಾತ ಅರ್ಥಶಾಸ್ತ್ರ. ಇದರಲ್ಲಿ M ಹಾಗೂ Pಗಳ ಮಧ್ಯೆ ಇರುವ ಸಂಬಂಧ ವಿಪರ್ಯಯಾನುಗುಣವಾದದ್ದು.

ಇದರಿಂದ ನಾವು ಅರ್ಥಮಾಡಿಕೊಳ್ಳಬಹುದಾದುದು ಏನೆಂದರೆ, ಒಬ್ಬ ವ್ಯಕ್ತಿ ಅವನ ವರಮಾನದ ವಿಭಿನ್ನ ಮಟ್ಟಗಳಲ್ಲಿ ತನ್ನ ಅನುಭೋಗದ ಆವಶ್ಯಕತೆಗಳಿಗಾಗಿ ವರಮಾನದಲ್ಲಿ ಯಾವ ಪ್ರಮಾಣವನ್ನು ವೆಚ್ಚಮಾಡುತ್ತಾನೆ ಎಂಬುದೇ ಆಗಿದೆ. ಈ ಅನುಭೋಗ ಪ್ರವೃತ್ತಿ ಅಲ್ಪಾವಧಿಯಲ್ಲಿ ಅಷ್ಟೇನೂ ಬದಲಾಗುವ



ದಿಲ್ಲ ಎಂಬುದು ಕೇನ್ಸನ ಅಭಿಪ್ರಾಯವಾಗಿತ್ತು. ಒಬ್ಬ ವ್ಯಕ್ತಿಯ ವರಮಾನದಲ್ಲಿ ಅಲ್ಪಸ್ವಲ್ಪ ಏರುಪೇರಾದಾಗ ಆತ ಕೂಡಲೇ ತನ್ನ ಅನುಭೋಗ ಪ್ರವೃತ್ತಿಯನ್ನು ಅವಶ್ಯವಾಗಿ ಬದಲಿಸಬೇಕೆಂಬ ನಿಯಮವೇನೂ ಇಲ್ಲ. ಆದ್ದರಿಂದ ಅನುಭೋಗ ಪ್ರವೃತ್ತಿ ಅಲ್ಪಾವಧಿಯಲ್ಲಿ ಸ್ಥಿರವಾಗಿಯೇ ಇರುತ್ತದೆ ಎನ್ನಬಹುದು. ಇದು ಬಹಳಮಟ್ಟಿಗೆ ಸಂಬಂಧಪಟ್ಟ ವ್ಯಕ್ತಿಯ ಹವ್ಯಾಸಗಳು ಹಾಗೂ ಅಭಿರುಚಿಗಳನ್ನು ಅವಲಂಬಿಸಿರುತ್ತದೆ. ಆದರೆ ಅನುಭೋಗದಲ್ಲಾಗುವ ಬದಲಾವಣೆಯ ದರ ವೇಗಕ್ಕೆ ವರಮಾನದಲ್ಲಾಗುವ ಬದಲಾವಣೆಗಿಂತ ಕಡಿಮೆಯಾಗಿರುತ್ತದೆ; ಅಥವಾ ಅಂಚಿನ ಅನುಭೋಗ ಪ್ರವೃತ್ತಿ ೧ಕ್ಕಿಂತ ಕಡಿಮೆಯಿರುತ್ತದೆ.

ಅತ್ಯಂತ ಹೆಚ್ಚಿನ ವರಮಾನವಿದ್ದಾಗ, ಅನುಭೋಗಕ್ಕಾಗಿ ವೆಚ್ಚವಾಗಿರುವ ವರಮಾನದ ಪ್ರಮಾಣ ಕಡಿಮೆ ಮಟ್ಟದಲ್ಲಿರುತ್ತದೆ. (ಅಂದರೆ MPC ಕಡಿಮೆಯಿರುತ್ತದೆ) ವರಮಾನ ಕಡಿಮೆಯಿದ್ದಾಗ ಇದಕ್ಕೆ ವಿರುದ್ಧವಾಗಿರುತ್ತದೆ, (ಅಂದರೆ MPC ಹೆಚ್ಚಿನ ಮಟ್ಟದಲ್ಲಿರುತ್ತದೆ) ಹಾಗೂ ಆ (ಕಡಿಮೆ) ವರಮಾನದ ಬಹು ಅಂಶವನ್ನು ವೆಚ್ಚಮಾಡುವ ಸಾಧ್ಯತೆ ಇರುತ್ತದೆ. ಈ ಅನುಭೋಗ ಎರಡು ಘಟಕಗಳಿಂದ—ಎಂದರೆ ಮನಸ್ಸಂಬಂಧದ ಹಾಗೂ ವಾಸ್ತವಿಕ ಪ್ರವೃತ್ತಿಯ ಘಟಕಗಳಿಂದ—ನಿಷ್ಕರ್ಷೆ ಹೊಂದುತ್ತದೆ. ಮನಸ್ಸಂಬಂಧದ ಘಟಕಗಳೆಂದರೆ

ಅನುಭೋಗ ವಿಧಾನ ಅಥವಾ ಪ್ರವೃತ್ತಿ ಹಾಗೂ ದೈಹಿಕ ಘಟಕಗಳು. ವಾಸ್ತವಿಕ ಪ್ರವೃತ್ತಿಯೆಂದರೆ ವರಮಾನ ವಿತರಣೆ ಅಥವಾ ರಾಜಕೀಯ ಹಾಗೂ ಸಾಮಾಜಿಕ ಚೌಕಟ್ಟು. ಈ ರೀತಿಯಾಗಿ ಇವೆರಡೂ ಅಲ್ಪ ಕಾಲದಲ್ಲಿ ಅಚಲವಾಗಿರುತ್ತವೆ. ಆದುದರಿಂದಾಗಿ ಅನುಭೋಗ ಕ್ರಿಯೆ ಹೆಚ್ಚು ಕಡಿಮೆ ಅಚಲವಾಗಿರುತ್ತದೆ. ಅಲ್ಪಾವಧಿಯಲ್ಲಿ ಇದು ಹೊಂದಿರುವ ಅಚಲತೆಯ ಗುಣದಿಂದಾಗಿಯೇ ಉದ್ಯೋಗ ಹಾಗೂ ವರಮಾನಗಳನ್ನು ಏರಿಸಲು ಬಂಡವಾಳ ಹೂಡಿಕೆಯ ಕ್ರಿಯೆಗೆ (ಇನ್ವೆಸ್ಟ್‌ಮೆಂಟ್ ಫಂಕ್ಷನ್) ಕೇನ್ಸ್ ಹೆಚ್ಚು ಪ್ರಾಶಸ್ತ್ಯ ನೀಡಿದ್ದಾನೆ ಎನ್ನಬಹುದು.

ಒಂದು ಅರ್ಥವ್ಯವಸ್ಥೆಯಲ್ಲಿ ಉತ್ಪನ್ನ ಹಾಗೂ ಉದ್ಯೋಗಗಳ ಮಟ್ಟಕ್ಕೆ ಸಾರ್ಥಕ ಬೇಡಿಕೆಯೆ (ಎಫೆಕ್ಟಿವ್ ಡಿಮಾಂಡ್) ಆಧಾರವಾಗಿದ್ದರೆ ಈ ಸಾರ್ಥಕ ಬೇಡಿಕೆ ಅನುಭೋಗಕ್ರಿಯೆ ಹಾಗೂ ಬಂಡವಾಳ ಹೂಡಿಕೆಯನ್ನು ಅವಲಂಬಿಸುತ್ತದೆ. ಕೊಳ್ಳುವ ಶಕ್ತಿಯ ಬೆಂಬಲ ಪಡೆದ ಬೇಡಿಕೆಗೆ (ಡಿಮ್ಯಾಂಡ್ ಬ್ಯಾಕ್‌ಡ್ ಬೈ ಪರ್ಚೇಸಿಂಗ್ ಪವರ್) ಸಾರ್ಥಕ ಬೇಡಿಕೆ ಎನ್ನಬಹುದು. ಕೇನ್ಸ್ ಬೇಡಿಕೆಯೆಂಬ ಸಾಮಾನ್ಯ ಕಲ್ಪನೆಯನ್ನು ಅರ್ಥಪೂರ್ಣವಾಗಿಸಿದ್ದಾನೆ. ಆತನಿಗಿಂತ ಮೊದಲು ಬೇಡಿಕೆಯ ಕಲ್ಪನೆಯನ್ನು ಸಾಮಾನ್ಯವಾಗಿ ಎಲ್ಲ ರೀತಿಯ ಬೇಡಿಕೆಗಳಿಗೂ ಉಪಯೋಗಿಸಲಾಗುತ್ತಿತ್ತು. ಅಂದರೆ ಕೊಳ್ಳುವ ಶಕ್ತಿಯನ್ನು ಹೊಂದಿದ ಎಲ್ಲ ಬೇಡಿಕೆಗಳನ್ನೂ ಇದರಲ್ಲಿ ಸೇರಿಸಬಹುದಿತ್ತು. ಆದರೆ ಕೇನ್ಸ್ ತನ್ನ ಉದ್ಯೋಗಸಿದ್ಧಾಂತದಲ್ಲಿ ಸಾರ್ಥಕ ಬೇಡಿಕೆಯ ಸಮಷ್ಟಿ ಪರಿಕಲ್ಪನೆಯ ಮೂಲಕ ಅನುಭೋಗ ಹಾಗೂ ಬಂಡವಾಳ ಹೂಡಿಕೆಗಳ ಮಧ್ಯೆ ಸ್ಪಷ್ಟವಾದ ಸಂಬಂಧವನ್ನು ಸ್ಥಾಪಿಸಲು ಪ್ರಯತ್ನಿಸಿದ್ದಾನೆ.

ಅಂಚಿನ ಅನುಭೋಗ ಪ್ರವೃತ್ತಿ ಆಧಾರವಾಗಿರುವ ಮತ್ತೊಂದು ಪ್ರಮುಖ ಘಟಕವೆಂದರೆ ಗುಣಕ (ಮಲ್ಟಿಪ್ಲೈಯರ್). ಇದರ ಸಹಾಯದಿಂದ ಕೇನ್ಸ್ ಉದ್ಯೋಗ ಮಟ್ಟದಲ್ಲಾಗುವ ಬದಲಾವಣೆಗಳನ್ನು ವಿವರಿಸುತ್ತಾನೆ. ಇದು ಬಂಡವಾಳ ಹೂಡಿಕೆಯಿಂದ (ಇನ್ವೆಸ್ಟ್‌ಮೆಂಟ್) ನಿಷ್ಕರ್ಷವಾಗುತ್ತದೆ. ಬಂಡವಾಳ ಹೂಡಿಕೆಯಲ್ಲಾಗುವ ಏರಿಕೆಯಿಂದಾಗಿ ವರಮಾನದಲ್ಲಾಗುವ ಏರಿಕೆಯನ್ನು ಗುಣಕ ತೋರಿಸಿಕೊಡುತ್ತದೆ. ಇದು ಬಂಡವಾಳ ಹೂಡಿಕೆಯಲ್ಲಾಗುವ ಏರಿಕೆ ಅಥವಾ ಇಳಿಕೆಗೆ ಪ್ರತಿಯಾಗಿ ಆಗುವ ವರಮಾನದ ಏರಿಕೆ ಅಥವಾ ಇಳಿಕೆಯನ್ನು ತೋರಿಸುತ್ತದೆ.

ಗುಣಕದ ಪ್ರಮಾಣಕ್ಕೆ ಅಂಚಿನ ಅನುಭೋಗ ಪ್ರವೃತ್ತಿಯ ಪ್ರಮಾಣವೇ ಆಧಾರ. MPC ಹೆಚ್ಚಾಗಿದ್ದರೆ ಗುಣಕ ಅಧಿಕ ಮಟ್ಟದಲ್ಲಿರುತ್ತದೆ. ಇದರಿಂದಾಗಿ ಅನುಭೋಗದಲ್ಲಾಗುವ ಬದಲಾವಣೆಗಳ ಮೂಲಕ ಉದ್ಭವಿಸುವ ವರಮಾನದಲ್ಲಿ ಆಗುವ ಮಾರ್ಪಾಡುಗಳೂ ಅಧಿಕ ಮಟ್ಟದಲ್ಲಿರುತ್ತವೆ.

ವರಮಾನದಲ್ಲಿಯ ಏರಿಕೆಯನ್ನು ಬಂಡವಾಳ ಹೂಡಿಕೆಯಲ್ಲಿಯ ಏರಿಕೆ

ಯಿಂದ ಭಾಗಿಸಿದರೆ ಗುಣಕದ ಪ್ರಮಾಣವನ್ನು ಕಂಡುಹಿಡಿಯಬಹುದು.
ಅಂದರೆ ಈಗ ನಮಗೆ ತಿಳಿದಿರುವಂತೆ :

$$\triangle Y = \triangle C + \triangle I$$

$$1 = \frac{\triangle C}{\triangle Y} + \frac{\triangle I}{\triangle Y}$$

$$\text{ಅಥವಾ } \frac{\triangle I}{\triangle Y} = 1 - \frac{\triangle C}{\triangle Y}$$

$$\text{ಅಥವಾ } \frac{\triangle Y}{\triangle I} = \frac{1}{1 - \frac{\triangle C}{\triangle Y}}$$

$$\text{ಅಥವಾ } \frac{\triangle Y}{\triangle I} = \frac{1}{1 - MPC}$$

$$\therefore K = \frac{1}{1 - MPC}$$

ಮೇಲಿನ ಸೂತ್ರದಲ್ಲಿ :

$\triangle C$ = ಅನುಭೋಗದಲ್ಲಾಗುವ ಬಡತಿ
$\triangle Y$ = ರಾಷ್ಟ್ರೀಯ ವರಮಾನದಲ್ಲಾಗುವ ಬಡತಿ
$\triangle I$ = ಬಂಡವಾಳ ಹೂಡಿಕೆಯಲ್ಲಾಗುವ ಬಡತಿ

$\frac{\triangle C}{\triangle Y}$ = MPC ಅಂಚಿನ ಅನುಭೋಗ ಪ್ರವೃತ್ತಿ

$K = \frac{\triangle Y}{\triangle I}$ = ಗುಣಕ = ಬಂಡವಾಳ ಹೂಡಿಕೆಯ ದರ

ಇಲ್ಲಿ $\triangle I$ = 100 ರೂಪಾಯಿಗಳೆಂದೂ
$\triangle Y$ = 400 ರೂಪಾಯಿಗಳೆಂದೂ ಭಾವಿಸೋಣ.

ಆಗ $K = \frac{400}{100} = 4$ ಆಗುತ್ತದೆ

ಇಲ್ಲಿ $K = \frac{1}{1\text{-}MPC}$ ಎಂಬುದು ಏನನ್ನು ಸ್ಥಾಪಿಸುವುದೆಂದರೆ, ಅನುಭೋಗ ಪ್ರವೃತ್ತಿ 3/4ರಷ್ಟಿದ್ದರೆ ರಾಷ್ಟ್ರೀಯ ವರಮಾನ 4ರಷ್ಟು ಏರುತ್ತದೆ ; ಹಾಗೂ ಇದು 9/10ರಷ್ಟಿದ್ದರೆ ರಾಷ್ಟ್ರೀಯ ಉತ್ಪನ್ನ ಹಾಗೂ ವರಮಾನ 10ರಷ್ಟು ಏರುತ್ತದೆ. ಅನುಭೋಗ ಪ್ರವೃತ್ತಿಯ ಪ್ರಾಮುಖ್ಯ ಇಲ್ಲಿ ಅಡಗಿದೆ ಎನ್ನಬಹುದು.

ಈ ಪ್ರಕಾರ ಗುಣಕದ ಪ್ರಮಾಣವನ್ನು ಅನುಭೋಗ ಪ್ರವೃತ್ತಿ ನಿಷ್ಕರ್ಷಿಸು

ತ್ತದೆಯೆಂಬುದನ್ನೂ ಅರ್ಥ ವ್ಯವಸ್ಥೆಯಲ್ಲಿಯ ವರಮಾನ ಹಾಗೂ ಉದ್ಯೋಗಗಳನ್ನು ಸೃಷ್ಟಿಸಲು ಗುಣಕ ಸಹಾಯಕವಾಗಿದೆಯೆಂಬುದನ್ನೂ ನೋಡಿದ್ದಾಯಿತು.

ಈ ಸಮಗ್ರ ಮಾದರಿ (ಮಾಡೆಲ್) ಈಗಾಗಲೇ ಅಭಿವೃದ್ಧಿ ಹೊಂದಿರುವ ಬಂಡವಾಳ ವ್ಯವಸ್ಥೆಯ ದೇಶಗಳ ವಿಷಯಕ್ಕೆ ಸೂಕ್ತವಾಗಿ ಹೊಂದಿಕೊಳ್ಳುತ್ತದೆ. ಆದರೆ, ಉದ್ಯೋಗ ಸಮಸ್ಯೆಯೇ ಇಲ್ಲದ ಮತ್ತು ಆಚರಣೆಯಲ್ಲಿರುವ ವ್ಯವಸ್ಥೆಯೇ ಸ್ವತಃ ಉದ್ಯೋಗವನ್ನು ಒದಗಿಸುವಂಥ ಸಮಾಜವಾದಿ ಅರ್ಥ ವ್ಯವಸ್ಥೆಯ ವಿಷಯದಲ್ಲಿ ಹಾಗೂ ಅಪೂರ್ಣ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಸಾರ್ಥಕ ಬೇಡಿಕೆ ಮಾತ್ರವಲ್ಲದೆ ಇತರ ಘಟಕಗಳೂ ಈ ರಾಷ್ಟ್ರಗಳ ಉದ್ಯೋಗ ಪರಿಸ್ಥಿತಿಯನ್ನು ನಿಷ್ಕರ್ಷಿಸುತ್ತವೆ. ಹೀಗಾಗಿ ಈ ಮಾದರಿ ಅಲ್ಲಿಗೆ ಹೊಂದಿಕೊಳ್ಳಲಾರದು. ಅಂದರೆ, ಒಂದು ದೇಶದಲ್ಲಿ ಉತ್ಪಾದಿಸಿದ್ದನ್ನೆಲ್ಲ ಅನುಭೋಗಿಸಿ, ಬಂಡವಾಳ ನಿರ್ಮಾಣಕ್ಕಾಗಿ ಏನನ್ನೂ ಉಳಿಸದೆ ಇದ್ದರೆ ಅಂಥ ದೇಶದ ಅಭಿವೃದ್ಧಿ ಹಿಂಜರಿಯುತ್ತದೆ. ಅಭಿವೃದ್ಧಿಯ ಪ್ರಾರಂಭದ ಹಂತಗಳಲ್ಲಿ ಅಪೂರ್ಣವಾಗಿ ಅಭಿವೃದ್ಧಿ ಹೊಂದಿದ ದೇಶಗಳ ಗುರಿ ಕಡಿಮೆ ಅನುಭೋಗವಿರಬೇಕಾದ್ದು ಅತ್ಯವಶ್ಯ. ಇದರಿಂದ ಹೆಚ್ಚು ಉಳಿತಾಯ ಸಾಧ್ಯ. ಅಂದರೆ ಈ ಪರಿಕಲ್ಪನೆಯ ಪ್ರಾಮುಖ್ಯ ಅಪೂರ್ಣಾಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಉಳಿತಾಯವನ್ನು ಅಧಿಕಗೊಳಿಸುವುದರಲ್ಲಿ ಅಡಗಿದೆ. ಏಕೆಂದರೆ ಅಂಚಿನ ಅನುಭೋಗ ಪ್ರವೃತ್ತಿ ಶ್ರೀಮಂತರಲ್ಲಿ ಕಡಮೆಯಿದ್ದು ಬಡವರಲ್ಲಿ ಹೆಚ್ಚಾಗಿರುತ್ತದೆ. ಇದು ಅನಭಿವೃದ್ಧ ರಾಷ್ಟ್ರಗಳ ಶ್ರೀಮಂತ ವರ್ಗದಲ್ಲಿ ಆರ್ಥಿಕಾಧಿಕಾರದ ಕೇಂದ್ರೀಕರಣಕ್ಕೆಡೆ ನೀಡಿರುವ ಪ್ರಮುಖ ಘಟಕಗಳಲ್ಲೊಂದಾಗಿದೆ. ಇಂಥ ಸಂಧರ್ಭಗಳಲ್ಲಿ ಒತ್ತಾಯಪೂರ್ವಕ ಉಳಿತಾಯ ಯೋಜನೆಯ ಮೂಲಕ ಬಂಡವಾಳ ನಿರ್ಮಾಣವಾಗಿ, ರಾಷ್ಟ್ರೀಯ ವರಮಾನ ಏರಬೇಕೇ ವಿನಾ ಅಂಚಿನ ಅನುಭೋಗ ಪ್ರವೃತ್ತಿಯನ್ನು ಏರಿಸುವುದರ ಮೂಲಕವಲ್ಲ. ಅದು ಈಗಾಗಲೇ ಹೆಚ್ಚಿನ ಮಟ್ಟದಲ್ಲಿದೆ. ಹೀಗೆಂದ ಮಾತ್ರಕ್ಕೆ ಉದ್ಯೋಗ ಹಾಗೂ ವರಮಾನಗಳ ಮಟ್ಟಗಳನ್ನು ಏರಿಸಲು ಅನುಭೋಗ ಮಟ್ಟವನ್ನು ಏರಿಸಬೇಕೆಂಬ ಕೇನ್ಸನ ಹೇಳಿಕೆ ಅರ್ಥರಹಿತವಾಗುವುದಿಲ್ಲ. ಏಕೆಂದರೆ ಆತನ ಉದ್ದೇಶ ಮುಖ್ಯವಾಗಿ ಮುಗ್ಗಟ್ಟಿಗೆ ಸಿಕ್ಕಿ ತೊಳಲುತ್ತಿದ ಮುಂದುವರಿದ ರಾಷ್ಟ್ರಗಳ ಸಮಸ್ಯೆಗೆ ಪರಿಹಾರ ಹುಡುಕುವುದೇ ಆಗಿತ್ತು. ಅನಭಿವೃದ್ಧ ರಾಷ್ಟ್ರಗಳಲ್ಲಿ ಅನುಭೋಗವನ್ನು ಹಲವು ನಿರ್ಬಂಧಗಳ ಮೂಲಕ ಮೊಟಕುಗೊಳಿಸಿ ಉಳಿತಾಯದ ಕಡೆಗೆ ಗಮನ ನೀಡುವ ಧೋರಣೆಗಳನ್ನು ರೂಪಿಸಬೇಕಾಗುತ್ತದೆ.

ಆರ್. ಮೋಹನ

ಪತ್ರಿಕಾ ಸ್ವಾತಂತ್ರ್ಯ—ಒಂದು ವಿಚಾರ

ಪತ್ರಿಕೆಗಳು ಪ್ರಜಾತಂತ್ರದಲ್ಲಿ ಸ್ವತಂತ್ರವಾಗಿರಬೇಕು ಎಂಬ ಘೋಷಣೆಯನ್ನು ನಾವು ಪದೇ ಪದೇ ಕೇಳುತ್ತೇವೆ. ಆಗಾಗ್ಗೆ ಕೆಲವು ಪತ್ರಿಕೆಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾದ ಬಗ್ಗೆ ಟೀಕೆಯೂ ಕೇಳಿಬರುತ್ತದೆ. ನಿಜವಾಗಿ ಈ ಸ್ವಾತಂತ್ರ್ಯ ವೆಂದರೇನು ? ಇಂಥ ಸ್ವಾತಂತ್ರ್ಯದ ನೆರಳಾಗಿ ಬರುವ ಜವಾಬ್ದಾರಿ ಏನು ?

ನಮ್ಮ ಸಂವಿಧಾನದಲ್ಲಿ ಪತ್ರಿಕಾ ಸ್ವಾತಂತ್ರ್ಯ ಎಂಬುದರ ಬಗ್ಗೆ ಪ್ರತ್ಯೇಕವಾದ ಉಲ್ಲೇಖವಿಲ್ಲ. ವಾಕ್ ಸ್ವಾತಂತ್ರ್ಯ (ಫ್ರೀಡಂ ಆಫ್ ಸ್ಪೀಚ್) ಎಂಬ ಮೂಲ ಭೂತ ಹಕ್ಕಿನಲ್ಲಿಯೇ ಪತ್ರಿಕಾ ಸ್ವಾತಂತ್ರ್ಯವೂ ಅಡಗಿದೆ ಎಂಬುದು ಸಂವಿಧಾನ ಕರ್ತೃಗಳ ವಾದ. ಸಂವಿಧಾನವನ್ನು ಜನತೆಯ ಪ್ರತಿನಿಧಿಗಳು ಒಪ್ಪಿಕೊಳ್ಳು ವಾಗಿನ ಚರ್ಚೆಯಲ್ಲಿ ಪತ್ರಿಕಾ ಸ್ವಾತಂತ್ರ್ಯ ಎಂದು ಪ್ರತ್ಯೇಕ ಹಕ್ಕು ಇರಬೇಕು ಎಂಬ ಬೇಡಿಕೆ ಇತ್ತು. ಕಡೆಗೆ ಅದರ ಪ್ರತ್ಯೇಕ ಉಲ್ಲೇಖ ಅನಗತ್ಯವೆಂದು ತೀರ್ಮಾನವಾಯಿತು. ಇದುವರೆಗೆ ಭಾರತದಲ್ಲಿ ಅದರ ಪ್ರತ್ಯೇಕ ಹಕ್ಕಿನ ಆವಶ್ಯಕತೆ ಕಂಡುಬಂದಿಲ್ಲ.

ಪ್ರತಿಯೊಬ್ಬ ರಾಷ್ಟ್ರಕನಿಗೂ (ಸಿಟಿಜನ್) ತನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸುವ ಸ್ವಾತಂತ್ರ್ಯವಿದೆ. ಹಾಗೆಯೇ ಪ್ರಜಾತಂತ್ರದಲ್ಲಿ ಪತ್ರಿಕೆ, ರೇಡಿಯೊ ಅಥವಾ ಟೆಲಿವಿಜನ್ ಸಂಸ್ಥೆಗಳಿಗೂ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ.

ಪ್ರತಿ ರಾಷ್ಟ್ರಕನ ಮೂಲಭೂತ ಸ್ವಾತಂತ್ರ್ಯಕ್ಕೆ ಕೆಲವು ಮಿತಿಗಳಿವೆ, ಹಾಗೆಯೇ ಪತ್ರಿಕೆಗಳಿಗೂ. ಆದರೆ ರಾಷ್ಟ್ರಕ ಮತ್ತು ಪತ್ರಿಕೆಗಳಿಗಿರುವ ಹೋಲಿಕೆಯನ್ನು ಬಹು ದೂರ ಸಾಗಿಸುವಂತಿಲ್ಲ. ಒಂದು ಪತ್ರಿಕೆಯ ಪ್ರಭಾವಕ್ಕೂ ಒಬ್ಬ ವ್ಯಕ್ತಿಯ ಪ್ರಭಾವಕ್ಕೂ ಅಗಾಧ ಭೇದವಿದೆ. ಪತ್ರಿಕೆಗಳಲ್ಲಿ ವ್ಯಕ್ತವಾದ ಮತ ಸಾವಿರಾರು ಜನರ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಪ್ರಜಾತಂತ್ರದಲ್ಲಿ ಪತ್ರಿಕಾಸಂಸ್ಥೆ ಒಂದು ಪ್ರಬಲ ದನಿಯಾಗಿ ಮಾರ್ಪಡುತ್ತದೆ. ಸರಕಾರಕ್ಕೂ ಸಮಾಜಕ್ಕೂ ಪತ್ರಿಕೆ ತುಂಬ ಶಕ್ತಿಯುತವಾದ ಸಾಧನವಾಗುತ್ತದೆ. ಅದು ಸಮಾಜವನ್ನೇ ಬದಲಾ

ಯಿಸುವ ಅಂತಃಶಕ್ತಿಯಾಗಬಹುದು. ಸರಕಾರವನ್ನು ನಿಲ್ಲಿಸುವ ಅಥವಾ ಉರುಳಿಸುವ ಸಮಾಜಶಕ್ತಿಯೇ ಆಗಬಹುದು. ಹೀಗೆ ಈಗಿನ ಜನಜೀವನದಲ್ಲಿ ಪತ್ರಿಕೆಯ ಪಾತ್ರ ಸರ್ವವ್ಯಾಪಿಯಾಗಿದೆ; ಅನೇಕ ವಿಧಗಳಲ್ಲಿ, ಅನೇಕ ರೂಪಗಳಲ್ಲಿ, ವರ್ತಿಸುವ ಚೇತನವಾಗಿದೆ.

ಇಂಥ ಸಂಸ್ಥೆಗೆ ಸ್ವಾತಂತ್ರ್ಯ ಅವಶ್ಯ. ನಮ್ಮ ರಾಜಕೀಯ ವಿಧಾನದ ಆಳ ವಿಸ್ತಾರಗಳು ಹೆಚ್ಚಿದಂತೆ ವಿವಿಧ ಸಂಗತಿಗಳ ತೊಡಕೂ ಉಂಟಾಗುತ್ತದೆ. ಸರ್ಕಾರಕ್ಕೂ ಜನತೆಗೂ ನಡುವೆ ದೂರ ಬೆಳೆಯತೊಡಗುತ್ತದೆ. ಅದರಲ್ಲೂ ಭಾರತದಂಥ ದೊಡ್ಡ ದೇಶದಲ್ಲಿ ಸರ್ಕಾರ ಮತ್ತು ಪ್ರಜೆಯ ನಡುವಿನ ಅಂತರ ಹೆಚ್ಚು ಹೆಚ್ಚಾಗಿ ಬೆಳೆಯುವ ಸಂಭವವಿದೆ. ನಾವು ನಮಗಾಗಿ ನಿಯಮಿಸಿಕೊಂಡ ಸರ್ಕಾರದ ಮೇಲೆ ವಿಚಕ್ಷಣೆ ಅಗತ್ಯ. ಐದು ವರ್ಷಗಳಿಗೊಮ್ಮೆ ಸರ್ಕಾರವನ್ನು ನಿಯಮಿಸಿಕೊಳ್ಳುವಾಗ ಅದರ ಸಾಧನೆ, ಲೋಪ, ಭರವಸೆಗಳನ್ನು ಅಳೆಯಲೂ ನಮಗೆ ಒಂದು ಅಳತೆಗೋಲು ಬೇಕೇಬೇಕು. ಪತ್ರಿಕೆ ಸರ್ಕಾರದ ದೈನಂದಿನ ವ್ಯವಹಾರಗಳನ್ನು ಜನತೆಯ ಮುಂದೆ ಇಡುತ್ತದೆ. ತನ್ನ ಸಂಪಾದಕೀಯ ಮತ್ತು ಲೇಖನಗಳಲ್ಲಿ ಆ ವ್ಯವಹಾರಗಳ ಬಗ್ಗೆ ಟೀಕೆಯನ್ನೂ ಮುಂದಿಡುತ್ತದೆ.

ಸರ್ಕಾರಕ್ಕೂ ಜನತೆಯ ನಾಡಿಯ ಸ್ಪಂದನ ತಿಳಿಯಬೇಕು. ಇಂಥ ಸ್ಪಂದನದ ವಾಹಕವೂ ಪತ್ರಿಕೆ ಆಗುತ್ತದೆ.

ಜನಜೀವನದ ಚಟುವಟಿಕೆ ಅನೇಕ ದಿಕ್ಕುಗಳಲ್ಲಿ ಹಬ್ಬುತ್ತ ಹೋದಂತೆ ಪತ್ರಿಕೆಯ ಕರ್ತವ್ಯವೂ ಅನೇಕ ಮುಖವಾಗುತ್ತದೆ. ಸರ್ಕಾರಕ್ಕೂ ಜನತೆಗೂ ನಡುವಿನ ವಾಹಕವಾಗಿ ಅಲ್ಲದೆ ಸಮಾಜದಲ್ಲಿಯೇ ಇರುವ ವಿವಿಧ ಕ್ಷೇತ್ರಗಳ ಪರಸ್ಪರ ಪ್ರಭಾವಕ್ಕೂ ಪತ್ರಿಕೆ ವಾಹಕವಾಗಬೇಕು. ವಿಜ್ಞಾನ ಕ್ಷೇತ್ರದಲ್ಲಿ ಮುನ್ನಡೆ, ವಾಣಿಜ್ಯ ವ್ಯಾಪಾರಗಳಲ್ಲಿನ ಬವಲಾವಣೆ, ಸಾಂಸ್ಕೃತಿಕ ಮತ್ತು ಸಾಹಿತ್ಯ ರಂಗಗಳಲ್ಲಿಯ ಚಟುವಟಿಕೆ ಇತ್ಯಾದಿ. ಒಟ್ಟಾರೆ ಸಮಾಜದ ಒಳಗಿನಿಂದಲೂ ಹೊರಗಿನಿಂದಲೂ ಯಾವುದೇ ಮುಖ್ಯ ಘಟನೆ ನಡೆದರೂ ಅದನ್ನು ಎಲ್ಲರಿಗೆ ತಿಳಿಯುವಂತೆ ಬಿತ್ತರಿಸುವುದೂ ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸುವುದೂ ಪತ್ರಿಕೆಯ ಧರ್ಮ.

ಪತ್ರಿಕೆ ತನ್ನ ಪಾತ್ರವನ್ನು ನಿರ್ವಹಿಸುವುದಕ್ಕೆ ಸ್ವಾತಂತ್ರ್ಯವಿರದಿದ್ದರೆ ಅದರ ಶಕ್ತಿಯ ದುರುಪಯೋಗವಾಗುವುದು ಸಹಜ. ಸಮಾಜಕ್ಕೆ ಸಂಗತಿಗಳ ನಿರ್ದುಷ್ಟ ವರದಿಯನ್ನು ಒಪ್ಪಿಸುವಾಗ ಅದರ ಮೇಲೆ ಯಾವ ಒತ್ತಡವೂ ಇರಬಾರದು ಎಂಬುದು ವಿವೇಕ ಸಮ್ಮತ. ಉದಾಹರಣೆಗೆ ಸರ್ಕಾರದ ವಿಚಕ್ಷಕನಾಗಿ ಪತ್ರಿಕೆ ಕೆಲಸ ಮಾಡುವಾಗ ಸರ್ಕಾರದ ಭಯ ಅದಕ್ಕೆ ಇರಬಾರದು. ಜನತೆಯ ವಿಚಾರವನ್ನು ಸರ್ಕಾರದ ಮುಂದೆ ಮಂಡಿಸುವಾಗ, ಜನತೆಯಲ್ಲಿರುವ ಯಾವುದಾದರೂ ಒಂದು ಪ್ರಬಲ ಗುಂಪಿನ ವಿಚಾರವನ್ನು ಮಾತ್ರ ಮಂಡಿಸುವ ಒತ್ತಡ ಪತ್ರಿಕೆಯ ಮೇಲಿರಬಾರದು. ಜನತೆಯಲ್ಲಿಯೇ ಇರುವ ವಿವಿಧ ಜಾತಿಗಳ ವರದಿ

ಯಲ್ಲೂ ದೋಷಕ್ಕೆ ಅವಕಾಶವಿರಬಾರದು. ಒತ್ತಡ ಎಂಬುದು ಇದ್ದರೆ ವರದಿ ಸತ್ಯದೂರವಾಗುತ್ತದೆ. ಸತ್ಯದೂರವಾದ ವರದಿ ಪತ್ರಿಕೆಯ ಅಸ್ತಿತ್ವವನ್ನೇ ಪ್ರಶ್ನಿಸುತ್ತದೆ. ಅದಕ್ಕೆಂದೇ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿ ತತ್ತ್ವಶಃ ಪತ್ರಿಕೆಯ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಲಾಗಿದೆ.

ಒಂದು ವಿಷಯವನ್ನು ಗಮನದಲ್ಲಿಡಬೇಕು: ವರದಿ ಬೇರೆ, ಅಭಿಪ್ರಾಯ ಬೇರೆ. ಪ್ರತಿಯೊಂದು ಪತ್ರಿಕೆಗೂ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕಿದೆ. ಆದರೆ ಪೂರ್ವಗ್ರಹಕ್ಕೆ ಒಳಗಾಗಿ ವರದಿ ಮಾಡುವ ಹಕ್ಕಿಲ್ಲ. ವರದಿಯೊಳಗಿನ ಸಂಗತಿಗಳು ಪವಿತ್ರ ಸತ್ಯ. ಆ ಸತ್ಯವನ್ನು ನಗ್ನುಮುಗ್ನಾಗಿಸುವ ಸ್ವಾತಂತ್ರ್ಯವನ್ನು ಸಮಾಜ ಪತ್ರಿಕೆಗಳಿಗೆ ಕೊಡುವುದಿಲ್ಲ. ಪತ್ರಿಕೆಗಳು ತಮ್ಮ ಸಂಪಾದಕೀಯ ಮತ್ತು ಲೇಖನಗಳಲ್ಲಿ ಆ ಸತ್ಯದ ಮೇಲೆ ಅಭಿಪ್ರಾಯ ಮಂಡಿಸುಬಹುದು. ಆದರೆ ವರದಿ ಮತ್ತು ಅಭಿಪ್ರಾಯ ಬೆರೆಯಬಾರದು.

ನವೀನ ಸಮಾಜದಲ್ಲಿ ಪತ್ರಿಕೆಗಳ ಆವಶ್ಯಕತೆ ಮತ್ತು ಹೊಣೆಗಾರಿಕೆಯನ್ನು ಉತ್ಪ್ರೇಕ್ಷಿಸಲು ಬಾರದು. ನಮ್ಮ ಅಸ್ತಿತ್ವದ ಒಂದು ಪ್ರಮುಖ, ಆವಶ್ಯಕ ಅಂಗವಾಗಿ ಪತ್ರಿಕೆಗಳು ಮಾರ್ಪಟ್ಟಿವೆ. ಇಲ್ಲಿ ಪತ್ರಿಕೆ ಎಂದರೆ ಜನತೆಗೆ ವರದಿಯ ನ್ನೊಪ್ಪಿಸುವ ಎಲ್ಲ ವರ್ಗಗಳನ್ನೂ ಸೇರಿಸಿಕೊಳ್ಳಬೇಕು. ರೇಡಿಯೊ ಮತ್ತು ಟೆಲಿವಿಜನ್ ಸಹ ಇದರ ವ್ಯಾಪ್ತಿಯೊಳಗೆ ಬರಬೇಕು. ಇವೆಲ್ಲ ಜನಸಂಪರ್ಕ ಮಾಧ್ಯಮಗಳು.

ಒಂದು ವ್ಯಕ್ತಿ ಅಥವಾ ಸಂಸ್ಥೆಯ ಸ್ವಾತಂತ್ರ್ಯವನ್ನು, ಅದಕ್ಕಿರುವ ಅಥವಾ ಇರಬೇಕಾದ ಹಕ್ಕುಗಳನ್ನು ನಾವು ಒಪ್ಪಿಕೊಂಡ ಒಡನೆಯೇ ಅದಕ್ಕಿರಬೇಕಾದ ಹೊಣೆಗಾರಿಕೆಯನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ಅದರಲ್ಲೂ ಪತ್ರಿಕೆಗಳು ಬಲಿತಂತೆಲ್ಲ ಅವುಗಳ ಹೊಣೆಗಾರಿಕೆಯ ಭಾರವೂ ಹೆಚ್ಚುತ್ತದೆ. ಸಮಾಜದ ಪ್ರಗತಿಗೆ, ಹಿತಸಾಧನೆಗೆ ಸರ್ಕಾರ, ನ್ಯಾಯಾಲಯ, ಅಧಿಕಾರ ವರ್ಗ ಹೇಗೆ ಅವಶ್ಯವಾದ ಅಂಗಗಳಾಗುತ್ತವೆಯೋ ಅಷ್ಟೇ ಪ್ರಾಮುಖ್ಯವುಳ್ಳ ಆವಶ್ಯಕತೆ ಪತ್ರಿಕೆಗಳದಾಗಿದೆ ಎಂದರೆ ಅವುಗಳ ಜವಾಬ್ದಾರಿಯ ಅಗಾಧತೆಯ ಅರಿವಾಗುತ್ತದೆ. ಹತ್ತಿರ ಹತ್ತಿರ ನ್ಯಾಯಾಲಯಗಳಿಗೆ ಇರುವ ಸ್ವಾತಂತ್ರ್ಯವನ್ನು ಪತ್ರಿಕೆಗಳು ಬೇಡುತ್ತವೆ.

ಆದರೆ ಪತ್ರಿಕೆಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬಲ್ಲವೆ ಎಂಬುದು ಮುಖ್ಯ ಪ್ರಶ್ನೆ. ಜವಾಬ್ದಾರಿಯನ್ನು ನಿರ್ವಹಿಸಲಾಗದ ಸಂಸ್ಥೆಗೆ ಅಡ್ಡಿ ಆತಂಕ ಗಳಿಲ್ಲದ ಸ್ವಾತಂತ್ರ್ಯವನ್ನು ಸಮಾಜ ಕೊಡಬೇಕೆ ಎಂಬುದು ತರುವಾಯದ ಪ್ರಶ್ನೆ.

ಸರ್ಕಾರದ ಮೇಲೆ, ಅಧಿಕಾರವರ್ಗದ ಮೇಲೆ ಪತ್ರಿಕೆಗಳ ಮತ್ತು ಅದಕ್ಕೂ ಮುಂದೆ ನ್ಯಾಯಾಲಯಗಳ ವಿಚಕ್ಷಣೆ ಇದೆ. ನ್ಯಾಯಾಲಯಗಳ ಮೇಲೆ ಮತ್ತು

ಪತ್ರಿಕೆಗಳ ಮೇಲೆ ಸಮಾಜದ್ದೇ ವಿಚಕ್ಷಣೆ ಇರಬೇಕು. ನ್ಯಾಯಾಲಯಗಳಿಗೆ ಸಂಪ್ರದಾಯ. ಕಾನೂನು, ತರಬೇತಿ ಮುಂತಾದ ಹೆದ್ದಾರಿಗಳಿವೆ. ಅಂಥ ಯಾವ ಮಿತಿಯೂ ಪತ್ರಿಕೆಗಳಿಗೆ ಏರ್ಪಟ್ಟಿಲ್ಲ. ತನ್ನ ಅಂಗವೇ ಆದ ಪತ್ರಿಕೆಯನ್ನು ಸಮಾಜ ವಿಚಕ್ಷಿಸುವ ಶಕ್ತಿಯನ್ನು ಪಡೆದಿಲ್ಲ.

ಪತ್ರಿಕೆಗಳ ಮೇಲೆ ಮತ್ತೆ ಕಣ್ಣಿಡುವ ಕೆಲಸ ಸರ್ಕಾರದ್ದೇ ಆಗುತ್ತದೆ. ಸಮಾಜ ಪತ್ರಿಕೆಗಳನ್ನು ಅಂಕೆಯಲ್ಲಿಡುವ ಜಾಗೃತ ಸ್ಥಿತಿಗೆ—ಅದೊಂದು ಅಸಾಧ್ಯ ಆದರ್ಶ—ಬರುವವರೆಗೆ ಸರ್ಕಾರ ಸಮಾಜದ ಪ್ರತಿನಿಧಿಯಾಗಬೇಕು. ಈ ಕಾರಣ ದಿಂದಲೇ ಪತ್ರಿಕೆಗಳಿಗೂ ಸರಕಾರಕ್ಕೂ ಘರ್ಷಣೆ.

ಸ್ವತಂತ್ರ ಪತ್ರಿಕೆಗಳು ಎಂದು ನಾವು ಕರೆಯಬಹುದಾದ ಸಂಸ್ಥೆ ಹೇಗಿರ ಬೇಕು? ಅದರ ಮೇಲೆ ಯಾವ ಒತ್ತಡವೂ ಇರಬಾರದು ಎಂಬುದನ್ನು ನೋಡಿ ಯಾಗಿದೆ. ಸಮಾಜದ ಚಟುವಟಿಕೆಗಳನ್ನು, ಘಟನೆಗಳನ್ನು, ಚಿತ್ರಿಸುವಾಗ ಸತ್ಯತೆಯೇ ಮುಖ್ಯ ಎಂಬುದನ್ನು ಹೆಚ್ಚು ಒತ್ತಿ ಹೇಳಬೇಕಾಗಿಲ್ಲ. ಇನ್ನೊಂದು ಮುಖ ಎಂದರೆ ಅಭಿಪ್ರಾಯಗಳ ಮಂಡನೆ. ಪತ್ರಿಕೆಗೆ ಸಂಪಾದಕರು, ಮಾಲೀಕರು ಎಂದು ಇರುತ್ತಾರೆ. ಅವರ ಅಭಿಪ್ರಾಯಕ್ಕೆ ಮಾತ್ರ ಅದರಲ್ಲಿ ಸ್ಥಾನವಿರಬೇಕೆ? ಈ ಪ್ರಶ್ನೆಗೆ ಸಮ್ಮತಿಯ ಉತ್ತರವನ್ನು ಬಹಳ ಜನ ಕೊಡುತ್ತಾರೆ—ಅವರದೇ ಪತ್ರಿಕೆ; ಅವರ ಅಭಿಪ್ರಾಯವಲ್ಲದಿದ್ದರೆ ಬೇರೆ ಏಕೆ? ವರದಿ ಮಾತ್ರ ನಿಜವಾಗಿದ್ದರಾಯಿತು, ಅಭಿಪ್ರಾಯ ವೈಯಕ್ತಿಕವಾಗಿರಬಹುದು, ಎಂದು.

ಆದರೆ ಪತ್ರಿಕೆಗಳಲ್ಲಿ ವಿರೋಧಾಭಿಪ್ರಾಯಕ್ಕೂ ಅವಕಾಶ ಕೊಡಬೇಕು ಎಂದು ವಾದಿಸುವವರಿದ್ದಾರೆ. ಕೆಲವು ಪತ್ರಿಕೆಗಳು ಅಂಥ ಲೇಖನಗಳನ್ನು ಪ್ರಕಟಿಸು ತ್ತವೆ. ಸಂಪಾದಕೀಯದಲ್ಲಿ ಒಂದು ಅಭಿಪ್ರಾಯ, ವಾದಗಳು. ಪಕ್ಕದ ಲೇಖನದಲ್ಲಿ ಅದಕ್ಕೆ ವಿರುದ್ಧವಾದ ಮತ, ಖಂಡನೆಗಳು.

ಇಂಥ ಪತ್ರಿಕೆಗಳು ಈಗ ಸಿಕ್ಕುವುದು ಕಠಿನ. ಆದರೆ ಅವುಗಳ ಧೋರಣೆಯ ಹಿಂದೆ ಅಡಗಿದ ಮೌಲ್ಯ ಬಹಳ ಹೆಚ್ಚಿನದು. ಅಭಿಪ್ರಾಯಗಳ ಘರ್ಷಣೆಯಿಂದ ಸತ್ಯ ಹೊರಬೀಳುತ್ತದೆ ಎಂಬುದು ಆ ಮೌಲ್ಯ. ಜನತೆಯನ್ನು ಅಧಿಕ ಸಂಖ್ಯೆಯಲ್ಲಿ ತಲಪುವ ಪತ್ರಿಕೆ ಒಂದೇ ಅಭಿಪ್ರಾಯದ ಸ್ವತ್ತಾದರೆ ಅದು ಪ್ರಜಾತಂತ್ರಕ್ಕೆ ಪೂರಕವಲ್ಲ. ಆದರೆ ಈ ಕೆಲಸವನ್ನು ಇನ್ನೊಂದು ಪತ್ರಿಕೆ ಮಾಡಬಹುದು ಎಂದು ವಾದಿಸುವವರೂ ಇದ್ದಾರೆ.

ಪತ್ರಿಕೆಯ ಸ್ವಾತಂತ್ರ್ಯಕ್ಕೆ ಸರ್ಕಾರ ಒಂದೇ ಅಡ್ಡಿ ಅಲ್ಲ. ಪತ್ರಿಕೆಯ ಒಳಗಿನ ಶಕ್ತಿಗಳೇ ಅದಕ್ಕೆ ಅಡ್ಡಿಯಾಗಬಹುದು. ಸಮಾಜದ ಕೆಲವು ಗುಂಪುಗಳಿಗೂ ಆತಂಕಗಳಾಗಬಹುದು. ಬಹುಪಾಲು ಹಾಗೆ ಆಗಿಯೇ ಆಗುತ್ತದೆ. ಈ ಬಗ್ಗೆ ಸ್ವಲ್ಪ ವಿವೇಚಿಸುವುದು ಅಗತ್ಯ.

ಪತ್ರಿಕೆಗಳು ಇಂದಿನ ಯುಗದಲ್ಲಿ ಬೃಹತ್ ಉದ್ಯಮಗಳಾಗಿ ಮಾರ್ಪಟ್ಟಿವೆ,

ಪತ್ರಿಕೆಗಳು ಪ್ರಾರಂಭವಾದಾಗ ಸಾಹಸಿಯಾದ ಒಬ್ಬ ಸಂಪಾದಕ ಅದನ್ನು ಚಲಾಯಿಸಬಹುದಾಗಿತ್ತು. ಈಗ ಲಕ್ಷಾಂತರ ರೂಪಾಯಿಗಳ ಬಂಡವಾಳವಿಲ್ಲದೆ ದಿನಪತ್ರಿಕೆಯೊಂದನ್ನು ಸ್ಥಾಪಿಸುವುದು ಅಸಾಧ್ಯ. ಸಾಹಸದಿಂದ ಮುನ್ನುಗ್ಗಿದರೂ ಯಶಸ್ಸಿನ ಸಾಧ್ಯತೆ ಬಹಳ ಕಡಿಮೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಂತೂ ಬಂಡವಾಳದ ಆವಶ್ಯಕತೆ ವಿಪರೀತವಾಗಿದೆ. ಆದಷ್ಟು ಬೇಗನೇ ಮುದ್ರಿಸಲು ಬೇಕಾಗುವ ನವನವೀನ ಯಂತ್ರಗಳು, ಹಂಚಿಕೆಯ ವ್ಯವಸ್ಥೆ, ಸುದ್ದಿ ಸಂಗ್ರಹದ ವ್ಯವಸ್ಥೆ ಇತ್ಯಾದಿ ಪ್ರತಿಯೊಂದೂ ದೊಡ್ಡ ಪ್ರಮಾಣದಲ್ಲಿ ಅವಶ್ಯ. ಇಷ್ಟೊಂದು ಹಣವನ್ನು ತೊಡಗಿಸಿದ ಮೇಲೆ ಮಾಲೀಕ ಲಾಭವನ್ನು ಅಪೇಕ್ಷಿಸುತ್ತಾನೆ.

ಪತ್ರಿಕೆಗಳು ಲಾಭದಾಯಕ ಉದ್ಯಮಗಳಾಗುವುದು ಜಾಹೀರಾತುಗಳ ಮೂಲಕ. ಯಾವುದೇ ಪತ್ರಿಕೆಯ ಪ್ರಸಾರ ಎಷ್ಟೇ ಇರಲಿ, ಅದರ ಬೆಲೆಯಿಂದ ವೆಚ್ಚದ ಅಲ್ಪ ಭಾಗವೂ ಪೂರೈಸುವುದಿಲ್ಲ. ಎಂದರೆ ಕೊಂಡು ಓದುವ ಓದುಗರ ಸಂಖ್ಯೆಯಿಂದ ಬರುವ ಹಣ ಅತ್ಯಲ್ಪ. ಇಪ್ಪತ್ತು ಪೈಸೆಗೆ ಮಾರಾಟವಾಗುವ ಪತ್ರಿಕೆಯ ನಿಜವಾದ ಬೆಲೆ ರೂಪಾಯಿಗಳಷ್ಟಿರಬಹುದು.

ಆದುದರಿಂದ ಅದರ ವೆಚ್ಚ ಪೂರ್ತಿಯಾಗುವುದೂ ಲಾಭ ಬರುವುದೂ ಜಾಹೀರಾತುಗಳ ಮೂಲಕ ಮಾತ್ರ. ಪತ್ರಿಕೆಯ ಪ್ರಸಾರ ಹೆಚ್ಚಿದಷ್ಟೂ ಅದರ ಜಾಹೀರಾತಿನ ದರ ಹೆಚ್ಚು. ಆದಕ್ಕೋಸ್ಕರ ಪತ್ರಿಕೆಗಳು, ಲಾಭ ಹಾಗಿರಲಿ, ಅಸ್ತಿತ್ವಕ್ಕೂ ಜಾಹೀರಾತುಗಳ ಮರೆಹೊಗಬೇಕು.

ಪತ್ರಿಕೆಯ ಪ್ರಸಾರ ಹೆಚ್ಚಿದಂತೆಲ್ಲ ಅದು ಸ್ವಲ್ಪಮಟ್ಟಿಗೆ ಜಾಹೀರಾತುಗಳನ್ನು ಆರಿಸಿ ಪ್ರಕಟಿಸುವ ಘಟ್ಟಕ್ಕೆ ಬರುತ್ತದೆ. ಎಂದರೆ ಪತ್ರಿಕೆ ಜಾಹೀರಾತುಗಳನ್ನು ಅರಸುವುದರ ಬದಲಿಗೆ ಜಾಹೀರಾತುಗಳೇ ಪತ್ರಿಕೆಯನ್ನರಸಿ ಬರುತ್ತವೆ. ಅದು ಹೇಗೇ ಇರಲಿ, ಜಾಹೀರಾತುಗಳಂತೂ ಬೇಕೇ ಬೇಕು. ಜಾಹೀರಾತುಗಳೇ ಪತ್ರಿಕೆಗಳ ಪ್ರಾಣವಾಯು.

ಜಾಹೀರಾತುದಾರರು ಯಾರು? ಅವರೂ ಸಮಾಜದಲ್ಲಿ ಒಂದು ಗುಂಪು. ಅವರು ತಮ್ಮ ಹಿತಾಸಕ್ತಿಗಳಿಗೆ ಧಕ್ಕೆ ಬಂದಾಗ ತಕ್ಕ ಕ್ರಮವನ್ನು ಕೈಗೊಳ್ಳುವುದು ಸಹಜ. ಅವರಿಂದ ಪೋಷಿಸಲ್ಪಡುವ ಪತ್ರಿಕೆಗಳಿಂದ ಧಕ್ಕೆ ಬಾರದಂತೆ ಅವರು ಎಚ್ಚರಿಕೆಯಿಂದ ಇರುತ್ತಾರೆ. ಜಾಹೀರಾತುದಾರರಿಗೆ ಇಷ್ಟವಾಗದ ಘಟನೆಗಳನ್ನು ವರದಿ ಮಾಡುವುದು ಪತ್ರಿಕೆಗಳಿಗೆ ಬಹಳ ಕಷ್ಟ. ನಡೆದ ಘಟನೆ ಸಮಾಜಕ್ಕೆ ಎಷ್ಟೇ ಮುಖ್ಯವಾಗಿರಲಿ, ಜಾಹೀರಾತುದಾರರಿಗೆ ಇಷ್ಟವಿಲ್ಲದಲ್ಲಿ ಅದಕ್ಕೆ ಪತ್ರಿಕೆಗಳಲ್ಲಿ ಸ್ಥಾನವಿಲ್ಲ. ಇದು ಯಾವಾಗಲೂ ಎಲ್ಲ ಪತ್ರಿಕೆಗಳಲ್ಲೂ ಉಂಟಾಗುತ್ತದೆ ಎಂದಲ್ಲ. ಆದರೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಜಾಹೀರಾತುದಾರರ ಪ್ರಭಾವ ವಿಪರೀತವಾಗಿರುತ್ತದೆ.

ಪತ್ರಿಕೆಗಳ ನಿರ್ವಹಣೆಯೂ ಸಾಕಷ್ಟು ಹಣ ಬೇಕಾದ ಉದ್ಯಮವೇ

ಆದುದರಿಂದ ಮಾಲೀಕರ ಹಿತಾಸಕ್ತಿಗಳಿಗೂ ಜಾಹೀರಾತುದಾರರ ಹಿತಾಸಕ್ತಿಗಳಿಗೂ ಭೇದವಿರುವುದಿಲ್ಲ. ಭಾರತದಲ್ಲಿ ಹೆಚ್ಚಿನ ಸಂಖ್ಯೆಯ ಪತ್ರಿಕೆಗಳ ಸ್ಥಿತಿ ಹೀಗಿದೆ. ಆದುದರಿಂದ ಪತ್ರಿಕೆಗಳು ವರದಿಮಾಡುವಾಗ ಈ ಒತ್ತಡ ವ್ಯಕ್ತವಾಗುತ್ತದೆ. ಈ ಪ್ರಭಾವ ಎಷ್ಟು ಸೂಕ್ಷ್ಮವಾಗಿರುತ್ತದೆಯೆಂದರೆ ಓದುಗರಿಗೆ ಇದರ ಅರಿವೇ ಆಗುವುದಿಲ್ಲ. ನಡೆದ ಸಾವಿರಾರು ಘಟನೆಗಳಲ್ಲಿ ಕೆಲವನ್ನು ವರದಿಮಾಡಲು ಪತ್ರಿಕೆಗಳು ಆಯ್ಕೆ ಮಾಡುವುದರ ಮೂಲಕ ಈ ಉದ್ದೇಶ ಸಾಧಿಸಬಹುದು.

ಒಂದು ದಿನದಲ್ಲಿ, ವಾರದಲ್ಲಿ ಎಷ್ಟೋ ಸಂಗತಿಗಳು ಜಗತ್ತಿನಲ್ಲಿ ಸಂಭವಿಸುತ್ತವೆ. ಇಷ್ಟವಿದ್ದರೂ ಎಲ್ಲ ಸಂಗತಿಗಳ ಬಗ್ಗೆ ಒಂದು ಪತ್ರಿಕೆ ಸ್ಥಳವನ್ನು ದೊರಕಿಸಲಾರದು. ನಡೆದ ವಿಷಯಗಳಲ್ಲಿ ಯಾವುದು ಅವಶ್ಯ, ಯಾವುದು ಅನವಶ್ಯ ಎಂದು ಆರಿಸಬೇಕು. ಹಾಗೆ ಆರಿಸುವಾಗ ಪತ್ರಿಕೆ ತನ್ನ ಮಾಲೀಕನ ಹಿತ ಸಾಧನೆಗೆ ಅನುಕೂಲವಾಗಿ ವರ್ತಿಸುವುದು ಸಹಜವಾಗಿಬಿಡುತ್ತದೆ. ಓದುಗರಿಗೂ ಇಂಥ ವಿಷಯವೇ ಮುಖ್ಯ, ಇಂಥ ವಿಷಯ ಅಮುಖ್ಯ ಎಂಬ ಅಭ್ಯಾಸ ರೂಢಿಯಾಗಿ ಬಿಡುತ್ತದೆ.

ಜಾಹೀರಾತುಗಳ ಪ್ರಭಾವ ಎಲ್ಲಿಯವರೆಗೆ ಎಂದರೆ, ಅವುಗಳ ಮುದ್ರಣದ ಅನಂತರ ಪತ್ರಿಕೆಯಲ್ಲಿ ಉಳಿಯುವ ಸ್ಥಳದಲ್ಲಿ ಮಾತ್ರ ಸುದ್ದಿಯನ್ನು ಅಳವಡಿಸಬೇಕು. ಪತ್ರಿಕೆಯ ಒಂದು ಸಂಚಿಕೆಯಲ್ಲಿ ಎಷ್ಟು ಪುಟಗಳು ಎಂಬುದು ಜಾಹೀರಾತುಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆಯೇ ಹೊರತು ಸುದ್ದಿಯ ಪ್ರಮಾಣವನ್ನಲ್ಲ. ಪತ್ರಿಕೆಯ ಜಾಹೀರಾತು ವಿಭಾಗ ಪತ್ರಿಕೆಯ ಪ್ರಮಾಣವನ್ನು ನಿಶ್ಚಯಿಸಿ, ಒಂದೊಂದು ಪುಟದಲ್ಲಿ ಸುದ್ದಿಗೆ ಇಷ್ಟೇ ಅವಕಾಶವಿದೆ ಎಂದು ಸುದ್ದಿ ವಿಭಾಗಕ್ಕೆ ಪ್ರತಿದಿನ ತಿಳಿಸುತ್ತದೆ. ಹಾಗೆ ಎಷ್ಟು ಸ್ಥಳವಿದೆ ಎಂಬುದನ್ನು ಅವಲಂಬಿಸಿಯೇ ಸುದ್ದಿಯ ಆಯ್ಕೆಯಾಗುತ್ತದೆ.

ಪತ್ರಿಕೆಗಳ ಗಾತ್ರ ಮತ್ತು ಪ್ರಸಾರ ಹೆಚ್ಚಾದಂತೆಲ್ಲ ಅದರ ಸಂಚಾಲನೆಯ ಹೊಣೆ ಹೆಚ್ಚುಹೆಚ್ಚಾಗಿ ಜಾಹೀರಾತು ವಿಭಾಗಕ್ಕೆ ಸೇರುತ್ತದೆ. ಪ್ರಸಾರವನ್ನು ಅಭಿವೃದ್ಧಿಗೊಳಿಸುತ್ತ, ಹೆಚ್ಚು ಹೆಚ್ಚು ಜಾಹೀರಾತುಗಳನ್ನು ಆಕರ್ಷಿಸುವ ವ್ಯವಸ್ಥಾಪಕ (ಮ್ಯಾನೇಜರ್) ಸಂಪಾದಕನಿಗಿಂತ ಹೆಚ್ಚಿನ ಪ್ರಭಾವ ಮತ್ತು ಅಧಿಕಾರ ಉಳ್ಳವನಾಗಿರುತ್ತಾನೆ. ಮ್ಯಾನೇಜರನ ಮಾತು ಮೊದಲು; ಸಂಪಾದಕನ ಮಾತು ಆಮೇಲೆ. ಅದಕ್ಕೆಂದೇ ಇತ್ತೀಚೆಗೆ ವ್ಯವಸ್ಥಾಪಕ ಸಂಪಾದಕ (ಮ್ಯಾನೇಜಿಂಗ್ ಎಡಿಟರ್) ಎಂಬ ಹುದ್ದೆ ಪ್ರಾರಂಭವಾಗಿದೆ.

ಪತ್ರಿಕೆಯ ಒಲವು ನಿಲವುಗಳನ್ನು ನಿರ್ಧರಿಸುವವನು ವ್ಯವಸ್ಥಾಪಕನೇ ಹೊರತು ಸಂಪಾದಕನಲ್ಲ. ಹೀಗೆ ಪತ್ರಿಕೆ ನಿಜವಾಗಿ ಸ್ವತಂತ್ರವಾಗಿರುವುದಿಲ್ಲ. ಜಾಹೀರಾತುದಾರರ ಅಪ್ರತ್ಯಕ್ಷ ಹಿಡಿತ ಅದನ್ನು ಅಂಕೆಯಲ್ಲಿ ಇಡುತ್ತದೆ.

ಸರ್ಕಾರವೂ ಜಾಹೀರಾತುಗಳನ್ನು ಕೊಡುವ ಒಂದು ಸಂಸ್ಥೆ. ಭಾರತ

ದಲ್ಲಂತೂ ಅದು ಇತರ ಎಲ್ಲ ಜಾಹೀರಾತುದಾರರಿಗಿಂತ ದೊಡ್ಡ ಜಾಹೀರಾತುದಾರ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾವಿರಾರು ರೂಪಾಯಿಗಳ ಜಾಹೀರಾತುಗಳ ಮೂಲಕ ಪತ್ರಿಕೆಗಳನ್ನು ಪೋಷಿಸುತ್ತವೆ. ತತ್ಕಾಲದ ಸರ್ಕಾರದ ಪ್ರೀತಿಗಾಗಿ ಪತ್ರಿಕೆ ಕೇವಲ ಆ ಸರ್ಕಾರದ ಅನುಕೂಲಕ್ಕೆ ಒದಗುವ ಘಟನೆಗಳನ್ನೇ ವರದಿ ಮಾಡಬಹುದು. ಹಾಗೆ ಮಾಡದಿದ್ದರೆ ಸರ್ಕಾರ ಜಾಹೀರಾತುಗಳನ್ನು ನಿಲ್ಲಿಸ ಬಹುದು. ಆದರೆ ಸುದೈವದಿಂದ ಭಾರತದಲ್ಲಿ ಹೀಗಾಗುವುದು ಕಡಿಮೆ. ಕೆಲವು ರಾಜ್ಯಗಳಲ್ಲಿ ಹೀಗಾಗಿದೆ. ಆದರೂ ಎಲ್ಲ ಪತ್ರಿಕೆಗಳ ಒಟ್ಟು ವಿರೋಧ ಮತ್ತು ಪ್ರಜಾಪ್ರತಿನಿಧಿಗಳ ಕೂಗಿನಿಂದ ಸರ್ಕಾರಗಳು ಹಿಂತೆಗೆಯುತ್ತವೆ. ಅದೇ ಖಾಸಗಿ ಉದ್ಯಮಿಗಳ ಮೇಲೆ ಇಂಥ ವಿರೋಧದ ಪ್ರಭಾವ ಕಡಿಮೆ.

ಪ್ರಸಾರವನ್ನು ಬೆಳೆಸುವುದೇ ಪತ್ರಿಕೆಯ ಉದ್ದೇಶವಾದಾಗ ಅದರಿಂದ ಅನೇಕ ದೋಷಗಳು ಉಂಟಾಗುತ್ತವೆ. ಪ್ರಸಾರವನ್ನು ಬೆಳೆಸುವುದಕ್ಕಾಗಿ ಪತ್ರಿಕೆ ಅಶ್ಲೀಲ ವರದಿಗಳಿಗೆ ಕೈ ಹಾಕಬಹುದು. ಪ್ರಜೆಗೆ ಹಿತಕರವಲ್ಲದಿದ್ದರೂ ಆಸಕ್ತಿದಾಯಕ ವಾದ ಕೊಲೆ, ಸುಲಿಗೆ, ಸೂಳೆಗಾರಿಕೆ, ಅಶ್ಲೀಲ ಘಟನೆಗಳು, ಚಿತ್ರಗಳು ಮುಂತಾದವಕ್ಕೆ ಅವುಗಳ ಪ್ರಾಮುಖ್ಯ ಮೀರಿದ ಸ್ಥಳಾವಕಾಶವನ್ನು ಕೊಡ ಬಹುದು. ಸಮಾಜದ ಮುಗ್ಧ ವ್ಯಕ್ತಿಗಳಿಗೆ ಧಕ್ಕೆಯಾಗಬಹುದಾದ ಸುಳ್ಳು ಸುದ್ದಿಗಳನ್ನು ಪ್ರಕಟಿಸಬಹುದು.

ಅನೀತಿಪರ ವರದಿ ಒಂದು ಎಲ್ಲೆಯನ್ನು ಮೀರದಂತೆ ದೇಶದಲ್ಲಿ ಕಾನೂನುಗಳು ಇರುತ್ತವೆಯಾದರೂ, ಕಾನೂನಿನ ಪರಿಧಿಯೊಳಗೇ ಇಂಥ ಚಟುವಟಿಕೆ ನಡೆಯಲು ಅವಕಾಶವಿರುತ್ತದೆ. ಇದು ಸ್ವಾತಂತ್ರ್ಯದ ದುರುಪ ಯೋಗ. ಅಂಥ ಪರಿಸ್ಥಿತಿಯಲ್ಲಿ ಪತ್ರಿಕೆಗಳನ್ನು ಹದ್ದಿನಲ್ಲಿಡಲು ಸರಕಾರ ಮುಂದಾಗಬೇಕಾಗುತ್ತದೆ. ವಿಚಿತ್ರ ಪರಿಸ್ಥಿತಿ ಎಂದರೆ ಸರ್ಕಾರಕ್ಕೆ ಬಲವಾದ ಅಂಕುಶವನ್ನು ಸಮಾಜ ಪ್ರಯೋಗಿಸುವಂತಿಲ್ಲ. ಅದೇ ಅಂಕುಶವನ್ನು ಸರ್ಕಾರ ತನಗೆ ಪ್ರತಿಕೂಲವಾದ ಎಲ್ಲ ಪತ್ರಿಕೆಗಳನ್ನೂ ಗಾಯಗೊಳಿಸಲು ಪ್ರಯೋಗಿಸುವು ದಿಲ್ಲವೆಂಬ ಭರವಸೆ ಏನು?

ಈ ಸಮಸ್ಯೆಯನ್ನು ಪರಿಹರಿಸಲು ನಮ್ಮ ದೇಶದಲ್ಲಿ (ಇತರ ಕೆಲವು ದೇಶ ಗಳಲ್ಲೂ) ಪ್ರೆಸ್ ಮಂಡಲಿಗಳು (ಪ್ರೆಸ್ ಕೌನ್ಸಿಲ್) ನೇಮಕವಾಗಿವೆ. ಪತ್ರಿಕೆಗಳು ತಾವಾಗಿಯೇ ತಮ್ಮ ಆರೋಗ್ಯಕರ ನಿಯಮಗಳನ್ನು ಹೇರಿಕೊಳ್ಳಲು ಈ ಮಂಡಲಿ ಗಳಿವೆ. ಅವುಗಳ ವಿವರ ಈ ಲೇಖನದ ವ್ಯಾಪ್ತಿಗೆ ಮೀರಿದುದು.

ಪತ್ರಿಕೆಗಳು ದೊಡ್ಡ ಉದ್ಯಮಗಳಾದುದರ ಪರಿಣಾಮ ಸ್ವಾತಂತ್ರ್ಯದ ಮೇಲೆ ಹೇಗೆ ಆಗುತ್ತದೆ ಎಂಬುದನ್ನು ನೋಡಿದಾಗ ಇನ್ನೊಂದು ವಿಷಯವನ್ನು ಗಮನಿಸಬೇಕಾಗಿದೆ. ಪ್ರತಿಯೊಂದು ಪತ್ರಿಕೆಗೂ ತನ್ನ ಅಭಿಪ್ರಾಯ ಮಂಡನೆಗೆ ಹಕ್ಕಿದೆ ಎಂದಾಗ ಅಂಥ ಅನೇಕ ಭಿನ್ನ ಅಭಿಪ್ರಾಯಗಳಿಗೆ ಅವಕಾಶವಿರಲೇ

ಬೇಕಷ್ಟೆ. ಎಂದರೆ ಒಂದೇ ಅಭಿಪ್ರಾಯದ ಪತ್ರಿಕೆಗೆ ಏಕಸ್ವಾಮ್ಯವಿರಬಾರದು. ಪ್ರಜೆಗಳ ಎದುರಿಗೆ ಭಿನ್ನ ಅಭಿಪ್ರಾಯಗಳ ಮಂಡನೆ ಇರುವಾಗ ಅವರು ತಮ್ಮ ಸ್ವತಂತ್ರ ತೀರ್ಮಾನಕ್ಕೆ ಬರಬಹುದು.

ಆದರೆ ಪರಿಸ್ಥಿತಿ ಹೀಗಿಲ್ಲ. ಅಮೆರಿಕದಲ್ಲಿ ಏಕಸ್ವಾಮ್ಯದ ಪತ್ರಿಕೆಗಳ ಸಂಖ್ಯೆ ಎಷ್ಟು ಹೆಚ್ಚಾಗಿದೆ ಎಂದರೆ ಶೇಕಡ ೭೫ರಷ್ಟು ನಗರಗಳಲ್ಲಿ ಎರಡನೆಯ ಪತ್ರಿಕೆ ಎಂಬುದೇ ಇಲ್ಲ. ಸುದ್ದಿ ಸಂಗ್ರಹದ ಏಜೆನ್ಸಿಗಳೂ ಕೂಡ ಎರಡೇ ಎರಡು. ಪ್ರಬಲ ಉದ್ಯಮವಾದ ಪತ್ರಿಕೆ, ಸ್ಪರ್ಧಿಸುವ ಪತ್ರಿಕೆಯ ನಿರ್ಮೂಲಕ್ಕೆ ತೊಡಗುತ್ತದೆ. ಹೊಸ ಪತ್ರಿಕೆ ತಡವರಿಸುತ್ತಿರುವಂತೆಯೇ ಅದನ್ನು ಕೊಂದುಬಿಡುತ್ತದೆ. ಸ್ವಾತಂತ್ರ್ಯದ ದುರುಪಯೋಗದ ಉದಾಹರಣೆಗಳಲ್ಲಿ ಇದೂ ಒಂದು.

ಇನ್ನು ಕಮ್ಯೂನಿಸ್ಟ್ ರಾಷ್ಟ್ರಗಳ ಒಂದು ಪಕ್ಷಿನೋಟಕ್ಕೆ ತೊಡಗಬಹುದು. ಕಮ್ಯೂನಿಸಂನಲ್ಲಿ ಪತ್ರಿಕೆಗಳು ಸರ್ಕಾರ ಅಥವಾ ಪಕ್ಷದ ಅಂಗಗಳು. ಕಮ್ಯೂನಿಸಂಗೆ ಪೋಷಕವಾಗಿ ಪತ್ರಿಕೆಗಳಿರಬೇಕೇ ಹೊರತು ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ. ವರದಿಯಲ್ಲೂ ಪಕ್ಷದ ಹಿತಕ್ಕೇ ಸ್ಥಾನ. ಕಮ್ಯೂನಿಸ್ಟ್ ದೇಶಗಳಲ್ಲಿ ಪತ್ರಿಕಾ ಸ್ವಾತಂತ್ರ್ಯವಿಲ್ಲ ಎಂಬ ಟೀಕೆಗೆ ಆ ದೇಶಗಳು ಕೊಡುವ ಉತ್ತರ ಎಂದರೆ, ಪ್ರಜಾ ತಂತ್ರ ಎಂದು ಹೇಳಿಕೊಳ್ಳುವ ದೇಶಗಳಲ್ಲೂ ಅಂಥ ಸ್ವಾತಂತ್ರ್ಯವಿಲ್ಲ ಎಂದು. ಹಣವುಳ್ಳವನ ಅಭಿಪ್ರಾಯ, ಅವನ ಅನುಕೂಲಕ್ಕೆ ಒದಗುವ ವರದಿಗಳನ್ನು ಮಾತ್ರ ಕೊಡುವ ಪತ್ರಿಕೆಗಳು ಸ್ವತಂತ್ರವಲ್ಲ ಎಂದು ಅವುಗಳ ವಾದ.

ಹೀಗೆ ಪತ್ರಿಕಾ ಸ್ವಾತಂತ್ರ್ಯ ಎಂಬುದು ಬಹಳ ತೊಡಕಿನ ಕಲ್ಪನೆ. ಕೇವಲ ಸರ್ಕಾರದ ನಿಯಮಾವಳಿಯ ದೃಷ್ಟಿಯಿಂದ ಅದನ್ನು ವ್ಯಾಖ್ಯಾನಿಸಿದರೆ ಸಾಲದು. ಜಾಗೃತ ಸಮಾಜ ನಿಜವಾದ ಸ್ವಾತಂತ್ರ್ಯವನ್ನು ಅರಿತು ಸ್ವತಂತ್ರ ಪತ್ರಿಕೆ ಗಳನ್ನೇ ಪೋಷಿಸಬೇಕು. ಜನತೆಯ ಉತ್ತೇಜನವಿಲ್ಲದೆ ಜಾಹೀರಾತುದಾರರು ಸಹ ಪತ್ರಿಕೆಯನ್ನು ಬಾಳಿಸಲಾರರು.

ಪಾಶ್ಚಾತ್ಯ ಮತ್ತು ಪೌರಸ್ತ್ಯ ರಾಷ್ಟ್ರಗಳ ಅನೇಕ ಧುರೀಣರ ಪ್ರಕಾರ ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯ ಸಾಕಷ್ಟಿದೆ. ಬೇರೆ ಯಾವ ದೇಶಕ್ಕೆ ಹೋಲಿ ಸಿದರೂ ಭಾರತದಲ್ಲಿ ಅದಕ್ಕಿಂತ ಕಡಿಮೆ ಎನ್ನುವಂತಿಲ್ಲ. ಆದರೆ ಈ ಸ್ವಾತಂತ್ರ್ಯ ಎಂಬುದು ಸರ್ಕಾರದ ಪತ್ರಿಕಾ ಕಾನೂನುಗಳ ದೃಷ್ಟಿಕೋನದಿಂದ ಮಾತ್ರ ಎಂಬುದನ್ನು ಗಮನಿಸಬೇಕು. ಉಳಿದ ಸ್ವಾತಂತ್ರ್ಯದ ರಕ್ಷಣೆ ಭಾರತದ ಜನತೆಯ ಕೈಯಲ್ಲಿದೆ.

ವಸ್ತುಕೋಶ

ಕನ್ನಡ ಗ್ರಂಥಸೂಚಿ

೧೯೭೧ರ ಏಪ್ರಿಲ್ ೧೫ ಕನ್ನಡ ಜನತೆ ಮರೆಯಲಾಗದ ದಿನ. ಅಂದು ಸಂಜೆ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ರಾಷ್ಟ್ರೀಯ ಗ್ರಂಥ ಭಂಡಾರದ ಗ್ರಂಥಪಾಲರಾದ ಮತ್ತು ಶ್ರೇಷ್ಠ ಗ್ರಂಥಸೂಚಿ ಪಟು ಎನಿಸಿದ ಶ್ರೀ ಬಿ. ಎಸ್. ಕೇಶವನ್ ಅವರು ಕನ್ನಡ ಗ್ರಂಥಸೂಚಿಯ ಮೊದಲನೆಯ ಸಂಪುಟ ವನ್ನು ಬಿಡುಗಡೆ ಮಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿಗಳೂ ಕನ್ನಡ ಗ್ರಂಥಸೂಚಿಯ ಪ್ರಧಾನ ಸಂಪಾದಕರೂ ಆದ ಪ್ರೊ. ದೇ. ಜವರೇಗೌಡ ಅವರು ವಹಿಸಿದ್ದರು.

ಪ್ರಾರಂಭದಲ್ಲಿ ಗ್ರಂಥಸೂಚಿಯ ಪ್ರಕಾಶಕರಾದ ಪ್ರಸಾರಾಂಗದ ನಿರ್ದೇಶಕ ಡಾ. ಪ್ರಭುಶಂಕರ್ ಅವರು ಕನ್ನಡ ಗ್ರಂಥಸೂಚಿಯ ಯೋಜನೆ ೧೯೭೦ರ ಮೇ ೩೧ ರಂದು ರೂಪುಗೊಂಡಂದಿನಿಂದ ಹಿಡಿದು ಅದು ಕಾರ್ಯರೂಪಕ್ಕೆ ಬಂದು ಈ ಸಂಪುಟ ಬಿಡುಗಡೆ ಮಾಡುವವರೆಗಿನ ವಿದ್ಯಮಾನಗಳನ್ನೂ ಇದನ್ನು ರಚಿಸುವುದ ರಲ್ಲಿ ಅನುಸರಿಸಿರುವ ವಿಧಾನವನ್ನೂ ವಿವರಿಸಿದರು.

ಅನಂತರ ಪ್ರೊ. ದೇ. ಜವರೇಗೌಡ ಅವರು ಕನ್ನಡದಲ್ಲಿ ಗ್ರಂಥಸೂಚಿಯ ಆವಶ್ಯಕತೆಯನ್ನು ಒತ್ತಿ ಹೇಳಿದರು. ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಇದುವರೆಗೆ ಪ್ರಕಟವಾಗಿರುವ ೧,೪೪೯ ಗ್ರಂಥಗಳು ಇದರಲ್ಲಿ ಸೇರಿವೆಯೆಂಬುದನ್ನು ಗಮನಿಸಿದಾಗ ಕನ್ನಡದಲ್ಲಿ ಇಷ್ಟೊಂದು ಬೆಳೆವಣಿಗೆಯಾಗಿದೆಯೆ? ಎಂದು ಯಾರಿ ಗಾದರೂ ಆಶ್ಚರ್ಯವಾಗಬಹುದು. ವಿಜ್ಞಾನಭಾಷೆಯಾಗಲು ಕನ್ನಡಕ್ಕೆ ಎಲ್ಲ ಯೋಗ್ಯತೆಯೂ ಇದೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ—ಎಂದು ಹೇಳಿದರು. ಈ ಗ್ರಂಥಸೂಚಿ ಬರಿಯ ಪಟ್ಟಿಯಲ್ಲ; ಇದೊಂದು ಗ್ರಂಥಾಲಯ ಶಾಸ್ತ್ರದ ಪಂಡಿತರ ಮತ್ತು ಕನ್ನಡ ವಿದ್ವಾಂಸರ ನೆರವಿನಿಂದ ತಯಾರಾದ ಬಹುಮುಖ ಪ್ರಯೋಜನವುಳ್ಳ ಸಂಗ್ರಹ ಎಂದು ಹೇಳಿದರು.

ಸೂಚಿಯ ಬಿಡುಗಡೆ ಮಾಡಿದ ಪದ್ಮಶ್ರೀ ಕೇಶವನ್ ಅವರು ಮಾತನಾಡುತ್ತ ಇದು ಗ್ರಂಥಸೂಚಿಯ ಚರಿತ್ರೆಯಲ್ಲೇ ಒಂದು ಮೈಲಿಗಲ್ಲಾಗಿದೆ ಎಂದರು. ಗ್ರಂಥ ಸೂಚಿಯ ಪ್ರಧಾನ ಸೂತ್ರಗಳಾದ ಪ್ರಮಾಣಬದ್ಧತೆ, ವಿಶ್ವಾಸಾರ್ಹತೆ ಮತ್ತು ನಮೂದುಗಳ ಕ್ರಮಬದ್ಧ ವಿನ್ಯಾಸ ಇವನ್ನು ಇಲ್ಲಿ ಅನುಸರಿಸಲಾಗಿದೆ

ಎಂದು ಶ್ಲಾಘಿಸಿದರು. ಮುಂದೆ ಕನ್ನಡ ಪುಸ್ತಕಗಳ ಪ್ರಕಟನೆ ಇನ್ನೂ ಅಧಿಕವಾಗುತ್ತದೆ. ಆಗಲೂ ಹೀಗೆ, ಪ್ರಕಟವಾದ ಎಲ್ಲ ಪುಸ್ತಕಗಳನ್ನೂ ಪ್ರಕಟಿಸುವ, ಪ್ರತವನ್ನು ಪಾಲಿಸುವುದು ಕಷ್ಟವಾದೀತು; ಪುಸ್ತಕಗಳನ್ನು ಆಯ್ಕೆಮಾಡಬೇಕಾದಿತೇನೋ ಏನೋ ಎಂದು ಹೇಳಿದರು. ಪ್ರತಿಯೊಬ್ಬ ಕಾರ್ಯಕರ್ತರಿಗೂ ಅವರು ತಮ್ಮ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದರು.

ಈ ಸೂಚಿ ಈಗಿನ ಯೋಜನೆಯ ಪ್ರಕಾರ ಆರು ಸಂಪುಟಗಳಲ್ಲಿ ಪ್ರಕಟವಾಗಲಿದ್ದು ೧೮೧೭ರಿಂದ ೧೯೬೮ರ ಕೊನೆಯ ವರೆಗೆ ಮುದ್ರಿತವಾದ ಕನ್ನಡ ಕೃತಿಗಳನ್ನು ವಿವರಣಾತ್ಮಕವಾಗಿ ನೀಡುತ್ತದೆ. ಅನಂತರದ ಪ್ರಕಟಣೆಗಳನ್ನು ವಾರ್ಷಿಕ ಪುರವಣಿಗಳಲ್ಲಿ ಕೊಡುವ ವಿಚಾರವಿದೆ.

ಕನ್ನಡ ಗ್ರಂಥಸೂಚಿಯ ಮೊದಲನೆಯ ಸಂಪುಟ ವಿಜ್ಞಾನಕ್ಕೆ ಮೀಸಲಾಗಿದೆ. ಇಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಹದಿಮೂರು ವಿಭಾಗಗಳಲ್ಲಿ ೧,೪೪೯ ವಿವಿಧ ಪುಸ್ತಕಗಳ ಪಟ್ಟಿ ಅಡಕವಾಗಿದೆ.

ಪ್ರತಿಯೊಂದು ಪುಸ್ತಕದ ಪಟ್ಟಿಯೂ ಈ ವಿವರಗಳನ್ನು ಅನುಕ್ರಮವಾಗಿ ನೀಡುತ್ತದೆ: ವಿಷಯ, ಗ್ರಂಥಕರ್ತೃ (ಅವರು ಹುಟ್ಟಿದ ವರ್ಷ, ಸತ್ತು ಹೋಗಿದ್ದರೆ ಅವರು ತೀರಿಕೊಂಡ ವರ್ಷ, ಕಾವ್ಯನಾಮ (ಇದ್ದ ಪಕ್ಷದಲ್ಲಿ ಚೌಕ ಕಂಸಗಳಲ್ಲಿ ಸೂಚಿಸಿದೆ), ಪುಸ್ತಕದ ಹೆಸರು ಅಥವಾ ಶೀರ್ಷಿಕೆ, ಕೃತಿಯ ಭಾಗ ಅಥವಾ ಸಂಪುಟ ಇವನ್ನೂ ಕೊಟ್ಟಿದೆ. ಚಿತ್ರಗಳಿದ್ದರೆ "ಸಚಿತ್ರ" ಎಂದು ಬರೆಯಲಾಗಿದೆ. ಆವೃತ್ತಿ ಸಂಖ್ಯೆ, ಅನುವಾದವಾಗಿದ್ದರೆ ಅದರ ವಿವರಗಳು, ಉಪಕರ್ತೃಗಳಿದ್ದರೆ ಅವರ ವಿವರ; ಇದರ ಮುಂದೆ ಪ್ರಕಾಶನದ ವಿವರಗಳನ್ನು ಕೊಡಲಾಗಿದೆ. ಸ್ಥಳ, ಹೆಸರು ಮತ್ತು ಪ್ರಕಟವಾದ ವರ್ಷಗಳನ್ನೂ ಗ್ರಂಥಪ್ರಕಟಣೆ ವಿಶಿಷ್ಟಮಾಲೆಯಲ್ಲಿ ಇದ್ದರೆ ಅದನ್ನೂ ನಮೂದಿಸಿದೆ. ಮುಂದೆ ಪುಟಸಂಖ್ಯೆ, ಅಳತೆ, ಕಟ್ಟಿನ ಮಾದರಿ ಮತ್ತು ಬೆಲೆ ಇವನ್ನೂ ಸೂಚಿಸಿದೆ. ಈ ಪಟ್ಟಿಯ ಮಹತ್ತ್ವಪೂರ್ಣವಾದ ಭಾಗವೆಂದರೆ ಪುಸ್ತಕದ ವಸ್ತು ಏನೆಂಬುದನ್ನು ಕೆಲವಾಕ್ಯಗಳಲ್ಲಿ ವಿವರಿಸಿರುವುದು. ಕೊನೆಗೆ ಪುಸ್ತಕದ ಕ್ರಮಸಂಖ್ಯೆಯನ್ನೂ ಆ ಗ್ರಂಥ ಎಲ್ಲಿ ಸಿಕ್ಕಿತು ಎಂಬುದನ್ನೂ ಸೂಚಿಸಲಾಗಿದೆ.

ಈ ಎಲ್ಲ ವಿವರಗಳನ್ನೂ ಕ್ರಮಬದ್ಧವಾಗಿ ಕೊಟ್ಟು ಪ್ರಕಟಿಸಲಾದ ಈ ಗ್ರಂಥ, ಸೂಚೀಕರಣ ಪದ್ಧತಿಯ ಒಂದು ಅಮೂಲ್ಯ ಮಾದರಿ.

— ಎಚ್. ಎ. ಖಾನ್

ಅರವತ್ತು ತುಂಬಿದ ಡಾ. ಪಿ. ಬಿ. ದೇಸಾಯಿ

ಕರ್ಣಾಟಕ ಇತಿಹಾಸ ಅಧ್ಯಯನದಲ್ಲಿ ಡಾ. ಪಿ. ಬಿ ದೇಸಾಯಿಯವರದು ಬಲು ದೊಡ್ಡ ಹೆಸರು. ಭಾರತ ಸರ್ಕಾರದ ಪ್ರಾಚೀನ ಶಾಸನ ಶಾಖೆಯಲ್ಲಿ ಅಧಿಕಾರಿ

ಯಾಗಿದ್ದು, ಪ್ರಾಚೀನ ಲಿಪಿಗಳ ಅಧ್ಯಯನದಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ ದೇಸಾಯಿಯವರು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಚರಿತ್ರೆ ಮತ್ತು ಸಂಸ್ಕೃತಿ ವಿಭಾಗದ ಮುಖ್ಯಾಧಿಕಾರಿಗಳಾಗಿಯೂ ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾಗಿಯೂ ನಮ್ಮ ನಾಡಿಗೆ ವಿಶೇಷ ಸೇವೆ ಸಲ್ಲಿಸಿದ್ದಾರೆ. ಅವರ ಈ ಅಮೋಘ ಸೇವೆಯನ್ನು ಕೊಂಡಾಡಲು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇದೇ ಮಾರ್ಚ್ ೯ ರಂದು ಕುಲಪತಿ ಡಾ. ಅಡಕೆಯವರ ಅಧ್ಯಕ್ಷತೆಯಲ್ಲಿ ಸನ್ಮಾನ ಸಮಾರಂಭ ಏರ್ಪಾಡಾಗಿದ್ದಿತು. ಈ ಸಮಾರಂಭದ ಗಮನಾರ್ಹ ಸಂಗತಿ ಯೆಂದರೆ ನಾಡಿನ ವಿವಿಧ ವಿದ್ವಾಂಸರುಗಳ ಲೇಖನಗಳನ್ನೊಳಗೊಂಡ ಐನೂರು ಪುಟಗಳ ಮಹಾಗ್ರಂಥದ ಸಮರ್ಪಣೆ. ಈ ಗ್ರಂಥದಲ್ಲಿ ಪುರಾತತ್ವ, ಪ್ರಾಗಿತಿಹಾಸ, ನಾಣ್ಯಶಾಸ್ತ್ರ, ಲಿಪಿ ಮತ್ತು ಶಾಸನಶಾಸ್ತ್ರ, ಚರಿತ್ರೆ, ವಾಸ್ತುಶಿಲ್ಪ ಮುಂತಾದ ವಿವಿಧ ವಿಷಯಗಳ ಲೇಖನಗಳಿದ್ದು, ಇದೊಂದು ಉತ್ತಮ ಗ್ರಂಥವೆನಿಸಿದೆ.

ಡಾ. ದೇಸಾಯಿಯವರ ಪ್ರತಿಭೆ ಬಹುಮುಖವಾದುದು. ಇವರು ಬರೆದಿರುವ ವಿಜಯನಗರ ಸಾಮ್ರಾಜ್ಯ, ಕಳಚೂರಿಗಳು, ಬಸವೇಶ್ವರರ ಕಾಲ ಮುಂತಾದ ಗ್ರಂಥ ಗಳು ಇವರ ಪಾಂಡಿತ್ಯಕ್ಕೆ ಸಾಕ್ಷಿಗಳಾಗಿವೆ. 'ಜೈನಿಸಂ ಇನ್ ಸೌತ್ ಇಂಡಿಯ' ಎಂಬ ಇವರ ಗ್ರಂಥ ವಿದ್ವಾಂಸರಿಂದ ಬಹುವಾಗಿ ಶ್ಲಾಘಿಸಲ್ಪಟ್ಟಿದೆ. ಕರ್ಣಾಟಕದ ಶಾಸನಗಳು, ಆಂಧ್ರಪ್ರದೇಶದ ಶಾಸನಗಳು ಮುಂತಾದವು ಶಾಸನಶಾಸ್ತ್ರದಲ್ಲಿ ಮಹದ್ಗ್ರಂಥಗಳು. ಇತ್ತೀಚಿಗೆ ಇವರ ನೇತೃತ್ವದಲ್ಲಿ ಕರ್ಣಾಟಕ ಇತಿಹಾಸವನ್ನು ಹನ್ನೆರಡು ಹೆಬ್ಬೊತ್ತಗೆಗಳಲ್ಲಿ ರಚಿಸಲಾಗುತ್ತಿದ್ದು ಇದರ ಮೊದಲ ಸಂಪುಟ ಈಗಾಗಲೇ ಹೊರಬಂದಿದೆ. ಡಾ. ದೇಸಾಯಿಯವರ ಮತ್ತೊಂದು ಕೊಡುಗೆಯೆಂದರೆ ಕರ್ನಾಟಕ ವಿಶ್ವವಿದ್ಯಾಲಯದ ಪುರಾತತ್ವ ವಸ್ತು ಸಂಗ್ರಹಶಾಲೆ. ಇದರ ಬೆಳ ವಣಿಗೆಗೆ ಇವರು ಅವಿರತವಾಗಿ ದುಡಿದು ಅದೊಂದು ಮಾದರಿ ಮ್ಯೂಸಿಯಂ ಆಗುವ ಹಾಗೆ ಮಾಡಿದ್ದಾರೆ. ಇಷ್ಟೆಲ್ಲ ಕಾರ್ಯಗಳನ್ನೂ ಸಾಧಿಸಿದ ಡಾ. ದೇಸಾಯಿಯವರು ಅರವತ್ತು ವರ್ಷಗಳ ಕಾಲದ ಸಾರ್ಥಕ ಜೀವನವನ್ನು ನಡೆಸಿ ವಿಶವಿದ್ಯಾಲಯದ ಸೇವೆಯಿಂದ ಅಧಿಕೃತವಾಗಿ ವಿಶ್ರಾಂತರಾಗಿದ್ದಾರೆ ಆದರೆ ಇವರ ಇತಿಹಾಸ ಸಂಶೋಧನ ಕಾರ್ಯ ಇನ್ನೂ ಹೆಚ್ಚಿನ ಭರದಿಂದ ಸಾಗುತ್ತಿದೆ. ಈ ಮಹನೀಯರ ಇತಿಹಾಸಸೇವೆ ಇನ್ನೂ ಹಲವು ಕಾಲ ನಡೆಯಲಿ, ಭಗವಂತ ಅವರಿಗೆ ಸಕಲ ಶುಭ ಗಳನ್ನೂ ಕರುಣಿಸಲಿ ಎಂಬುದು ಸಹೃದಯರೆಲ್ಲರ ಹಾರೈಕೆಯಾಗಿದೆ.

—ಎ. ವಿ. ಎನ್.

ಭಾರತೀಯ ವಿಜ್ಞಾನ ಕಾಂಗ್ರೆಸಿನ
ಮಾನವಶಾಸ್ತ್ರ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ

ಜನವರಿ ತಿಂಗಳ ಆದಿಭಾಗದಲ್ಲಿ ಭಾರತೀಯ ವಿಜ್ಞಾನ ಕಾಂಗ್ರೆಸಿನ ಅಧಿವೇಶನ

ಬೆಂಗಳೂರಿನಲ್ಲಿ ಜರುಗಿತಷ್ಟೆ. ಅದರೊಂದಿಗೇ ಮಾನವಶಾಸ್ತ್ರ ಮತ್ತು ಪ್ರಾಚ್ಯಶಾಸ್ತ್ರ ವಿಭಾಗೀಯ ಸಭೆಯೂ ಜರುಗಿತು. ಜನವರಿ ೪ರಿಂದ ೭ರ ವರೆಗೆ ನಾಲ್ಕು ದಿನಗಳ ಕಾಲ ನಡೆದ ಈ ಸಭೆಯಲ್ಲಿ ದೇಶದ ವಿವಿಧ ಭಾಗಗಳಿಂದ ಬಂದಿದ್ದ ವಿದ್ವಾಂಸರು ಭಾಗವಹಿಸಿದ್ದರು.

ಈ ವಿಭಾಗೀಯ ಸಭೆಯ ಅಧ್ಯಕ್ಷತೆಯನ್ನು ಗೌಹತಿ ವಿಶ್ವವಿದ್ಯಾನಿಲಯದ ಮಾನವಶಾಸ್ತ್ರ ಪ್ರಾಧ್ಯಾಪಕರೂ ಪ್ರಸಿದ್ಧ ಪ್ರಾಚ್ಯ ಸಂಶೋಧಕರೂ ಆದ ಶ್ರೀ ಎಂ. ಸಿ. ಗೋಸ್ವಾಮಿ ಅವರು ವಹಿಸಿದ್ದರು. ಭಾರತೀಯ ಮಾನವಶಾಸ್ತ್ರಜ್ಞರಲ್ಲಿ ಬುಡಕಟ್ಟು ಜನಾಂಗಗಳ ಜೀವನ, ಅದರಲ್ಲಿ ಆಗುತ್ತಿರುವ ಉತ್ಕ್ರಾಂತಿ—ಇವುಗಳ ಬಗ್ಗೆ ಅತ್ಯಂತ ನಿಕಟ ಅಧ್ಯಯನ ಮಾಡಿರುವವರಲ್ಲಿ ಶ್ರೀ ಗೋಸ್ವಾಮಿಯವರು ಒಬ್ಬರು.

"ಈಶಾನ್ಯ ಭಾರತದ ಪರಿಶಿಷ್ಟ ಜನ ಮತ್ತು ಗ್ರಾಮೀಣರಲ್ಲಿ ಜಾತಿ ಸಂಬಂಧಗಳು" ಎಂಬ ಶೀರ್ಷಿಕೆಯಲ್ಲಿ ಶ್ರೀಯುತರು ನೀಡಿದ ಅಧ್ಯಕ್ಷ ಭಾಷಣ ಅಸ್ಸಾಂ, ನಾಗಾರಾಜ್ಯ, ಮೇಘಾಲಯ ಮತ್ತು ಈಶಾನ್ಯ ಸರಹದ್ದು ಪ್ರದೇಶಗಳ ಸಮಾಜಜೀವನ ಅನುಭವಿಸುತ್ತಿರುವ ಶೀಘ್ರ ಬದಲಾವಣೆಯ ಚಿತ್ರಣ. ಪರಿಶಿಷ್ಟ ಜನ ಹೊರಸಮಾಜದೊಂದಿಗೆ ಸಂಪರ್ಕ ಬೆಳೆಸಿಕೊಂಡಾಗ, ಗ್ರಾಮಗಳಲ್ಲಿ ಬಂದು ನೆಲೆಸಿದಾಗ ಅವರು ಹೇಗೆ ಮತ್ತು ಏಕೆ ಗ್ರಾಮಸಮಾಜದ ಜಾತಿಸಂಬಂಧಗಳಲ್ಲಿ ಸಿಲುಕಿ, ಅಂತಸ್ತುಗಳಿಂದ ರಚಿತವಾದ ಹಿಂದೂಸಮಾಜದಲ್ಲಿ ತಮ್ಮದೇ ಆದ ಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತಾರೆ ಎಂಬುದರ ಕೂಲಂಕಷ ಪರಿಚಯವಿದೆ ಈ ಭಾಷಣದಲ್ಲಿ.

ಈ ವಿಭಾಗೀಯ ಸಭೆಯಲ್ಲಿ ಹಲವಾರು ವಿದ್ವಾಂಸರು ತಮ್ಮ ಅಧ್ಯಯನ ಪತ್ರಗಳನ್ನು ಓದಿದರು. ಶಾರೀರಿಕ ಮಾನವಶಾಸ್ತ್ರಕ್ಕೆ ಸಂಬಂಧಿಸಿದಂತೆ ಮೂವತ್ತೊಂಬತ್ತು, ಸಾಮಾಜಿಕ-ಸಾಂಸ್ಕೃತಿಕ ಮಾನವಶಾಸ್ತ್ರಕ್ಕೆ ಸಂಬಂಧಿಸಿದಂತೆ ಮೂವತ್ತಾರು, ಇತಿಹಾಸಪೂರ್ವ ಪ್ರಾಚ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ಐದು ಅಧ್ಯಯನ ಪತ್ರಗಳನ್ನು ಮಂಡಿಸಲಾಯಿತು.

ಬೇರೆಬೇರೆ ಪ್ರದೇಶಗಳಲ್ಲಿ ನಡೆಸಿದ ರಕ್ತವರ್ಗೀಕರಣಗಳು, ಆಂಧ್ರದ ತೀರಪ್ರದೇಶದಲ್ಲಿ ವರ್ಣಾಂಧತೆ, ಶಿಶುಗಳಲ್ಲಿ ನಾಲಗೆಯ ಬಣ್ಣದ ವಿಶ್ಲೇಷಣೆ—ಹೀಗೆ ಶಾರೀರಿಕ ಮಾನವಶಾಸ್ತ್ರದ ಅಧ್ಯಯನಗಳೂ ಮಾನವಶಾಸ್ತ್ರದಲ್ಲಿ ತುಲನೆ, ಭಾಷಾ ಸಂಪರ್ಕ, ನಂಟು ಮತ್ತು ಮದುವೆ, ಹಬ್ಬ ಜಾತ್ರೆಗಳ ಸಾಮಾಜಿಕ ಪಾತ್ರ—ಹೀಗೆ ಸಾಮಾಜಿಕ-ಸಾಂಸ್ಕೃತಿಕ ಮಾನವಶಾಸ್ತ್ರದ ಅಧ್ಯಯನಗಳೂ ಶಿಲಾಯುಗದ ಉಪಕರಣಗಳ ವರ್ಗೀಕರಣ, ಅಳತೆ, ಬೃಹತ್ ಶಿಲಾಸಮಾಧಿಗಳು—ಹೀಗೆ ಇತಿಹಾಸಪೂರ್ವ ಪ್ರಾಚ್ಯಶಾಸ್ತ್ರ ಅಧ್ಯಯನಗಳೂ ಈ ಕ್ಷೇತ್ರದ ವೈಶಾಲ್ಯವನ್ನು ತೋರಿಸುತ್ತಿದ್ದುವು.

ಕರ್ನಾಟಕ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಸಕ್ರಿಯಾ ಪಾತ್ರ ಈ ಸಭೆಯಲ್ಲಿ ವಿಶೇಷವಾಗಿತ್ತು. ಸಾಮಾಜಿಕ ಮಾನವಶಾಸ್ತ್ರದ ಆರು, ಪ್ರಾಚ್ಯ ಶಾಸ್ತ್ರದ ಒಂದು—ಒಟ್ಟು ಏಳು ಅಧ್ಯಯನ ಪತ್ರಗಳು ಅಲ್ಲಿಯವು.

ಮಾನವಶಾಸ್ತ್ರ ಒಂದು ಕಡೆ ಮಾನವಿಕವಾಗಿ, ಇನ್ನೊಂದು ಕಡೆ ವಿಜ್ಞಾನ ವಾಗಿ ಮಾನವಿಕ ಹಾಗೂ ವಿಜ್ಞಾನಗಳ ನಡುವಣ ಸೇತುವೆಯಂತಿದೆ ಎಂಬುದನ್ನು ಈ ಮಾನವಶಾಸ್ತ್ರ ಮತ್ತು ಪ್ರಾಚ್ಯಶಾಸ್ತ್ರ ವಿಭಾಗೀಯ ಸಭೆ ಎತ್ತಿ ತೋರಿಸುತ್ತಿತ್ತು.

—ಎನ್. ಪಿ. ಎಸ್.

ಪ್ರಾಚೀನ ಬನವಾಸಿ

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದವರು ೧೯೭೦ರ ಮಾರ್ಚಿಯಲ್ಲಿ ಕರ್ಣಾಟಕದ ಅತ್ಯಂತ ಪುರಾತನ ರಾಜ ಧಾನಿಗಳಲ್ಲೊಂದಾದ ಬನವಾಸಿಯಲ್ಲಿ ನಡೆಸಿದ ಉತ್ಖನನಗಳಿಂದ ಕರ್ಣಾಟಕದ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಿರುವ ಸುದ್ದಿಯನ್ನು ಈಗಾಗಲೇ ಸಂಕ್ಷಿಪ್ತ ವಾಗಿ ಮಾನವಿಕ ಕರ್ಣಾಟಕ ವರದಿಮಾಡಿದೆಯಷ್ಟೆ (ಸಂಚಿಕೆ ೧ ಸಂಪುಟ ೧). ಈ ಸಂಶೋಧನೆಯನ್ನು ಮುಂದುವರಿಸುವ ಸಲುವಾಗಿ ಪುನಃ ೧೯೭೧ರ ಫೆಬ್ರವರಿ ಯಲ್ಲಿ ಆ ವಿಭಾಗದವರು ಬನವಾಸಿಯಲ್ಲಿ ತಮ್ಮ ಉತ್ಖನನ ನಡೆಸಿದಾಗ ಹಲವಾರು ಗಮನಾರ್ಹ ವಿಷಯಗಳು ಬೆಳಕಿಗೆ ಬಂದುವು. ಮೊದಲನೆಯದಾಗಿ, ಮೊದಲ ವರ್ಷ ದೋಣಿಗುಡ್ಡವೆಂಬಲ್ಲಿ ಕಂಡುಬಂದಿದ್ದ ಬೃಹತ್ತಾದ ಸುಟ್ಟ ಇಟ್ಟಿಗೆಯ ಕಟ್ಟಡವನ್ನು ಪೂರ್ಣವಾಗಿ ಹೊರಗೆಡಹಿದಾಗ ಅದೊಂದು ಕುದುರೆಯ ಲಾಳಾ ಕಾರದ ಮೂರು ವಲಯಗಳಿದ್ದ ದೇವತಾಗೃಹವೆಂದು ತಿಳಿದುಬಂದಿತು. ದೇವ ಗೃಹದ ಒಳಭಾಗದಲ್ಲಿ ನೆಲಮಟ್ಟದಿಂದ ಸುಮಾರು ಎಂಟಡಿಗಳೆತ್ತರದ ಜಗತಿ ಯೊಂದನ್ನು ನಿರ್ಮಿಸಲಾಗಿದ್ದು ಪ್ರಾಯಶಃ ಅದನ್ನು ಮತೀಯ ಆಚರಣೆಗೆ ಉಪಯೋಗಿಸುತ್ತಿದ್ದಿರಬಹುದು.

ಆ ಕಟ್ಟಡ ಬಹಳ ಜೀರ್ಣಾವಸ್ಥೆಯಲ್ಲಿದ್ದರೆ, ಆ ಸ್ಥಳದಿಂದ ಸುಮಾರು ೧ ಫರ್ಲಾಂಗು ದೂರದಲ್ಲಿ ಪೂರ್ವದಿಕ್ಕಿನಲ್ಲಿ ನಡೆದ ಅಗೆತದಲ್ಲಿ ಇನ್ನೂ ಬೃಹತ್ತಾದ, ಸ್ವಲ್ಪ ಉತ್ತಮಸ್ಥಿತಿಯಲ್ಲಿದ್ದ ಮತ್ತೊಂದು ಕಟ್ಟಡದ ಅವಶೇಷಗಳು ಬೆಳಕಿಗೆ ಬಂದುವು. ಈ ಕಟ್ಟಡ ಕೂಡ ಲಾಳಾಕಾರದ ದೇವಗೃಹವಾಗಿದ್ದು ಎರಡು ವಲಯ ಗಳಿಂದ ಕೂಡಿತ್ತು. ೧೮″×೯″×೩½″ ಪ್ರಮಾಣದ ಸುಟ್ಟ ಇಟ್ಟಿಗೆಗಳಿಂದ ಕಟ್ಟಿದ್ದ ಈ ಕಟ್ಟಡದ ಹೊರವಲಯದ ಗೋಡೆ ಸುಮಾರು ೪′ ೯″ ದಪ್ಪಗಿದ್ದು ಒಳವಲಯದ ಗೋಡೆ ಇದಕ್ಕಿಂತ ಸ್ವಲ್ಪ ಕಡಿಮೆಯಾಗಿತ್ತು. ಗೋಡೆಯ ಎರಡು ಮುಖಗಳನ್ನು ಪೂರ್ಣ ಇಟ್ಟಿಗೆಗಳಿಂದ ನಿರ್ಮಿಸಿದ್ದು ಮಧ್ಯಭಾಗವನ್ನು ಒಡೆದ ಚೂರುಗಳಿಂದ ತುಂಬಲಾಗಿತ್ತು. ಕೇವಲ ೬–೮ ಅಂಗುಲಗಳ ಅಸ್ತಿಭಾರವನ್ನು

ನಿರ್ಮಿಸಿದ್ದು ಅದರ ಮೇಲೆ ಈ ಬೃಹತ್ ಕಟ್ಟಡವನ್ನು ನೆಲಮಟ್ಟದಿಂದಲೇ ಪ್ರಾರಂಭಿಸಿದ್ದುದರಿಂದ ಗೋಡೆ ಅಲ್ಲಲ್ಲಿ ಕುಸಿದಿತ್ತು. ಆದರೆ ಆಳವಾದ ಅಸ್ತಿಭಾರದ ಬದಲು ಕೆಲವು ಆ ಮೊದಲಿನ ಕಟ್ಟಡಗಳ ಗೋಡೆಗಳು, ಅವಿಲ್ಲದ ಸ್ಥಳಗಳಲ್ಲಿ ತ್ರಿಕೋಣಾಕಾರದಲ್ಲಿ ಇಟ್ಟಿಗೆಯಿಂದ ಕಟ್ಟಿದ ಊರೆಗಂಬಗಳು ಕಂಡುಬರುತ್ತಿದ್ದುವು. ಕಟ್ಟಡವನ್ನು ಒಂದು ಉದ್ದ ಅನಂತರ ಒಂದು ಅಗಲವಾಗಿ ವರಸೆಗಳಲ್ಲಿ ಈಗ ಉಪಯೋಗದಲ್ಲಿರುವ ಇಂಗ್ಲಿಷ್ ಬಾಂಡ್ ಪದ್ಧತಿಯಲ್ಲಿ ಕಟ್ಟಲಾಗಿತ್ತು. ಈ ಕಟ್ಟಡದ ಒಳಭಾಗದಲ್ಲಿ ಭಿನ್ನವಾದ ಆದರೆ ಸುಂದರವಾದ ಒಂದು ಕಲ್ಲಿನ ದೇವತಾ ಮೂರ್ತಿ ದೊರಕಿದೆ. ಶಿಲ್ಪಲಕ್ಷಣದ ಪ್ರಕಾರ ಆ ವಿಗ್ರಹವನ್ನು ಶಾತವಾಹನ ಕಾಲಕ್ಕೆ ಸೇರಬಹುದಾದ ಕಾರ್ತಿಕೇಯ ಮೂರ್ತಿಯೆಂದು ತಾತ್ಕಾಲಿಕವಾಗಿ ಊಹಿಸಲಾಗಿದೆ. ಕಟ್ಟಡ ರಚನಾಕಲೆ ಮತ್ತು ಅದರೊಂದಿಗೆ ದೊರಕಿರುವ ಅವಶೇಷಗಳ ಪರಿಶೀಲನೆಯಿಂದ ದೇವಗೃಹವನ್ನು ಶಾತವಾಹನರ ಕಾಲಕ್ಕೆ ನಿರ್ದೇಶಿಸಬಹುದು.

ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಈ ದೇವಗೃಹದ ಅಸ್ತಿಭಾರಕ್ಕೂ ಕೆಳಗಡೆ, ಅಂದರೆ ಅದಕ್ಕೂ ಮೊದಲಕಾಲಕ್ಕೆ ನಿರ್ದೇಶಿಸಬಹುದಾದ ಕಟ್ಟಡದ ಹಲವು ಗೋಡೆಗಳು ಕಂಡುಬಂದಿವೆ. ಮೇಲಿನ ಕಟ್ಟಡವನ್ನು ನಾಶಗೊಳಿಸಿದ ಹೊರತು ಕೆಳಗಿನ ಕಟ್ಟಡದ ಆಕಾರ ಮತ್ತು ಕಾಲವನ್ನು ನಿರ್ಧರಿಸಲು ಕಷ್ಟವಾಗಿದ್ದು ಆ ವಿಷಯವಾಗಿ ಏನನ್ನೂ ನಿರ್ಧರವಾಗಿ ಹೇಳಲಾಗದಿದ್ದರೂ, ಆ ಕಟ್ಟಡ ಶಾತವಾಹನರ ಆರಂಭಕಾಲಕ್ಕೋ ಅದಕ್ಕೂ ಮೊದಲಿನ ಮೌರ್ಯ ಸಾಮ್ರಾಜ್ಯದ ಕಾಲಕ್ಕೋ ಸೇರುತ್ತದೆಂದು ಊಹಿಸಬಹುದಾಗಿದೆ. ಹಾಗಾದಲ್ಲಿ ನಮಗೆ ಈ ವರೆವಿಗೂ ತಿಳಿದಿರುವುದಕ್ಕಿಂತ ಮೊದಲೇ ಬನವಾಸಿ ಪ್ರದೇಶ ಪ್ರಾಮುಖ್ಯ ಗಳಿಸಿತ್ತೆಂದು ಹೇಳಬಹುದು.

ನಮ್ಮ ಉತ್ಖನನಗಳಲ್ಲಿ ಕ್ರಿಸ್ತಶಕೆಯ ಆರಂಭಕಾಲಕ್ಕಿಂತಲೂ ಮೊದಲಿನ ಕಾಲದ ಅಂದರೆ ಶಾತವಾಹನ ಪೂರ್ವದ ಮಾಹಿತಿಗಳೇನೂ ದೊರಕದಿದ್ದರೂ ಮೇಲೆ ವಿವರಿಸಿದ ದೇವಗೃಹಕ್ಕೂ ಮೊದಲ ಕಟ್ಟಡವೂ ಇತರ ಕೆಲವು ಮಾಹಿತಿಗಳೂ ಆ ಸಾಧ್ಯತೆಯನ್ನು ಸೂಚಿಸುತ್ತವೆ. ಶಾತವಾಹನಕಾಲದ ದೇವಗೃಹ ಉಪಯೋಗದಲ್ಲಿದ್ದಾಗ ಅಥವಾ ಅದು ಪಾಳುಬಿದ್ದ ಅನಂತರ ಅದರ ಎರಡು ವಲಯಗಳ ಗೋಡೆಗಳ ಮಧ್ಯೆ ಒಂದು ದೊಡ್ಡ ಗುಂಡಿಯನ್ನು ಅಗೆದು ಅನುಪಯುಕ್ತ ಪದಾರ್ಥಗಳನ್ನು ಅದರಲ್ಲಿ ಎಸೆದಿದ್ದಾರೆ. ಈ ಹೊಂಡ ಆಗಿನ ಕಾಲದ ನೆಲಮಟ್ಟದಿಂದ ಸುಮಾರು ೮ ಅಡಿಗಳಿಗೂ ಹೆಚ್ಚು ಆಳವಾಗಿದ್ದು ಅದರ ಉದ್ದಕ್ಕೂ ಶಾತವಾಹನರ ಕಾಲ ಅಂದರೆ ಕ್ರಿ.ಶ. ಒಂದೆರಡು ಶತಮಾನಗಳಿಗೆ ಸೇರುವ ಅವಶೇಷಗಳು ಕಂಡುಬಂದುವು. ಹೆಚ್ಚು ಹೊಳಪಾದ ಮತ್ತು ತೆಳ್ಳನೆಯ ಕಪ್ಪು ಮತ್ತು ಕೆಂಪು ಮಡಕೆ ಚೂರುಗಳು, ಕೆಂಪು ತಳಹದಿಯ ಮೇಲೆ ಬಿಳಿ ಸುದ್ದೆಯಿಂದ ಮಾಡಿದ ವರ್ಣ

ಚಿತ್ರಗಳಿಂದೊಡಗೂಡಿದ ಮಡಕೆಚೂರುಗಳು, ರೋಮನರ ಮಡಕೆಗಳನ್ನನುಸರಿಸಿ ಅವುಗಳ ಮಾದರಿಯಲ್ಲಿ ಸ್ಥಳೀಯವಾಗಿ ತಯಾರಿಸಿದ ಕೌಲ್‌ಟೆಡ್ ಮತ್ತು ಸಾಮಿಯನ್ ರೀತಿಯ ಮಡಕೆಚೂರುಗಳು, ಚಿನ್ನದ ಲೇಪನವಿದ್ದ ಗಾಜಿನ ಮತ್ತು ಉತ್ತಮ ಶಿಲೆಗಳ ಮಣಿಗಳು ಈ ಅವಶೇಷಗಳಲ್ಲಿ ಮುಖ್ಯವಾದವು.

ಒಟ್ಟಿನಲ್ಲಿ ಈಚಿನ ಬನವಾಸಿ ಉತ್ಖನನಗಳಿಂದ ಈ ಪ್ರದೇಶದ ಹಾಗೂ ಕರ್ಣಾಟಕದ ಪ್ರಾಚೀನ ಇತಿಹಾಸದ ಬಗ್ಗೆ ಹಲವಾರು ಮುಖ್ಯ ಅಂಶಗಳು ಮೊದಲ ಬಾರಿಗೆ ಬೆಳಕಿಗೆ ಬಂದಿವೆ. ಪ್ರಾಚೀನ ಕರ್ಣಾಟಕದೊಂದಿಗೆ ಉತ್ತರಭಾರತ ಮತ್ತು ಹೊರದೇಶಗಳು ಪಡೆದಿದ್ದ ಸಂಪರ್ಕಗಳ ಸಂಬಂಧವಾದ ಮಾಹಿತಿಗಳೂ ಕಂಡುಬಂದಿವೆ.

—ಬಿ. ಕೆ. ಜಿ.

ಹಣಕಾಸು ನಿರ್ವಹಣೆ : ಒಂದು ವಿಚಾರ ಸಂಕಿರಣ

ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ನಿನ ಹಣಕಾಸು ನಿರ್ವಹಣೆಯ ವಿಭಾಗವು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗಾಗಿ ಹಣಕಾಸು ನಿರ್ವಹಣೆಯ ಮೇಲೆ ಒಂದು ವಿಚಾರಸಂಕಿರಣವನ್ನು ಏಪ್ರಿಲ್ ೨೮ ರಿಂದ ಮೇ ೫ರ ವರೆಗೆ ಉದಕಮಂಡಲದಲ್ಲಿ ಏರ್ಪಡಿಸಿದ್ದಿತು. ಈ ವಿಚಾರ ಸಂಕಿರಣವನ್ನು ನಿರ್ದೇಶಿಸಿ ಯಶಸ್ವಿಯಾಗಿ ನೆರವೇರಿಸಿದವರು ಹಣಕಾಸು ನಿರ್ವಹಣೆಯ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರಾಗಿರುವ ಡಾ. ತವರಾಜ್ ಅವರು.

ವಿಶ್ವವಿದ್ಯಾನಿಲಯಗಳಲ್ಲಿ ಸಾರ್ವಜನಿಕ ಹಣಕಾಸಿನ ಸಮಸ್ಯೆಗಳನ್ನು ಕುರಿತ ಅಧ್ಯಯನ ಮತ್ತು ಸಂಶೋಧನೆ ವಿಪುಲವಾಗಿ ನಡೆದಿರುವುದಾದರೂ ಇದೆಲ್ಲವೂ ಬಹಳ ಮಟ್ಟಿಗೆ ಸೈದ್ಧಾಂತಿಕವಾದುದು. ಸಾರ್ವಜನಿಕ ಹಣಕಾಸಿನ ವ್ಯಾವಹಾರಿಕ ಸಮಸ್ಯೆಗಳನ್ನು ಕುರಿತ ಸಂಶೋಧನೆ ಅಷ್ಟಾಗಿ ನಡೆದಿಲ್ಲ. ವಿಶ್ವವಿದ್ಯಾನಿಲಯಗಳಲ್ಲಿರುವ ಪರಿಣತರು ಹಲವಾರು ಕಾರಣಗಳಿಂದಾಗಿ ಸಿದ್ಧಾಂತ ಮತ್ತು ಆಚರಣೆಯನ್ನು ಒಂದುಗೂಡಿಸುವುದರಲ್ಲಿ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಆದ್ದರಿಂದ ವಿಶ್ವವಿದ್ಯಾನಿಲಯಗಳಲ್ಲಿ ಸಾರ್ವಜನಿಕ ಹಣಕಾಸಿನ ಸಮಸ್ಯೆಗಳ ಅಧ್ಯಯನ ಮತ್ತು ಅಧ್ಯಾಪನದಲ್ಲಿ ತೊಡಗಿರುವವರು ಹಣಕಾಸು ನಿರ್ವಹಣೆಯ ವ್ಯಾವಹಾರಿಕ ಸಮಸ್ಯೆಗಳ ಪರಿಚಯ ಪಡೆಯುವುದು ಮತ್ತು ವಿಚಾರವಿನಿಮಯ ಮಾಡುವುದು ತುಂಬಾ ಅಗತ್ಯವಾಗಿದೆ. ಈ ಉದ್ದೇಶಸಾಧನೆಗಾಗಿ ಹಣಕಾಸು ನಿರ್ವಹಣೆಯ ಮೇಲೆ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿದ್ದಿತು. ಸರ್ಕಾರಿ ಅಧಿಕಾರಿಗಳಿಗೆ ಮತ್ತು ಶಾಸಕರುಗಳಿಗೆ ಹಣಕಾಸು ನಿರ್ವಹಣೆಯ ಸಮಸ್ಯೆಗಳನ್ನು ಪರಿಚಯ ಮಾಡಿಕೊಡಲು ತರಬೇತಿ ಶಿಬಿರಗಳನ್ನು ಮತ್ತು ವಿಚಾರಸಂಕಿರಣಗಳನ್ನು ಈಗಾಗಲೇ ಯಶಸ್ವಿಯಾಗಿ

ನಡೆಸಿರುವ ಈ ಸಂಸ್ಥೆ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳಿಗಾಗಿ ವಿಚಾರಸಂಕಿರಣ ವನ್ನು ಏರ್ಪಡಿಸಲು ಅರ್ಹತೆ ಮತ್ತು ಎಲ್ಲಾ ಸೌಲಭ್ಯಗಳನ್ನು ಪಡೆದಿದೆ.

ಹಣಕಾಸು ನಿರ್ವಹಣೆಯ ಸಮಸ್ಯೆಗಳನ್ನು ಪರಿಚಯಮಾಡಿಸಿ ವಿಚಾರ ವಿನಿಮಯಕ್ಕೆ ಅವಕಾಶಮಾಡಿಕೊಡುವುದು ವಿಚಾರಸಂಕಿರಣದ ಮುಖ್ಯ ಉದ್ದೇಶವಾಗಿದ್ದಿತು. ಆದ್ದರಿಂದ ಸಾರ್ವಜನಿಕ ಹಣಕಾಸು ನಿರ್ವಹಣೆಯಲ್ಲಿ ಇತ್ತೀಚಿನ ದಿನಗಳಲ್ಲಿ ಪ್ರಾಮುಖ್ಯಗಳಿಸಿರುವ ನಿರ್ವಾಹ ಬಜೆಟ್ (ಪರ್ಫಾರ್ಮೆನ್ಸ್ ಬಜೆಟ್) ಮೇಲಿನ ಚರ್ಚೆ ಈ ವಿಚಾರಸಂಕಿರಣದ ಕೇಂದ್ರ ವಸ್ತುವಾಗಿದ್ದಿತು. ಸಾಂಪ್ರದಾಯಿಕ ಬಜೆಟ್‌ನಲ್ಲಿ ಸರ್ಕಾರದ ಆದಾಯ ಮತ್ತು ವೆಚ್ಚಗಳ ಅಂದಾಜು ಇರುತ್ತದೆಯೇ ಹೊರತು ಸರ್ಕಾರದ ವೆಚ್ಚದ ನಿರ್ದಿಷ್ಟಗುರಿ ಮತ್ತು ನಿರೀಕ್ಷಿಸುವ ಫಲಿತಾಂಶಗಳ ಬಗ್ಗೆ ಯಾವ ವಿವರಗಳೂ ದೊರಕುವುದಿಲ್ಲ. ಸರ್ಕಾರ ಯಾವ ಉದ್ದೇಶಕ್ಕಾಗಿ ಒಂದುವರ್ಷದಲ್ಲಿ ಎಷ್ಟನ್ನು ವೆಚ್ಚಮಾಡುತ್ತದೆ ಮತ್ತು ಅದರಿಂದ ನಿರೀಕ್ಷಿಸುವ ಫಲ ಎಷ್ಟೆಂಬುದನ್ನು ಪ್ರಮಾಣೀಕರಿಸಿ ಬಜೆಟ್ ಮೂಲಕ ಸರ್ಕಾರ ಶಾಸಕರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸುವುದು ತುಂಬಾ ಅಗತ್ಯವಾಗಿದೆ. ಸರ್ಕಾರದ ವೆಚ್ಚ ಹೆಚ್ಚುತ್ತಿರುವ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಈ ರೀತಿಯ ಬಜೆಟ್‌ನ ಅಗತ್ಯ ಹೆಚ್ಚಾಗಿದೆ. ಸರ್ಕಾರದ ವೆಚ್ಚದ ಗುರಿಯನ್ನು ಮತ್ತು ಅದರಿಂದ ದೊರಕುವ ಫಲವನ್ನು ನಿರ್ದಿಷ್ಟವಾಗಿ ಅರಿಯಲು ಇದು ಸಹಾಯಕವಾಗುತ್ತದೆ. ಅಮೆರಿಕದ ರಕ್ಷಣಾಶಾಖೆಯಲ್ಲಿ ಈ ಹೊಸಮಾದರಿಯ ಬಜೆಟ್‌ನ ಯಶಸ್ವೀ ಪ್ರಯೋಗ ಇತರ ರಾಷ್ಟ್ರಗಳಿಗೆ ದಾರಿ ತೋರಿಸಿಕೊಟ್ಟಿತು. ನಮ್ಮ ದೇಶದಲ್ಲಿ ಕೆಲವು ಸರ್ಕಾರಿ ಕೈಗಾರಿಕೆಗಳಲ್ಲಿ ಮತ್ತು ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಕೆಲವು ವಿಭಾಗಗಳಲ್ಲಿ ಪ್ರಾಯೋಗಿಕವಾಗಿ ನಿರ್ವಾಹ ಬಜೆಟ್ ಅನ್ನು ತಯಾರಿಸಲಾಗುತ್ತಿದೆ. ಈ ವಿಚಾರಗೋಷ್ಠಿಯಲ್ಲಿ ನಿರ್ವಾಹ ಬಜೆಟ್‌ನ ಮಹತ್ವ, ತಾಂತ್ರಿಕ ಸಮಸ್ಯೆಗಳು ಮತ್ತು ಇದುವರೆಗೆ ನಮ್ಮ ದೇಶದಲ್ಲಿ ತಯಾರಾಗಿರುವ ಈ ಮಾದರಿಯ ಬಜೆಟ್‌ನಲ್ಲಿ ಕಂಡುಬರುವ ಶ್ಲಾಘ್ಯವಾದ ಅಂಶಗಳು ಹಾಗೂ ಲೋಪದೋಷಗಳನ್ನು ಕುರಿತು ವಿಪುಲವಾದ ಚರ್ಚೆ ನಡೆಯಿತು.

ನಿರ್ವಾಹ ಬಜೆಟ್ ಅನ್ನು ಆಚರಣೆಗೆ ತರುವುದರಿಂದ ಖಾಸಗಿ ಹಣಕಾಸು ವ್ಯವಹಾರಗಳಲ್ಲಿ ಅನುಸರಿಸುವ ಕೆಲವು ವಿಧಾನಗಳನ್ನು ಸಾರ್ವಜನಿಕ ಹಣಕಾಸು ವ್ಯವಹಾರಗಳಲ್ಲಿ ಬಳಸಬೇಕಾಗುವುದರಿಂದ ವಾಣಿಜ್ಯಸಂಸ್ಥೆಗಳ ಹಣಕಾಸು ನಿರ್ವಹಣೆಯ ಆಧುನಿಕ ವಿಧಾನಗಳನ್ನು ಪರಿಚಯ ಮಾಡಿಕೊಳ್ಳುವುದು ಅಗತ್ಯ ವಾಗಿದೆ. ಈ ಉದ್ದೇಶದಿಂದ ಶಿಷ್ಟ ವೆಚ್ಚನಿರ್ಣಯ (ಸ್ಟಾಂಡರ್ಡ್ ಕಾಸ್ಟಿಂಗ್) ಮತ್ತು ರೇಖೀಯ ಕಾರ್ಯಕ್ರಮಣ ಮುಂತಾದವನ್ನು ವಿಚಾರ ಗೋಷ್ಠಿಯಲ್ಲಿ ಚರ್ಚಿಸಲಾಯಿತು. ಈ ವಿಚಾರಗೋಷ್ಠಿಯಲ್ಲಿ ಚರ್ಚಿಸಲಾದ ಇನ್ನೊಂದು ವಿಷಯವೆಂದರೆ ಭಾರತದಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳ ನಡುವೆ

ಇರುವ ಹಣಕಾಸು ಸಂಬಂಧ. ಇದುವರೆಗಿನ ಸಂಬಂಧ, ಮತ್ತು ಇದನ್ನು ಉತ್ತಮಪಡಿಸುವ ಬಗೆ—ಇವನ್ನು ಕುರಿತು ಚರ್ಚಿಸಲಾಯಿತು. ಸರ್ಕಾರದ ಹಣಕಾಸು ವ್ಯವಹಾರಗಳ ಮೇಲೆ ಸಂಸತ್ತುಹೊಂದಿರುವ ಹತೋಟಿ ಸರ್ಕಾರದ ಹಣಕಾಸು ನಿರ್ವಹಣೆಯು ಒಂದು ಮುಖ್ಯ ಅಂಶವಾಗಿದೆ. ಇದರ ಬಗ್ಗೆಯೂ ವಿಚಾರಗೋಷ್ಠಿಯಲ್ಲಿ ಚರ್ಚೆ ನಡೆಯಿತು.

ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದವರನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ ಒಂದೊಂದು ಗುಂಪು ಒಂದೊಂದು ವಿಷಯದ ಬಗ್ಗೆ ಚರ್ಚೆನಡಿಸಿ, ಒಂದು ವರದಿಯನ್ನು ತಯಾರಿಸಿ ಒಟ್ಟು ಗುಂಪಿನಲ್ಲಿ ಅದನ್ನು ಮಂಡಿಸಿ ಅದರ ಮೇಲೆ ಚರ್ಚೆ ನಡೆಸಲು ಏರ್ಪಾಡು ಮಾಡಲಾಗಿದ್ದಿತು. ಈ ವ್ಯವಸ್ಥೆಯ ಪ್ರಕಾರ ಒಂದು ಗುಂಪು ನಮ್ಮ ದೇಶದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಇರುವ ಹಣಕಾಸು ಸಂಬಂಧವನ್ನು ಚರ್ಚಿಸಿತು. ಎರಡನೆಯ ಗುಂಪು ವಿಶ್ವವಿದ್ಯಾನಿಲಯಗಳಲ್ಲಿ ಹಣಕಾಸು ನಿರ್ವಹಣೆಯನ್ನು ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗಗಳಲ್ಲಿ ಅಧ್ಯಯನ ವಿಷಯವನ್ನಾಗಿ ಇಡುವುದನ್ನು ಚರ್ಚಿಸಿ, ಮಾದರಿ ಪಠ್ಯಕ್ರಮವನ್ನು ತಯಾರಿಸಿತು. ಮೂರನೆಯ ಗುಂಪು ಹಣಕಾಸು ವ್ಯವಹಾರಗಳ ಮೇಲೆ ಸಂಸತ್ತಿನ ಹತೋಟಿಯ ಸಮಸ್ಯೆಗಳನ್ನು ಚರ್ಚಿಸಿತು.

ಹಣಕಾಸು ನಿರ್ವಹಣೆ ವಿವಿಧ ಶಿಕ್ಷಣ ವಿಭಾಗದವರು ಆಸಕ್ತಿಹೊಂದಿರುವ ಒಂದು ವಿಷಯವಾಗಿದೆ. ಇದಕ್ಕನುಗುಣವಾಗಿ ವಿವಿಧ ಶಿಕ್ಷಣ ವಿಭಾಗದವರನ್ನು ಒಂದೆಡೆ ವಿಚಾರವಿನಿಮಯಕ್ಕಾಗಿ ಸೇರಿಸಿದ್ದುದು ಈ ವಿಚಾರಗೋಷ್ಠಿಯ ವೈಶಿಷ್ಟ್ಯ. ಅರ್ಥಶಾಸ್ತ್ರ, ವಾಣಿಜ್ಯಶಾಸ್ತ್ರ ಮತ್ತು ರಾಜ್ಯಶಾಸ್ತ್ರ ವಿಭಾಗಗಳ ಅಧ್ಯಾಪಕರು ಈ ವಿಚಾರಗೋಷ್ಠಿಯಲ್ಲಿ ಭಾಗವಹಿಸಿ ವಿಚಾರವಿನಿಮಯದ ಪ್ರಯೋಜನ ಪಡೆಯುವ ಅವಕಾಶ ಕಲ್ಪಿಸಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಒಂದು ಸ್ತುತ್ಯಕಾರ್ಯ ಮಾಡಿದೆ.

—ಬಿ. ಎಸ್. ಎಸ್.

ಡಾ. ಕೆ. ಎಂ. ಮುನ್ಷಿ

ಬೊಂಬಾಯಿಯ ಭಾರತೀಯ ವಿದ್ಯಾಭವನದ ಸ್ಥಾಪಕಾಧ್ಯಕ್ಷರಾಗಿದ್ದ ಡಾ. ಕೆ. ಎಂ. ಮುನ್ಷಿಯವರ ಮರಣದೊಂದಿಗೆ (೧೯೭೧ ಫೆಬ್ರುವರಿ ೯) ಬಹುಮುಖ ಪ್ರತಿಭೆಯ ಬಾಳೊಂದು ಮುಕ್ತಾಯಗೊಂಡಿತು. ೧೮೮೭ರ ಡಿಸೆಂಬರ್ ೩೦ರಂದು ಜನ್ಮ ತಳೆದ ಡಾ. ಮುನ್ಷಿಯವರು ಬಾಯಲ್ಲಿ ಬೆಳ್ಳಿಯ ಚಮಚ ಇಟ್ಟುಕೊಂಡು ಹುಟ್ಟಿದ ಅದೃಷ್ಟಶಾಲಿಯೇನೂ ಅಲ್ಲ. ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡು, ತಾಯಿಯ ಪೋಷಣೆಯಲ್ಲಿ ಬೆಳೆದು, ಇಪ್ಪತ್ತಾರನೆಯ ವಯಸ್ಸಿನಲ್ಲಿ ವಕೀಲಿ

ವೃತ್ತಿಯನ್ನಾರಂಭಿಸಿದ ಮುನ್ಷಿಯವರ ಬಾಳಿನ ವೈಶಿಷ್ಟ್ಯವೆಂದರೆ ಅವರ ಉಜ್ವಲ ರಾಷ್ಟ್ರಪ್ರೇಮ, ಸಾಹಿತ್ಯಶಕ್ತಿ, ಭಾರತೀಯ ಪುರಾಣೇತಿಹಾಸ ಸಂಸ್ಕೃತಿ ದರ್ಶನಗಳ ಆಳವಾದ ಅಭ್ಯಾಸ, ಪ್ರಚಾರ. ತಾರುಣ್ಯದಲ್ಲೇ ಅರವಿಂದರ ಪ್ರಭಾವಕ್ಕೆ ಒಳಗಾಗಿದ್ದ ಮುನ್ಷಿಯವರ ಪ್ರಥಮ ಕಾದಂಬರಿ ಪ್ರಕಟವಾದಾಗ ಅದು ಬಿರುಗಾಳಿಯನ್ನೇ ಎಬ್ಬಿಸಿತು. ೧೯೩೫ರಲ್ಲಿ ಅವರು ಬರೆದ 'ಗುಜರಾತ್ ಮತ್ತು ಅದರ ಸಾಹಿತ್ಯ' ಎಂಬ ಕೃತಿ ಅವರಿಗೆ ಅಪಾರ ಖ್ಯಾತಿ ತಂದುಕೊಟ್ಟಿತು. ಭುಲಾಭಾಯಿ ದೇಸಾಯರ ಶಿಷ್ಯವೃತ್ತಿಮಾಡಿ ನ್ಯಾಯಕ್ಷೇತ್ರದಲ್ಲಿ ಯಶಸ್ಸುಗಳಿಸಿದ ಮುನ್ಷಿಯವರು ರಾಷ್ಟ್ರದ ಬಿಡುಗಡೆಯ ಹೋರಾಟದಲ್ಲೂ ಪ್ರಮುಖಪಾತ್ರ ವಹಿಸಿದರು. ಸಮಾಜಸುಧಾರಣೆ ಅವರ ಇನ್ನೊಂದು ಪ್ರಿಯವಾದ ಹವ್ಯಾಸ. ಸ್ವತಂತ್ರ ಭಾರತದ ಸಂವಿಧಾನರಚನೆಯ ಕಾರ್ಯದಲ್ಲಿ ಭಾಗವಹಿಸಿದ ಮುನ್ಷಿಯವರು ನಮ್ಮ ದೇಶದ ಆಡಳಿತದಲ್ಲೂ ನಾನಾ ಬಗೆಯಾಗಿ ಪಾಲ್ಗೊಂಡದ್ದುಂಟು.

ಮುನ್ಷಿಯವರ ಹೆಸರನ್ನು ಶಾಶ್ವತಗೊಳಿಸಿರುವ ಇನ್ನೊಂದು ಮಹತ್ಕಾರ್ಯವೆಂದರೆ ಅವರು ಸ್ಥಾಪಿಸಿದ ಭಾರತೀಯ ವಿದ್ಯಾಭವನ. ಆ ಸಂಸ್ಥೆಯ ಮೂಲಕ ಮುನ್ಷಿಯವರು ಭಾರತೀಯರ ಇತಿಹಾಸ ಸಂಸ್ಕೃತಿಗಳನ್ನು ಕುರಿತ ಬೃಹದ್ಗ್ರಂಥದ ರಚನೆಗೆ ಕಾರಣರಾದರು. ಅದು ಇಂದಿಗೂ ಒಂದು ಆಧಾರಗ್ರಂಥವಾಗಿದೆ. ಭಾರತ ಜನಜೀವನದ ನಾನಾ ಮುಖಗಳನ್ನು ಕುರಿತು ಭವನದ ಆಶ್ರಯದಲ್ಲಿ ಅನೇಕ ಪುಸ್ತಕಗಳು ಪ್ರಕಟವಾಗಿವೆ. ಮುನ್ಷಿಯವರೇ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಹಲವು ನಮ್ಮ ಪುರಾಣ ಇತಿಹಾಸ ಸಂಸ್ಕೃತಿಗಳನ್ನು ಕುರಿತಂಥವು.

ಸ್ವತಂತ್ರಭಾರತದ ಸಾಂಸ್ಕೃತಿಕ ಪುನರುಜ್ಜೀವನಕ್ಕಾಗಿ ದೀರ್ಘಕಾಲ ದುಡಿದ ಕೆ. ಎಂ. ಮುನ್ಷಿಯವರು ಆಚಾರವಿಚಾರಗಳಲ್ಲಿ ಸಮನ್ವಯವನ್ನು ಸಾಧಿಸಲು ಯತ್ನಿಸಿದ ಹಿರಿಯ ಚಿಂತನಶೀಲರಲ್ಲೊಬ್ಬರು.

—ಎಚ್. ಎಸ್. ಕೆ.

ಡಾ. ಗಾಡ್ಗಿಲ್

ಮೇ ೩ರ ಸೋಮವಾರ ಬೆಳಗ್ಗೆ ಡಾ. ಧನಂಜಯ ರಾಮಚಂದ್ರ ಗಾಡ್ಗಿಲ್ ನಿಧನ ಹೊಂದಿದ ಡಾ. ಗಾಡ್ಗಿಲ್ ಅಸಾಧಾರಣ ಮೇಧಾವಿ, ಅರ್ಥಶಾಸ್ತ್ರಜ್ಞ. ತಮ್ಮ ಬಹುಮುಖ ಪ್ರತಿಭೆಯನ್ನುಪಯೋಗಿಸಿಕೊಂಡು ಭಾರತದ ಆರ್ಥಿಕ ವಿಷಯಗಳಲ್ಲಿ ಅಧಿಕಾರಯುತವಾಗಿ ಮಾತನಾಡುತ್ತ, ಬರೆಯುತ್ತ, ಚಿಂತಿಸುತ್ತ ಸೇವೆ ಸಲ್ಲಿಸಿದವರು. ಅವರ ಬದುಕು ಬರಹಗಳ ಸಂಕ್ಷಿಪ್ತ ಪರಿಚಯದಿಂದ ಅವರ ವ್ಯಕ್ತಿತ್ವದ ದರ್ಶನವಾಗುತ್ತದೆ.

ಡಾ. ಗಾಡ್ಗಿಲ್ ೧೯೦೧ರ ಏಪ್ರಿಲ್ ೧೦ರಂದು ನಾಸಿಕದಲ್ಲಿ ಜನಿಸಿ

ನಾಗಪುರದ ಪ್ರೌಢಶಾಲೆಯಲ್ಲೂ ಕೇಂಬ್ರಿಜ್‌ನ ಕ್ವೀನ್ಸ್ ಕಾಲೇಜಿನಲ್ಲೂ ಶಿಕ್ಷಣ ಪಡೆದರು. ಅವರು ಜೀವನ ಪ್ರಾರಂಭಿಸಿದ್ದು ಅಧ್ಯಾಪಕರಾಗಿ. ಸ್ವಲ್ಪ ಅವಧಿಯ ವರೆಗೆ ಬೊಂಬಾಯಿ ಸರ್ಕಾರದ ಹಣಕಾಸು ಖಾತೆಯಲ್ಲಿ ಅಡಿಷನಲ್ ಸೆಕ್ರೆಟರಿಯಾಗಿ ಕೆಲಸಮಾಡಿದರು. ೧೯೨೫ರಲ್ಲಿ ಸೂರತ್ತಿನ ಎಂ.ಟಿ.ಬಿ. ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಹುದ್ದೆಯನ್ನಲಂಕರಿಸಿದರು. ೧೯೩೦ರಲ್ಲಿ ಪೂನಾದ ಗೋಖಲೆ ರಾಜ್ಯಶಾಸ್ತ್ರ ಅರ್ಥಶಾಸ್ತ್ರ ಸಂಸ್ಥೆಯ ನಿರ್ದೇಶಕರಾದರು. ಈ ಸಂಸ್ಥೆ ಇಂದು ಭಾರತದಲ್ಲಿ ಅತ್ಯಂತ ಪ್ರಖ್ಯಾತವಾಗಿರುವ ಸಂಶೋಧನ ಸಂಸ್ಥೆ. ಇದರ ಏಳ್ಗೆಗೆ ಮುಖ್ಯ ಕಾರಣಕರ್ತರು ಡಾ. ಗಾಡ್ಗಿಲ್. ಮುಂದೆ ಅನೇಕ ಸಮಿತಿಗಳ ಸಂಸ್ಥೆಗಳ ಕೆಲಸವನ್ನು ಒಪ್ಪಿಕೊಂಡರೂ ಗಾಡ್ಗಿಲ್ ಈ ಸಂಸ್ಥೆಯೊಡನೆ ಸಂಪರ್ಕವನ್ನಿಟ್ಟುಕೊಂಡೇ ಇದ್ದರು.

೧೯೬೬ರಲ್ಲಿ ಗಾಡ್ಗಿಲ್ ರಾಜ್ಯಸಭೆಯ ಸದಸ್ಯರಾದಾಗ ಗೋಖಲೆ ಸಂಸ್ಥೆಯ ಡೈರೆಕ್ಟರ್ ಪದವಿಗೆ ರಾಜೀನಾಮೆಯಿತ್ತರು. ರಾಜ್ಯಸಭೆಯ ಸದಸ್ಯತ್ವ ಪಡೆಯುವುದಕ್ಕೆ ಮುಂಚೆ ಪೂನಾ ವಿಶ್ವವಿದ್ಯಾಲಯದ ಉಪಕುಲಪತಿಗಳಾದರು. ೧೯೬೭ರಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷರಾದಾಗ ರಾಜ್ಯಸಭೆಯ ಸದಸ್ಯತ್ವಕ್ಕೆ ಕೂಡ ರಾಜೀನಾಮೆ ಕೊಟ್ಟರು.

ಭಾರತ ಸರ್ಕಾರದ ಅನೇಕ ಉನ್ನತ ಸಮಿತಿಗಳಲ್ಲಿ ಗಾಡ್ಗಿಲ್ ಸದಸ್ಯರಾಗಿದ್ದುದು ಅವರ ಮೇರುಸ್ವರೂಪಿ ಬುದ್ಧಿಮತ್ತೆಗೆ ಸಾಕ್ಷಿ.

೧೯೪೭-೪೮ರ ಅವಧಿಯಲ್ಲಿ ಅವರು ಭಾರತ ಸರ್ಕಾರ ನೇಮಿಸಿದ ಅರ್ಥಶಾಸ್ತ್ರಜ್ಞರ ಸಲಹಾ ಸಮಿತಿಯ ಮತ್ತು ೧೯೫೦-೫೧ರಲ್ಲಿ ರಾಷ್ಟ್ರೀಯ ವರಮಾನ ಸಮಿತಿಯ ಸದಸ್ಯರಾಗಿದ್ದರು. ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮ ಸೂಚಿಸಲು ವಿಶ್ವರಾಷ್ಟ್ರಸಂಸ್ಥೆ ನೇಮಿಸಿದ ಸಮಿತಿಯಲ್ಲಿ ಗಾಡ್ಗಿಲರೂ ಒಬ್ಬ ಸದಸ್ಯರಾಗಿದ್ದರು. ೧೯೫೧ರಲ್ಲಿ ರಿಸರ್ವ್ ಬ್ಯಾಂಕಿನ ಗ್ರಾಮಾಂತರ ಉದ್ದರಿ ಸರ್ವೇಕ್ಷೆ ಸಮಿತಿಯ ಸದಸ್ಯರಾಗಿ ಗಾಡ್ಗಿಲ್ ಮಾಡಿರುವ ಸೇವೆ ಅಪಾರವಾದದ್ದು. ೧೯೫೧-೫೪ರ ಅವಧಿಯಲ್ಲಿ ಇವರು ರಿಸರ್ವ್ ಬ್ಯಾಂಕ್ ಆಫ್ ಇಂಡಿಯದ ಡೈರೆಕ್ಟರ್‌ಗಳ ಕೇಂದ್ರ ಬೋರ್ಡಿನ ಸದಸ್ಯರಾಗಿದ್ದರು.

ಭಾರತದ ಅರ್ಥಶಾಸ್ತ್ರಜ್ಞರು ಗಾಡ್ಗಿಲರನ್ನು ಭಾರತೀಯ ಅರ್ಥಶಾಸ್ತ್ರ ಸಂಘ ಮತ್ತು ಭಾರತೀಯ ಕೃಷಿ ಅರ್ಥಶಾಸ್ತ್ರ ಸಮ್ಮೇಳನಗಳ ಅಧ್ಯಕ್ಷರನ್ನಾಗಿ ಆರಿಸಿ ಅವರಿಗೆ ಗೌರವ ಸೂಚಿಸಿದರು.

ಮಹಾರಾಷ್ಟ್ರದ ಅನೇಕ ಆರ್ಥಿಕ ಸಮಿತಿಗಳ ಸದಸ್ಯರಾಗಿ ಡಾ. ಗಾಡ್ಗಿಲ್ ಕೊನೆಯ ವರೆಗೆ ಸೇವೆಸಲ್ಲಿಸಿದರು. ಇಷ್ಟು ಕಾರ್ಯಕ್ರಮಗಳ ನಡುವೆ ಅವರು ೩೦ಕ್ಕೂ ಮಿಕ್ಕ ಗ್ರಂಥಗಳನ್ನು ಪ್ರಕಟಿಸಿದರು. ಅವರು ಅಧಿಕಾರಯುತವಾಗಿ ಬರೆದಿರುವ ಲೇಖನಗಳು ಅನೇಕ. ಗ್ರಾಮಾಂತರ ಪ್ರದೇಶಗಳ

ಅಭಿವೃದ್ಧಿ, ರಾಷ್ಟ್ರದ ಆರ್ಥಿಕ ಬೆಳವಣಿಗೆ, ಸಹಕಾರದ ಪ್ರಗತಿ ಇವುಗಳ ಬಗ್ಗೆ ಡಾ. ಗಾಡ್ಗಿಲರಷ್ಟು ಸ್ಪಷ್ಟವಾಗಿ, ದಿಟ್ಟವಾಗಿ, ವಿಚಾರಮಾಡಿರುವವರು ವಿರಳ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿದ ಶ್ರೇಯಸ್ಸು ಸಂಪೂರ್ಣವಾಗಿ ಗಾಡ್ಗಿಲರಿಗೆ ಸಲ್ಲತಕ್ಕದ್ದು. ಯೋಜನೆಯ ವಿಕೇಂದ್ರೀಕರಣ ವಾಗಬೇಕು ಎನ್ನುವ ದಿಟ್ಟ ಅಭಿಪ್ರಾಯವನ್ನು ಇವರು ವ್ಯಕ್ತಪಡಿಸಿದಾಗ ಇವರು ಅನೇಕರ ವಿರೋಧವನ್ನೆದುರಿಸಬೇಕಾಯಿತು.

ಸೌಜನ್ಯಶೀಲ ವಿದ್ವನ್ಮಣಿ, ಸಮಾಜವಾದಿ, ಸಹಕಾರಿ ಮುಂದಾಳು, ದಿಟ್ಟ ಬರಹಗಾರ ಡಾ. ಗಾಡ್ಗಿಲರ ನಿಧನ ರಾಷ್ಟ್ರದ ಅರ್ಥಶಾಸ್ತ್ರ ಪ್ರಪಂಚಕ್ಕೆ ತುಂಬಲಾರದ ನಷ್ಟ.

—ಸಿ.ಕೆ.ಆರ್.

ಪುಸ್ತಕಲೋಕ

ಮಾನವ ಸಮಾಜ ಹಾಗೂ ಸಮಾಜಶಾಸ್ತ್ರ; ಲೇ: ಎಚ್. ಎಂ. ಮರುಳಸಿದ್ಧಯ್ಯ, ಎಂ.ಎ.,ಎಂ.ಎ (ಎಸ್.ಡಬ್ಲ್ಯು.); ಪ್ರ: ಭಾರತ ಬುಕ್ ಡಿಪೊ, ಧಾರವಾಡ (೧೯೭೦); ಪುಟಗಳು : ೧೯೪ ; ಬೆಲೆ : ರೂ. ೬

ಶ್ರೀ. ಎಚ್. ಎಂ. ಮರುಳಸಿದ್ದಯ್ಯನವರ "ಮಾನವ ಸಮಾಜ ಹಾಗೂ ಸಮಾಜಶಾಸ್ತ್ರ" ಎಂಬ ಪುಸ್ತಕ ಎರಡು ಭಾಗಗಳನ್ನೊಳಗೊಂಡಿದೆ. ಇದರ ಮೊದಲಿನ ಭಾಗವನ್ನು "ಸಮಾಜಶಾಸ್ತ್ರ" ಎಂದು ಕರೆಯಲಾಗಿದೆ. "ಇದೂ ನಮ್ಮ ಸಮಾಜ"ವೆಂದು ಕರೆದಿರುವ ಎರಡನೆಯ ಭಾಗ ಅದೇ ಹೆಸರಿನ ಗ್ರಂಥವಾಗಿ ೧೯೬೫ರಲ್ಲಿ ಪ್ರಕಟವಾಗಿತ್ತು. ಇದು ಹಲವು ಲೇಖನಗಳ ಸಂಗ್ರಹ. ಇದರಲ್ಲಿ ಸಾಮಾಜಿಕ ಸಮಸ್ಯೆಗಳಿಗೆ ಹೆಚ್ಚು ಪ್ರಾಧಾನ್ಯ ಕೊಡಲಾಗಿದೆ. ಈ ಭಾಗದಲ್ಲಿ ಸಮಾಜ ಶಾಸ್ತ್ರದ ಜ್ಞಾನವನ್ನು ಹೇಗೆ ಸಮಾಜದ ವಿವಿಧ ಸಮಸ್ಯೆಗಳಿಗೆ ಅನ್ವಯಿಸಲು ಸಾಧ್ಯವೆನ್ನುವುದನ್ನು ಪಾಂಡಿತ್ಯ ಪೂರ್ವಕವಾಗಿ ಲೇಖಕರು ವಿಶದಪಡಿಸಿದ್ದಾರೆ. ಸಮಾಜಶಾಸ್ತ್ರದ ವಿಚಾರವಾಗಿ ಶಾಸ್ತ್ರೀಯ ಗ್ರಂಥಗಳು ಬಹಳ ಕಡಿಮೆಯಾಗಿದ್ದಾಗ ಇದು ಪ್ರಕಟವಾಗಿ (೧೯೬೫) ಸಮಾಜ ಶಾಸ್ತ್ರದಲ್ಲಿ ಶಾಸ್ತ್ರೀಯ ಗ್ರಂಥಗಳನ್ನು ರಚಿಸುವ ಸಾಧ್ಯತೆಯನ್ನು ತೋರಿಸಿತು. ಇದರಲ್ಲಿ ಬಳಸಲಾದ ಅನೇಕ ಪಾರಿಭಾಷಿಕ ಶಬ್ದಗಳನ್ನು ಇತ್ತೀಚಿಗೆ ರಚಿತವಾದ ಸಮಾಜ ಶಾಸ್ತ್ರದ ಪುಸ್ತಕಗಳಲ್ಲಿ ಬಹುಮಟ್ಟಿಗೆ ಬಳಸಲಾಗುತ್ತಿದೆ. ಈ ಪುಸ್ತಕ ಸಮಾಜಶಾಸ್ತ್ರದ ವಿದ್ಯಾರ್ಥಿಗಳಿಗಿಂತ ಸಮಾಜ ಕಾರ್ಯಕರ್ತರಿಗೆ ಹೆಚ್ಚಾಗಿ ಉಪಯುಕ್ತವಾಗಿದೆ. ಇಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಶಾಸ್ತ್ರೀಯವಾಗಿ ವಿವೇಚಿಸಿ ಹಲವಾರು ಅರ್ಥಪೂರ್ಣ ಪರಿಹಾರಗಳನ್ನು ಸೂಚಿಸಲಾಗಿದೆ.

"ಸಮಾಜ ಹಾಗೂ ಶಾಸ್ತ್ರ" ಎಂಬ ಭಾಗ ಪೂರ್ಣವಾಗಿ ಸಮಾಜಶಸ್ತ್ರಾಕ್ಕೆ ಸಂಬಂಧಪಟ್ಟ ಲೇಖನಗಳನ್ನೊಳಗೊಂಡಿದೆ. ಇದರಲ್ಲಿ ಸಮಾಜಶಾಸ್ತ್ರದ ವಸ್ತುವಿನ ವಿಚಾರದಲ್ಲಿ ಬಂದಿರುವ ಟೀಕೆಗಳಿಗೆ ಸಂಮಜಸವಾದ ಉತ್ತರಗಳನ್ನು ಸಂಕ್ಷೇಪವಾಗಿ ಕೊಟ್ಟು 'ಸಮಾಜಶಾಸ್ತ್ರದ ವಸ್ತುವನ್ನು ವಿಶದಪಡಿಸಲಾಗಿದೆಯಲ್ಲದೆ ಶಾಸ್ತ್ರದ ಹಲವಾರು ಭಾಗಗಳನ್ನೂ ಇಂದು ಅಧಿಕವಾಗಿ ಬೆಳೆಯುತ್ತಿರುವ ಸಮಾಜ ಸಮಾಜಶಾಸ್ತ್ರದ ವಿವಿಧ ಶಾಖೆಗಳನ್ನೂ ಸಂಕ್ಷೇಪವಾಗಿ ತಿಳಿಸಲಾಗಿದೆ.

ಈ ಲೇಖನಗಳಲ್ಲಿ ಸಮಾಜಶಾಸ್ತ್ರದ ಹಲವು ಪ್ರಮುಖ ಪರಿಕಲ್ಪನೆಗಳನ್ನು ಲೇಖಕರು ವಿಶ್ಲೇಷಿಸಿದ್ದಾರೆ. ಲೇಖಕರು ಕನ್ನಡದಲ್ಲಿ ಪಾರಿಭಾಷಿಕ ಶಬ್ದಗಳ

ಕೊರತೆಯನ್ನು ಪೂರೈಸಲು ಬಹುಮಟ್ಟಿಗೆ ಯಶಸ್ವಿಯಾಗಿರುವುದಲ್ಲದೆ, ಸಂಕೀರ್ಣ ಪರಿಕಲ್ಪನೆಗಳನ್ನು ಶಾಸ್ತ್ರೀಯವೂ ಸರಳವೂ ಆದ ಭಾಷೆಯಲ್ಲಿ ನಿರೂಪಿಸಿದ್ದಾರೆ. ಇದು ಸಮಾಜಶಾಸ್ತ್ರದ ಅಧ್ಯಯನದಲ್ಲಿ ನಿರತರಾಗಿರುವ ವಿವಿಧ ಹಂತಗಳ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತವಾದ ಗ್ರಂಥ.

ಈ ಪುಸ್ತಕ ಹಲವು ಲೇಖನಗಳ ಸಂಗ್ರಹವಾಗಿರುವುದರಿಂದ ಸಮಾಜಶಾಸ್ತ್ರದ ವಸ್ತುವಿನ ವಿಚಾರದಲ್ಲಿ ಒಂದು ಸಂಪೂರ್ಣ ದೃಷ್ಟಿಯನ್ನು ಕೊಡಲು ಯಶಸ್ವಿಯಾಗಿಲ್ಲ. ಅಲ್ಲದೆ ಗ್ರಂಥಕರ್ತರೇ ಹೇಳಿರುವಂತೆ ಹಲವು ಭಾಗಗಳಲ್ಲಿ ಪುನರಾವೃತ್ತಿಗಳೂ ಇವೆ.

ಒಟ್ಟಿನಲ್ಲಿ ಶ್ರೀ ಮುರುಳಸಿದ್ಧಯ್ಯನವರಿಗೆ ಆಳವಾಗಿ ಆಲೋಚಿಸುವ ಮತ್ತು ಉದ್ಗ್ರಂಥಗಳ ತಿರುಳನ್ನು ವಿಶ್ಲೇಷಿಸುವ ಶಕ್ತಿಯಿದೆ. ಲೇಖಕರು ಸಮಾಜಶಾಸ್ತ್ರದ ವಿಚಾರವಾಗಿ ಸರಳವೂ ವ್ಯವಸ್ಥಿತವೂ ಆದ ಭಾಷೆಯಲ್ಲಿ ಬರೆಯಬಲ್ಲರೆಂಬುದಕ್ಕೆ ಈ ಪುಸ್ತಕ ಸಾಕ್ಷಿ. ಇವರು ಹಲವಾರು ವಿಷಯಗಳ ಮೇಲೆ ಕೇವಲ ಸೂಚ್ಯರೂಪವಾಗಿ ಬರೆದಿದ್ದಾರೆ. ಇವುಗಳಲ್ಲಿ ಯಾವುದಾದರೂ ಒಂದು ಭಾಗವನ್ನು—ಸಾಮಾಜಿಕ ರಚನೆ, ಸಮಾಜಿಕ ಬದಲಾವಣೆ, ಸಾಮಾಜಿಕ ಪ್ರಕ್ರಿಯೆ ಅಥವಾ ಕ್ರಿಯಾತ್ಮಕವಾದ—ತೆಗೆದುಕೊಂಡು ವಿವರವಾಗಿ ಬರೆದ ಪಕ್ಷಕ್ಕೆ, ಸಮಾಜಶಾಸ್ತ್ರ ಕುರಿತ ಸಾಹಿತ್ಯದ ಬೆಳವಣಿಗೆಗೆ ಹೆಚ್ಚಿನ ಸಹಾಯವಾಗುತ್ತದೆ. ಶ್ರೀ ಮುರುಳಸಿದ್ಧಯ್ಯನವರಿಂದ ಆದಷ್ಟು ಶೀಘ್ರವಾಗಿ ಅಂಥ ಕೊಡಿಗೆ ಬರುವುದೆಂದು ನಿರೀಕ್ಷಿಸುತ್ತೇನೆ.

—ಎಚ್. ಎಂ. ಸದಾಶಿವಯ್ಯ

ಮಾನವ ಶಾಸ್ತ್ರ ಪರಿಚಯ; ಲೇ: ಎಲ್. ಎಸ್. ಜನಾಪೂರ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (೧೯೬೦); ಪು: ೧೬೦; ಬೆಲೆ: ರೂ. ೩

ಪ್ರಸ್ತುತ ಪುಸ್ತಕವನ್ನು ಕರ್ನಾಟಕವಿಶ್ವವಿದ್ಯಾಲಯದವರು ಕನ್ನಡ ಪಠ್ಯ ಪುಸ್ತಕ ಮಾಲೆಯಲ್ಲಿ ಪಿ-ಯು.ಸಿ. ತರಗತಿಗೆ ಮಾನವಶಾಸ್ತ್ರದ ಪಠ್ಯವನ್ನಾಗಿ ಬರೆಸಿ ಪ್ರಕಟಿಸಿದ್ದಾರೆ. ಈ ಪುಸ್ತಕದಲ್ಲಿ ಐದು ಅಧ್ಯಾಯಗಳಿದ್ದು ಮೊದಲ ಅಧ್ಯಾಯ ಪ್ರಸ್ತಾವನೆಯ ರೂಪದಲ್ಲಿ ಮಾನವಶಾಸ್ತ್ರದ ಸಂಕ್ಷಿಪ್ತ ಪರಿಚಯವನ್ನೊದಗಿಸುತ್ತದೆ. ಎರಡನೆಯ ಅಧ್ಯಾಯದಲ್ಲಿ ಅದರ ಮೂಲ ತತ್ತ್ವಗಳು, ಅವುಗಳ ರೂಪ, ಆ ವಿವಿಧ ತತ್ವಗಳ ಪರಸ್ಪರ ಸಂಬಂಧ ಇವುಗಳನ್ನು ಪರಿಶೀಲಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಮಾನವನ ಆರಂಭಹಂತದಲ್ಲಿದ್ದ ಇತಿಹಾಸಪೂರ್ವದ ಸಂಗತಿಗಳನ್ನೂ ಆ ಕಾಲದ ವಿವಿಧ ಸಂಸ್ಕೃತಿಗಳ ಸಂಕ್ಷಿಪ್ತ ಚಿತ್ರಗಳನ್ನೂ ಒದಗಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮಾನವಸಮಾಜದ ಮುಖ್ಯ ಅಂಗಗಳಾದ ವಿವಾಹ ಮತ್ತು ಕುಟುಂಬ, ಸಂಸ್ಥೆಗಳ ಹುಟ್ಟು, ವಿಧಾನಗಳು ಮತ್ತು ಸಮಾಜದೇಳಿಗೆಗೆ

ಅವುಗಳ ಪ್ರಾಮುಖ್ಯವನ್ನು ಸಂಗ್ರಹವಾಗಿ ವಿವರಿಸಲಾಗಿದೆ. ಕೊನೆಯ ಅಧ್ಯಾಯದಲ್ಲಿ ಮಾನವ ಸಮಾಜದಲ್ಲಿ ಮತಕ್ಕಿರುವ ಪ್ರಾಧಾನ್ಯವನ್ನು ಸೂಕ್ಷ್ಮವಾಗಿ ವಿವೇಚಿಸಲಾಗಿದೆ. ಪುಸ್ತಕದ ಕಡೆಯಲ್ಲಿ ಇದರ ರಚನೆಯಲ್ಲಿ ಮುಖ್ಯವಾಗಿ ಬಳಸಲಾದ ಆಧಾರಗ್ರಂಥಪಟ್ಟಿ, ಪಾರಿಭಾಷಿಕ ಶಬ್ದಗಳ ಪಟ್ಟಿ ಇವುಗಳನ್ನು ಒದಗಿಸಲಾಗಿದೆ.

ಪ್ರಾರಂಭದೆಶೆಯಿಂದಲೂ ಸ್ನಾತಕೋತ್ತರ ಮಟ್ಟದವರೆಗೂ ವಿದ್ಯಾಭ್ಯಾಸ ಮಾತೃಭಾಷಾ ಮಾಧ್ಯಮದಲ್ಲಿಯೇ ನಡೆಯಬೇಕೆಂಬ ಈ ಯುಗದಲ್ಲಿ ವಿವಿಧ ವಿಜ್ಞಾನ ಮಾನವಿಕ ವಿಷಯಗಳಿಗೆ ಸಂಬಂಧಿಸಿದಂತೆ ಪಠ್ಯಪುಸ್ತಕಗಳು ಪ್ರದೇಶ ಭಾಷೆಗಳಲ್ಲಿ ನಿರ್ಮಾಣವಾಗಬೇಕಾದುದು ಬಹಳ ಆವಶ್ಯಕ. ಈ ದೃಷ್ಟಿಯಿಂದ ವಿವಿಧ ವಿಶ್ವವಿದ್ಯಾಲಯಗಳೂ ಸರ್ಕಾರಗಳೂ ಈ ದಿಶೆಯಲ್ಲಿ ಬಹಳಷ್ಟು ಸ್ತುತ್ಯಾರ್ಹವಾದ ಕಾರ್ಯಗಳನ್ನು ಕೈಗೊಂಡಿವೆ. ಈ ಉದ್ದೇಶ ಸಾಧನೆಗಾಗಿ ಮೈಸೂರು ವಿಶ್ವವಿದ್ಯಾನಿಲಯದವರೂ, ಕರ್ನಾಟಕ ವಿಶ್ವವಿದ್ಯಾಲಯದವರೂ ಈಗಾಗಲೇ ಹತ್ತಾರು ಹೊತ್ತಗೆಗಳನ್ನು ಪ್ರಕಟಿಸಿ ವಿದ್ಯಾರ್ಥಿಜಗತ್ತಿಗೆ ಸಲ್ಲಿಸುತ್ತಿದ್ದಾರೆ. ಈಗ ಪರಿಶೀಲನೆಯಲ್ಲಿರುವುದು ಇಂತಹುದೇ ಒಂದು ಹೊತ್ತಗೆ. ಶಾಲಾಮಟ್ಟದಿಂದ ಆಗತಾನೇ ಹೊರಬರುತ್ತಿರುವ ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಕ್ಲಿಷ್ಟವಾದ ಸಮಸ್ಯೆಗಳನ್ನು ಸರಳಭಾಷೆಯಲ್ಲಿ ರೂಪಿಸುವುದು ಕಷ್ಟಸಾಧ್ಯ. ಈ ಕೃತಿಯ ಲೇಖಕರಾದ ಶ್ರೀಮಾನ್ ಎಲ್. ಎಸ್. ಐನಾಪ್ಪೂರ ಅವರು ಈ ಕಾರ್ಯ ಕೈಗೊಂಡಿರುವುದು ಅಭಿನಂದನಾರ್ಹ.

ಆಂಗ್ಲ ಭಾಷೆಯ ಗ್ರಂಥಗಳನ್ನೇ ಆಧಾರವಾಗಿಟ್ಟುಕೊಂಡು ಅಭ್ಯಾಸಮಾಡಿ, ಆಂಗ್ಲ ಭಾಷೆಯಲ್ಲೇ ಯೋಚಿಸುವುದು ನಮಗೆ ರೂಢಿಯಾಗಿ ಹೋಗಿದೆ. ಕನ್ನಡದಲ್ಲಿ ಬರೆಯಹೊರಟಾಗ ಹಲವಾರು ತೊಡಕುಗಳು ಎದ್ದುಕಾಣುತ್ತವೆ. ಉದಾ: ಆಂಗ್ಲ ವಿದ್ವಾಂಸರುಗಳ ಹೆಸರುಗಳನ್ನು ಕನ್ನಡದಲ್ಲಿ ಬರೆಯುವಾಗ ಒಂದೇ ಹೆಸರನ್ನು ಹಲವೆಡೆಗಳಲ್ಲಿ ಬೇರೆ ಬೇರೆ ರೀತಿ ಬರೆಯಲಾಗಿದೆ. ಉದಾ: ಮಲಿನೊವ್ ಸ್ಕಿ (Malinowski) ಪುಟ ೧೭ ಮತ್ತು ೬೭ರಲ್ಲಿ 'ಮೆಲಿನೊವ್ಸ್ಕಿ' ಆಗಿದ್ದರೆ ಪುಟ ೫೫ರಲ್ಲಿ 'ಮೆಲಿನೊವಾಸ್ಕಿ' ಆಗಿದೆ; ಮತ್ತು ಪುಟ ೧೫೮ರಲ್ಲಿ 'ಮೆಲಿನೊವ್ಸ್ಕಿ' ಯಾಗಿದೆ. ಇ. ಬಿ. ಟೈಲರ್ (E. B. Tylor)) ಪುಟ ೫೫ರಲ್ಲಿ ಆ ರೂಪದಲ್ಲಿ ಕಾಣಿಸಿಕೊಂಡರೂ ಪುಟ ೧೩೧ರಲ್ಲಿ ಎ. ಬ್ರಿ. ಟೇಯಿಲರ್ ಆಗಿದೆ. ಮತ್ತೆ ಕೆಲವು ಪದಗಳು ಒಂದೊಂದು ಕಡೆ ಒಂದೊಂದು ರೂಪ ಪಡೆದಿವೆ. ಉದಾ: ೪೪ನೆಯ ಪುಟದ ೧೩ನೆಯ ಸಾಲಿನಲ್ಲಿ 'ಅನುವಂಶಿಕವಾಗಿ' ಎಂದಿರುವುದು ೫೦ನೆಯ ಪುಟದ ೧೭ನೆಯ ಸಾಲಿನಲ್ಲಿ 'ಆನುವಂಶಿಕವಾಗಿ' ಎಂದಾಗಿದೆ.

೮೮ನೆಯ ಪುಟದ ಮತ್ತೊಂದು ವಾಕ್ಯ ಕುತೂಹಲಕಾರಿಯಾಗಿದೆ. ೨೫-೨೬ನೆಯ ಸಾಲುಗಳಲ್ಲಿನ ಆ ವಾಕ್ಯ ಹೀಗಿದೆ: "ಏಕೆಂದರೆ ನಿಯಾಂಡರ್ ತಾಲ್ ಮಾನವನು ಮಾನವ ರೂಪಿಯೇ ಆಗಿದ್ದನು."

ಪ್ರಾಚೀನ ಪ್ರಪಂಚವೆಂಬ ಮೂರನೆಯ ಅಧ್ಯಾಯದಲ್ಲಿ ತಿಳಿಸಿರುವ ಕೆಲವು ವಿಷಯಗಳು ಸಂದೇಹಾಸ್ಪದವಾಗಿದ್ದರೆ ಮತ್ತೆ ಕೆಲವು ಸತ್ಯದೂರವಾದ ಸಂಗತಿಗಳಾಗಿವೆ. ೮೦ನೆಯ ಪುಟದ ೨ನೆಯ ಪ್ಯಾರಾದಲ್ಲಿ ಆದಿಶಿಲಾಯುಗ ಮಾನವನ ವಿಷಯವಾಗಿ ಹೇಳುತ್ತಿರುವಾಗ ಅವನು "ಗುಹೆಯಲ್ಲಿ ವಾಸಿಸುತ್ತಿದ್ದಿಲ್ಲ.......... ಅಂದಿನವರ ಮನೆಗಳು ಸರಳವಾದ ನೆರಪೆ ಮನೆಗಳು, ಕೆಲವು ಗೂಡುಗಳಂತಿದ್ದುವೆಂದರೂ ಸಲ್ಲುತ್ತದೆ" ಎಂದು ಹೇಳಿರುವುದಕ್ಕೆ ಯಾವ ಆಧಾರಗಳು ದೊರೆತಿವೆಯೋ ಗೊತ್ತಿಲ್ಲ. ಈಗಲೂ ಪ್ರಾಗಿತಿಹಾಸಕಾರರು ಆ ಕಾಲಕ್ಕೆ ಸಂಬಂಧಿಸಿದ ಕೆಲವು ಆಯುಧಗಳ ವಿನಾ ಮತ್ತೇನೂ ದೊರತಿಲ್ಲವೆಂದು ಹೇಳುತ್ತಾರೆ ಮತ್ತೆ ಆದಿಶಿಲಾಯುಗದ ಅವಶೇಷಗಳೆಂದು ಯಾವುದನ್ನು ನಿರ್ದೇಶಿಸಿದ್ದರೋ ಅವು ನಿಜವಾಗಿಯೂ ಮಾನವನಿರ್ಮಿತ ವಸ್ತುಗಳೇ ಅಲ್ಲ, ಪ್ರಕೃತಿ ನಿರ್ಮಿತವೆಂದು ಕೆ. ಪಿ. ಓಕ್ಲಿ ಮುಂತಾದ ವಿದ್ವಾಂಸರು ಅಭಿಪ್ರಾಯ ಸೂಚಿಸಿದ್ದಾರೆ. ಅದೇ ಪ್ಯಾರದಲ್ಲಿ "ಅವರಿಗೆ ಬೆಂಕಿಯ ಜ್ಞಾನವಿತ್ತೋ ಇಲ್ಲವೋ ಎಂಬುದನ್ನು ನಿಶ್ಚಿತವಾಗಿ ಗೊತ್ತಾಗಿಲ್ಲ. ಆದರೆ ಕೆಲವರಿಗಾದರೂ ಅದರ ಜ್ಞಾನವಿದ್ದಿತೆಂಬುದಕ್ಕೆ ಗುರುತುಗಳಿವೆ" ಎಂಬ ಪರಸ್ಪರ ವಿರೋಧಾತ್ಮಕ ಹೇಳಿಕೆಗಳನ್ನು ಕಾಣುತ್ತೇವೆ.

೮೨ನೆಯ ಪುಟದ ಮೊದಲ ಪ್ಯಾರದಲ್ಲಿ ತಿಳಿಸಿರುವಂತೆ ಪ್ರಾಕ್ತನ ಶಾಸ್ತ್ರಜ್ಞರು ಶಿಲಾಯುಗ ಸಂಸ್ಕೃತಿಯ ಪುನರ್ರಚನೆಗೆ ಯೂರೋಪಿನಲ್ಲಿ ದೊರೆತ ವಸ್ತುಗಳನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ಈಗ ಉಳಿದು ಬಂದಿಲ್ಲ. ಮಾನವನ ಅತ್ಯಂತ ಪ್ರಾಚೀನ ಅವಶೇಷಗಳು ಆಫ್ರಿಕದಲ್ಲಿ ವಿಶೇಷವಾಗಿ ದೊರಕಿವೆ. ಹಲವಾರು ಲಕ್ಷ ವರ್ಷಗಳ ಅನಂತರವೇ ಮಾನವ ಯೂರೋಪಿನಲ್ಲಿ ಕಾಣಿಸಿಕೊಂಡನೆಂಬುದು ಈಗಿನ ವಿದ್ವಾಂಸರ ನಂಬಿಕೆ. ಅನಂತರದ ಕಾಲದ ಅವಶೇಷಗಳೂ ಆಫ್ರಿಕ ಏಷ್ಯಗಳಲ್ಲಿ ಸಾಕಷ್ಟು ಕಂಡುಬಂದಿವೆ. ಆದುದರಿಂದ ಹಳೆಯ ಜಗತ್ತಿನ ಎಲ್ಲ ಪ್ರದೇಶಗಳಲ್ಲೂ ಈ ಸಂಬಂಧವಾದ ಮಾಹಿತಿಗಳು ದೊರಕಿವೆ.

೮೧ನೆಯ ಪುಟದಲ್ಲಿ ಕೊಟ್ಟಿರುವ ಕೋಷ್ಟಕದ ಪ್ರಕಾರ ಶಿಲಾಯುಗದಲ್ಲಿ ೧,೫೦,೦೦೦ ವರ್ಷಗಳ ಸುಮಾರಿನ ಅಚೇಲಿಯನ್ (ಅಷ್ಯೂಲಿಯನ್)–ಲೆವಲೋಶಿಯನ್ (ಲೆವಾಲ್ವಾಸಿಯನ್) ಸಂಸ್ಕೃತಿಗಳ ಕಾಲದಲ್ಲಿದ್ದ ಪೂರ್ವ ಮೌಸ್ಟೇರಿಯನ್ ನಿಯಾಂಡರತಲ ಮಾನವನೇ ಈ ವರೆವಿಗೂ ತಿಳಿದು ಬಂದಿರುವ ಅತ್ಯಂತ ಪುರಾತನ ಮಾನವ. ಆಫ್ರಿಕದಲ್ಲಿ ೧೭,೫೦,೦೦೦ ವರ್ಷಗಳಷ್ಟು ಮೊದಲೇ ಹೋಮೋಹ್ಯಾಬಿಲಿಸ್ ಎಂಬ ವರ್ಗದ ಮಾನವನಿದ್ದುದಾಗಿ ಡಾ. ಲೀಕಿಯವರು ೧೯೫೪ರಲ್ಲಿ ಪ್ರಕಟಿಸಿದ್ದಾರೆ. ಅನಂತರದ ಹಲವಾರು ಮಾನವ ವರ್ಗದ ಅವಶೇಷಗಳು ಆಫ್ರಿಕ, ಯೂರೋಪ್ ಮತ್ತು ಏಷ್ಯಗಳಲ್ಲಿ ಈಗಾಗಲೇ ದೊರಕಿದ್ದು ಪ್ರಚುರವಾಗಿವೆ. ಅದೇ ಕೋಷ್ಟಕದಲ್ಲಿ ೨೦,೦೦೦ ವರ್ಷಗಳ

ಸುಮಾರಿನಲ್ಲಿ ಮೌಸ್ಟೀರಿಯನ್ ಲೆವೆಲೋಶಿಯನ್ ಸಂಸ್ಕೃತಿಗಳನ್ನು ಒಂದು ಬಾರಿಯೂ ೪,೫೦,೦೦೦ ವರ್ಷಗಳ ಸುಮಾರಿನಲ್ಲಿ ಅವೇ ಸಂಸ್ಕೃತಿಗಳನ್ನು ಮತ್ತೊಂದು ಬಾರಿಯೂ ಸೂಚಿಸಿರುವುದು ನಿಜಕ್ಕೂ ಆಶ್ಚರ್ಯಕರವಾಗಿದೆ. Scraper ಎಂಬ ಪವಕ್ಕೆ ಕೆದರುಗುದ್ದಲಿಯೆಂದು ಭಾಷಾಂತರಿಸಿದ್ದಾರೆ. ಯಾವುದೇ ನಿಘಂಟಿನ ಪ್ರಕಾರವೂ Scraper ಎಂಬುದನ್ನು ಒರೆಯುವ ಸಾಧನವೆಂದು ಅರ್ಥೈಸಬೇಕಾಗುತ್ತದೆಯೇ ಹೊರತು ಗುದ್ದಲಿಯೆಂದು ಹೇಳಲು ಸಾಧ್ಯವಿಲ್ಲ.

೮೪ನೆಯ ಪುಟದ ಎರಡನೆಯ ಪ್ಯಾರದ ಕೊನೆಯ ವಾಕ್ಯದಲ್ಲಿ ಕ್ಲಾಕ್ಟೋನಿಯನ್ ಉಪಕರಣಗಳಲ್ಲಿ ಮಚ್ಚನ್ನು (ಚಾಪರ್) ಸೇರಿಸಿದ್ದಾರೆ. ಕ್ಲಾಕ್ಟೋನಿಯನ್ ಆಯುಧಗಳನ್ನು ಚಪ್ಪೆಕಲ್ಲಿನಿಂದ ಮಾಡಲಾಗಿದ್ದು, ಮಚ್ಚು ಅಥವಾ ತುಂಡುಮಚ್ಚು ಉಂಡೆಕಲ್ಲಿನಾಯುಧಗಳ ಗುಂಪಿಗೆ ಸೇರುತ್ತದೆ.

೮೬ನೆಯ ಪುಟದ ಎರಡನೆಯ ಪ್ಯಾರದಲ್ಲಿ ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿಗಳ ಪರಿಶೀಲನೆ ಮಾಡುತ್ತ ಮೊಟ್ಟಮೊದಲಿನವು ಎಂದು ತಿಳಿಯಲಾದ ಎಲುಬಿನ ಕೈಗಾರಿಕೆ ಈ ಕಾಲಕ್ಕೆ ಸೇರುತ್ತದೆ ಎಂದು ತಿಳಿಸಿರುವುದು ತಪ್ಪು. ಕೊತ್ತುಮೊಳೆಯ ಆವಿಷ್ಕಾರದ ಅನಂತರ ಅಂತ್ಯ ಶಿಲಾಯುಗದಲ್ಲಿ (ಮೇಲಣ ಹಳೇ ಶಿಲಾಯುಗ) ಮೊದಲ ಬಾರಿಗೆ ಮೂಳೆ, ದಂತ ಮತ್ತು ಕೊಂಬುಗಳನ್ನು ಆಯುಧೋತ್ಪಾದನೆಗೆ ಉಪಯೋಗಿಸಲಾಯಿತು.

೯೫ನೆಯ ಪುಟದಲ್ಲಿ ತಿಳಿಸಿರುವಂತೆ ಮಧ್ಯ ಶಿಲಾಯುಗದ ಸಂಸ್ಕೃತಿ ನಾಲ್ಕನೆಯ ಹಿಮಯುಗದಲ್ಲಿ ಪ್ರಾರಂಭವಾದುದಲ್ಲ. ಹಿಮಯುಗದ ಅನಂತರ ಹಾಲೊಸೀನ್ (ಈ ಪದವನ್ನು ಲೇಖಕರು ಹೊಲೇಸಿಯನ್ ಎಂದು ೯೭ನೆಯ ಪುಟದಲ್ಲಿ ಕರೆದಿದ್ದಾರೆ.) ಯುಗದ ಆರಂಭಕಾಲದಲ್ಲಿ ರೂಢಿಗೆ ಬಂತು. ಈ ಅಭಿಪ್ರಾಯವನ್ನು ಲೇಖಕರು ೯೭ನೆಯ ಪುಟದ ೯–೧೦ನೆಯ ಸಾಲುಗಳಲ್ಲಿ ಒಪ್ಪಿಕೊಂಡಿದ್ದಾರೆ. ಮತ್ತೆ ಮಧ್ಯ ಶಿಲಾಯುಗ ಕ್ರಿ.ಪೂ. ೮೦೦೦ದ ಹಿಂದೆ ಪ್ರಾರಂಭವಾಯಿತೆಂದು ೯೬ನೆಯ ಪುಟದಲ್ಲೂ ಕ್ರಿ. ಪೂ. ೧೫೦೦೦ ರಿಂದ ೮೦೦೦ ಎಂದು ೯೭ನೆಯ ಪುಟದಲ್ಲೂ ಹೇಳುವುದು ವಿರೋಧಾತ್ಮಕವಾಗಿದೆ. ೯೮ನೆಯ ಪುಟದಲ್ಲಿ ಹೊಸ ಶಿಲಾಯುಗ ಸುಮಾರು ಕ್ರಿ. ಪೂ. ೫೦೦೦ ವರ್ಷಗಳ ಹಿಂದೆ ಪ್ರಾರಂಭವೆಂದು ಹೇಳಿದ್ದಾರೆ. ಆದರೆ ಪ್ರಾಕ್ತನಶಾಸ್ತ್ರಜ್ಞರು ಈ ಘಟನೆ ಕ್ರಿ. ಪೂ. ೮೦೦೦ದ ಸುಮಾರಿನಲ್ಲಿ (ವೈಜ್ಞಾನಿಕ ಕಾಲಗಣನಪದ್ಧತಿಯ ಆಧಾರದ ಮೇಲೆ) ಸಂಭವಿಸಿತೆಂದು ನಂಬಿದ್ದಾರೆ.

೧೫೩ನೆಯ ಪುಟದ ಶೀರ್ಷಿಕೆಯಲ್ಲೂ ಆ ಅಧ್ಯಾಯದ ಉದ್ದಕ್ಕೂ ರಿಲಿಜನ್ ಎಂಬ ಪದವನ್ನು ಧರ್ಮವೆಂದು ಭಾಷಾಂತರಿಸಿರುವುದು ಸಮಂಜಸವಾಗಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಆ ಪದವನ್ನು ಮತ ಎಂದು ತರ್ಜುಮೆ ಮಾಡಬೇಕಾಗಿತ್ತು. ೧೫೬ನೆಯ ಪುಟದ ೯ನೆಯ ಸಾಲಿನಲ್ಲಿ ಪ್ರೊಫೇನ್ ಎಂಬ ಪದವನ್ನು ಅಪವಿತ್ರ ಎಂದು

ಭಾಷಾಂತರಿಸಿರುವುದು ಸರಿಯಲ್ಲ. ಲೌಕಿಕವೆಂದು ಬಳಸಿದರೆ ಹೆಚ್ಚು ಸಮಂಜಸವಾಗುತ್ತದೆ. ೧೬೦ನೆಯ ಪುಟದ ೭ನೆಯ ಸಾಲಿನಲ್ಲಿ ಥಿಯೊಕ್ರಟಿಕ್ ಸ್ಟೇಟ್ ಎಂಬುದನ್ನು ಧರ್ಮಸ್ಥಕ ರಾಷ್ಟ್ರವೆಂದು ಭಾಷಾಂತರಿಸಿರುವುದು ಅಸಾಧುವಾಗಿ ಕಾಣುತ್ತದೆ. ಈ ಅರ್ಥದಂತೆ ನೆರೆಯ ರಾಷ್ಟ್ರವಾದ ಪಾಕಿಸ್ತಾನ ಧರ್ಮಸ್ಥಕ ರಾಷ್ಟ್ರವಾದೀತು. ಥಿಯೋಕ್ರಸಿಗೆ ದೇವರ ಅಥವಾ ಮತದ ಹೆಸರಿನಲ್ಲಿ ನಡೆಸುವ ಪ್ರಭುತ್ವ ಎಂದೂ, ಥಿಯೊಕ್ರಟಿಕ್ ಸ್ಟೇಟ್‌ಗೆ ಅಂಥ ರಾಷ್ಟ್ರ ಎಂದೂ ಅರ್ಥ.

ಪುಸ್ತಕದಲ್ಲಿ ಕಂಡುಬರುವ ಎಲ್ಲಾ ದೋಷಗಳನ್ನೂ ಕೊರತೆಗಳನ್ನೂ ಇಲ್ಲಿ ಹೇಳಹೊರಟಿಲ್ಲ. ನಿದರ್ಶನರೂಪವಾಗಿ ಕೆಲವನ್ನು ಮಾತ್ರ ಸೂಚಿಸಲಾಗಿದೆ. ಮುದ್ರಾರಾಕ್ಷಸನ ಹಾವಳಿಯಂತೂ ಹೇಳತೀರದು. ಪುಸ್ತಕದ ಕೊನೆಯಲ್ಲಿರುವ ಒಪ್ಪೋಲೆಯಲ್ಲಿ ಕೇವಲ ೧೪ ತಪ್ಪೊಪ್ಪುಗಳ ಸೂಚನೆಗಳಿದ್ದರೆ ಗ್ರಂಥದಲ್ಲಿ ನೂರಾರು ಅಚ್ಚಿನ ತಪ್ಪುಗಳಿವೆ. ಒಪ್ಪೋಲೆಯಲ್ಲೇ ಮುದ್ರಾರಾಕ್ಷಸನ ಕೈಚಳಕ ಕಂಡುಬರುತ್ತದೆ. ೩೨ನೆಯ ಪುಟದ ೧ನೆಯ ಸಾಲಿನಲ್ಲಿ ಸರಿಯಾಗಿರುವ ' ಸ್ವತಂತ್ರರು " ಒಪ್ಪೋಲಿಯಲ್ಲಿ ' ಸತಂತ್ರರು ' ಆಗಿ ಅನಂತರ ಸ್ವತಂತ್ರರು ಆಗಿರುವುದಿರಲಿ, ೧೨೮ನೆಯ ಪುಟದ ೨೦ನೆಯ ಸಾಲಿನಲ್ಲಿ ' ಕಟುಂಬ ' ವೆಂದಿರುವ ಕುಟುಂಬ, ಒಪ್ಪೋಲಿಯಲ್ಲಿ ' ಕೆಟುಂಬ 'ವಾಗಿ ಅನಂತರ ತನ್ನ ನಿಜಸ್ವರೂಪ ಪಡೆಯಬೇಕಾಗಿದೆ.

ಇಷ್ಟೊಂದು ದೋಷ, ಕೊರತೆಗಳಿದ್ದರೂ ಕನ್ನಡದಲ್ಲಿ ಪಠ್ಯ ಪುಸ್ತಕ ನಿರ್ಮಾಣ ಕಾರ್ಯದಲ್ಲಿ ತೊಡಗಿರುವುದಕ್ಕಾಗಿ ಲೇಖಕರನ್ನು ವಂದಿಸಿ ಮುಂದಿನ ಆವೃತ್ತಿಯಲ್ಲಿ ಈ ಲೋಪ ದೋಷಗಳು ಮರೆಯಾಗಲೆಂದು ಹಾರೈಸಬಹುದು.

—ಬಿ. ಕೆ. ಗುರುರಾಜರಾವ್

ಜಗತ್ತಿನ ಇತಿಹಾಸ; ಲೇ: ಜಿ. ಎಸ್. ದೀಕ್ಷಿತ ಮತ್ತು ಡಿ. ಟಿ. ಜೋಶಿ; ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಬೆಲೆ: ರೂ. ೪-೫೦

ಕರ್ನಾಟಕ ವಿಶ್ವವಿದ್ಯಾಲಯ ಪಿ-ಯು.ಸಿ. ವಿದ್ಯಾರ್ಥಿಗಳಿಗಾಗಿ ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟಂತೆ ಪಠ್ಯಪುಸ್ತಕಗಳನ್ನು ನುರಿತ ಉಪಾಧ್ಯಾಯರುಗಳಿಂದ ಸಿದ್ಧಗೊಳಿಸುತ್ತಿರುವುದು ತಿಳಿದ ವಿಷಯವೇ ಆಗಿದೆ. ಈ ಪುಸ್ತಕ ಕನ್ನಡ ಪಠ್ಯಪುಸ್ತಕ ಮಾಲೆಯಲ್ಲಿ ಏಳನೆಯದು. ಚರಿತ್ರೆಯನ್ನು ಪ್ರಧಾನವಾಗಿ ತೆಗೆದುಕೊಳ್ಳುವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಈ ಪುಸ್ತಕವನ್ನು ರಚಿಸಲಾಗಿದೆ. ಪಿ.ಯು.ಸಿ. ತರಗತಿಯ ಅಭ್ಯಾಸ ಪತ್ರಿಕೆಗೆ ಅನುಗುಣವಾಗಿ ಈ ಗ್ರಂಥವನ್ನು ರಚಿಸಿದ್ದೇವೆಂದು ಗ್ರಂಥಕರ್ತರೇ ಹೇಳಿಕೊಂಡಿದ್ದಾರೆ. ಯಾವುದಾದರೂ ಒಂದು ಅಭ್ಯಾಸ ಪತ್ರಿಕೆಯ ಚೌಕಟ್ಟಿನೊಳಗೆ ಹೇಳಬೇಕಾದ ವಿಷಯಗಳೆಲ್ಲವನ್ನೂ ಹೇಳುವುದು ಬಲುಕಷ್ಟ. ಆದರಲ್ಲಿಯೂ ವಿಶ್ವದ ನಾಗರಿಕತೆಯ ಕಥೆಯನ್ನು

ಪರಿಚಯ ಮಾಡಿಕೊಡುವುದು ಸುಲಭವಾದುದೇನೂ ಅಲ್ಲ. ಈ ಇಕ್ಕಟ್ಟಿಗೆ ಸಿಕ್ಕಿಬಿದ್ದ ಲೇಖಕರು ತಮ್ಮ ಕಾರ್ಯವನ್ನು ಚೆನ್ನಾಗಿಯೇ ಮಾಡಿದ್ದಾರೆನ್ನಬಹುದು. ಆದರೆ ಈ ಪುಸ್ತಕವನ್ನು ಪೂರ್ಣವಾಗಿ ಓದಿದ ಅನಂತರ ಜಗತ್ತಿನ ಇತಿಹಾಸದ ಪೂರ್ಣಪರಿಚಯ ಆಗುತ್ತದೆ ಎಂದು ಹೇಳುವಂತಿಲ್ಲ. ಅಲ್ಲಲ್ಲಿ ಕಾಣಬರುವ ಮಹತ್ತರ ಸಂಗತಿಗಳನ್ನು ಆಯ್ದು ಒಂದು ಕಡೆ ಕೊಡಲು ಯತ್ನಿಸಿರುವುದು ಸುಲಭವಾಗಿ ಗೊತ್ತಾಗುತ್ತದೆ. ಕೆಲವು ಕಡೆಗಳಲ್ಲಂತೂ ಅಂತರ ಬಹು ಹೆಚ್ಚಾಗಿದ್ದು ಒಂದು ಕಡೆಯಿಂದ ಮತ್ತೊಂದಕ್ಕೆ ವಿದ್ಯಾರ್ಥಿ ಹಾರಬೇಕಾಗುತ್ತದೆ. ಅಪ್ರಬುದ್ಧನಾದ ವಿದ್ಯಾರ್ಥಿಗೆ ಇದು ತಪ್ಪುತಿಳಿವಳಿಕೆಯನ್ನುಂಟು ಮಾಡಲೂ ಸಾಧ್ಯ.

ಗ್ರಂಥಕರ್ತರು ಪ್ರಾಚೀನ ನಾಗರಿಕತೆಗಳಿಗೆ ವಿಶೇಷ ಗಮನಕೊಟ್ಟಿರುವುದು ಸಮಂಜಸವಾಗಿದೆ. ಶಿಲಾಯುಗಗಳ ವಿಚಾರವನ್ನು ಕೈಬಿಡುವುದು ಸಾಮಾನ್ಯವಾದ ಪದ್ಧತಿ. ಆದರೆ ಗ್ರಂಥಕರ್ತರು ಈ ವಿಷಯವನ್ನು ಬಹುಚೆನ್ನಾಗಿ ನಿರೂಪಿಸಿ, ಶಿಲಾಯುಗಗಳ ಮಹತ್ತ್ವವೇನು, ಅವು ಚರಿತ್ರೆಗೆ ಯಾವ ರೀತಿ ತಳಹದಿ ಹಾಕಿದುವು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಭಾರತೀಯ ನಾಗರಿಕತೆಯ ಬಗೆಗೆ ಇನ್ನೂ ಕೆಲವು ವಿಷಯಗಳನ್ನು ಸೇರಿಸಬಹುದಾಗಿದ್ದಿತು ಎನ್ನುವ ಭಾವನೆ ಬರುತ್ತದೆ. ದಕ್ಷಿಣಭಾರತದ ದೇವಾಲಯಗಳಾಗಲಿ, ಉತ್ತರಭಾರತದ ವಾಸ್ತುಶಿಲ್ಪ ಕಲಾಕೃತಿಗಳಾಗಲಿ ಎಲ್ಲಿಯೂ ಉಲ್ಲೇಖವಾಗಿಲ್ಲ. ಜಗತ್ತಿನ ಇತಿಹಾಸದಲ್ಲಿ ಇವು ಉಲ್ಲೇಖಿತವಾಗಲು ಅರ್ಹತೆ ಪಡೆದಿಲ್ಲವೆಂಬುದು ತಪ್ಪು ವಾದ. ವಿದೇಶೀಯರು ವಿಶ್ವ ಇತಿಹಾಸ ಗ್ರಂಥಗಳನ್ನು ಬರೆದಾಗ ಗ್ರೀಸ್, ರೋಂ ಮುಂತಾದ ನಾಗರಿಕತೆಗಳ ಬಗೆಗೆ ಪುಟಗಟ್ಟಲೆ ಬರೆದು ಭಾರತವನ್ನು ಕಡೆಗಣಿಸುತ್ತಿದ್ದರು. ಈ ಪುಸ್ತಕಗಳನ್ನೇ ನಾವು ಮಾದರಿಯಾಗಿಟ್ಟುಕೊಂಡರೆ, ಅವರು ಮಾಡಿದ ತಪ್ಪುಗಳನ್ನೇ ನಾವೂ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ನಮ್ಮ ಇತಿಹಾಸದ ಬಗ್ಗೆ ನಾವು ಸ್ವತಂತ್ರವಾದ ನಿಲವನ್ನು ತಳೆಯಬೇಕು. ಒಟ್ಟಿನಲ್ಲಿ ಹೇಳುವುದಾದರೆ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಇದು ಉಪಯುಕ್ತವಾದ ಪುಸ್ತಕ. ಮುದ್ರಣ ಮತ್ತು ವಿನ್ಯಾಸ ಸುಂದರವಾಗಿವೆ.

—ಎ. ವಿ. ನರಸಿಂಹಮೂರ್ತಿ

ಗ್ರಂಥಸೂಚಿ ಮತ್ತು ಪುಸ್ತಕ–ಶಾಸ್ತ್ರ: ಲೇ: ಗುರುಲಿಂಗಪ್ಪ ಮಲ್ಲಪ್ಪ ಪಾಟೀಲ; ಧಾರವಾಡ (೧೯೭೦); ಪ್ರ: ಜ್ಞಾನ ವಿಜ್ಞಾನ ಭಂಡಾರ, ಪು. xvi–೧೩೫

‘ಪ್ರಸ್ತುತ ವಿಷಯವು ಗ್ರಂಥಗಳ ಸೂಚಿಯನ್ನು ನಿರ್ಮಿಸುವುದು ಹಾಗೂ ಅದಕ್ಕೆ ಅನುಷಂಗಿಕವಾಗಿರುವ ತಾಂತ್ರಿಕ ವಿಷಯಗಳನ್ನು ಕುರಿತಾಗಿದೆ.’

ಕನ್ನಡ ಪುಸ್ತಕಗಳಿಗೆ ಸೂಚಿ (ಇಂಡೆಕ್ಸ್) ಇರುವುದು ಅಪರೂಪ. ಅದರ ಆವಶ್ಯಕತೆಯನ್ನು ಸಾಮಾನ್ಯವಾಗಿ ಲೇಖಕರೂ ಓದುಗರೂ ಮನಗಂಡಂತೆ ಕಾಣುವುದಿಲ್ಲ. ಕೆಲವು ವೇಳೆ ಲೇಖಕರು ಸೂಚಿಯನ್ನು ತಯಾರಿಸಿದರೂ ಅದು ತಾಂತ್ರಿಕ ದೃಷ್ಟಿಯಿಂದ ಪೂರ್ಣವಾಗಿರುವುದಿಲ್ಲ.

ಪುಸ್ತಕವನ್ನು ಒಮ್ಮೆ ಓದಿದ ಅನಂತರ ಅದರಲ್ಲಿರುವ ಯಾವುದಾದರೂ ವಿಷಯದ ನೆಲೆಯನ್ನು ತಿಳಿಯಲು ತತ್‌ಕ್ಷಣ ಸಾಧ್ಯವಾಗದೆ ಪುಟಗಳನ್ನು ಅನೇಕ ಬಾರಿ ಹಿಂದೆಮುಂದೆ ತಿರುವಿಹಾಕಬೇಕಾಗುತ್ತದೆ. ಹಾಗಿಲ್ಲದೆ ಸೂಚಿಯಿದ್ದು, ಅದರಲ್ಲಿ ವಿಷಯ ನಿರ್ದೇಶನ ನಿರ್ದಿಷ್ಟವಾಗಿದ್ದರೆ, ಪುಸ್ತಕವನ್ನು ಓದುವ ಮೊದಲೇ ಅದರ ವಿಷಯಕ್ಕೆ ಸಂಬಂಧಿಸಿದ ವಿಚಾರದಲ್ಲಿ ಲೇಖಕರ ಅಭಿಪ್ರಾಯವನ್ನು ತಿಳಿಯಲು ಸೂಚಿಯ ಮೂಲಕ ವಿಷಯ ಪ್ರತಿಪಾದನೆಯ ಪುಟವನ್ನು ತಿಳಿದು ಓದಬಹುದು.

ಪುಸ್ತಕಗಳಿಗೆ ಸೂಚಿಯನ್ನು ತಯಾರಿಸುವುದು ಒಂದು ತಾಂತ್ರಿಕ ಕಾರ್ಯ. ಪಾಶ್ಚಾತ್ಯ ದೇಶಗಳಲ್ಲಿ ಈ ಕಾರ್ಯವನ್ನೇ ವೃತ್ತಿಯಾಗಿ ಅವಲಂಬಿಸಿರುವವರು ಬಹಳ ಮಂದಿ.

ಶ್ರೀ ಪಾಟೀಲರು ಈ ಪುಸ್ತಕದಲ್ಲಿ ಪುಸ್ತಕದ ನಾನಾ ಭಾಗಗಳು, ಟೀಕೆ ಟಿಪ್ಪಣಿಗಳು, ಸಂದರ್ಭಸೂಚನೆಯನ್ನು ನಮೂದಿಸುವ ರೀತಿ—ಇವನ್ನು ವಿವರಿಸಿ, ಪುಸ್ತಕಕ್ಕೆ ಸೂಚಿಯ ತಯಾರಿಕೆಯಲ್ಲಿ ಬರುವ ಎಡರುತೊಡರುಗಳನ್ನೂ ಅವುಗಳಿಗೆ ಪರಿಹಾರವನ್ನೂ ತೋರಿಸಿದ್ದಾರೆ. ಮುಖ್ಯವಾಗಿ ಸೂಚಿಯಲ್ಲಿ ಬರುವ ಪದಗಳ ಆಯ್ಕೆಯಲ್ಲಿ ವಿಶೇಷಣ ಪದ, ಲೋಪಗಳು ಮತ್ತು ಅನುಪಯುಕ್ತ ಸಂಲೇಖಗಳ ವಿಧಿ ನಿಷೇಧಗಳ ವಿವರಣೆಗಳಿವೆ. ಅಕ್ಷರಾನುಕ್ರಮ ಜೋಡಣೆಯಲ್ಲಿ ಮುಖ್ಯವಾಗಿ ಅನುಸ್ವಾರ ಸಹಿತ ಮೊದಲಕ್ಷರದಿಂದ ಆರಂಭವಾಗುವ ಪದಗಳ ಸ್ಥಾನ ಕುರಿತ ದೀರ್ಘಚರ್ಚೆಯಿದೆ. ಕನ್ನಡ ಪುಸ್ತಕಗಳಿಗೆ ಸೂಚಿಯಿಲ್ಲದಿರುವುದನ್ನು ಖಂಡಿಸಿ, ಹಲವು ಪ್ರತಿಷ್ಠಿತ ಸಂಸ್ಥೆಗಳ ಪುಸ್ತಕಗಳ ಸೂಚಿಯಲ್ಲಿ ಆಗಿರುವ ಹಾಸ್ಯಾಸ್ಪದ ತಪ್ಪುಗಳನ್ನು ಎತ್ತಿತೋರಿಸಿ ಅವುಗಳನ್ನು ಹೇಗೆ ಪರಿಹರಿಸಬಹುದಿತ್ತೆಂದು ತಿಳಿಸಿದ್ದಾರೆ.

ಈ ರೀತಿಯ ತಾಂತ್ರಿಕ ವಿವರಗಳುಳ್ಳ ಪುಸ್ತಕವನ್ನು ಕನ್ನಡದಲ್ಲಿ ಬರೆಯುವುದು ಕಷ್ಟ. ಅದಕ್ಕೆ ತಾಂತ್ರಿಕಜ್ಞಾನದ ಪಾಂಡಿತ್ಯ, ಅನುಭವ ಅಗತ್ಯ. ಈ ಎರಡೂ ಗುಣಗಳುಳ್ಳ ಲೇಖಕರು ತಮ್ಮ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ.

—ಟಿ. ವಿ. ಸುಬ್ರಹ್ಮಣ್ಯಂ

ಈ ಸಂಚಿಕೆಯ ಲೇಖಕರು

೧	ಬಿ. ಕೆ. ಶಿವರಾಮಯ್ಯ	.... ಮಾನಸಗಂಗೋತ್ರಿಯ ಸಂಸ್ಕೃತ ವಿಭಾಗದಲ್ಲಿ ಅಧ್ಯಾಪಕರು
೨	ಡಾ. ಬಿ. ಎಸ್. ಶ್ರೀಕಂಠಾರಾಧ್ಯ	.... ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು
೩	ಕುಕ್ಕಿಲ ಕೃಷ್ಣಭಟ್ಟ	.. ಕನ್ನಡ-ಸಂಸ್ಕೃತ ವಿದ್ವಾಂಸರು, ಕಲಾವಿಮರ್ಶಕರು
೪	ಡಾ. ಟಿ. ಆರ್. ರಾವ್	... ಮಾನಸಗಂಗೋತ್ರಿಯ ಮನಶ್ಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು
೫	ವಿ. ಜಿ. ಕೃಷ್ಣಮೂರ್ತಿ	.... ಮೈಸೂರು ಸರ್ಕಾರದ ನಿವೃತ್ತ ಸಹಾಯಕ ಸಂಪಾದಕರು, ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಭಾಷಾಂತರಕಾರರು
೬	ಎಸ್. ರಾಜಶೇಖರ್	.... ಶಿವಮೊಗ್ಗದ ಕಮಲಾ ನೆಹರು ಮಹಿಳೆಯರ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಭಾಗದ ಮುಖ್ಯರು
೭	ಎಸ್. ಗುರುರಾಜಾಚಾರ್	.... ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಭಾರತ ಶಾಸ್ತ್ರದ ಅಧ್ಯಾಪಕರು
೮	ಡಾ. ಕೆ. ಎಚ್. ಚೆಲುವರಾಜು	.... ಮಾನಸಗಂಗೋತ್ರಿಯ ರಾಜ್ಯಶಾಸ್ತ್ರ ವಿಭಾಗದಲ್ಲಿ ರೀಡರ್
೯	ಶಾಂತ	.... ಸಿ. ವಿ. ಶಾಂತ, ಮಂಗಳೂರಿನಲ್ಲಿ ಅಡ್ವೊಕೇಟ್
೧೦	ಹನುಮಪ್ಪ	.... ಎಚ್. ಜಿ. ಹನುಮಪ್ಪ, ನವ ದೆಹಲಿಯ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನಿನಲ್ಲಿ ಜ್ಯೂನಿಯರ್ ರಿಸರ್ಚ್ ಆಫೀಸರ್
೧೧	ಆರ್. ಮೋಹನ	.... ಸಿಕಂದರಾಬಾದಿನಲ್ಲಿ ಪತ್ರಿಕೋದ್ಯಮಿ
೧೨	ಎಚ್. ಎ. ಖಾನ್	... ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ ಹಿರಿಯ ಉಪಗ್ರಂಥಪಾಲರು
೧೩	ಎ.ವಿ.ಎನ್.	... ಡಾ. ಎ. ವಿ. ನರಸಿಂಹಮೂರ್ತಿ, ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ರೀಡರ್, 'ಮಾನವಿಕ ಕರ್ಣಾಟಕ'ದ ಸಂಪಾದಕರಲ್ಲೊಬ್ಬರು
೧೪	ಎನ್.ಪಿ.ಎಸ್.	.... ಎನ್. ಪಿ. ಶಂಕರನಾರಾಯಣರಾವ್, ಅಂಚೆ-ತಂತಿ ಇಲಾಖೆ, ಬೆಂಗಳೂರು

೧೪ ಬಿ.ಕೆ.ಜಿ. .... ಡಾ. ಬಿ. ಕೆ. ಗುರುರಾಜರಾವ್, ಸಹ ಸಂಪಾದಕರು, ಕನ್ನಡ ವಿಶ್ವಕೋಶ, ಮೈಸೂರು

೧೫ ಬಿ.ಎಸ್ ಎಸ್. .... ಡಾ. ಬಿ. ಎಸ್. ಶ್ರೀಕಂಠಾರಾಧ್ಯ, ಮಾನಸ ಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

೧೬ ಎಚ್.ಎಸ್.ಕೆ. .... ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಕನ್ನಡ ವಿಶ್ವಕೋಶದ ಮಾನವಿಕ ಸಂಪಾದಕರು. 'ಮಾನವಿಕ ಕರ್ನಾಟಕ'ದ ಸಂಪಾದಕರಲ್ಲೊಬ್ಬರು

೧೮ ಸಿ.ಕೆ.ಆರ್. .... ಸಿ. ಕೆ. ರೇಣುಕಾರ್ಯ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರು

೧೯ ಡಾ. ಎಚ್.ಎಂ. ಸದಾಶಿವಯ್ಯ .... ಮಾನಸಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

೨೦ ಟಿ. ವಿ. ಸುಬ್ರಹ್ಮಣ್ಯಂ .... ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

WO 8812—MUPM—2,000+25—22-5-71

ಮಾನವಿಕ ಕರ್ಣಾಟಕ

ವಾರ್ಷಿಕ ಚಂದಾ

(ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	೪ ರೂ.
ಸಾಮಾನ್ಯ ಚಂದಾದಾರರಿಗೆ	೬ ರೂ.
ಸಂಸ್ಥೆಗಳಿಗೆ	೮ ರೂ.
ಆಜೀವ ಸದಸ್ಯತ್ವ	೧೦೦ ರೂ.

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ
ಮೈಸೂರು-೬